Bennett & Coleman
THE TIMES OF INDIA
ಭಾನುವಾರ,28 ಜೂನ್ 2026 | ಪುಟಗಳು: 16 | ಬೆಲೆ: ₹ 5.00 (ವಿಕ ಮನಿ ಜತೆ ₹10.00)
www.vijaykarnataka.com
c
ಸಂಪುಟ: 27 | ಸಂಚಿಕೆ: 178

VK ವಿಜಯ ಕರ್ನಾಟಕ

ಬೆಂಗಳೂರು | ಮೈಸೂರು | ಶಿವಮೊಗ್ಗ | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ
PRIDE OF YOUNG KARNATAKA

ಡಿಎಂಕೆ ನೇತೃತ್ವದ ಮೈತ್ರಿಕೂಟದಿಂದ ಹೊರಬಂದ ವೈಕೊ ನೇತೃತ್ವದ ಎಂಡಿಎಂಕೆ

ಅಫಘಾನಿಸ್ತಾನದಲ್ಲಿ 6.2 ತೀವ್ರತೆಯ ಭೂಕಂಪ: ದಿಲ್ಲಿ, ಜಮ್ಮು-ಕಾಶ್ಮೀರದಲ್ಲೂ ಕಂಪನದ ಅನುಭವ

ಅಧಿಕೃತ ಪ್ರವಾಸದ ಮೇರೆಗೆ ಸಿಷೆಲ್ಸ್ ತಲುಪಿದ ಪಿಎಂ ಮೋದಿ, ಇಂದು ಸಂಸತ್ ಉದ್ದೇಶಿಸಿ ಭಾಷಣ

ಅನಂತಾರುಣ ಉಸ್ತುವಾರಿ ನೆನಪುಂಟಾ?

ರಾಜ್ಯಕಾರಣ
ಶಶಿಧರ ಹೆಗಡೆ
shashidhar.nandikal@timesofindia.com

ರಾಜ್ಯ ಬಿಜೆಪಿ ಉಸ್ತುವಾರಿಯಾಗಿ ಪಕ್ಷದ ಬೇಸ್ ಗಟ್ಟಿ ಮಾಡಿದ್ದ ವ್ಯಕ್ತಿ ಅರುಣ್ ಜೇಟ್ಲಿ, 2004ರಲ್ಲಿ ಅನಂತಕುಮಾರ್-ಜೇಟ್ಲಿ ಜೋಡಿ ಕರ್ನಾಟಕ ಬಿಜೆಪಿಯ ಭವಿಷ್ಯಕ್ಕೆ ಭದ್ರ ಅಡಿಪಾಯ ಹಾಕಿತ್ತು.

ವಿಶ್ವಾಸ ದ್ರೋಹದ ಅಸ್ತ್ರ ಹಿಡಿದು 2008ರ ವಿಧಾನಸಭೆ ಚುನಾವಣೆಗೆ ಹೊರಟ ರಾಜ್ಯ ಬಿಜೆಪಿ ನಾಯಕರು ಅರುಣ್ ಜೇಟ್ಲಿ ಅವರನ್ನು ಬೆಂಗಳೂರಿಗೆ ಕಳುಹಿಸಿ ಕೊಡುವಂತೆ ಹೈಕಮಾಂಡ್ ಮುಂದೆ ದುಂಬಾಲು ಬಿದ್ದಿದ್ದರು. ಜೇಟ್ಲಿ ಅವರಾಗ ಸುಪ್ರೀಂಕೋರ್ಟ್ ವಕೀಲರಾಗಿ ಕಾರ್ಯದ ಒತ್ತಡದಲ್ಲಿದ್ದರು. ಒಂದು ರಾಜ್ಯದ ಚುನಾವಣೆಗೆ ಸಮಯ ಮೀಸಲಿಡುವಷ್ಟು ಅವರು ಬಿಡುವಾಗಿರಲಿಲ್ಲ. ಅಷ್ಟಕ್ಕೂ ಅವರು ಆಗ ಕರ್ನಾಟಕ ಬಿಜೆಪಿಯ ಉಸ್ತುವಾರಿಯೂ ಆಗಿರಲಿಲ್ಲ. ಹಾಗಿದ್ದೂ ರಾಜ್ಯದ ಧುರೀಣರು ಲಾಲ್‌ಕೃಷ್ಣ ಆಡ್ವಾಣಿ ಮತ್ತು ಅಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾಗಿದ್ದ ರಾಜನಾಥ್ ಸಿಂಗ್ ಮುಂದೆ ಜೇಟ್ಲಿ ಅವರಿಗಾಗಿ ಮೊರೆಯಿಟ್ಟಿದ್ದರು. ಕಡೆಗೆ ಚುನಾವಣಾ ಉಸ್ತುವಾರಿ ಹೊಣೆ ಕೊಟ್ಟರೆ ಜೇಟ್ಲಿ ಅವರಿಗೆ ರಾಜನಾಥ್ ಸಿಂಗ್ ಜವಾಬ್ದಾರಿ ವಹಿಸಿದ್ದರು.

ಅರುಣ್ ಜೇಟ್ಲಿ ಸಹಾಯಕ್ಕಾಗಿ ರಾಜ್ಯದ ನಾಯಕರು ಪರಿತಪಿಸಲು ಕಾರಣವೇನೆಂದರೆ, ಆ ದಿನಗಳಲ್ಲಿ ಬಿಜೆಪಿಯಲ್ಲಿ ತೆರೆಯ ಹಿಂದಿನ ಮಹಾನ್ ತಂತ್ರಗಾರರಾಗಿದ್ದವರು ಜೇಟ್ಲಿ. ಇವತ್ತು ಚುನಾವಣಾ ಚಾಣಕ್ಯ ಎಂಬ ಹೆಗ್ಗಳಿಕೆಗೆ ಪಾತ್ರರಾಗಿರುವ ಅಮಿತ್ ಶಾ ಅವರಿಗೂ ರಾಜಕಾರಣದ ಅಕ್ಷರಮಾಲೆ ಕಲಿಸಿದವರು ಜೇಟ್ಲಿ.

ಅನಂತಕುಮಾರ್ ರಾಜ್ಯ ಬಿಜೆಪಿ ಅಧ್ಯಕ್ಷರಾಗಿದ್ದಾಗ ಉಸ್ತುವಾರಿಯಾಗಿದ್ದವರು ಜೇಟ್ಲಿ. 2004ರ ವಿಧಾನಸಭೆ ಚುನಾವಣೆಯಲ್ಲಿ, ಅನಂತ್-ಜೇಟ್ಲಿ ಜೋಡಿ ಮಹತ್ವದ ಭೂಮಿಕೆ ನಿಭಾಯಿಸಿತ್ತು. ಕರ್ನಾಟಕ ಬಿಜೆಪಿಯ ಊರ್ಧ್ವಮುಖಿ ಬೆಳವಣಿಗೆಗೆ ಅನಂತಕುಮಾರ್, ಅರುಣ್ ಜೇಟ್ಲಿ ಅವರ ಯೋಗದಾನ ಪ್ರಮುಖವಾದದ್ದು. ಮಾಸ್ ಲೀಡರ್‌ಗಳು ವೋಟ್‌ಬ್ಯಾಂಕ್ ಪ್ರಭಾವಿಸುತ್ತಾರೆ. ಅದಕ್ಕೆ ತಕ್ಕುದಾದ ತಂತ್ರಗಾರಿಕೆಯಿಲ್ಲದಿದ್ದರೆ ಗೊತ್ತು ಗುರಿಯಿಲ್ಲದ ಸಮುದ್ರದ ಅಲೆಗಳ ನಡುವೆ ಹಡಗು ಸಿಲುಕಿದಂತಾಗುತ್ತದೆ. ರಾಜಕಾರಣದಲ್ಲಿ ಮತ ತಂದು ಕೊಡುವ ನಾಯಕತ್ವ ಮತ್ತು ರಣತಂತ್ರದ ನೈಪುಣ್ಯ ಎರಡೂ ಮುಖ್ಯ. ವ್ಯಕ್ತಿಯೊಬ್ಬರಲ್ಲೇ ಇವೆಲ್ಲವೂ ಅಡಕವಾಗಿರಲು ಸಾಧ್ಯವಿಲ್ಲ. ಜನನಾಯಕರಾದವರು ತಂತ್ರಗಾರಿಕೆಯಲ್ಲಿ ಹಿಂದೆ ಬಿದ್ದಿರುತ್ತಾರೆ. ವ್ಯೂಹ ರಚನಾಕಾರರು ದೊಡ್ಡ ಮಟ್ಟದಲ್ಲಿ ಜನಾಕರ್ಷಣೆಯ ಸಾಮರ್ಥ್ಯ ಹೊಂದಿರುವುದಿಲ್ಲ. ಚುನಾವಣಾ ರಾಜಕಾರಣದಲ್ಲಿ ಪಕ್ಷವೊಂದು ದಡ ಸೇರಲು ಅನೇಕಾನೇಕ ಕೌಶಲ ಅಗತ್ಯ. ತೆರೆಯ ಹಿಂದಿನ ಗಣಿತದ ಲೆಕ್ಕಾಚಾರವಿಲ್ಲದೇ ಹೋದರೆ ಅದೆಷ್ಟೇ ಬಲಶಾಲಿ ನಾಯಕನನ್ನು ಹೊಂದಿದ್ದರೂ ಪಕ್ಷದ ಬಂಡಿ ಸರಾಗವಾಗಿ ಓಡುವುದಿಲ್ಲ. ಈ ದಿಸೆಯಲ್ಲಿ ಕರ್ನಾಟಕ ಬಿಜೆಪಿಗೆ ಅತ್ಯಮೂಲ್ಯವಾದ ಮಾಸ್ಟರ್‌ಮೈಂಡ್ ಹೊಂದಿಸಿದವರು ಜೇಟ್ಲಿ ಮತ್ತು ಅನಂತಕುಮಾರ್.

ಕೇಂದ್ರದಲ್ಲಿ ವಾಜಪೇಯಿಯವರ ಸಂಪುಟದಲ್ಲಿ ಸಚಿವರಾಗಿದ್ದುಕೊಂಡೇ ಕರ್ನಾಟಕ ಬಿಜೆಪಿಯ ಸಾರಥ್ಯವನ್ನು ಅನಂತಕುಮಾರ್ ವಹಿಸಿಕೊಂಡಿದ್ದರು. ಆ ಸಂದರ್ಭಕ್ಕೆ ಉಸ್ತುವಾರಿಯಾಗಿ ಬಂದವರು ಜೇಟ್ಲಿ. ಈ ಇಬ್ಬರೂ ರಾಜ್ಯ ಬಿಜೆಪಿಯ ಭವಿಷ್ಯಕ್ಕೆ ಯೋಜನಾಬದ್ಧ ನೀಲನಕ್ಷೆ ರೂಪಿಸಿದ್ದರು. ಮೊದಲನೆಯದಾಗಿ ಸೋಷಿಯಲ್ ಎಂಜಿನಿಯರಿಂಗ್‌ನ ಅಳವಡಿಕೆಗೆ ಒತ್ತು ಕೊಟ್ಟ ಜೇಟ್ಲಿ, ಯಾವ ಜಿಲ್ಲೆಯಲ್ಲಿ ಯಾವ ಸಮುದಾಯದ ಪ್ರಾಬಲ್ಯವಿದೆ ಎಂಬ ಮಾಹಿತಿ ತರಿಸಿಕೊಂಡರು. ಉದಾಹರಣೆಗೆ ಬಸವನ ಬಾಗೇವಾಡಿಯಲ್ಲಿ ಕಣ್ಣು ಮುಚ್ಚಿಕೊಂಡು ಲಿಂಗಾಯತರಿಗೆ ಟಿಕೆಟ್ ಕೊಟ್ಟುಬಿಡುವುದಲ್ಲ, ಬದಲಾಗಿ ಕ್ಷೇತ್ರದಲ್ಲಿ ಲಿಂಗಾಯತ ಉಪ ಪಂಗಡಗಳ ಪೈಕಿ ಯಾವ ಸಮುದಾಯದ ಸಂಖ್ಯೆ ಹೆಚ್ಚಿದೆ ಎಂಬುದರ ಆಧಾರದಲ್ಲಿ ಮುಂದುವರಿಯುವುದು. ಜತೆಗೆ ಅದಕ್ಕೆ ಪೂರಕವಾದ ಜಾತಿ ಸಮೀಕರಣ ರೂಪಿಸುವುದು. ಇಂಥದ್ದೆಲ್ಲ ಸೂಕ್ಷ್ಮವಾದ ಪಾಠ ರಾಜ್ಯ ಬಿಜೆಪಿಗೆ ಆದದ್ದೇ ಜೇಟ್ಲಿ ಪಾಠಶಾಲೆಯಲ್ಲಿ. ಆದ್ದರಿಂದ 2008ರಲ್ಲೂ ಜೇಟ್ಲಿ ಅವರಿಂದ ಸಹಕಾರಕ್ಕಾಗಿ ರಾಜ್ಯ ಬಿಜೆಪಿ ಚಡಪಡಿಸಿತ್ತು.

ಅನಂತಕುಮಾರ್ ಅಧ್ಯಕ್ಷರಾಗಿದ್ದಾಗ ಸಂಯುಕ್ತ ಜನತಾದಳದ ಒಂದಿಡೀ ತುಕಡಿಯನ್ನೇ ಬಿಜೆಪಿಯಲ್ಲಿ ವಿಲೀನಗೊಳಿಸಿದ್ದರು. ರಾಮಕೃಷ್ಣ ಹೆಗಡೆಯವರ ಅನಾರೋಗ್ಯದ ಕಾರಣ ಲಿಂಗಾಯತರನ್ನು ಒಳಗೊಂಡಂತೆ ಅವರ ಅಪಾರ ಅಭಿಮಾನಿ ವರ್ಗ ಪರ್ಯಾಯಕ್ಕಾಗಿ ಕಾಯುತ್ತಿತ್ತು. ಜೆ.ಎಚ್.ಪಟೇಲರು ಅಷ್ಟರಲ್ಲಾಗಲೇ ನಿಧನರಾಗಿದ್ದರು. ಎಸ್.ಆರ್.ಬೊಮ್ಮಾಯಿಯವರೂ ಸಕ್ರಿಯರಾಗಿರಲಿಲ್ಲ. 2004ರ ಆರಂಭದಲ್ಲಿ ರಾಮಕೃಷ್ಣ ಹೆಗಡೆಯವರೂ ಕಾಲವಾದರು. ಇಂಥ ಸಂದರ್ಭದಲ್ಲಿ ರಾಜಕೀಯ ಭವಿಷ್ಯಕ್ಕಾಗಿ ಎದುರು ನೋಡುತ್ತಿದ್ದ ಜೆಡಿಯು ಮುಖಂಡರು, ಕಾರ್ಯಕರ್ತರಿಗೆ ಬಿಜೆಪಿಯ ಬಾಗಿಲನ್ನು ಅನಂತಕುಮಾರ್ ತೆರೆದರು. ವಿಶೇಷವಾಗಿ ಲಿಂಗಾಯತರ ಬೆಂಬಲ ಪ್ರಾಪ್ತವಾಯಿತು. ಲಿಂಗಾಯತ ಸಮುದಾಯದವರೇ ಆದ ಬಿ.ಎಸ್.ಯಡಿಯೂರಪ್ಪನವರು ಬಿಜೆಪಿಯಿಂದ ಮುಖ್ಯಮಂತ್ರಿಯಾಗುತ್ತಾರೆ ಎಂಬ ಭರವಸೆಯೂ ಇದರೊಂದಿಗೆ ಮಿಳಿತಗೊಂಡಿತ್ತು. ಮತ್ತೊಂದು ಮಹತ್ವಪೂರ್ಣ ಸಂಗತಿಯೆಂದರೆ, ದಲಿತರಲ್ಲಿ ಎಡಗೈ ಸಮಾಜ ಬಿಜೆಪಿಯತ್ತ ವಾಲಿತು. ರಮೇಶ್ ಜಿಗಜಿಣಗಿ, ಗೋವಿಂದ ಕಾರಜೋಳ ಅವರನ್ನು ಈ ಸಮುದಾಯದ ನಾಯಕರಾಗಿ ಬಿಂಬಿಸಿದ ಅನಂತಕುಮಾರ್, ಬಿಜೆಪಿಗೆ ದಲಿತರ ಶಕ್ತಿ ಬರುವಂತೆ ಮಾಡಿದ್ದರು. ಮತ್ತೊಂದೆಡೆ 2004ರಲ್ಲಿ ಉತ್ತರ ಪ್ರದೇಶದ ಬೆಹನ್‌ಜೀ ಮಾಯಾವತಿ ಅವರ ಆನೆ ಕರ್ನಾಟಕದತ್ತ ದಾಳಿಯಿಟ್ಟಿತ್ತು. ಇದರ ಪರಿಣಾಮ ಕಾಂಗ್ರೆಸ್‌ಗೆ ಘಾಸಿಯಾಗಿತ್ತು. ಇಂದಿನ ಐರಾವತ ಧರೆಗಿಳಿದಂತೆ ಉತ್ತರದ ಆನೆ ದಕ್ಷಿಣದ ಕರ್ನಾಟಕಕ್ಕೆ ನಡೆದಾಡಲು ಕಾರಿಡಾರ್ ನಿರ್ಮಿಸಿದ್ದೇ ಅನಂತಕುಮಾರ್ ಎನ್ನುವುದು ಅಂದರ್‌ಕಿ ಬಾತ್! ರಾಜಕಾರಣದ ತಂತ್ರವೇ ಹಾಗಿರುತ್ತದೆ. ಹಿಂದುಳಿದ ವರ್ಗಗಳ ನಾಯಕ ಎಸ್. ಬಂಗಾರಪ್ಪ ಅವರೂ ಅನಂತಕುಮಾರ್ ಅವರದ್ದೇ ಮೇಲ್ವಿಚಾರಣೆ ಬಿಜೆಪಿ ಸೇರಿದ್ದರು. ವರ್ತಮಾನದ ರಾಜ್ಯ ಬಿಜೆಪಿ ಅನಂತಕುಮಾರ್ ಅವರನ್ನು ಮರೆತೇ ಬಿಟ್ಟಿದೆ. ನೆನಪಿಟ್ಟುಕೊಂಡಿದೆ ಎಂಬುದಕ್ಕೆ ಸಣ್ಣದೊಂದು ಕುರುಹೂ ಎಳ್ಳಷ್ಟೂ ಸಿಕ್ಕುತ್ತಿಲ್ಲ. ಜೇಟ್ಲಿ ಬಗ್ಗೆಯೂ ಪಕ್ಷದ ವೇದಿಕೆಗಳಲ್ಲಿ ಮೆಲುಕು ಹಾಕಿದ್ದ ಪ್ರಬಲ ಸಾಕ್ಷ್ಯಗಳಿಲ್ಲ.

ಅಂದಹಾಗೆ 2008ರಲ್ಲಿ ಆಡ್ವಾಣಿ, ರಾಜನಾಥ್ ಸಿಂಗ್ ಒತ್ತಾಯಕ್ಕೆ ಕಟ್ಟುಬಿದ್ದು ಚುನಾವಣಾ ಕರ್ತವ್ಯಕ್ಕೆ ಆಗಮಿಸಿದ್ದ ಅರುಣ್ ಜೇಟ್ಲಿ ಸರಿಸುಮಾರು ಒಂದು ತಿಂಗಳ ಇಲ್ಲಿಯೇ ತಂಗಿದ್ದರು. ಟಿಕೆಟ್ ಹಂಚಿಕೆ, ಜಾತಿ ಸಮೀಕರಣ, ಪ್ರಣಾಳಿಕೆ ಸಿದ್ಧತೆ, ಆಯಾಯ ಪ್ರಚಾರ ಸಭೆಗಳಲ್ಲಿ ಪ್ರಸ್ತಾಪಿಸುವ ವಿಚಾರಗಳ ಬಗ್ಗೆ ಮಾರ್ಗದರ್ಶಿ ಸೂತ್ರ ನೀಡಿದ್ದರು. ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದ ಬಿಜೆಪಿ ಅಧಿಕಾರಕ್ಕೆ ಬರುವ ಹೊತ್ತಿಗೆ ಜೇಟ್ಲಿ ದಿಲ್ಲಿಯ ಕೆಲಸದಲ್ಲಿ ವ್ಯಸ್ತರಾಗಿದ್ದರು. ಪ್ರಮಾಣವಚನ ಸ್ವೀಕಾರ ಸಮಾರಂಭಕ್ಕೆ ಬರಲೇಬೇಕೆಂದು ಒತ್ತಾಯಿಸಿದಾಗಲೂ ದಿಲ್ಲಿಯಿಂದ ಜೇಟ್ಲಿ ಕದಲಲಿಲ್ಲ. ಬದಲಾಗಿ "ನನಗೆ ಸಾಕಷ್ಟು ಕೆಲಸಗಳಿವೆ. ನೀವೆಲ್ಲ ಸೇರಿ ಒಳ್ಳೆಯ ಆಡಳಿತ ಕೊಡಿ," ಎಂಬ ಸಂದೇಶವನ್ನು ಇಲ್ಲಿನವರಿಗೆ ಕಳುಹಿಸಿದ್ದರಂತೆ.

ಕೃಷ್ಣೆ ಮತ್ತು ಕಾವೇರಿಯಲ್ಲಿ ಪ್ರವಾಹ ಬಂದು ಹೋದಂತೆ ಜೇಟ್ಲಿ ನಂತರದಲ್ಲಿ ಹಲವರು ಕರ್ನಾಟಕ ಬಿಜೆಪಿಯ ಉಸ್ತುವಾರಿಗಳಾಗಿ ಹೋಗಿದ್ದಾರೆ. ಅಂಥವರಲ್ಲಿ ಯಾರೊಬ್ಬರೂ ಮೈಲುಗಲ್ಲನ್ನು ನೆಟ್ಟಿದ್ದು ಜ್ಞಾಪಕಕ್ಕೆ ಬರುವುದಿಲ್ಲ. ಕಡೆಪಕ್ಷ ಕಲ್ಲುಬೆಂಚು ನಿಲ್ಲಿಸಿ ಹೋಗಿದ್ದರೂ ಉಲ್ಲೇಖಿಸಬಹುದಿತ್ತು. ಆದರೆ, ವಿಶಿಷ್ಟ ಕಾರಣಗಳಿಗಾಗಿ ಜೇಟ್ಲಿಯವರ ಬಳಿಕ ಕರ್ನಾಟಕ ಬಿಜೆಪಿಯ ಉಸ್ತುವಾರಿ ನೋಡಿಕೊಂಡವರು ಚಿತ್ರವಿಚಿತ್ರವಾಗಿ ಅಚ್ಚಳಿಯದೆ ಉಳಿದುಕೊಂಡಿದ್ದಾರೆ. ಅದೇನೆಂದರೆ, ದಕ್ಷಿಣಾಭಿಮುಖವಾಗಿ ಬಂದ ಅವರೆಲ್ಲರೂ ಉತ್ತರಕ್ಕೆ ಫಲ ತಾಂಬೂಲ, ದಾನ ದಕ್ಷಿಣೆಯೊಂದಿಗೆ ಅಂತರ್ಧಾನರಾಗಿದ್ದಾರೆ ಎಂಬ ಮಾತುಗಳಿವೆ. ಅಷ್ಟರ ಮಟ್ಟಿಗೆ ಕೃತಾರ್ಥರಾದ ಈ ಉಸ್ತುವಾರಿಗಳ ಕುರಿತಾಗಿ ಬಗ್ಗೆ ಸೋಜಿಗದ ಮಾತುಗಳಿವೆ. "ಜೇಟ್ಲಿ ತುಂಬುವರು ಪರಿಶುದ್ಧರು, ಹಾಗಿದ್ದವರು ಕಾಣಸಿಗುತ್ತಿಲ್ಲ," ಎಂಬ ರಾಜ್ಯದ ಮಾತುಗಳಿವೆ. ದಿಲ್ಲಿಯ ಹೈಕಮಾಂಡ್‌ಗಳಿಗೆ ಯಾತ್ರಾಸ್ಥಳದಂತೆ ಕರ್ನಾಟಕ ಆಕರ್ಷಣೀಯವಾಗಿದೆ. ಅಧಿಕಾರ ಪರ್ವ ಆರಂಭವಾಗುತ್ತಿದ್ದಂತೆ ಬಿಜೆಪಿಯ ರಾಜ್ಯ ಘಟಕವು ಪ್ರತ್ಯಕ್ಷ ಸ್ವರ್ಗ ಲೋಕವೆಂದೇ ಗೋಚರಿಸುತ್ತದೆ. ಅಧಿಕಾರ ಅನುಭವಿಸಿದವರಂತೂ ತಮ್ಮೊಳಗೆ ತಮ್ಮ ನಾಯಕನನ್ನು ಪ್ರಭಾವಿಸುವ ಅಭಿಮಾನವನ್ನು ಹೊಂದಿದ್ದಾರೆ. ಹಾಗಾಗಿ ರಾಜ್ಯ ಬಿಜೆಪಿ ತಬ್ಬಲಿಯಾಯ್ತೇ ಎನ್ನುವ ಗುಮಾನಿಯೂ ಇದೆ!! ■

ಬಂಕಿಮರ ರಾಷ್ಟ್ರೀಯತೆ ವಿವಾದದ ಸುತ್ತ

ಭಾವ ಬೆಡಗು
ಅನಿಲ್ ಕುಮಾರ್ ಬಿ.ಎನ್.
Anil.kumar2@timesofindia.com

ಆಧುನಿಕ ಭಾರತದ ಬೌದ್ಧಿಕ ಹಾಗೂ ಸಾಂಸ್ಕೃತಿಕ ನಿರ್ಮಾತೃಗಳ ಪೈಕಿ ಅಗ್ರಗಣ್ಯರ ಸಾಲಿನಲ್ಲಿ ನಿಲ್ಲುವವರು ಬಂಕಿಮ ಚಂದ್ರ ಚಟರ್ಜಿ. ಆಧುನಿಕ ಭಾರತೀಯ ಸಾಹಿತ್ಯ ಮತ್ತು ರಾಷ್ಟ್ರೀಯತೆಯ ಇತಿಹಾಸದಲ್ಲಿ ಅವರ ಹೆಸರು ಸುವರ್ಣಾಕ್ಷರಗಳಲ್ಲಿ ಅಚ್ಚೊತ್ತಿದೆ. ಆದರೆ, ಇತ್ತೀಚೆಗೆ ಅವರ ಕೃತಿಯಿಂದ ಆಯ್ದುಕೊಳ್ಳಲಾದ 'ವಂದೇ ಮಾತರಂ' ಗೀತೆಯ ಸುತ್ತ ಕೆಲವೊಂದು ರಾಜಕೀಯ ಮತ್ತು ಧಾರ್ಮಿಕ ವಿವಾದಗಳು ಸುಳಿದಾಡಿದವು. ಇದಕ್ಕೆ ಮುನ್ನವೂ ಬಂಕಿಮರು ಕೋಮುವಾದಿಯಾಗಿದ್ದರು, ಅವರು ಮುಸ್ಲಿಂ ವಿರೋಧಿಯಾಗಿದ್ದರು ಎಂಬಂತಹ ಸಂಕುಚಿತ ಆರೋಪಗಳು ಕೇಳಿಬರುತ್ತಲೇ ಇವೆ. ಅವರ ಜನ್ಮದಿನದ ಸಂದರ್ಭದಲ್ಲಿ, ಬಂಕಿಮರ ಸಾಹಿತ್ಯದ ಆಳವಾದ ಅಧ್ಯಯನದ ಹಿನ್ನೆಲೆಯಲ್ಲಿ ಈ ವಿವಾದಗಳನ್ನು ತಾತ್ವಿಕವಾಗಿ ಮತ್ತು ವಸ್ತುನಿಷ್ಠವಾಗಿ ವಿಶ್ಲೇಷಿಸುವುದು ಅಗತ್ಯವಷ್ಟೇ.

ಬಂಕಿಮರು ಕೇವಲ ಕಾದಂಬರಿಕಾರರಾಗಿರದೆ, ರಾಷ್ಟ್ರ-ನಿರ್ಮಾಣದ ಕಠಿಣ ಮಾರ್ಗವನ್ನು ಆರಿಸಿಕೊಂಡ ಶ್ರೇಷ್ಠ ಚಿಂತಕರಾಗಿದ್ದರು. ಅವರು ತಮ್ಮ ಬರಹಗಳ ಮೂಲಕ ಭಾರತದ ಸುಪ್ತ ಚೇತನವನ್ನು ಎಚ್ಚರಿಸಿದರು. ಆಡಳಿತಗಾರನಾಗಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಪಾಲಿಸಿದರೆ, ಸಾಹಿತಿಯಾಗಿ ರಾಷ್ಟ್ರಭಕ್ತಿಯ ಹೊಸ ಭಾಷ್ಯವನ್ನೇ ಬರೆದರು. ಹಗಲಿನಲ್ಲಿ ಬ್ರಿಟಿಷ್ ಸರಕಾರದ ನಿಷ್ಠಾವಂತ ಅಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಅವರು, ರಾತ್ರಿಯಾಗುತ್ತಲೇ ತಮ್ಮ ಲೇಖನಿಯ ಮೂಲಕ ಭಾರತೀಯರ ಗುಲಾಮಗಿರಿಯನ್ನು ತೊಡೆದುಹಾಕುವ ಅಕ್ಷರಕ್ರಾಂತಿಗೆ ಜೀವತುಂಬುತ್ತಿದ್ದರು.

ಬಂಕಿಮ ಚಂದ್ರರು ತಮ್ಮ ಉದಾರ ಪಾಶ್ಚಿಮಾತ್ಯ ಶಿಕ್ಷಣ ಹಾಗೂ ಭಾರತೀಯ ಪರಂಪರೆಯ ಆಳವಾದ ಅರಿವಿನಿಂದ ಹೊಸದೊಂದು ದಾರ್ಶನಿಕ ದೃಷ್ಟಿಕೋನವನ್ನು ಕಟ್ಟಿಕೊಟ್ಟರು. ಅವರ ವಿಚಾರಗಳು ಕೇವಲ ಸಾಹಿತ್ಯಿಕವಾಗಿ ಉಳಿಯದೆ, ಸ್ವದೇಶಿ ಚಳವಳಿಯ ಸಂದರ್ಭದಲ್ಲಿ ಭುಗಿಲೆದ್ದ ಕ್ರಾಂತಿಕಾರಿ ಮಾರ್ಗಕ್ಕೆ ಬಹುಮಟ್ಟಿಗೆ ಸ್ಫೂರ್ತಿಯ ಮೂಲವಾಗಿದ್ದವು. ಭಾರತೀಯ ರಾಷ್ಟ್ರೀಯ ಚಳವಳಿಯ ಮೇಲೆ 'ಆನಂದಮಠ' ಮತ್ತು ಅದರಲ್ಲಿ ಬರುವ 'ವಂದೇ ಮಾತರಂ' ಗೀತೆ ಬೀರಿದ ಅಗಾಧ ಪ್ರಭಾವವು ಒಂದು ಐತಿಹಾಸಿಕ ಸತ್ಯವಾಗಿದೆ. 'ವಂದೇ ಮಾತರಂ' ಕೇವಲ ಭೌಗೋಳಿಕ ಗಡಿಯ ಆರಾಧನೆಯಾಗಿರದೆ, ಅದು ಶೋಷಣೆಯ ವಿರುದ್ಧ ಸಿಡಿದೇಳುವ ನೈತಿಕ ಶಕ್ತಿ ಮಂತ್ರವಾಗಿತ್ತು. ಸ್ವಾತಂತ್ರ್ಯ ಸಂಗ್ರಾಮದ ಜೀವನಾಡಿಯಾಗಿತ್ತು. ದೇಶವನ್ನು ಕೇವಲ ಒಂದು ಭೌಗೋಳಿಕ ಗಡಿಯಾಗಿ ನೋಡದೆ, 'ಮಾತೃ-ದೇವತೆ'ಯನ್ನಾಗಿ ಆರಾಧಿಸುವ ಒಂದು ಹೊಸ ರಾಷ್ಟ್ರೀಯ ಸಂಪ್ರದಾಯವನ್ನು ಅವರು ಸೃಷ್ಟಿಸಿದರು. ಬ್ರಿಟಿಷರ ಆಡಳಿತದಲ್ಲಿ ನೈತಿಕವಾಗಿ ಮತ್ತು ರಾಜಕೀಯವಾಗಿ ಕುಗ್ಗಿಹೋಗಿದ್ದ ಭಾರತೀಯರ ಮನಸ್ಸಿನಲ್ಲಿ, ದೇಶಭಕ್ತಿಯನ್ನು ಒಂದು ಉನ್ನತ ಆಧ್ಯಾತ್ಮಿಕ ಆದರ್ಶವನ್ನಾಗಿ ಹಾಗೂ ಕರ್ತವ್ಯವನ್ನಾಗಿ ಅವರು ಬಿತ್ತಿದರು. ಲಂಡನ್‌ನಲ್ಲಿ ಗಲ್ಲಿಗೇರಿದ ಭಾರತೀಯ ವಿದ್ಯಾರ್ಥಿ ಮದನ್ ಲಾಲ್ ಧಿಂಗ್ರಾ ಸೇರಿದಂತೆ ಹಲವು ಕ್ರಾಂತಿಕಾರಿಗಳು ಗಲ್ಲಿಗೇರುವಾಗಲೂ ಅವರ ತುಟಿಯ ಮೇಲೆ 'ವಂದೇ ಮಾತರಂ' ಮಂತ್ರ ಮಾರ್ದನಿಸುತಿತ್ತು ಎಂಬುದು, ಬಂಕಿಮರ ಕೃತಿಗಳು ಮೂಡಿಸಿದ್ದ ರಾಷ್ಟ್ರೀಯತೆಯ ಕಿಡಿಗೆ ಜ್ವಲಂತ ಸಾಕ್ಷಿಯಾಗಿದೆ.

ಬಂಕಿಮರು ಮುಸ್ಲಿಂ ವಿರೋಧಿಯಾಗಿದ್ದರೇ?

'ಆನಂದಮಠ', 'ದೇವಿ ಚೌಧುರಾಣಿ' ಮತ್ತು 'ಸೀತಾರಾಮ್' ಕಾದಂಬರಿಗಳಲ್ಲಿ ಬಂಕಿಮರು ಮುಸ್ಲಿಂ ಆಡಳಿತದ ಅವನತಿಯ ಕಾಲಘಟ್ಟವನ್ನು ಹಿನ್ನೆಲೆಯಾಗಿರಿಸಿಕೊಂಡಿರುವುದು ನಿಜ. ಇದೇ ಕಾರಣಕ್ಕೆ ಅವರನ್ನು ಮುಸ್ಲಿಂ ದ್ವೇಷಿ ಎಂದು ಕರೆಯುವುದು ಇತಿಹಾಸವನ್ನು ಅಪಾರ್ಥ ಮಾಡಿಕೊಂಡಂತೆ. ಇತಿಹಾಸಕಾರ ಜಾದುನಾಥ್ ಸರಕಾರ್ ಅವರು ಹೇಳುವಂತೆ, ''ಬಂಕಿಮರು ಇಸ್ಲಾಂ ಧರ್ಮವನ್ನಾಗಲೀ ಅಥವಾ ಅದರ ಸಂಸ್ಥಾಪಕರನ್ನಾಗಲೀ ಎಲ್ಲಿಯೂ ನಿಂದಿಸಿಲ್ಲ. ಅವರು ಮುಸ್ಲಿಂ ಅವನತಿಯ ಕಾಲಘಟ್ಟವನ್ನು ಆರಿಸಿಕೊಂಡಿದ್ದು ಮುಸ್ಲಿಮರ ಮೇಲಿನ ದ್ವೇಷದಿಂದಲ್ಲ, ಬದಲಾಗಿ ತಮ್ಮ ಕಲಾತ್ಮಕ ಮತ್ತು ಸೈದ್ಧಾಂತಿಕ ಅಗತ್ಯಕ್ಕೆ ಆ ಅರಾಜಕತೆಯ ಹಿನ್ನೆಲೆ ಸೂಕ್ತವಾಗಿತ್ತು ಎಂಬ ಕಾರಣಕ್ಕಾಗಿ''.



ಬಂಕಿಮರ ಕಾದಂಬರಿಗಳಲ್ಲಿ ಅವರು ಎಲ್ಲಿಯಾದರೂ ಆಕ್ರೋಶ ಕಂಡುಬಂದರೆ ಅದು ಬ್ರಿಟಿಷ್ ಆಡಳಿತದ ವಿರುದ್ಧವೇ ಹೊರತು (ಉದಾಹರಣೆಗೆ ಆನಂದಮಠದಲ್ಲಿ ಕಂಪನಿಯ ಸಿಪಾಯಿಗಳು, ದೇವಿ ಚೌಧುರಾಣಿಯಲ್ಲಿ ಲೆಫ್ಟಿನೆಂಟ್ ಬ್ರೆನ್ನನ್), ಮುಸ್ಲಿಮರ ವಿರುದ್ಧವಾಗಿರಲಿಲ್ಲ. ಅವನತಿಯತ್ತ ಸಾಗುತ್ತಿರುವ ಆಡಳಿತವನ್ನು ಅವರು ಖಂಡಿಸಿದ್ದು 'ಮುಸ್ಲಿಂ' ಎಂಬ ಕಾರಣಕ್ಕಲ್ಲ, ಬದಲಿಗೆ ಅದರ 'ಅರಾಜಕತೆಯ' ಕಾರಣಕ್ಕಾಗಿ ಮಾತ್ರ.

ಬಂಕಿಮರ ಕೃತಿಗಳಲ್ಲಿನ ಜಾತ್ಯತೀತ ಮತ್ತು ಧಾರ್ಮಿಕ ಸಮನ್ವಯದ ಸಾಕ್ಷ್ಯಗಳು

ಬಂಕಿಮರ ಬರವಣಿಗೆಯಲ್ಲಿ ಕೋಮುವಾದವಿರಲಿಲ್ಲ ಎಂಬುದಕ್ಕೆ ಅವರ ಕೃತಿಗಳೇ ಜ್ವಲಂತ ಸಾಕ್ಷಿಯಾಗಿವೆ:

■ **ಸೀತಾರಾಮನ ಪತನ ಮತ್ತು ಮುಸ್ಲಿಂ ಫಕೀರನ ನುಡಿ:** 'ಸೀತಾರಾಮ್' ಕಾದಂಬರಿಯಲ್ಲಿ ಮುಸ್ಲಿಂ ಪ್ರಾಬಲ್ಯವನ್ನು ವಿರೋಧಿಸುವ ಹಿಂದೂ ಆಡಳಿತಗಾರನನ್ನಾಗಿ ಸೀತಾರಾಮನನ್ನು ಚಿತ್ರಿಸಿದ್ದರೂ, ಆತನಲ್ಲಿ ನೈತಿಕತೆಯ ಪತನವಾದಾಗ ಬಂಕಿಮರು ಆತನನ್ನು ಕಟುವಾಗಿ ಟೀಕಿಸುತ್ತಾರೆ. ಸೀತಾರಾಮನ ಕ್ರೌರ್ಯದಿಂದ ಬೇಸತ್ತ ಮುಸ್ಲಿಂ ಫಕೀರ ಚಾಂದ್ ಷಾ, ''ಹಿಂದೂಗಳು ಇರುವ ಸ್ಥಳದಲ್ಲಿ ವಾಸಿಸದಿರಲು ನಾನು ನಿರ್ಧರಿಸಿದ್ದೇನೆ. ಸೀತಾರಾಮನು ನನಗೆ ಕಲಿಸಿದ ಪಾಠವಿದು,'' ಎಂದು ಹೇಳಿ ಮೆಕ್ಕಾಗೆ ತೆರಳುತ್ತಾನೆ. ಹಿಂದೂ ರಾಜನ ಬಗ್ಗೆ ಮುಸ್ಲಿಂ ಫಕೀರನ ಟೀಕೆಯು, ಬಂಕಿಮರು ಧರ್ಮಕ್ಕಿಂತ ನೈತಿಕತೆಗೆ ಒತ್ತು ನೀಡುತ್ತಿದ್ದರೆಂಬುದನ್ನು ಸೂಚಿಸುತ್ತದೆ.

■ **ಉದಾತ್ತ ಮುಸ್ಲಿಂ ಪಾತ್ರಗಳು:** ಬಂಕಿಮರ ಸಾಹಿತ್ಯಪಟಲದಲ್ಲಿ ಬರುವ ಕೆಲವು ಅತ್ಯುತ್ತಮ ಪಾತ್ರಗಳು ಮುಸ್ಲಿಮರದ್ದಾಗಿವೆ. ಹಿಂದೂ ಯುವಕ ಜಗತ್ ಸಿಂಗ್‌ನನ್ನು ಅತಿಯಾಗಿ ಪ್ರೀತಿಸುವ, ಸೌಂದರ್ಯ ಮತ್ತು ತ್ಯಾಗದ ಸಂಕೇತವಾದ ಆಯೇಷಾ ಬಂಕಿಮರ ಅತ್ಯಂತ ಆಕರ್ಷಕ ಸ್ತ್ರೀ-ಪಾತ್ರಗಳಲ್ಲಿ ಒಬ್ಬಳು. ಅದೇ ರೀತಿ ಓಸ್ಮಾನ್ ಮತ್ತು ಮುಬಾರಕ್ ಅವರಂತಹ ಶೌರ್ಯದ ಪಾತ್ರಗಳು, 'ಮೃಣಾಲಿನಿ'ಯಲ್ಲಿ ಕುತಂತ್ರಿ ಹಿಂದೂ ಮಂತ್ರಿ ಪಶುಪತಿಯ ಎದುರು ಉದಾತ್ತವಾಗಿ ನಿಲ್ಲುವ ಮೊಹಮ್ಮದ್ ಅಲಿಯ ಪಾತ್ರ - ಇವೆಲ್ಲವೂ ಬಂಕಿಮರ ನಿಷ್ಪಕ್ಷಪಾತ ದೃಷ್ಟಿಕೋನವನ್ನು ಬಿಂಬಿಸುತ್ತವೆ.

ಬಂಕಿಮರು ರಾಷ್ಟ್ರೀಯತೆಯನ್ನು ಕೇವಲ ಒಂದು ರಾಜಕೀಯ ಪ್ರಚೋದನೆಯನ್ನಾಗಿ ನೋಡಲಿಲ್ಲ; ಮಾತೃಭೂಮಿಯನ್ನು 'ಮಾತೃ-ದೇವತೆ'ಯೊಂದಿಗೆ ಸಮೀಕರಿಸುವ ಮೂಲಕ ಅವರು ರಾಷ್ಟ್ರೀಯತೆಯನ್ನು ಧರ್ಮದ ಮಟ್ಟಕ್ಕೆ ಏರಿಸಿದರು. ಅಂದರೆ ಹಿಂದೂ, ಮುಸ್ಲಿಂ, ಬೌದ್ಧ ಹೀಗೆ ಯಾವುದೇ ಸಮುದಾಯ, ಪಂಥಕ್ಕೆ ಸೇರಿದವರಾಗಲೀ, ರಾಷ್ಟ್ರೀಯತೆ ಪ್ರಜ್ಞೆಯನ್ನು ಹೊಂದಿರುವುದೇ ನಿಜವಾದ 'ಧರ್ಮ' ಎಂದು ಸಾರಿದರು. 'ಆನಂದಮಠ'ದಲ್ಲಿ ಅವರು ಹಿಂದೂ ಧರ್ಮದ ಜನಪ್ರಿಯ ದೇವರು ಮತ್ತು ದೇವತೆಗಳನ್ನು, ಮಾತೃಭೂಮಿಯ ವಿವಿಧ ಅಂಶಗಳ ಅಥವಾ ಅಭಿವ್ಯಕ್ತಿಗಳ ಪ್ರತಿನಿಧಿಗಳಾಗಿ ಚಿತ್ರಿಸಿದರು. ಆ ಮೂಲಕ ಗತದ ಮತ್ತು ಸಾಂಪ್ರದಾಯಿಕ ಪೌರಾಣಿಕ ಕಥೆಗಳಿಂದ ದೇಶಭಕ್ತಿಯ ಹೊಸ ಅಲೆಯನ್ನೇ ಅವರು ಸೃಷ್ಟಿಸಿದರು. ದೇಶವು ಹಿಂದೆ ಹೇಗಿತ್ತು, ಈಗ ಯಾವ ದುರ್ಗತಿಗೆ ಇಳಿದಿದೆ ಮತ್ತು ಭವಿಷ್ಯದಲ್ಲಿ ಹೇಗಿರಲಿದೆ ಎಂಬುದನ್ನು ದೇವತೆಗಳ ವಿವಿಧ ಅಭಿವ್ಯಕ್ತಿಗಳ ಮೂಲಕ ಅವರು ಕಟ್ಟಿಕೊಟ್ಟರು. ಬಂಗಾಳದಲ್ಲಿ ವ್ಯಾಪಕವಾಗಿರುವ ಶಕ್ತಿದೇವತಾರಾಧನೆಯಲ್ಲಿ ರಾಷ್ಟ್ರಪ್ರೇಮವನ್ನು ಹುದುಗಿಸುವ ಮೂಲಕ ಜನಸಾಮಾನ್ಯರಲ್ಲೂ ಸ್ವಾತಂತ್ರ್ಯದ ಕಿಡಿ ಹೊತ್ತಿಸುವ ಉದಾತ್ತ ಚಿಂತನೆ ಅವರ ಉದ್ದೇಶದ ಹಿಂದೆ ಅಡಗಿತ್ತೇ ವಿನಃ ಯಾವುದೋ ಒಂದು ಸಮುದಾಯಕ್ಕಾಗಿ ತಮ್ಮ ಸಾಹಿತ್ಯಿಕ ಶಕ್ತಿಯನ್ನು ಅವರು ಸೀಮಿತಿಗೊಳಿಸಿದಂತೆ ಕಂಡುಬರುವುದಿಲ್ಲ.

ಬಂಕಿಮರ ಸಾಹಿತ್ಯವನ್ನು ಪೂರ್ವಾಗ್ರಹ ಪೀಡಿತ ದೃಷ್ಟಿಕೋನದಿಂದ ಅಳೆಯುವ ಬದಲು, ಸಮಗ್ರ ದೃಷ್ಟಿಯಿಂದ ನೋಡುವ ಅಗತ್ಯವಿದೆ. ಆಧುನಿಕ ಭಾರತದ ನಿರ್ಮಾಣದಲ್ಲಿ, ಸಾಹಿತ್ಯದ ಮೂಲಕ ರಾಷ್ಟ್ರೀಯತೆಯ ಪ್ರಜ್ಞೆಯನ್ನು ಬಡಿದೆಬ್ಬಿಸಿದ ಬಂಕಿಮರ ಕೊಡುಗೆ ಸ್ಮರಣಾರ್ಹ. ■

ಸಹಾನುಭೂತಿಯ ವಿಕಾಸ ಮತ್ತು ಮಂಗಗಳ ರಾಜಕೀಯ



ಮನೋ-ಗಮ
ಡಾ. ಕೆ.ಎನ್. ಗಣೇಶಯ್ಯ
editor@vijaykarnataka.com

ಇರಾನಿನ ದಾಳಿಯಲ್ಲಿ ಸತ್ತ ಅಮೆರಿಕದ ಮೊದಲ ನಾಲ್ವರು ಸೈನಿಕರ ಶವಗಳನ್ನು ಅವರ ಕುಟುಂಬದವರಿಗೆ ಹಸ್ತಾಂತರ ಮಾಡುವ ಸಂದರ್ಭದಲ್ಲಿ ಸ್ವತಃ ಅಧ್ಯಕ್ಷ ಟ್ರಂಪ್ ತನ್ನ ಪತ್ನಿಯೊಂದಿಗೆ ಬಾಗಿಯಾಗಿ, ದುಃಖಿತರಿಗೆ ಸಹಾನುಭೂತಿ ತೋರಿದ್ದು ಜಾಗತಿಕ ಮಟ್ಟದಲ್ಲಿ ಸುದ್ದಿಯಾಗಿತ್ತು; ಹಾಗೆ ಸುದ್ದಿಯಾಗುವಂತೆ ವ್ಯವಸ್ಥೆ ಮಾಡಲಾಗಿತ್ತು ಎಂದೂ ಹೇಳಬಹುದು. ಅಮೆರಿಕನ್ನರ ಹೃದಯ ಕಲಕುವ ಈ ಘಟನೆಯನ್ನು ಎರಡು ರೀತಿಯಲ್ಲಿ ಅವಲೋಕಿಸಲಾಯಿತು: ದೇಶಕ್ಕಾಗಿ ಜೀವತೆತ್ತ ಸೈನಿಕರ ಬಗ್ಗೆ ಟ್ರಂಪ್‌ಗಿರುವ ಕಾಳಜಿಗೆ, ಆತನ ರಾಷ್ಟ್ರೀಯತೆಗೆ ಹಾಗೂ ಅಧ್ಯಕ್ಷನಾಗಿ ತನ್ನ ಕರ್ತವ್ಯ ನಿರ್ವಹಣೆಗೆ, ಆ ಘಟನೆ ಒಂದು ದೃಷ್ಟಾಂತ ಎಂದು ಕೆಲವರು ಬಣ್ಣಿಸಿದರು. ಆದರೆ ಕೆಲವರು, ತಾನು ಮೂರ್ಖತನದಲ್ಲಿ ಹೂಡಿದ ಯುದ್ಧದ ಋಣಾತ್ಮಕ ಪರಿಣಾಮವನ್ನು ಮರೆಮಾಚಲು, ತನ್ನ ನಿರ್ಣಯಕ್ಕೆ ಅಮೆರಿಕದ ಪ್ರಜೆಗಳು ವಿರೋಧಿಸದಂತೆ ಮಂಕು ಬೂದಿ ಎರಚಲು ಟ್ರಂಪ್ ಧರಿಸಿದ ಸಹಾನುಭೂತಿಯ ಮುಖವಾಡ. ಅದೊಂದು ಕಜಟರಿಟ-ಟಟ ಅಷ್ಟೇ ಎಂದು ದೂರಿದರು. ವಿಚಿತ್ರವೆಂದರೆ, ಪ್ರಾಣಿಗಳಲ್ಲಿ ಮತ್ತು ಮಾನವರಲ್ಲಿ ಸಹಾನುಭೂತಿಯ ವಿಕಾಸದ ಹಾದಿಯನ್ನು ಗಮನಿಸಿದರೆ ಈ ಎರಡೂ ಅವಲೋಕನಗಳು ಸತ್ಯ ಅನಿಸುತ್ತದೆ. ಅಲ್ಲದೆ ಸಹಾನುಭೂತಿಯನ್ನು ವಿಶೇಷವಾಗಿ ರಾಜಕಾರಣಿಗಳು ಹೆಚ್ಚು ಅವ್ಯಾಹತವಾಗಿ ಪ್ರದರ್ಶಿಸಲು ಕಾರಣವೂ ಬಯಲಾಗುತ್ತದೆ.

ಅಮೆರಿಕದ ಸ್ಯಾಂಡಿಯಾಗೋದಲ್ಲಿರುವ ಪ್ರಾಣಿ ಸಂಗ್ರಹಾಲಯದಲ್ಲಿ ಒಮ್ಮೆ ಒಂದು ವಿಚಿತ್ರ ಘಟನೆ ನಡೆಯುತ್ತದೆ. ಅಲ್ಲಿನ ಬೊನೊಬೊಗಳ ಘಟಕದಿಂದ ಇದ್ದಕ್ಕಿದ್ದಂತೆ ಕಾಕೋವೆಟ್ (Kakowet) ಎಂಬ ಹೆಸರಿನ ಮಂಗವೊಂದು ಜೋರಾಗಿ ಕಿರುಚುತ್ತ ಅಧಿಕಾರಿಗಳ ಗಮನ ಸೆಳೆಯುತ್ತದೆ. ಆ ವರ್ತನೆಯಿಂದ ಎಚ್ಚರಗೊಂಡ ಅಧಿಕಾರಿಗಳು ಓಡಿಬಂದು ಅದರ ಕೂಗಾಟ ಏಕಿರಬಹುದೆಂದು ಪರಿಶೀಲಿಸಿದಾಗ ಆ ಘಟಕದ ಹಲವು ಮರಿ ಬೊನೊಬೊಗಳು ಎರಡು ಮೀಟರ್ ಆಳದ ನೀರಿನ ಕಂದಕದೊಳಗೆ ಬಿದ್ದು ಜೀವಕ್ಕಾಗಿ ಒದ್ದಾಡುತ್ತಿರುತ್ತವೆ. ತಕ್ಷಣ ಕಾರ್ಯನಿರತರಾಗಿ ಅವನ್ನು ರಕ್ಷಿಸುತ್ತಿದ್ದಂತೆ ಕಾಕೋವೆಟ್ ಕೂಡ ಜೊತೆಯಾಗಿ ತಾನೂ ಒಂದು ಮರಿ ಮಂಗವನ್ನು ರಕ್ಷಿಸುತ್ತದೆ. ಇಡೀ ಘಟನೆಯು, ಬೊನೊಬೊಗಳಲ್ಲಿಯೂ ನಮ್ಮಂತೆಯೇ ಸಂಕಷ್ಟದಲ್ಲಿರುವ ಸಮುದಾಯದ ಸದಸ್ಯರತ್ತ ಸಹಾನುಭೂತಿ ತೋರುವ ಕರುಣಾಗುಣ ವಿಕಾಸಗೊಂಡಿದೆ ಎನ್ನುವುದಕ್ಕೊಂದು ದೃಷ್ಟಾಂತವಾಗಿದೆ. ಬೊನೊಬೊಗಳು ವಿಕಾಸದಲ್ಲಿ ನಮಗೆ ಅತೀ ಹತ್ತಿರದ ಸಂಬಂಧಿಗಳಾಗಿರುವ ಕಾರಣ ನಮ್ಮಲ್ಲಿಯ ಸಹಾನುಭೂತಿಯ ಗುಣ ಬಹುಶಃ ಅಲ್ಲಿಂದಲೇ ಬಂದಿರುವ ಬಳುವಳಿ ಎಂದೇ ಪರಿಗಣಿಸಬಹುದು. ಆದರೆ, ಅದು ವಿಕಾಸಗೊಂಡದ್ದಾದರೂ ಹೇಗೆ?

ಮಾನವರಂತೆ ಸಾಮೂಹಿಕ ಮತ್ತು ಸಮಾಜ ಜೀವನ ನಡೆಸುವ ಎಲ್ಲ ಪ್ರಭೇದಗಳಲ್ಲೂ ಸದಸ್ಯರ ನಡುವೆ ಕಲಹಗಳು ಸಾಮಾನ್ಯ. ಆಹಾರಕ್ಕಾಗಿಯೋ, ಗುಂಪಿನ ಸದಸ್ಯರ ಕೈಲಿ ಮೈಯುಜ್ಜಿಸಿಕೊಳ್ಳಲೋ, ಹೇನು ತೆಗೆಸಿಕೊಳ್ಳಲೋ ಅಥವಾ ಸಂಗಾತಿಯನ್ನು ಪಡೆಯಲೋಸುಗವೋ, ಹೀಗೆ ಹಲವು ಕಾರಣಗಳಿಂದ ಸದಸ್ಯರ ನಡುವೆ ಕಲಹಗಳು ನಡೆಯುತ್ತಲೇ ಇರುತ್ತವೆ. ಅಂಥಾ ಕಲಹಗಳಲ್ಲಿ ಸೋತವರು, ನೊಂದವರು ಇತರರಿಂದ ಮಾನಸಿಕವಾಗಿ ದೂರವಾಗಿ, ಸಮುದಾಯದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳದೆ ಗುಂಪಿನೊಳಗೆ ಒಂದು ದ್ವೀಪದಂತೆ ಉಳಿದುಬಿಡುತ್ತಾರೆ. ಕಲಹಗಳು ಮರುಕಳಿಸುತ್ತಲೇ ಇರುವ ಕಾರಣ, ಅಂಥಾ ಸದಸ್ಯರುಗಳ ಸಂಖ್ಯೆಯೂ ಹೆಚ್ಚುತ್ತಾ ಹೋಗಿ ಕ್ರಮೇಣ ಇಡೀ ಸಮುದಾಯವೇ ಹಲವು ದ್ವೀಪಗಳಾಗಿ ಛಿದ್ರಗೊಂಡು ಆಂತರಿಕ ಒಗ್ಗಟ್ಟು ಸಂಪೂರ್ಣವಾಗಿ ಒಡೆದುಹೋಗುತ್ತದೆ.

ಅಂತಹ ಸ್ಥಿತಿಯಲ್ಲಿ ಎರಡು ರೀತಿಯ ಗುಂಪುಗಳನ್ನು ಊಹಿಸಿಕೊಳ್ಳಿ: (ಅ) ಹಾಗೆ ನೊಂದವರನ್ನು ದ್ವೀಪಗಳಂತೆಯೇ ಉಳಿಯಲು ಬಿಟ್ಟು ಆಂತರಿಕ ಒಗ್ಗಟ್ಟನ್ನು ಕಳೆದುಕೊಳ್ಳುವ ಗುಂಪು; (ಇ) ನೊಂದವರನ್ನು ಸಾಂತ್ವನಪಡಿಸಿ, ಸಹಾನುಭೂತಿ ತೋರಿ ಅವರನ್ನು ಎಲ್ಲರೊಂದಿಗೆ ಒಂದಾಗಿಸಿಕೊಳ್ಳುವ ಗುಂಪು. ಇವೆರಡೂ ಗುಂಪುಗಳು ಎದುರುಬದರಾಗಿ, ಆಹಾರಕ್ಕಾಗಿ ಸ್ಪರ್ಧೆ ಉಂಟಾದರೆ, ಸ್ವಾಭಾವಿಕವಾಗಿ ಸಹಾನುಭೂತಿ ತೋರದ ಕಾರಣ, ಛಿದ್ರಗೊಂಡಿರುವ ಮೊದಲ ಗುಂಪನ್ನು, ಒಗ್ಗಟ್ಟಿನ ಶಕ್ತಿಯಿರುವ ಎರಡನೆಯ ಗುಂಪು ಸುಲಭವಾಗಿ ಸೋಲಿಸುತ್ತದೆ. ಆ ಮೂಲಕ ಅಲ್ಲಿನ ಪ್ರದೇಶದ ಮತ್ತು ಆಹಾರದ ಮೇಲೆ ಅಧಿಪತ್ಯ ಸಾಧಿಸಿ ಹೆಚ್ಚು ಆಹಾರ ಪಡೆದು, ಆರೋಗ್ಯವಾಗಿ ಬೆಳೆದು, ಉಳಿಯುತ್ತದೆ. ಆ ಗುಂಪಿನ ಸಹಾನುಭೂತಿಯ ವರ್ತನೆಯೂ ಉಳಿದು ವಿಕಾಸಗೊಳ್ಳುತ್ತದೆ.

ರಾಜಕೀಯ ನಾಯಕರ ಸಹಾನುಭೂತಿಯ ವರ್ತನೆ: ಅಮೆರಿಕದ ಅಧ್ಯಕ್ಷ ಬರಾಕ್ ಒಬಾಮ ಮಕ್ಕಳನ್ನು ಮುದ್ದಿಸುವ ನೋಟ ಅತೀ ಸಾಮಾನ್ಯ

ಜೀವ ತೆತ್ತ ಸೈನಿಕರ ಶವಗಳನ್ನು ಕುಟುಂಬದವರಿಗೆ ಹಸ್ತಾಂತರಿಸುವಾಗ ಟ್ರಂಪ್ ಗೌರವ ಸಲ್ಲಿಕೆ

ಹೀಗೆ ಚಿಂಪಾಂಜಿಗಳ ಮತ್ತು ಬೊನೊಬೊಗಳ ಸಹಾನುಭೂತಿಯ ವರ್ತನೆಯು ಇಡೀ ಸಮುದಾಯದ ಒಳಿತಿಗಾಗಿ ವಿಕಾಸಗೊಂಡಿದ್ದು ಅದು ನಮ್ಮವರೆಗೂ ಸಾಗಿಬಂದಿದೆ. ನಮ್ಮಲ್ಲಿ ಈ ವರ್ತನೆ ಅಂತರ್ಗತಗೊಂಡಿರುವುದನ್ನು ಕನಿಷ್ಠ ಮೂರು ಸ್ತರಗಳಲ್ಲಿ ಕಾಣಬಹುದು: 1. ಸುಮಾರು ಒಂದು ವರ್ಷದ ಮಕ್ಕಳ ಗುಂಪಲ್ಲಿ ಯಾವುದೇ ಮಗು ಅತ್ತರೂ, ತಕ್ಷಣ ಇತರರೂ ಅಳಲು ಪ್ರಾರಂಭಿಸಿ ಅದೊಂದು ಸಮೂಹ ಅಳುವಾಗಿ ಪರಿಣಮಿಸುತ್ತದೆ. ಬೇರೊಂದು ಮಗುವಿನ ಅಳುವನ್ನು ಕೇಳಿ, ಅದು ತೊಂದರೆಯಲ್ಲಿದೆ ಎಂದು ಭಾವಿಸಿ, ಸ್ಪಂದಿಸುವ 'ಸಹಾನುಭೂತಿ'ಯ ಕುರುಹು ಇದು. 2. ಸುಮಾರು 3- 4 ವರ್ಷದ ಮಕ್ಕಳ ಗುಂಪಲ್ಲಿ ಯಾವುದಾದರೂ ಮಗು ಅಳುತ್ತಿದ್ದರೆ ಅಥವಾ ದುಃಖದಲ್ಲಿದ್ದರೆ, ಇತರೆ ಮಕ್ಕಳು ಅದಕ್ಕೆ ಸ್ಪಂದಿಸಿ, ಬಳಿಸಾರಿ, ತಬ್ಬಿ ಆಲಿಂಗಿಸಿ ಸಾಂತ್ವನ ನೀಡಲು ಮುಂದಾಗುತ್ತವೆ. 3. ವಿಪತ್ತುಗಳು ಒದಗಿದಾಗ ವಯಸ್ಕರಲ್ಲಿ ಇದೇ ಗುಣ, ಕಾಕೋವೆಟ್‌ನ ಹಾಗೆ ಇನ್ನೂ ಸಂಕೀರ್ಣ ರೂಪಗಳಲ್ಲಿ ಕಾಣಿಸಿಕೊಳ್ಳುತ್ತದೆ.

ಹೀಗೆ ಸಮುದಾಯದ ಒಳಿತಿಗಾಗಿ ವಿಕಾಸಗೊಂಡಿರುವ ಈ ವರ್ತನೆಯು ಚಿಂಪಾಂಜಿ ಮತ್ತು ಬೊನೊಬೊಗಳಲ್ಲಿ ನಾಯಕ ಪಟ್ಟ ಗಳಿಸಲು ಒಂದು ರಾಜಕೀಯ ಅಸ್ತ್ರವಾಗಿಯೂ ಉಪಯೋಗಿಸಲ್ಪಟ್ಟಿದೆ! ಉದಾಹರಣೆಗೆ, De Wal ಎಂಬ ಮಂಗಗಳ ವರ್ತನೆಯ ತಜ್ಞರು ತಾವು ಅಧ್ಯಯನ ಮಾಡಿದ ಗುಂಪುಗಳಲ್ಲಿ ಒಂದು ವಿಶಿಷ್ಟತೆಯನ್ನು ಗಮನಿಸುತ್ತಾರೆ: ಸಾಮಾನ್ಯವಾಗಿ ನಾಯಕ ಪಟ್ಟಕ್ಕೆ ಹೋರಾಡುವ ಗಡವ ಮಂಗಗಳೇ ಸೋತ ಅಥವಾ ನೊಂದ ಸದಸ್ಯರನ್ನು ಸಾಂತ್ವನಗೊಳಿಸುವಲ್ಲಿ ಹೆಚ್ಚಾಗಿ ತೊಡಗಿಕೊಳ್ಳುತ್ತವೆ. ಅಲ್ಲದೆ, ಗಳಿಸಿದ ನಾಯಕಪಟ್ಟವನ್ನು ಕಸಿಯಲೆಂದು ಬೇರೊಂದು ಮಂಗ ಸವಾಲು ಒಡ್ಡಿದಾಗ ನಡೆಯುವ ಕಲಹದಲ್ಲಿ, ನಾಯಕನಿಂದ ಸಾಂತ್ವನ ಪಡೆದ ಸದಸ್ಯರೇ ಆತನ ಪರವಾಗಿ ನಿಲ್ಲುತ್ತಾರೆ. ಅಂದರೆ ನೊಂದ ಸದಸ್ಯರನ್ನು ಸಂತೈಸಲು ತೋರಿದ ಕರುಣೆಯು ಮುಂದೆ ತನ್ನ ರಾಜಕೀಯ ಕೈಂಕರ್ಯದಲ್ಲಿ ಸಹಾಯಕ್ಕೆ ಬರುತ್ತದೆ ಎಂಬ ಸ್ವಾರ್ಥದಿಂದಲೂ ಸಹಾನುಭೂತಿ ವಿಕಾಸಗೊಂಡಿರಲು ಸಾಧ್ಯ ಎಂದು ಕಂಡುಬರುತ್ತದೆ. ಹೀಗೆ ಚಿಂಪಾಂಜಿ ಮತ್ತು ಮಂಗಗಳ ಪ್ರಭೇದಗಳಲ್ಲಿಯೇ ರಾಜಕೀಯ ಕಾರಣಗಳಿಂದಲೂ ಸಹಾನುಭೂತಿಯ "Photo op' ಪದ್ಧತಿ ವಿಕಾಸಗೊಂಡಿದ್ದು, ಇಂದಿನ ನಾಯಕರು ಅದರ ಅನುಕರಣೆ ಮಾಡುತ್ತಿದ್ದಾರೆ ಅಷ್ಟೇ ಅನಿಸುತ್ತದೆ. ■

ಜಪಾನ್ ಬೀದಿಗಳಲ್ಲಿ ಸೈಕಲ್ ಶಿಸ್ತಿನ ಸೊಗಡು

ಟೋಕಿಯೊ ಮೇಲ್
ಗಣೇಶ ಮೇಗೂರ್
editor@vijaykarnataka.com

ಎಪ್ಪತ್ತು ಎಂಬತ್ತರ ದಶಕದ ಭಾರತೀಯ ಮಧ್ಯಮವರ್ಗದ ಮನೆಗಳಲ್ಲಿ ಸೈಕಲ್‌ಗೆ ಬಹಳ ಪ್ರಾಶಸ್ತ್ಯವಿತ್ತು. ಮನೆಯ ಮಕ್ಕಳಿಗೆ ಸಿಗುವಷ್ಟೇ ಪ್ರೀತಿ ಅಕ್ಕರೆ ಸೈಕಲ್‌ಗೂ ದೊರೆಯುತ್ತಿತ್ತು. ಮನೆಯ ಯುವಕರು ಶಾಲಾ ಕಾಲೇಜಿಗೆ ಸೈಕಲ್‌ನಲ್ಲಿ ಹೋದರೆ ತಂದೆಯು ತನ್ನ ಕೆಲಸಕ್ಕೆ ಹೋಗುವುದು ಸೈಕಲ್ ಮೇಲೆಯೇ. ತರಕಾರಿ ದಿನಸಿ ಸಾಮಾನು ತರುವುದು ಎಲ್ಲಾ ರೀತಿಯ ಕೆಲಸಗಳಿಗೂ ಸೈಕಲ್‌ನ ಸಹಕಾರವಿಲ್ಲದೆ ನಡೆಯುತ್ತಿರಲಿಲ್ಲ. ನಂತರದ ದಶಕಗಳಲ್ಲಿ ಬೈಕು ಸೈಕಲ್‌ನ ಸ್ಥಾನ ತುಂಬಿತು. ಒಂದು ಕಾಲದಲ್ಲಿ ಮನೆಯವರನ್ನೆಲ್ಲಾ ತನ್ನ ಮೇಲೆ ಹೊತ್ತು ಮೆರವಣಿಗೆ ಮಾಡಿದ್ದ ಸೈಕಲ್‌ಗೆ ಬಡವರ ವಾಹನವೆಂಬ ಹಣೆಪಟ್ಟಿ ಅಂಟಿತು. ಹವ್ಯಾಸಕ್ಕೆಂದು ಸೈಕಲ್ ಉಪಯೋಗಿಸುವ ಕೆಲವು ಜನರನ್ನು ಹೊರತುಪಡಿಸಿ ಉಳಿದವರಿಗೆ ಸೈಕಲ್ ಸವಾರಿ ಒಂದು ರೀತಿಯ ಕೀಳರಿಮೆ ಕಾಡತೊಡಗಿ ಸೈಕಲ್ ಮೂಲೆ ಸೇರಿ ತುಕ್ಕುಹಿಡಿದು ಗುಜರಿ ಅಂಗಡಿಯ ಪಾಲಾಗತೊಡಗಿತು. ಆದರೆ ಜಪಾನಿನಲ್ಲಿ ಈಗಲೂ ಸೈಕಲ್ ಜನರ ಜೀವನಾಡಿ, ಎಂತೆಂತಹ ಮೋಟಾರ್‌ಬೈಕು, ಕಾರಿನ ಆವಿಷ್ಕಾರವಾಗಿ ಮಾರುಕಟ್ಟೆಗೆ ಲಗ್ಗೆಯಿಟ್ಟರೂ ಸೈಕಲನ್ನು ಅಲುಗಾಡಿಸಲೂ ಆಗಲಿಲ್ಲ.

ಟೋಕಿಯೊ, ಒಸಾಕಾದಂತಹ ಮಹಾನಗರದ ಜನನಿಬಿಡ ರಸ್ತೆಗಳಲ್ಲಿಯೂ ಸೈಕಲ್ ಸವಾರರು ಎಲ್ಲೆಡೆ ಕಾಣಿಸುತ್ತಾರೆ. ಶಾಲಾಕಾಲೇಜು ವಿದ್ಯಾರ್ಥಿಗಳು, ಕೆಲಸಕ್ಕೆ ಹೋಗುವ ಮಹಿಳೆಯರು ಪುರುಷರು ಮನೆಸಾಮಾನುಗಳ ಖರೀದಿಗೆ ತೆರಳುವ ವಯಸ್ಕರು ಎಲ್ಲರಿಗೂ ಸೈಕಲ್ ಆಸರೆ. ಜಪಾನಿನಲ್ಲಿ ಆಫೀಸ್ ಕೆಲಸಕ್ಕೆ ಎಲ್ಲರೂ ಮೆಟ್ರೊ ಟ್ರೈನ್ ಬಳಸುತ್ತಾರೆ. ಮೆಟ್ರೊ ಸ್ಟೇಷನ್‌ಗೆ ಮನೆ ಹತ್ತಿರ ಇರುವವರು ನಡೆದುಕೊಂಡು ಸ್ಟೇಷನ್‌ಗೆ ಬಂದರೆ ದೂರವಿರುವವರು ಸೈಕಲ್‌ನಲ್ಲಿ ಸ್ಟೇಷನ್‌ಗೆ ಬಂದು ಅಲ್ಲಿಯೇ ನಿಲ್ಲಿಸಿ ಮೆಟ್ರೊದಲ್ಲಿ ಆಫೀಸ್‌ಗೆ ಹೋಗುವರು. ರಾತ್ರಿ ವಾಪಸ್ ಬಂದು ಸೈಕಲ್ ತೆಗೆದುಕೊಂಡು ಮನೆಗೆ ಹಿಂತಿರುಗುವುದು ವಾಡಿಕೆ. ಇದಕ್ಕೆ ಪುರುಷರು ಮಹಿಳೆಯರು ಎಂಬ ಭೇದವಿಲ್ಲ. ಸೂಟುಬೂಟು ಧರಿಸಿ ಸೈಕಲ್ ಮೇಲೆ ಸವಾರಿ ಮಾಡುವುದು ಸರ್ವೇಸಾಮಾನ್ಯ.

ಇಲ್ಲಿನ ಶಿಶುವಿಹಾರ ಮತ್ತು ಪ್ರಾಥಮಿಕ ಶಾಲೆಗಳಿಗೆ ಕಾರು ಅಥವಾ ಬೈಕಿನಲ್ಲಿ ಬಂದು ಮಕ್ಕಳನ್ನು ಬಿಡುವುದು ನಿಷಿದ್ಧ, ಶಾಲೆಗಳ ಅಕ್ಕಪಕ್ಕದಲ್ಲಿ ನೆಲೆಸಿರುವ ಜನರಿಗೆ ಕಿರಿಕಿರಿಯಾಗಬಾರದೆಂದು ಈ ನಿಯಮ ಮಾಡಿದ್ದಾರೆ. ಶಿಶುವಿಹಾರಗಳಲ್ಲಿ ಬಹುತೇಕ ಮಕ್ಕಳ ಅಮ್ಮಂದಿರು ಸೈಕಲ್ಲಿನ ಮುಂಭಾಗ ಅಥವಾ ಹಿಂಭಾಗದಲ್ಲಿರುವ ಕ್ಯಾರಿಯರ್‌ನಲ್ಲಿ ಮಕ್ಕಳನ್ನು ಕೂರಿಸಿ ತಲೆಗೆ ಹೆಲ್ಮೆಟ್ ತೊಡಿಸಿ ಸವಾರಿ ಮಾಡಿಕೊಂಡು ಬಂದು ಬಿಟ್ಟುಹೋಗುತ್ತಾರೆ. ಈ ರೀತಿಯಾಗಿ ಮಕ್ಕಳನ್ನು ಕೂರಿಸಿಕೊಂಡು ಹೋಗುವ ಸೈಕಲ್ಲಿಗೆ 'ಮಮಾಚರಿ' ಎಂದು ಹೆಸರು. ಮಳೆಯಲ್ಲಿ ಕೂಡ ರೈನ್ ಕೋಟ್ ಧರಿಸಿ ಮಕ್ಕಳಿಗೆ ಮಳೆಯ ನೀರು ಸೋಕದಂತೆ ಪ್ಲಾಸ್ಟಿಕ್‌ನಿಂದ ಕವರ್ ಮಾಡಿ ಸೈಕಲ್ ತುಳಿಯುತ್ತಾರೆ. ದಿನನಿತ್ಯದ ಬಳಕೆಯಲ್ಲಿ ಸೈಕಲ್ ಉಪಯೋಗಿಸುವವರು ಒಂದೆಡೆಯಾದರೆ, ಹವ್ಯಾಸಕ್ಕಾಗಿ ಸದೃಢ ಆರೋಗ್ಯಕ್ಕಾಗಿ ಸೈಕಲ್ ಓಡಿಸುವವರು ಅನೇಕರಿದ್ದಾರೆ. ಬಹುತೇಕ ದೊಡ್ಡದೊಡ್ಡ ನದಿಗಳ ದಂಡೆಯಲ್ಲಿ ಸೈಕಲ್ ಸವಾರರಿಗಾಗಿಯೇ ನೂರಾರು ಕಿಲೋಮೀಟರ್ ಉದ್ದದ ಪ್ರತ್ಯೇಕ ರಸ್ತೆಗಳಿವೆ, ಈ ರಸ್ತೆಗಳಲ್ಲಿ ಬೇರೆ ವಾಹನಗಳಿಗೆ ಪ್ರವೇಶವಿಲ್ಲ.

ಸುಮಾರು 12.3 ಕೋಟಿ ಜನಸಂಖ್ಯೆ ಇರುವ ಜಪಾನಿನಲ್ಲಿ ಸೈಕಲ್‌ನ ಸಂಖ್ಯೆ ಸುಮಾರು 8 ಕೋಟಿ ಇದೆ, ಅಂದರೆ ಮೂರು ಜನರಲ್ಲಿ ಇಬ್ಬರು ಸೈಕಲ್ ಹೊಂದಿದ್ದಾರೆ ಎಂದು ಅರ್ಥ. ನಾನು ವಾಸವಿರುವುದು ಹನ್ನೆರಡು ಮನೆಗಳಿರುವ ಸಣ್ಣ ಕಾಲೋನಿಯಲ್ಲಿ, ಇಲ್ಲಿ ಒಟ್ಟು ಮೂವತ್ತು ಸೈಕಲ್‌ಗಳಿವೆ. ಎಲ್ಲಾ ಊರುಗಳಲ್ಲಿಯೂ ಸೈಕಲ್ ಮಾರಾಟ ಮಾಡುವ ಅಂಗಡಿಗಳು, ರಿಪೇರಿ ಮಾಡುವ ಶಾಪ್‌ಗಳು ಕಾಣಿಸುತ್ತವೆ. ದೊಡ್ಡ ದೊಡ್ಡ ಶಾಪಿಂಗ್ ಮಾಲ್‌ಗಳಲ್ಲಿ ಒಂದೆರಡು ಮಳಿಗೆಗಳಾದರೂ ಸೈಕಲ್ಲಿಗೆ ಮೀಸಲುಂಟು.

ಮಾರ್ಚ್ 11, 2011ರ ಶುಕ್ರವಾರ ಭಾರಿ ಭೂಕಂಪನವಾಗಿ ಟೋಕಿಯೊದ ಎಲ್ಲ ರೈಲು ಸಂಚಾರ ನಿಂತು ಹೋಯಿತು. ಸಣ್ಣ ಮಕ್ಕಳನ್ನು ಮನೆ, ಶಿಶುವಿಹಾರದಲ್ಲಿ ಬಿಟ್ಟು ಆಫೀಸ್ ಕೆಲಸಕ್ಕೆ ಹೋಗಿದ್ದ ಕೆಲವು ಅಮ್ಮಂದಿರಿಗೆ ದಿಕ್ಕೇ ತೋಚದಂತಾಯಿತು, ಅವರು ಆಫೀಸಿನ ಹತ್ತಿರದಲ್ಲಿದ್ದ ಸೈಕಲ್ ಅಂಗಡಿಗೆ ಹೋಗಿ ಸೈಕಲನ್ನು ಖರೀದಿಸಿ 30-40 ಕಿಲೋಮೀಟರು ಸೈಕಲ್ ತುಳಿದು ಮನೆ ಸೇರಿದರು. ಆ ದಿನದಿಂದಲೂ ಸೈಕಲ್ ಕೇವಲ ಎರಡು ಚಕ್ರವಿರುವ ವಾಹನ ಎನ್ನುವುದಕ್ಕಿಂತ ಅವರ ಪಾಲಿಗೆ ಭಗವಂತನು ಕರುಣಿಸಿದ ವರದಾನ ಎಂದೇ ಅವರೆಲ್ಲರೂ ಭಾವಿಸಿದ್ದಾರೆ. ಅಂದು ಖರೀದಿಸಿದ ಸೈಕಲ್‌ಗಳನ್ನು ಅಷ್ಟೇ ಜತನದಿಂದ ಕಾಪಾಡಿಕೊಂಡು ಬಂದಿದ್ದಾರೆ.

ಇಲ್ಲಿನ ಸರಕಾರವು ಸೈಕಲ್ ಸವಾರಿಗಾಗಿಯೇ ಅನೇಕ ಕಟ್ಟುನಿಟ್ಟಿನ ಕಾನೂನುಗಳನ್ನು ಮಾಡಿದ್ದಾರೆ ಮತ್ತು ಕಾಲಕ್ಕೆ ತಕ್ಕಂತೆ ಅದು ಪರಿಷ್ಕರಣೆಗೆ ಒಳಪಡುತ್ತದೆ. ಮೊಬೈಲ್ ನೋಡುತ್ತಾ ಸೈಕಲ್ ಓಡಿಸಿದಾಗ, ಸಂಚಾರಿ ನಿಯಮಗಳನ್ನು ಉಲ್ಲಂಘಿಸಿದಾಗ ದಂಡ ಪಾವತಿಸಬೇಕು. ಮದ್ಯಪಾನ ಮಾಡಿ ಸೈಕಲ್ ಓಡಿಸಿ ಪೊಲೀಸರ ಕೈಗೆ ಸಿಕ್ಕಿದಲ್ಲಿ ನಿಮ್ಮ ಕಾರ್ ಡ್ರೈವಿಂಗ್ ಲೈಸೆನ್ಸ್ ಕೂಡ ಕ್ಯಾನ್ಸಲ್ ಮಾಡಲಾಗುವುದು.

ಜಪಾನಿನ ಬೀದಿಗಳಲ್ಲಿ ನಿಧಾನವಾಗಿ ಸೈಕಲ್ ಚಕ್ರ ತಿರುಗುತ್ತಿರುತ್ತದೆ. ಆ ಚಕ್ರಗಳಲ್ಲಿ ಕೇವಲ ಪ್ರಯಾಣವಲ್ಲ ಒಂದು ಜೀವನ ತತ್ವವೇ ಅಡಗಿದೆ. ಇಲ್ಲಿ ಸೈಕಲ್ ಓಡಿಸುವುದು ವೇಗದ ಸ್ಪರ್ಧೆ ಅಲ್ಲ, ಅದು ಶಿಸ್ತಿನ ನಡೆ. ಪರಸ್ಪರ ಗೌರವ ಮತ್ತು ಪ್ರಕೃತಿಯೊಂದಿಗೆ ಹೊಂದಿಕೊಂಡ ಬದುಕಿನ ಪ್ರತೀಕ. ಪ್ರತಿದಿನ ಬೆಳಿಗ್ಗೆ ಶಾಲೆಗೆ ಹೊರಡುವ ಮಗು, ಕೆಲಸಕ್ಕೆ ಹೋಗುವ ಜನ, ಪ್ರತಿ ಸಂಜೆ ಮಾರುಕಟ್ಟೆಗೆ ಹೋಗುವ ಹಿರಿಯರು, ಎಲ್ಲರಿಗೂ ಸೈಕಲ್ ಒಂದೇ ಮಾತು ಹೇಳುತ್ತದೆ 'ನಿಧಾನವಾಗಿ ಹೋದರೂ, ಸರಿಯಾದ ದಾರಿಯಲ್ಲಿ ಸಾಗು'! ■

(**ಲೇಖಕರು:** ಹವ್ಯಾಸಿ ಬರಹಗಾರ, ಟೊಕಿಯೊ ನಿವಾಸಿ)

ಕಿಲಿಯಾನ್ ಎಂಬಾಪೆ ಫುಟ್ಬಾಲ್ ಪ್ರಣಯ

ವ್ಯಕ್ತಿಗನ್ನಡಿ
ಮಂಜುನಾಥ ಕೆ. ಜಾಬಗೆರೆ
manjunath.gowda@timesofindia.com

ಇಪ್ಪತ್ತೆಂಟು ವರ್ಷಗಳ ಹಿಂದೆ ಅಂದರೆ 1998ರಲ್ಲಿ ಫ್ರಾನ್ಸ್ ತಂಡ ಮೊದಲ ಬಾರಿಗೆ ಫಿಫಾ ವಿಶ್ವಕಪ್ ಮುಡಿಗೇರಿಸಿಕೊಂಡಿತ್ತು. ಅಂದಿನ ವಿಜೇತ ತಂಡದಲ್ಲಿ ಜಿನದಿನ್ ಜಿದಾನೆ, ಲಿಲಿಯನ್ ಥುರಾಮ್, ಥಿಯೆರಿ ಹೆನ್ರಿ ಅವರಂಥ ಪ್ರತಿಭಾವಂತರಿದ್ದರು. ಬೆಂಕಿ ಚೆಂಡಿನಂಥ ಈ ಎಲ್ಲಾ ಆಟಗಾರರು ಬಂದದ್ದು ಪ್ಯಾರಿಸ್ ಹೊರವಲಯದಿಂದ. ಇಂದಿಗೂ ಈ ಪ್ಯಾರಿಸ್ ಸಬರ್ಬನ್ ಫ್ರಾನ್ಸ್ ಫುಟ್ಬಾಲ್ ಪ್ರತಿಭೆಗಳ ಕೇಂದ್ರಸ್ಥಳ. 2022ರ ವಿಶ್ವಕಪ್‌ನಲ್ಲಿ ರನ್ನರ್‌ಅಪ್ ಎನಿಸಿದ ಫ್ರಾನ್ಸ್ ತಂಡದ ಬಹುತೇಕ ಸದಸ್ಯರೂ ಪ್ಯಾರಿಸ್ ಸಮೀಪದಲ್ಲಿಯೇ ಆಡಿಬೆಳೆದವರು.

ಅಂಥ ಮಣ್ಣನ್ನೇ ಹೊಂದಿರುವ ಪ್ಯಾರಿಸ್ ಪೂರ್ವ ಭಾಗದ ಬಾಂಡಿಯಲ್ಲಿ ಅರಳಿದ ಪ್ರತಿಭೆ 'ಕಿಲಿಯಾನ್ ಎಂಬಾಪೆ'. ಫ್ರಾನ್ಸ್ ತಂಡದ ಸ್ಟಾರ್ ಆಟಗಾರ. ಫ್ರಾನ್ಸ್ ವಿಶ್ವಕಪ್ ಗೆದ್ದ ವರ್ಷವೇ ಜನಿಸಿದ ಈತ ಈಗ ತಮ್ಮ ಅಸಾಧಾರಣ ಕಾಲ್ಚಳಕದ ಮೂಲಕ ಜಗತ್ತಿನ ಗಮನ ಸೆಳೆದಿದ್ದಾರೆ. ಫ್ರಾನ್ಸ್ ತಂಡ ಈ ಸಾರಿ ಕಪ್ ಗೆಲ್ಲುವುದಾದರೆ ಅದು ಈ ಮಾಂತ್ರಿಕ ಆಟಗಾರನ ಕಾಲ್ಚಳಕದಿಂದ ಮಾತ್ರ ಸಾಧ್ಯ.

8 ವರ್ಷಗಳ ಹಿಂದೆ ಫಾರ್ವರ್ಡ್ ಆಟಗಾರನಾಗಿ ಫ್ರಾನ್ಸ್ ತಂಡ ಸೇರಿಕೊಂಡ ಕಿಲಿಯಾನ್ ಎಂಬಾಪೆ, ಅಂದಿನ ವಿಶ್ವಕಪ್ ಫೈನಲ್‌ನಲ್ಲಿ ಅದ್ಭುತ ಗೋಲ್ ಗಳಿಸಿ ಬೆರಗು ಸೃಷ್ಟಿಸಿದ್ದರು. ತಮ್ಮ ಕಾಲ್ಚಳಕದ ಅಬ್ಬರದಿಂದ ಬ್ರೆಜಿಲ್‌ನ ದಿಗ್ಗಜ ಪೆಲೆ ನಂತರ ಫೈನಲ್‌ನಲ್ಲಿ ಗೋಲ್ ಗಳಿಸಿದ ಅತಿ ಕಿರಿಯ ಆಟಗಾರ ಎಂಬ ದಾಖಲೆ ಸೃಷ್ಟಿಸಿದವರು ಎಂಬಾಪೆ. ವೇಗ, ಡ್ರಿಬ್ಲಿಂಗ್ ಮತ್ತು ಕ್ಲಿನಿಕಲ್ ಫಿನಿಶಿಂಗ್‌ಗೆ ಹೆಸರುವಾಸಿಯಾಗಿರುವ ಕಿಲಿಯಾನ್, ಆಧುನಿಕ ಫುಟ್ಬಾಲ್ ಜಗತ್ತು ಕಂಡ ಬೆರಳೆಣಿಕೆ ಆಟಗಾರರಲ್ಲಿ ಒಬ್ಬರು.

ಅಮೆರಿಕ, ಮೆಕ್ಸಿಕೊ ಮತ್ತು ಕೆನಡಾ ಜಂಟಿ ಆತಿಥ್ಯದಲ್ಲಿ ನಡೆಯುತ್ತಿರುವ 23ನೇ ವಿಶ್ವಕಪ್‌ನ ಗುಂಪು ಹಂತದಲ್ಲಿ ಸದ್ಯ ನಾಲ್ಕು ಗೋಲು ಗಳಿಸಿರುವ ಎಂಬಾಪೆ, ಫ್ರಾನ್ಸ್ ತಂಡವನ್ನು ಅಂತಿಮ 32ನೇ ಸುತ್ತಿಗೆ ವ'ಎಎ್ನ'ಡೆ'ಸ'ಎವ'ಲ್ಲಿ ನಿರ್ಣಾಯಕ ಪಾತ್ರವಹಿಸಿದ್ದಾರೆ. ವಿಶ್ವಕಪ್‌ನಲ್ಲಿ ಅತ್ಯಧಿಕ ಗೋಲ್ ಗಳಿಸಿದ ಖ್ಯಾತಿಯು ಅರ್ಜೆಂಟಿನಾದ ತಾರೆ ಲಯೊನೆಲ್ ಮೆಸ್ಸಿ(18 ಗೋಲು) ಅವರಿಗೆ ಸಲ್ಲುತ್ತದೆ. ಇವರ ನಂತರದ ಎರಡನೇ ಸ್ಥಾನದಲ್ಲಿ ಕಿಲಿಯಾನ್ ಎಂಬಾಪೆ (16 ಗೋಲು) ಇದ್ದಾರೆ. ಹಿರಿಯ ಆಟಗಾರ ಮೆಸ್ಸಿ ಅವರು 40ರ ಹೊಸ್ತಿಲಲ್ಲಿದ್ದಾರೆ. ಸತತ 3ನೇ ವಿಶ್ವಕಪ್ ಆಡುತ್ತಿರುವ ಎಂಬಾಪೆ ಅವರಿಗೆ ಈಗಿನ್ನೂ 27ರ ಪ್ರಾಯ. ತುಂಬಾ ಆಟ ಬಾಕಿ ಇದೆ. ಕಿಲಿಯಾನ್ ಗೋಲುಗಳ ಬೇಟೆಯಲ್ಲಿ ಹೊಸ ಮೈಲುಗಲ್ಲು ನಿರ್ಮಿಸುವ ತವಕದಲ್ಲಿದ್ದಾರೆ. ಕಿಲಿಯಾನ್ ಎಂಬಾಪೆ, ವಿಶ್ವಕಪ್‌ನಲ್ಲಿ ಅತ್ಯಧಿಕ ಗೋಲ್ ಗಳಿಸಿದ ಸಕ್ರಿಯ ಆಟಗಾರರ ಪೈಕಿ ಎರಡನೇ ಸ್ಥಾನದಲ್ಲಿದ್ದಾರೆ. ಫ್ರಾನ್ಸ್ ಆಟಗಾರ ಪ್ರಸಕ್ತ ವಿಶ್ವಕಪ್ ಮುಗಿಯುವುದರೊಳಗೆ ಅತ್ಯಧಿಕ ಗೋಲ್ ಗಳಿಸಿದ ಸಾರ್ವಕಾಲಿಕ ಆಟಗಾರ ಆಗಿ ಹೊರಹೊಮ್ಮಿದರೆ, ಯಾವುದೇ ಅಚ್ಚರಿ ಪಡಬೇಕಿಲ್ಲ.

ವೈವಿಧ್ಯಮಯ ಪ್ಯಾರಿಸ್ ಉಪನಗರ ಬಾಂಡಿಯಲ್ಲಿ ಬೆಳೆದ ಎಂಬಾಪೆ, ಕ್ರೀಡಾ ಆಧಾರಿತ ಕುಟುಂಬದಲ್ಲಿ ಜನಿಸಿದವರು. ಇವರ ತಂದೆ, ಕ್ಯಾಮರೂನಿಯನ್ ಮೂಲದ ಕೋಚ್ ವಿಲ್ಫ್ರೆಡ್ ಮತ್ತು ಅವರ ತಾಯಿ ಅಲ್ಜೀರಿಯಾ ಮೂಲದ ಮಾಜಿ ವೃತ್ತಿಪರ ಹ್ಯಾಂಡ್ ಬಾಲ್ ಆಟಗಾರ್ತಿ ಫೈಜಾ ಲಮಾರಿ. ಮನೆಯಲ್ಲಿ ಕ್ರೀಡಾ ವಾತಾವರಣವಿದ್ದ ಕಾರಣ ಸಹಜವಾಗಿಯೇ ಚಿಕ್ಕ ವಯಸ್ಸಿನಿಂದಲೇ ಎಂಬಾಪೆ ಫುಟ್ಬಾಲ್‌ನತ್ತ ಆಸಕ್ತರಾದರು. ಫ್ರಾನ್ಸಿನ ಕ್ಲೇರ್‌ಫಾಂಟೇನ್ ಅಕಾಡೆಮಿಯಲ್ಲಿ ತಮ್ಮ ಕೌಶಲಯುತ ಆಟ ಪ್ರದರ್ಶಿಸುವ ಮೊದಲು ಅವರು ಸ್ಥಳೀಯ ಕ್ಲಬ್ ಎಎಸ್ ಬಾಂಡಿಯಲ್ಲಿ ತರಬೇತಿ ಪ್ರಾರಂಭಿಸಿದರು.

2015ರಲ್ಲಿ 16ನೇ ವಯಸ್ಸಿಗೆ ಎ.ಎಸ್ ಮೊನಾಕೊ ತಂಡದ ಪರ ವೃತ್ತಿಪರ ಆಟ ಪ್ರಾರಂಭಿಸಲು ಅವರು ಸಕಲ ರೀತಿಯಲ್ಲೂ ಅಣಿಯಾದರು. ಕ್ಲಬ್‌ನ ಅತಿ ಕಿರಿಯ ಆಟಗಾರ ಎಂಬ ಹಿರಿಮೆ ಪಡೆದ ಎಂಬಾಪೆ ಅವರ ಕೌಶಲಯುತ ಆಟವು ಮೊನಾಕೊ ತಂಡಕ್ಕೆ 2016-17ರ ಋತುವಿನಲ್ಲಿ ಲೀಗ್ 1 ಪ್ರಶಸ್ತಿ ತಂದುಕೊಟ್ಟಿತು. ಹಾಗೆಯೇ ಯುಇಎಫ್‌ಎ ಚಾಂಪಿಯನ್ಸ್ ಲೀಗ್ ಸೆಮಿಫೈನಲ್‌ಗೆ ಮುನ್ನಡೆಸಿತು.

2017ರ ಆಗಸ್ಟ್‌ನಲ್ಲಿ 180 ಮಿಲಿಯನ್ ಯುರೋ ಮೌಲ್ಯದ ವರ್ಗಾವಣೆಯಲ್ಲಿ ಪ್ಯಾರಿಸ್ ಸೇಂಟ್-ಜರ್ಮೈನ್‌ಗೆ ಸೇರಿದ ಎಂಬಾಪೆ, ಫುಟ್ಬಾಲ್ ಇತಿಹಾಸದಲ್ಲಿ 2ನೇ ಅತಿ ದುಬಾರಿ ಆಟಗಾರನಾಗಿ ಹೊರಹೊಮ್ಮಿದರು. ಏಳು ಋತುಗಳಲ್ಲಿ ಅವರು ಕ್ಲಬ್‌ನ ಸಾರ್ವಕಾಲಿಕ ಅತ್ಯಧಿಕ ಗೋಲ್ ಗಳಿಸಿದವರ ಪಟ್ಟಿಯಲ್ಲಿ ಮೊದಲ ಸ್ಥಾನ ಗಳಿಸಿದರು. ಪಿಎಸ್‌ಜಿ ಪರ ಹಲವಾರು ದೇಶೀಯ ಪ್ರಶಸ್ತಿಗಳನ್ನು ಗೆದ್ದ ಎಂಬಾಪೆಗೆ ಜಗತ್ತಿನ ಅತ್ಯಂತ ಯಶಸ್ವಿ ಫಾರ್ವರ್ಡ್ ಆಟಗಾರ ಎಂಬ ಖ್ಯಾತಿ ಹುಡುಕಿಕೊಂಡು ಬಂದಿತು. ಹಾಗೆಯೇ ಹಲವು ಪ್ರಶಸ್ತಿಗಳು ಅವರ ಕೊರಳೇರಿದವು.

2018ರ ವಿಶ್ವಕಪ್ ಪದಾರ್ಪಣೆ ನಂತರ ಕತಾರ್ 2022ರ ವಿಶ್ವಕಪ್‌ನಲ್ಲಿ ಜಗದ್ವಿಖ್ಯಾತಿ ಪಡೆದ ಎಂಬಾಪೆ, ತಮ್ಮ ಆಟದ ಮೂಲಕವೇ ಕೋಟ್ಯಂತರ ಅಭಿಮಾನಿಗಳ ಮನಸೂರೆಗೊಂಡರು. ಫೈನಲ್‌ನಲ್ಲಿ ಹ್ಯಾಟ್ರಿಕ್ ಗೋಲ್ ಗಳಿಸಿ ದಾಖಲೆ ನಿರ್ಮಿಸಿದ ಕಿಲಿಯಾನ್ ಎಂಬಾಪೆ, ಪೆನಾಲ್ಟಿ ಶೂಟೌಟ್‌ನಲ್ಲಿ ಫ್ರಾನ್ಸ್ ತಂಡ 2-4ರಲ್ಲಿ ಅರ್ಜೆಂಟೀನಾ ವಿರುದ್ಧ ಸೋಲನುಭವಿಸಿದ್ದು, ಅವರನ್ನು ಜರ್ಜರಿತಗೊಳಿಸಿತು. ಆದಾಗ್ಯೂ, ಅವರು 8 ಗೋಲು ಗಳಿಸಿ ಗೋಲ್ಡನ್ ಬೂಟ್ ಗೌರವಕ್ಕೆ ಭಾಜನರಾಗಿ ಭವಿಷ್ಯದ ತಾರೆಯಾಗಿ ಕಂಗೊಳಿಸಿದರು.

ಉಚಿತ ವರ್ಗಾವಣೆಯಲ್ಲಿ ಸ್ಪ್ಯಾನಿಸ್‌ನ ದೈತ್ಯ ತಂಡ ರಿಯಲ್ ಮ್ಯಾಡ್ರಿಡ್‌ಗೆ ಸೇರ್ಪಡೆಗೊಂಡ ಕಿಲಿಯಾನ್, ತಮ್ಮ ಬಾಲ್ಯದ ಕನಸನ್ನು ಈಡೇರಿಸಿಕೊಂಡರು. ಲಾ ಲೀಗ ಸೇರಿದಂತೆ ಹಲವು ಟೂರ್ನಿಗಳಲ್ಲಿ ತಮ್ಮ ಕಾಲ್ಚಳಕ ತೋರಿದ ಅವರು, ಹಲವು ಬಾರಿ ಯುರೋಪಿಯನ್ ದಾಖಲೆಗಳನ್ನು ಅಳಿಸಿಹಾಕಿದರು.

ಚಿಕ್ಕ ವಯಸ್ಸಿನಲ್ಲೇ ಮೂರು ವಿಶ್ವಕಪ್‌ಗಳನ್ನು ಆಡುವ ಮೂಲಕ ಅಸಾಧ್ಯವಾದದನ್ನು ಸಾಧಿಸಿರುವ ಎಂಬಾಪೆ, ''ಪ್ರತಿಯೊಬ್ಬ ಆಟಗಾರನಿಗೆ ಮಹತ್ವಾಕಾಂಕ್ಷೆ ಇರುತ್ತದೆ. ಆ ಮಹತ್ವಾಕಾಂಕ್ಷೆ ಕಿರಿಯ ವಯಸ್ಸಿನಲ್ಲೇ ಕೈಗೂಡಿದಾಗ ಏನೋ ಒಂಥರಾ ಕಾಣಲಾರಂಭಿಸುತ್ತದೆ. ಅದೊಂದು ರೀತಿ ಹುಚ್ಚತನದಂತೆ ಭಾಸವಾದರೆ ಅಚ್ಚರಿಯಿಲ್ಲ,'' ಎಂದು ಹೇಳುವ ಮೂಲಕ ಬದುಕಿನಲ್ಲಿ ಸಾಧನೆಯ ಹಾದಿ ಮುಖ್ಯವೇ ಹೊರತು ಸಾಧನೆ ಅಲ್ಲ ಎಂಬುದನ್ನು ಸಾರಿದ್ದಾರೆ.

ಸದ್ಯ ಫ್ರಾನ್ಸ್ ರಾಷ್ಟ್ರೀಯ ತಂಡದ ಪರ 101 ಪಂದ್ಯ ಆಡಿರುವ ಕಿಲಿಯಾನ್ ಎಂಬಾಪೆ, 60 ಗೋಲುಗಳನ್ನು ಗಳಿಸಿದ್ದು, ಯುವ ಆಟಗಾರರ ಕಣ್ಮಣಿಯಾಗಿದ್ದಾರೆ. ■

Bennett & Coleman
THE TIMES OF INDIA
ಭಾನುವಾರ, 28 ಜೂನ್ 2026 | ಪುಟಗಳು: 16 | ಬೆಲೆ: ₹ 5.00 (ವಿಕ ಮನಿ ಜತೆ ₹10.00)
ಬೆಂಗಳೂರು | ಮೈಸೂರು | ಶಿವಮೊಗ್ಗ | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ
www.vijaykarnataka.com
c
PRIDE OF YOUNG KARNATAKA
ಸಂಪುಟ: 27 | ಸಂಚಿಕೆ: 178

VK
ವಿಜಯ ಕರ್ನಾಟಕ

ಮುಖ್ಯ ಚುನಾವಣಾಧಿಕಾರಿಗಳ ಕಛೇರಿ, ಕರ್ನಾಟಕ
Office of the Chief Electoral Officer, Karnataka

SIR
2026ರಲ್ಲಿ ಭಾಗವಹಿಸಿ

ವಿಶೇಷ ಸಮಗ್ರ ಪರಿಷ್ಕರಣೆ (Special Intensive Revision–SIR) ಯ ಉದ್ದೇಶವು ಎಲ್ಲಾ ಅರ್ಹ ನಾಗರಿಕರನ್ನು ಮತದಾರರ ಪಟ್ಟಿಯಲ್ಲಿ ಸೇರ್ಪಡೆಗೊಳಿಸುವುದಾಗಿದೆ. ಈ ವಿಶೇಷ ಸಮಗ್ರ ಪರಿಷ್ಕರಣೆ (SIR) ಅವಧಿಯಲ್ಲಿ ನಿಮ್ಮ ಹೆಸರು ಮತದಾರರ ಪಟ್ಟಿಯಲ್ಲಿ ಇರುವುದನ್ನು ಪರಿಶೀಲಿಸಿ ಹಾಗೂ ಖಚಿತಪಡಿಸಿಕೊಳ್ಳಿ. ಪ್ರಜಾಪ್ರಭುತ್ವದ ಭದ್ರ ಅಡಿಪಾಯವಾದ ಎಸ್‌ಐಆರ್‌ನ ಭಾಗವಾಗಿರಿ.

ವಿವರಣೆ	ದಿನಾಂಕ
ಅರ್ಹತಾ ದಿನಾಂಕ	1ನೇ ಅಕ್ಟೋಬರ್, 2026
ಬೂತ್ ಮಟ್ಟದ ಅಧಿಕಾರಿಗಳಿಂದ ಮನೆ ಮನೆಗೆ ಭೇಟಿ	30ನೇ ಜೂನ್, 2026 ರಿಂದ 29ನೇ ಜುಲೈ, 2026 ರವರೆಗೆ
ಕರಡು ಮತದಾರರ ಪಟ್ಟಿಯ ಪ್ರಕಟಣೆ	05ನೇ ಆಗಸ್ಟ್, 2026
ಹಕ್ಕು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಲು ನಿಗದಿಪಡಿಸಿದ ಅವಧಿ	05ನೇ ಆಗಸ್ಟ್, 2026 ರಿಂದ 04ನೇ ಸೆಪ್ಟೆಂಬರ್, 2026 ರವರೆಗೆ
ಹಕ್ಕು ಮತ್ತು ಆಕ್ಷೇಪಣೆಗಳ ಕುರಿತು ನೋಟಿಸ್ ನೀಡುವಿಕೆ ಹಾಗೂ ವಿಲೇವಾರಿ ಪ್ರಕ್ರಿಯೆ	05ನೇ ಆಗಸ್ಟ್, 2026 ರಿಂದ 03ನೇ ಅಕ್ಟೋಬರ್, 2026 ರವರೆಗೆ
ಅಂತಿಮ ಮತದಾರರ ಪಟ್ಟಿಯ ಪ್ರಕಟಣೆ	07ನೇ ಅಕ್ಟೋಬರ್, 2026

ಬೂತ್ ಮಟ್ಟದ ಅಧಿಕಾರಿಗಳು (BLO) ಏನು ಮಾಡುತ್ತಾರೆ?

- 2026 ಜೂನ್ 16 ರವರೆಗೆ ಮತದಾರರ ಪಟ್ಟಿಯಲ್ಲಿ ಇರುವ ಎಲ್ಲಾ ಮತದಾರರಿಗೆ ಎನ್ಯೂಮರೇಷನ್ ಫಾರಂಗಳನ್ನು ವಿತರಿಸುತ್ತಾರೆ.
- 2026 ರ ಜೂನ್ 30 ರಿಂದ ಜುಲೈ 29 ರವರೆಗೆ ನಿಮ್ಮ ಮನೆಗಳಿಗೆ ಭೇಟಿ ನೀಡುತ್ತಾರೆ.
- ಎನ್ಯೂಮರೇಷನ್ ಫಾರಂಗಳನ್ನು ದ್ವಿ ಪ್ರತಿಯಲ್ಲಿ ನಿಮಗೆ ಒದಗಿಸಿ, ಫಾರಂನ್ನು ಭರ್ತಿ ಮಾಡಲು ಸಹಾಯ ಮಾಡುತ್ತಾರೆ.
- ನಿಮ್ಮಿಂದ ಭರ್ತಿ ಮಾಡಿದ ಫಾರಂಗಳನ್ನು ಸಂಗ್ರಹಿಸಿ, ಅದಕ್ಕೆ ಸ್ವೀಕೃತಿ ನೀಡುತ್ತಾರೆ.

ಮತದಾರರಲ್ಲಿ ವಿನಂತಿ

- ಬೂತ್ ಮಟ್ಟದ ಅಧಿಕಾರಿಯು ನೀಡುವ ಎರಡು ಫಾರಂಗಳನ್ನು ಭರ್ತಿ ಮಾಡುವುದು.
- ಫಾರಂ ಮೇಲೆ ಒಂದು ಇತ್ತೀಚಿನ ಬಣ್ಣದ ಫೋಟೋ ಅಂಟಿಸುವುದು (ಇದು ಕಡ್ಡಾಯವಲ್ಲ).
- ಫಾರಂ ಭರ್ತಿ ಮಾಡಲು ಅಥವಾ ಆನ್‌ಲೈನ್‌ನಲ್ಲಿ ಅಪ್ಲೋಡ್ ಮಾಡಲು ಅಗತ್ಯ ಸಹಾಯಕ್ಕಾಗಿ ಬೂತ್ ಮಟ್ಟದ ಅಧಿಕಾರಿಯನ್ನು ಸಂಪರ್ಕಿಸಿ.
- ಭರ್ತಿ ಮಾಡಿದ ಫಾರಂಗಳನ್ನು ಬೂತ್ ಮಟ್ಟದ ಅಧಿಕಾರಿಗೆ ಹಿಂತಿರುಗಿಸಿ ಸ್ವೀಕೃತಿಯನ್ನು ಪಡೆಯುವುದು.

ಕರಡು ಮತದಾರರ ಪಟ್ಟಿ ಪ್ರಕಟಣೆ – 05ನೇ ಆಗಸ್ಟ್, 2026 (ಬುಧವಾರ)

ಮತದಾರರಾಗಲು ಅರ್ಹತೆ

ಭಾರತದ ಸಂವಿಧಾನದ 326ನೇ ವಿಧಿಯ ಪ್ರಕಾರ:

- ಭಾರತ ದೇಶದ ನಾಗರೀಕರಾಗಿರಬೇಕು.
- ಕನಿಷ್ಠ 18 ವರ್ಷ ವಯಸ್ಸಿರಬೇಕು.
- ಸಂಬಂಧಿತ ವಿಧಾನಸಭಾ ಕ್ಷೇತ್ರದ ಸಾಮಾನ್ಯ ನಿವಾಸಿಯಾಗಿರಬೇಕು.
- ಯಾವುದೇ ಕಾನೂನು ಅಡಿಯಲ್ಲಿ ಅನರ್ಹರಾಗಿರಬಾರದು.

ನಿಮ್ಮ ಹೆಸರು ಮತದಾರರ ಪಟ್ಟಿಯಲ್ಲಿ ಇದೆ ಎಂಬುದನ್ನು ಹೇಗೆ ಖಚಿತಪಡಿಸಿಕೊಳ್ಳುವುದು?

ಈ ಕೆಳಕಂಡ ವಿಧಾನಗಳ ಮೂಲಕ ನೀವು ಪರಿಶೀಲಿಸಬಹುದು:

- ಬೂತ್ ಮಟ್ಟದ ಅಧಿಕಾರಿಯ (BLO) ಹತ್ತಿರವಿರುವ ಮತದಾರರ ಪಟ್ಟಿಯಿಂದ.
- ECINET ಮೊಬೈಲ್ ಅಪ್ಲಿಕೇಷನ್ ಮೂಲಕ.
- voters.eci.gov.in ನಲ್ಲಿ ಲಭ್ಯವಿರುವ ಮತದಾರರ ಪಟ್ಟಿಯ ಮೂಲಕ.
- CEO ಕರ್ನಾಟಕ ಮತ್ತು ಸಂಬಂಧಿತ ಜಿಲ್ಲಾ ಚುನಾವಣಾಧಿಕಾರಿಯ ವೆಬ್‌ಸೈಟ್‌ಗಳ ಮುಖಾಂತರ.

ನಿಮ್ಮ ಹೆಸರು ಮತದಾರರ ಪಟ್ಟಿಯಲ್ಲಿ ಇಲ್ಲದಿದ್ದರೆ ಏನು ಮಾಡಬೇಕು?

ನಮೂನೆ 6 ರನ್ನು ಭರ್ತಿ ಮಾಡಿ, ಘೋಷಣಾ ಫಾರಂ ಜೊತೆಗೆ ಬೂತ್ ಮಟ್ಟದ ಅಧಿಕಾರಿ (BLO) ಗೆ ಸಲ್ಲಿಸಬಹುದು ಅಥವಾ ಆನ್‌ಲೈನ್ ಮೂಲಕ **voters.eci.gov.in** ನಲ್ಲಿ ಅರ್ಜಿ ಸಲ್ಲಿಸಬಹುದು ಅಥವಾ ECINET ಮೊಬೈಲ್ ಆ್ಯಪ್ ಮೂಲಕವೂ ಸಲ್ಲಿಸಬಹುದು.

ಸೂಚನಾತ್ಮಕ ದಾಖಲೆಗಳ ಪಟ್ಟಿ

1. ಯಾವುದೇ ಕೇಂದ್ರ ಸರ್ಕಾರ/ ರಾಜ್ಯ ಸರ್ಕಾರ/ ಪಿಎಸ್‌ಯುಗಳ ನಿಯಮಿತ ನೌಕರರು ಅಥವಾ ಪಿಂಚಣಿದಾರರಿಗೆ ನೀಡಿರುವ ಗುರುತಿನ ಚೀಟಿ ಅಥವಾ ಪಿಂಚಣಿ ಪಾವತಿ ಆದೇಶ.
2. ಭಾರತದಲ್ಲಿ 01.07.1987 ಕ್ಕಿಂತ ಮುಂಚೆ ಸರ್ಕಾರ/ ಸ್ಥಳೀಯ ಪ್ರಾಧಿಕಾರಗಳು/ ಬ್ಯಾಂಕುಗಳು/ ಅಂಚೆ ಕಛೇರಿ/ ಎಲ್‌ಐಸಿ/ ಸಾರ್ವಜನಿಕ ವಲಯದ ಸಂಸ್ಥೆಗಳು ನೀಡಿರುವ ಯಾವುದೇ ಗುರುತಿನ ಚೀಟಿ, ಪ್ರಮಾಣಪತ್ರ ಅಥವಾ ದಾಖಲೆ.
3. ಸಕ್ಷಮ ಪ್ರಾಧಿಕಾರದಿಂದ ನೀಡಲಾದ ಜನನ ಪ್ರಮಾಣಪತ್ರ.
4. ಪಾಸ್‌ಪೋರ್ಟ್.
5. ಮಾನ್ಯತೆ ಪಡೆದ ಮಂಡಳಿಗಳು/ವಿಶ್ವವಿದ್ಯಾಲಯಗಳು ನೀಡಿರುವ ಎಸ್‌ಎಸ್‌ಎಲ್‌ಸಿ/ಶೈಕ್ಷಣಿಕ ಪ್ರಮಾಣಪತ್ರ.
6. ರಾಜ್ಯದ ಸಕ್ಷಮ ಪ್ರಾಧಿಕಾರಗಳಿಂದ ನೀಡಲಾದ ಖಾಯಂ ನಿವಾಸಿ ಪ್ರಮಾಣಪತ್ರ.
7. ಅರಣ್ಯ ಹಕ್ಕುಗಳ ಪ್ರಮಾಣಪತ್ರ.
8. ಸಕ್ಷಮ ಪ್ರಾಧಿಕಾರದಿಂದ ನೀಡಲಾದ ಒಬಿಸಿ/ಎಸ್‌ಸಿ/ಎಸ್‌ಟಿ ಅಥವಾ ಯಾವುದೇ ಜಾತಿ ಪ್ರಮಾಣಪತ್ರ.
9. ರಾಷ್ಟ್ರೀಯ ನಾಗರೀಕರ ನೋಂದಣಿ (ಅಸ್ತಿತ್ವ ಇರುವ ಕಡೆ).
10. ರಾಜ್ಯ ಅಥವಾ ಸ್ಥಳೀಯ ಸರ್ಕಾರದ ಪ್ರಾಧಿಕಾರಗಳಿಂದ ನಿರ್ವಹಿಸಲಾಗಿರುವ ಕುಟುಂಬ ರಿಜಿಸ್ಟರ್.
11. ಸರ್ಕಾರದಿಂದ ನೀಡಲಾದ ಯಾವುದೇ ಭೂ/ಮನೆ ಹಂಚಿಕೆ ಪ್ರಮಾಣಪತ್ರ.
12. ಆಧಾರ್ ಸಂಬಂಧ, ಭಾರತ ಚುನಾವಣಾ ಆಯೋಗವು ಪತ್ರ ಸಂಖ್ಯೆ 23/2025-ERS/Vol.II ದಿನಾಂಕ 09.09.2025ರಲ್ಲಿ ಹೊರಡಿಸಿದ ಸೂಚನೆಗಳು ಅನ್ವಯಿಸುತ್ತದೆ.

ಅರ್ಜಿಯ ನಮೂನೆಗಳು

ನಮೂನೆ 6	ಹೊಸ ಮತದಾರರ ನೋಂದಣಿ
ನಮೂನೆ 6ಎ	ಸಾಗರೋತ್ತರ ಮತದಾರರಾಗಿ ನೊಂದಾಯಿಸಲು
ನಮೂನೆ 7	ಹೆಸರು ತೆಗೆದುಹಾಕುವಿಕೆ
ನಮೂನೆ 8	ನಿವಾಸ ಸ್ಥಳ ಬದಲಾವಣೆ/ನಮೂದುಗಳ ತಿದ್ದುಪಡಿ/ ಎಪಿಕ್ ಬದಲಾವಣೆ/ಪಿಡಬ್ಲ್ಯೂಡಿ ಗುರುತು ದಾಖಲಿಸುವುದು

ಮೇಲ್ಮನವಿಗೆ ಅವಕಾಶ

ಪ್ರಜಾ ಪ್ರತಿನಿಧಿ ಕಾಯ್ದೆ, 1950 ರ ಕಲಂ 24 ರ ಅನ್ವಯ, ಚುನಾವಣಾ ನೋಂದಣಾಧಿಕಾರಿ (ERO) ಅವರ ಯಾವುದೇ ನಿರ್ಧಾರದ ವಿರುದ್ಧ ಜಿಲ್ಲಾ ದಂಡಾಧಿಕಾರಿ / ಜಿಲ್ಲಾ ಚುನಾವಣಾಧಿಕಾರಿಯವರ ಮುಂದೆ ಮೇಲ್ಮನವಿ ಸಲ್ಲಿಸಬಹುದಾಗಿದೆ.

ECINET
ಮೊಬೈಲ್ ಅಪ್ಲಿಕೇಷನ್

ಅಪ್ಲಿಕೇಷನ್ ಡೌನ್‌ಲೋಡ್ ಮಾಡಲು QR ಕೋಡ್ ಅನ್ನು ಸ್ಕ್ಯಾನ್ ಮಾಡಿ

ANDROID APP ON Google play | Download on the App Store

ಹೆಚ್ಚಿನ ಮಾಹಿತಿಗಾಗಿ:

https://www.ceo.karnataka.gov.in

ಅಧಿಕೃತ ಪೋರ್ಟಲ್‌ಗೆ ಭೇಟಿ ನೀಡಿ
https://voters.eci.gov.in

TOLL FREE **1950**
180042551950
ceokarnataka
ceo.karnataka.gov.in

ಬಿಜೆಪಿ ಮಹಾ ಸರಕಾರಕ್ಕೆ ಪ್ರಶ್ನೆಪತ್ರಿಕೆ ಸೋರಿಕೆ ಕಳಂಕ

ಟಿಇಟಿ ಮುನ್ನಾದಿನ ಬಹಿರಂಗ | ಪರೀಕ್ಷೆ ಮುಂದೂಡಿದ ಸರಕಾರ | ಪ್ರತಿಪಕ್ಷಗಳು, ಅಭ್ಯರ್ಥಿಗಳಿಂದ ತೀವ್ರ ಆಕ್ರೋಶ

ಮುಂಬಯಿ: ನೀಟ್ ಪ್ರಶ್ನೆಪತ್ರಿಕೆ ಸೋರಿಕೆ, ಸಿಬಿಎಸ್‌ಇ ಮೌಲ್ಯಮಾಪನ ಎಡವಟ್ಟಿನ ವಿವಾದದ ನಡುವೆ ಮಹಾರಾಷ್ಟ್ರದಲ್ಲಿ ಶಿಕ್ಷಕರ ಅರ್ಹತಾ ಪರೀಕ್ಷೆಯ (ಟಿಇಟಿ) ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದೆ. ಪರೀಕ್ಷೆಗೂ ಮುನ್ನಾ ದಿನ ಪ್ರಶ್ನೆಪತ್ರಿಕೆ ಸೋರಿಕೆ ಹಿನ್ನೆಲೆಯಲ್ಲಿ ಪರೀಕ್ಷೆ ಮುಂದೂಡಲಾಗಿದೆ.

ಭಾನುವಾರ (ಜೂನ್ 28) ರಾಜ್ಯದ 1,028 ಕೇಂದ್ರಗಳಲ್ಲಿ ಪರೀಕ್ಷೆ ನಿಗದಿಯಾಗಿತ್ತು. ಪರೀಕ್ಷೆಗೂ ಮುನ್ನಾ ದಿನ ಶನಿವಾರ ಪ್ರಶ್ನೆಪತ್ರಿಕೆ ಸೋರಿಕೆಯಾದ ವರದಿಯಾಗಿದೆ. ಥಾಣೆ ಜಿಲ್ಲೆಯ ಭಿವಂಡಿ ಸೇರಿ ಹಲವು ಕಡೆ ಪ್ರಶ್ನೆಪತ್ರಿಕೆ ಮಾರಾಟದ ವರದಿಯಾಗಿದೆ. ಗುಪ್ತಚರ ಇಲಾಖೆ ನೀಡಿದ ಮಾಹಿತಿ ಆಧರಿಸಿ ಕಾರ್ಯಪ್ರವೃತ್ತರಾದ ಪೊಲೀಸರು ಶಂಕಿತರ ನಿವಾಸ, ಕಚೇರಿಗಳ ಮೇಲೆ ದಾಳಿ ನಡೆಸಿ ಪ್ರಶ್ನೆಪತ್ರಿಕೆಗಳನ್ನು ವಶಪಡಿಸಿಕೊಂಡಿದ್ದಾರೆ. ಕೆಲವು ವ್ಯಕ್ತಿಗಳ ಬಳಿಯಿದ್ದ ಸೋರಿಕೆಯಾದ ಪ್ರಶ್ನೆಪತ್ರಿಕೆಗಳಲ್ಲಿ ಟಿಇಟಿ ಪ್ರಶ್ನೆಪತ್ರಿಕೆಗೆ ಹೋಲುವ ಹಲವು ಪ್ರಶ್ನೆಗಳು ಇರುವುದು ಕಂಡುಬಂದಿದೆ.

ಪ್ರಶ್ನೆಪತ್ರಿಕೆ ಸೋರಿಕೆ ಶಂಕೆ ಹಿನ್ನೆಲೆಯಲ್ಲಿ ಭಾನುವಾರ (ಜೂನ್ 28) ನಿಗದಿಯಾಗಿದ್ದ ಶಿಕ್ಷಕರ ಅರ್ಹತಾ ಪರೀಕ್ಷೆ (ಟಿಇಟಿ)-2026 ಮುಂದೂಡಲಾಗಿದೆ ಎಂದು ಮಹಾರಾಷ್ಟ್ರ ರಾಜ್ಯ ಪರೀಕ್ಷಾ ಮಂಡಳಿ ಪ್ರಕಟಣೆಯಲ್ಲಿ ತಿಳಿಸಿದೆ.

''ಪರೀಕ್ಷೆಯನ್ನು ಸಂಪೂರ್ಣ ಪಾರದರ್ಶಕತೆಯಿಂದ ನಡೆಸಲು ಮಂಡಳಿ ಬದ್ಧವಾಗಿದೆ. ಪರಿಸ್ಥಿತಿಯ ಗಂಭೀರತೆ ಅರಿತು ಸಮಗ್ರ ತನಿಖೆಯ ಅಗತ್ಯ ಗಮನದಲ್ಲಿಟ್ಟುಕೊಂಡು ಜೂನ್ 28ರಂದು ನಿಗದಿಯಾಗಿದ್ದ ಪರೀಕ್ಷೆ ಮುಂದೂಡಲಾಗಿದೆ,'' ಎಂದು ಮಹಾರಾಷ್ಟ್ರ ಶಿಕ್ಷಣ ಇಲಾಖೆ ತಿಳಿಸಿದೆ.

ಬಯಲಾಗಿದ್ದು ಹೇಗೆ?: ಥಾಣೆ ಜಿಲ್ಲಾಡಳಿತದ ಪ್ರಕಾರ, ''ಶನಿವಾರ ಮುಂಜಾನೆ ಭಿವಂಡಿ ಪೊಲೀಸರು ಪರೀಕ್ಷೆ ಪ್ರಶ್ನೆಪತ್ರಿಕೆ ಸೋರಿಕೆ ಸಂಬಂಧ ಗುಪ್ತಚರ ಮಾಹಿತಿಯ ಆಧಾರದ ಮೇಲೆ ಕ್ರಮ ಕೈಗೊಂಡಿದ್ದರು. ಸಂಶಯದ ಮೇಲೆ ಕೆಲವು ಸ್ಥಳಗಳ ಮೇಲೆ ತಕ್ಷಣ ದಾಳಿ ನಡೆಸಿದರು. ರಾಜ್ಯ ಪರೀಕ್ಷಾ ಮಂಡಳಿಯ ಹಿರಿಯ ಅಧಿಕಾರಿಗಳನ್ನು ಕೂಡಲೇ ಸ್ಥಳಕ್ಕೆ ಕರೆಸಲಾಯಿತು. ವಶಪಡಿಸಿಕೊಂಡ ದಾಖಲೆಗಳು, ಪತ್ರಿಕೆಗಳನ್ನು ಪರಿಶೀಲಿಸಿದ ವೇಳೆ ಶಂಕಿತರ ಬಳಿ ಪತ್ತೆಯಾದ ಹಲವು ಪ್ರಶ್ನೆಗಳು ಜೂನ್ 2026ರ ಟಿಇಟಿ ಪರೀಕ್ಷೆಗಾಗಿ ಸಿದ್ಧಪಡಿಸಲಾದ ಪ್ರಶ್ನೆಪತ್ರಿಕೆಯ ಪ್ರಶ್ನೆಗಳೊಂದಿಗೆ ತಾಳೆಯಾಗಿರುವುದು ದೃಢಪಟ್ಟಿದೆ. ಈ ಸಂಬಂಧ ಭಿವಂಡಿ ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿದ್ದು, ಸಮಗ್ರ ತನಿಖೆ ಮುಂದುವರಿದಿದೆ,'' ಎಂದು ತಿಳಿಸಿದೆ.

ಪ್ರತಿಪಕ್ಷಗಳಿಂದ ಟೀಕಾಪ್ರಹಾರ: ನೀಟ್ ಸೇರಿ ಹಲವು ಪರೀಕ್ಷೆಗಳ ಅವಾಂತರ, ಶಿಕ್ಷಣ ವ್ಯವಸ್ಥೆಯ ಲೋಪಗಳ ವಿಷಯದಲ್ಲಿ ಪ್ರತಿಪಕ್ಷಗಳ ಕೆಂಗಣ್ಣಿಗೆ ಗುರಿಯಾಗಿದ್ದ ಕೇಂದ್ರ ಸರಕಾರ ಹಾಗೂ ಬಿಜೆಪಿಯನ್ನು ಮಹಾರಾಷ್ಟ್ರದ ಶಿಕ್ಷಕರ ಅರ್ಹತಾ ಪ್ರಶ್ನೆಪತ್ರಿಕೆ ಸೋರಿಕೆ ಮತ್ತಷ್ಟು ಮುಜುಗರಕ್ಕೆ ದೂಡಿದೆ.

ಟಿಇಟಿ ಪ್ರಶ್ನೆಪತ್ರಿಕೆ ಸೋರಿಕೆ ವಿಚಾರವಾಗಿ ಮಹಾರಾಷ್ಟ್ರ ಸರಕಾರವನ್ನು ತರಾಟೆಗೆ ತೆಗೆದುಕೊಂಡಿರುವ ಕಾಂಗ್ರೆಸ್, ''ಬಿಜೆಪಿ ಸರಕಾರದ ಅಡಿಯಲ್ಲಿ ಸೋರಿಕೆಯಾದ ಜಾಗವೇ ಇಲ್ಲ, ಇದೊಂದು ಸೋರಿಕೆ ಸರಕಾರವಾಗಿದೆ. ಪ್ರಶ್ನೆಪತ್ರಿಕೆ ಸೋರಿಕೆ ಸರಕಾರದ ವೈಫಲ್ಯದ ಹೆಗ್ಗುರುತಾಗಿದೆ,'' ಎಂದು ಕಟುವಾಗಿ ಟೀಕಿಸಿದೆ.

''ಬಿಜೆಪಿ ಸರಕಾರದ ಅಡಿಯಲ್ಲಿ ಮತ್ತೊಂದು ಪ್ರಶ್ನೆಪತ್ರಿಕೆ ಸೋರಿಕೆಯಾಗಿದೆ. ಬಿಜೆಪಿಗರು ಪರೀಕ್ಷೆಯಾಗಲಿ ಅಥವಾ ದೇವಾಲಯವನ್ನಾಗಲಿ ಯಾವುದನ್ನೂ ಬಿಟ್ಟಿಲ್ಲ. ಎಲ್ಲೆಡೆ ಕಳ್ಳತನ ಮಾಡುತ್ತಿದ್ದಾರೆ,'' ಎಂದು ಆಮ್ ಆದ್ಮಿ ಪಕ್ಷದ ಮುಖ್ಯಸ್ಥ ಅರವಿಂದ್ ಕೇಜ್ರಿವಾಲ್ ವಾಗ್ದಾಳಿ ನಡೆಸಿದ್ದಾರೆ.



ಅಭ್ಯರ್ಥಿಗಳಿಗೆ ಮನವಿ

ಪ್ರಶ್ನೆಪತ್ರಿಕೆ ಸೋರಿಕೆ ವಿಚಾರವಾಗಿ ಅಭ್ಯರ್ಥಿಗಳು ವದಂತಿಗಳಿಗೆ ಕಿವಿಗೊಡಬಾರದು. ಮುಂದೂಡಲಾದ ಟಿಇಟಿ-2026ರ ಪರೀಕ್ಷಾ ದಿನಾಂಕ ಹಾಗೂ ಪರಿಷ್ಕೃತ ವೇಳಾಪಟ್ಟಿಯನ್ನು ಶೀಘ್ರದಲ್ಲೇ ಪ್ರಕಟಿಸಲಾಗುವುದು ಎಂದು ರಾಜ್ಯ ಪರೀಕ್ಷಾ ಮಂಡಳಿ ತಿಳಿಸಿದೆ. ''ಪರೀಕ್ಷಾ ಅಕ್ರಮಗಳ ವಿರುದ್ಧ 'ಶೂನ್ಯ ಸಹಿಷ್ಣುತೆ' ನೀತಿ ಅನುಸರಿಸಲಾಗುವುದು. ಸಂಪೂರ್ಣ ಪಾರದರ್ಶಕತೆ ಕಾಯ್ದುಕೊಳ್ಳಲಾಗುವುದು. ಸಮಗ್ರ ತನಿಖೆ ನಡೆಸಲು ಕಾನೂನು ಜಾರಿ ಸಂಸ್ಥೆಗಳಿಗೆ ಮುಕ್ತ ಅವಕಾಶ ಕಲ್ಪಿಸಲಾಗುವುದು,'' ಎಂದು ರಾಜ್ಯ ಸರಕಾರ ಸ್ಪಷ್ಟಪಡಿಸಿದೆ. ಭಾನುವಾರ ನಡೆಯಬೇಕಿದ್ದ ಶಿಕ್ಷಕರ ಅರ್ಹತಾ ಪರೀಕ್ಷೆಗೆ 6 ಲಕ್ಷ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದರು.

ಪ್ರಶ್ನೆಪತ್ರಿಕೆ ಸೋರಿಕೆ ಹಿನ್ನೆಲೆಯಲ್ಲಿ ಭಿವಂಡಿ ಪೊಲೀಸ್ ಇಲಾಖೆ ಹೆಚ್ಚುವರಿ ಆಯುಕ್ತ ಅಶೋಕ್ ದುಧೆ ಅವರು ಸುದ್ದಿಗೋಷ್ಠಿ ನಡೆಸಿ ಮಾಹಿತಿ ನೀಡಿದರು. ಬಂಧಿತ ಆರೋಪಿಗಳು 1.5 ಕೋಟಿ ರೂ.ಗೆ ಬೇಡಿಕೆ ಇಟ್ಟಿದ್ದರು ಎಂದು ತಿಳಿಸಿದರು.

ಪ್ರಶ್ನೆಪತ್ರಿಕೆ ಸೋರಿಕೆ ವಿಚಾರವಾಗಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು. ತಪ್ಪು ಮಾಡಿದವರು ಯಾರೇ ಆಗಿದ್ದರೂ ಕಠಿಣ ಕ್ರಮ ಜರುಗಿಸಲಾಗುವುದು. ಯಾರನ್ನೂ ಸುಮ್ಮನೆ ಬಿಡುವುದಿಲ್ಲ.
– **ಏಕನಾಥ್ ಶಿಂಧೆ** ಮಹಾರಾಷ್ಟ್ರ ಡಿಸಿಎಂ

ಮತ್ತೊಂದು ಪ್ರಶ್ನೆಪತ್ರಿಕೆ ಸೋರಿಕೆ ಆಗಿದೆ. ಮತ್ತೊಂದು ಪರೀಕ್ಷೆ ರದ್ದು ಆಗಿದೆ. ದೇಶದ ಶಿಕ್ಷಣ ಹಾಗೂ ಪರೀಕ್ಷೆ ವ್ಯವಸ್ಥೆಯು ಯುವಕರಲ್ಲಿ ಅಭದ್ರತೆಯನ್ನು ಬಿತ್ತುತ್ತಿದೆ. ಪ್ರಶ್ನೆಪತ್ರಿಕೆ ಸೋರಿಕೆ ಆಗಿಲ್ಲ, ಯುವಕ ಭವಿಷ್ಯವನ್ನು ಕಳವು ಮಾಡಲಾಗಿದೆ.
– **ರಾಹುಲ್ ಗಾಂಧಿ** ಲೋಕಸಭೆ ಪ್ರತಿಪಕ್ಷ ನಾಯಕ

ವಿಕ ಈ ದಿನ ವಿಶೇಷ — ಜೂನ್ 28

ಜನುಮ ದಿನ

ಪಿ.ವಿ. ನರಸಿಂಹ ರಾವ್

- ಪ್ರಧಾನಿ ಸ್ಥಾನಕ್ಕೇರಿದ ಮೊದಲ ದಕ್ಷಿಣ ಭಾರತೀಯ ಪಿ.ವಿ. ನರಸಿಂಹ ರಾವ್ 1921ರ ಜೂನ್ 28ರಂದು ತೆಲಂಗಾಣದ ಲಕ್ನೇಪಲ್ಲಿ ಗ್ರಾಮದಲ್ಲಿ ಜನಿಸಿದರು. ಅವರು 1991-96ರ ಅವಧಿಯಲ್ಲಿ ಪ್ರಧಾನಿಯಾಗಿದ್ದರು. ಅವರ ಸಂಪುಟದಲ್ಲಿ ಡಾ.ಮನಮೋಹನ್ ಸಿಂಗ್ ವಿತ್ತ ಸಚಿವರಾಗಿದ್ದರು. ಇವರ ಅಧಿಕಾರಾವಧಿಯಲ್ಲಿಯೇ ಆರ್ಥಿಕ ಉದಾರೀಕರಣ ನೀತಿಗಳು ಜಾರಿಗೊಂಡವು. ಪಿವಿಎನ್ 2004ರ ಡಿ. 23ರಂದು ನಿಧನ ಹೊಂದಿದರು.

ಚನ್ನವೀರ ಕಣವಿ

- 'ಸಮನ್ವಯ ಕವಿ' ಎಂದೇ ಹೆಸರಾದ ಚನ್ನವೀರ ಕಣವಿ ಅವರು 1928ರ ಜೂನ್ 28ರಂದು ಗದಗ ಜಿಲ್ಲೆಯ ಹೊಂಬಳ ಗ್ರಾಮದಲ್ಲಿ ಜನಿಸಿದರು. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪಂಪ ಪ್ರಶಸ್ತಿ, ನಾಡೋಜ ಗೌರವ ಸೇರಿದಂತೆ ಹಲವು ಪ್ರಶಸ್ತಿ ಗೌರವಗಳು ಚನ್ನವೀರ ಕಣವಿಯವರಿಗೆ ದೊರಕಿವೆ. ಅವರು 2022ರ ಫೆ.16ರಂದು ಕಾಲವಾದರು.

ಬ್ರೀಫ್ ನ್ಯೂಸ್

ತಮಿಳಿನ ಖ್ಯಾತ ನಟ, ನಿರ್ದೇಶಕ ಕೆ. ಭಾಗ್ಯರಾಜ್ ನಿಧನ

ಚೆನ್ನೈ: ದಕ್ಷಿಣ ಭಾರತೀಯ ಚಿತ್ರರಂಗದ ಜನಪ್ರಿಯ ನಟ, ವಿಶಿಷ್ಟ ಚಿತ್ರಕಥೆಯಿಂದ ಮನೆಮಾತಾಗಿದ್ದ ಕೆ. ಭಾಗ್ಯರಾಜ್ (73) ಶನಿವಾರ ತೀವ್ರ ಹೃದಯಾಘಾತದಿಂದ ನಿಧನರಾಗಿದ್ದಾರೆ. ಹಠಾತ್ ಆರೋಗ್ಯ ವೈಪರೀತ್ಯದಿಂದಾಗಿ ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದ್ದರೂ, ಚಿಕಿತ್ಸೆ ಫಲಕಾರಿಯಾಗದೆ ಕೊನೆಯುಸಿರೆಳೆದಿದ್ದಾರೆ. ತಮಿಳು ಮಾತ್ರವಲ್ಲದೆ ಭಾರತದ ಪ್ರಮುಖ ಭಾಷೆಗಳಲ್ಲಿ ಗುರುತಿಸಿಕೊಂಡಿದ್ದ ಕೆ. ಭಾಗ್ಯರಾಜ್ ಅವರು ಕನ್ನಡ ಚಿತ್ರರಂಗದೊಂದಿಗೂ ನಂಟು ಹೊಂದಿದ್ದರು. 2015 ರಲ್ಲಿ ತೆರೆಕಂಡಿದ್ದ 'ರೆಡ್ ಅಲರ್ಟ್' ಕನ್ನಡ ಸಿನಿಮಾದಲ್ಲಿ ಪ್ರಮುಖ ಅತಿಥಿ ಪಾತ್ರವೊಂದರಲ್ಲಿ ನಟಿಸುವ ಮೂಲಕ ಕನ್ನಡ ಪ್ರೇಕ್ಷಕರನ್ನೂ ರಂಜಿಸಿದ್ದರು.
ಮೃತರ ಪತ್ನಿ ಪೂರ್ಣಿಮಾ ಭಾಗ್ಯರಾಜ್, ಪುತ್ರ ನಟ ಶಾಂತನು ಹಾಗೂ ಪುತ್ರಿ ಶರಣ್ಯ ಸೇರಿದಂತೆ ಅಪಾರ ಅಭಿಮಾನಿ ಬಳಗವನ್ನು ಅಗಲಿದ್ದಾರೆ. ತಮಿಳುನಾಡು ಸಿಎಂ ಜೋಸೆಫ್ ವಿಜಯ್ ಅವರು ಭಾಗ್ಯರಾಜ್ ಅವರ ಪಾರ್ಥಿವ ಶರೀರದ ದರ್ಶನ ಪಡೆದು ಅಂತಿಮ ನಮನ ಸಲ್ಲಿಸಿದರು.

ಮಾಜಿ ಕ್ರಿಕೆಟಿಗ ಶೋಯೆಬ್ ಅಖ್ತರ್ ಸಹೋದರನ ಅಂತ್ಯಕ್ರಿಯೆಯಲ್ಲಿ ಲಷ್ಕರ್ ಉಗ್ರ!



ಇಸ್ಲಾಮಾಬಾದ್: ಪಾಕಿಸ್ತಾನದ ಮಾಜಿ ಕ್ರಿಕೆಟಿಗ ಶೋಯೆಬ್ ಅಖ್ತರ್ ಅವರ ಸಹೋದರನ ಅಂತ್ಯಕ್ರಿಯೆಯಲ್ಲಿ ಲಷ್ಕರೆ ತಯ್ಬಾ ಉಗ್ರ ಸಂಘಟನೆಯ ಉಪ ಮುಖ್ಯಸ್ಥ ಸೈಫುಲ್ಲಾ ಕಸೂರಿ ಸೇರಿದಂತೆ ಹಲವು ಉಗ್ರರು ಭಾಗವಹಿಸಿದ್ದರು. ಇದರ ಫೋಟೊ ಹಾಗೂ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್ ಆಗಿದೆ. ಅಖ್ತರ್ ಹಿರಿಯ ಸಹೋದರ ಶಾಹಿದ್ ಅಖ್ತರ್ ಜೂನ್ 24ರಂದು ನಿಧನರಾಗಿದ್ದಾರೆ. ಇಸ್ಲಾಮಾಬಾದ್‌ನಲ್ಲಿ ಅವರ ಅಂತ್ಯಕ್ರಿಯೆ ನಡೆದಿದೆ. ಸೈಫುಲ್ಲಾ ಕಸೂರಿಯಂತಹ ಉಗ್ರ ಸಾರ್ವಜನಿಕ ಕಾರ್ಯಕ್ರಮವೊಂದರಲ್ಲಿ ಬಹಿರಂಗವಾಗಿ ಕಾಣಿಸಿಕೊಂಡಿರುವುದು ಪಾಕಿಸ್ತಾನವು ಭಾರತ ವಿರೋಧಿ ಚಟುವಟಿಕೆಗಳಿಗೆ ನಿರಂತರ ಬೆಂಬಲ ನೀಡುತ್ತದೆ ಎಂಬುದನ್ನು ಮತ್ತೊಮ್ಮೆ ಸಾಬೀತು ಮಾಡಿದಂತಾಗಿದೆ.

ಕೋತಿ ಹಿಂಡಿನಿಂದ ತಪ್ಪಿಸಿಕೊಳ್ಳುವ ಯತ್ನದಲ್ಲಿ ನವವಿವಾಹಿತೆ ಸಾವು

ಚೆನ್ನೈ: ದೇವಸ್ಥಾನಕ್ಕೆ ತೆರಳಿದ್ದ ನವವಿವಾಹಿತೆ ತನ್ನನ್ನು ಸುತ್ತುವರಿದ ಮಂಗಗಳ ಹಿಂಡಿನಿಂದ ತಪ್ಪಿಸಿಕೊಳ್ಳಲು ಹೋಗಿ ಬೆಟ್ಟದ ಮೇಲಿನಿಂದ ಬಿದ್ದು ಮೃತಪಟ್ಟ ಘಟನೆ ತಮಿಳುನಾಡಿನ ತೂತುಕುಡಿ ಜಿಲ್ಲೆಯ ಕಳುಗುಮಲೈ ಎಂಬಲ್ಲಿ ನಡೆದಿದೆ. ಅನಿತಾ (24) ಮೃತ ಮಹಿಳೆ. ಸುರೇಶ್ ಎಂಬುವವರ ಜತೆ ಅವರ ಮದುವೆ ತಿಂಗಳ ಹಿಂದೆಯಷ್ಟೇ ನೆರವೇರಿತ್ತು. ದಂಪತಿ ಕಳುಗಸಲಮೂರ್ತಿ ದೇವಸ್ಥಾನಕ್ಕೆ ಬಂದಿದ್ದರು. ಮುಖ್ಯ ದೇವಸ್ಥಾನದಲ್ಲಿ ಪೂಜೆ ಮುಗಿಸಿದ ನಂತರ ದಂಪತಿ ಬೆಟ್ಟದ ತುದಿಯಲ್ಲಿರುವ ದೇವಸ್ಥಾನಕ್ಕೆ ತೆರಳಿದ್ದರು. ಅಲ್ಲಿ ಕೋತಿಗಳಿಗೆ ಬಾಳೆಹಣ್ಣು ತಿನ್ನಿಸುತ್ತಿದ್ದರು. ಈ ಸಮಯದಲ್ಲಿ ಇದ್ದಕ್ಕಿದ್ದಂತೆ ಕೋತಿಗಳ ದೊಡ್ಡ ಹಿಂಡು ಇವರನ್ನು ಸುತ್ತುವರಿದಿದೆ. ಕೋತಿಗಳ ಹಠಾತ್ ನೂಕುನುಗ್ಗಲು ಮತ್ತು ವರ್ತನೆಯಿಂದ ತೀವ್ರವಾಗಿ ಹೆದರಿದ ಅನಿತಾ, ಅಲ್ಲಿಂದ ಹಿಂದೆ ಸರಿಯಲು ಯತ್ನಿಸಿದ್ದು, ಗಾಬರಿಯಲ್ಲಿ ಬೆಟ್ಟದ ಅಂಚಿನಿಂದ 120 ಅಡಿ ಎತ್ತರದಿಂದ ಕೆಳಗಿನ ಕಲ್ಲು ಬಂಡೆಗಳ ಮೇಲೆ ಬಿದ್ದಿದ್ದಾರೆ. ತಲೆಗೆ ತೀವ್ರ ಪೆಟ್ಟು ಬಿದ್ದ ಪರಿಣಾಮ ಆಕೆ ಸ್ಥಳದಲ್ಲೇ ಮೃತಪಟ್ಟರು. ಈ ಭೀಕರ ಅಪಘಾತದಿಂದ ಪತಿ ಸುರೇಶ್ ಆಘಾತಕ್ಕೆ ಒಳಗಾಗಿದ್ದಾರೆ.

ಬಿಜೆಪಿ ಕಾರ್ಯಕರ್ತನ ಶವಸಂಸ್ಕಾರ ನಡೆಸಿದ ಮುಸ್ಲಿಂ ಮಹಿಳೆ

ಕಾಸರಗೋಡು: ಕ್ಯಾನ್ಸರ್‌ನಿಂದಾಗಿ ಮೃತಪಟ್ಟ ಬಿಜೆಪಿ ಹಿರಿಯ ಕಾರ್ಯಕರ್ತರೊಬ್ಬರ ಅಂತ್ಯಸಂಸ್ಕಾರವನ್ನು ಮುಸ್ಲಿಂ ಮಹಿಳೆ ನೆರವೇರಿಸಿ ಮಾದರಿಯಾಗಿದ್ದಾರೆ. ಕಾಸರಗೋಡು ಜಿಲ್ಲೆ ಮಂಜೇಶ್ವರ ತಾಲೂಕಿನ ಮೀಂಜದ ಚಿಗುರುಪದವು ನಿವಾಸಿ, ಬಿಜೆಪಿ ಹಿರಿಯ ಕಾರ್ಯಕರ್ತ ನಾರಾಯಣ (64) ಕೋಯಿಕ್ಕೋಡ್ ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿ ಗುರುವಾರ ಮೃತಪಟ್ಟರು. ಮೃತದೇಹ ಸ್ವೀಕರಿಸಿ ಅಂತ್ಯಸಂಸ್ಕಾರ ನಡೆಸಲು ಸಂಬಂಧಿಕರು ನಿರಾಕರಿಸಿದಾಗ ಜಿಲ್ಲಾ ಪಂಚಾಯಿತಿ ಸದಸ್ಯೆ ಇರ್ಫಾನ ತಾವೇ ಮುಂದೆ ನಿಂತು ಶವಸಂಸ್ಕಾರ ನಡೆಸಿದರು.

ಒಂದು ತಿಂಗಳ ಹಿಂದೆ ಊರಿನ ಅಂಗಡಿಯ ಜಗಲಿಯೊಂದರಲ್ಲಿ ಆಹಾರ ಸೇವಿಸದೆ ದಯನೀಯ ಸ್ಥಿತಿಯಲ್ಲಿದ್ದ ನಾರಾಯಣ ಅವರ ಕುರಿತು ವಾರ್ಡ್ ಸದಸ್ಯ ಶೆರೀಫ್ ಚಿನಾಲ ಅವರು ಪಂಚಾಯಿತಿ ಸದಸ್ಯೆ ಇರ್ಫಾನ ಇಕ್ಬಾಲ್ ಅವರಿಗೆ ತಿಳಿಸಿದ್ದರು. ಸ್ಥಳಕ್ಕೆ ತೆರಳಿದ ಅವರು ಮಾಹಿತಿ ಪಡೆದು ಜಿಲ್ಲಾ ವೈದ್ಯಾಧಿಕಾರಿ ಹಾಗೂ ಜಿಲ್ಲಾಧಿಕಾರಿಗೆ ಮಾಹಿತಿ ನೀಡಿದ್ದರು. ಬಳಿಕ ನಾರಾಯಣ ಅವರನ್ನು ಶೇಖ್ ಸಾಯಿದ್ ಫೌಂಡೇಷನ್ ಕಾರ್ಯಕರ್ತರು ಕೋಯಿಕ್ಕೋಡ್ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ದಾಖಲಿಸಿದ್ದರು. ಆದರೆ ಚಿಕಿತ್ಸೆಗೆ ಸ್ಪಂದಿಸದೆ ಅವರು ಕೊನೆಯುಸಿರೆಳೆದಿದ್ದಾರೆ. ಈ ಬಗ್ಗೆ ಮಂಜೇಶ್ವರ ಪೊಲೀಸರು ಸಂಬಂಧಿಕರಿಗೆ ಮಾಹಿತಿ ನೀಡಿದ್ದರು. ಆದರೆ ಮೃತದೇಹವನ್ನು ಸ್ವೀಕರಿಸಲು ಮನೆಯವರು ಮುಂದಾಗಿರಲಿಲ್ಲ. ಮೃತದೇಹ ಬಿಟ್ಟು ಕೊಡುವುದಕ್ಕಾಗಿ ಕುಟುಂಬದ ಒಪ್ಪಿಗೆ ಇರುವ ಪತ್ರವನ್ನು ವೈದ್ಯಕೀಯ ಕಾಲೇಜು ಅಧೀಕ್ಷಕರಿಗೆ ಹಸ್ತಾಂತರಿಸಲಾಯಿತು. ಬಳಿಕ ಆಂಬ್ಯುಲೆನ್ಸ್‌ನಲ್ಲಿ ಉಪ್ಪಳಕ್ಕೆ ಮೃತದೇಹ ತಂದು ಚೆರುಗೋಳಿ ಸಾರ್ವಜನಿಕ ಸ್ಮಶಾನದಲ್ಲಿ ಅಂತಿಮ ಸಂಸ್ಕಾರ ನೆರವೇರಿಸಲಾಯಿತು.

ಇರ್ಫಾನ ನಡೆಸಿದ ಕಾರ್ಯವು ಸಮಾಜದಲ್ಲಿ ಹೊಸ ಆಶಾಭಾವ ಮೂಡಿಸಿದೆ. ದ್ವೇಷದ ಮಾರುಕಟ್ಟೆಯಲ್ಲಿ ಪ್ರೀತಿ ಅಂಗಡಿ ತೆರೆಯಲಾಗಿದೆ.
– **ರಾಜಮೋಹನ್ ಉನ್ನಿಥನ್** ಕಾಸರಗೋಡು ಸಂಸದ

ಕೇಂದ್ರದಿಂದ 99 ಲಕ್ಷ ರೂ. ಅನುದಾನ ಪಡೆದ ಕೃಷಿ ಸಚಿವ!

ಅಜ್ಮೇರ್: ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಇಲಾಖೆಯ ಸಹಾಯಕ ಸಚಿವ ಭಗೀರಥ ಚೌಧರಿ ಅವರು ಅವರು ತಮ್ಮದೇ ಸಚಿವಾಲಯದ ಯೋಜನೆಯೊಂದರ ಅಡಿಯಲ್ಲಿ 99.6 ಲಕ್ಷ ರೂ. ಸಬ್ಸಿಡಿ ಪಡೆದಿದ್ದಾರೆ ಎಂಬ ಆರೋಪ ಕೇಳಿ ಬಂದಿದೆ.

''ವಾಣಿಜ್ಯ ಕೃಷಿಯನ್ನು ಉತ್ತೇಜಿಸುವ ಯೋಜನೆಯಡಿ ಚೌಧರಿ ಅವರಿಗೆ 99,60,000 ರೂ. ಸಬ್ಸಿಡಿ ಮಂಜೂರಾಗಿದೆ. ವಿಶೇಷವೆಂದರೆ, ಈ ಸಬ್ಸಿಡಿಯನ್ನು ಅನುಮೋದಿಸಿದ ಮಂಡಳಿಯಲ್ಲಿ ಚೌಧರಿ ಅವರೇ ಉಪಾಧ್ಯಕ್ಷರಾಗಿದ್ದಾರೆ,'' ಎಂದು ಮಾಧ್ಯಮವೊಂದರಲ್ಲಿ ವರದಿಯಾಗಿದೆ. ಇದರ ಬೆನ್ನಲ್ಲಿಯೇ ಕೇಂದ್ರ ಸರಕಾರದ ವಿರುದ್ಧ ಕಾಂಗ್ರೆಸ್ ವಾಗ್ದಾಳಿ ನಡೆಸಿದ್ದು, ''ಭ್ರಷ್ಟಾಚಾರ ವಿರುದ್ಧದ ಬಿಜೆಪಿಯ ನಿಲುವು ಕೇವಲ ಬೂಟಾಟಿಕೆ,'' ಎಂದು ಜರಿದಿದೆ. 2024 ಜೂನ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಸಂಪುಟದಲ್ಲಿ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ್ದರು.

ತಮ್ಮ ವಿರುದ್ಧದ ಆರೋಪಗಳ ಕುರಿತು ಸ್ಪಷ್ಟನೆ ನೀಡಿರುವ ಸಚಿವ ಚೌಧರಿ ಅವರು, ''ನಾನು ಏನನ್ನೂ ಮುಚ್ಚಿಟ್ಟಿಲ್ಲ, ದೇಶದ ಇತರ ಸಾವಿರಾರು ರೈತರಂತೆ ನಾನು ಕೂಡ ರೈತ ಮತ್ತು ಬಾಲ್ಯದಿಂದಲೂ ಕೃಷಿ ಮಾಡುತ್ತಿದ್ದೇನೆ. ಸಾವಿರಾರು ರೈತರು ಪಾಲಿಹೌಸ್‌ಗಳನ್ನು ನಿರ್ಮಿಸಿ ಸಬ್ಸಿಡಿ ಪಡೆಯುತ್ತಾರೆ. ನಾನು ಕೂಡ ಹಾಗೆಯೇ ಮಾಡಿದ್ದೇನೆ,'' ಎಂದು ಹೇಳಿದ್ದಾರೆ.

ಅಲ್ಡಾಬ್ರ ಭೇಟಿಯಾದ ಪ್ರಧಾನಿ ಮೋದಿ



ಸಿಷೆಲ್ಸ್ ಪ್ರವಾಸದಲ್ಲಿರುವ ಪ್ರಧಾನಿ ನರೇಂದ್ರ ಮೋದಿ ಅವರು ಬೃಹತ್ ಗಾತ್ರದ ಆಮೆಗಳಿರುವ ಜೈವಿಕ ಉದ್ಯಾನಕ್ಕೆ ಭೇಟಿ ನೀಡಿ ಭೂಮಿಯ ಮೇಲೆ ಜೀವಂತವಿರುವ ಅತಿದೊಡ್ಡ ಹಾಗೂ ಅತಿಹೆಚ್ಚು ವರ್ಷ ಬದುಕಿರುವ ತಳಿ ಎಂಬ ಖ್ಯಾತಿಯ ಅಲ್ಡಾಬ್ರ ಜೈಯಂಟ್ ಟಾರ್ಟಾಯಿಸ್‌ಗೆ ಸೊಪ್ಪು ತಿನ್ನಿಸಿದರು. 2014ರಲ್ಲಿ ಮೊದಲ ಬಾರಿಗೆ ಈ ಬೃಹತ್ ಗಾತ್ರದ ಆಮೆಗಳನ್ನು ಸೆಷೆಲ್ಸ್ ಸರಕಾರವು ಕೋಲ್ಕೊತಾದ ಅಲಿಪೊರಾ ಪ್ರಾಣಿ ಸಂಗ್ರಹಾಲಯಕ್ಕೆ ಉಡುಗೊರೆಯಾಗಿ ನೀಡಿತ್ತು.

ಗುಲ್ಮಾರ್ಗ್‌ನಲ್ಲಿ ಸ್ಫೋಟ: ಸಾವು

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದ ಪ್ರಸಿದ್ಧ ಪ್ರವಾಸಿ ತಾಣವಾದ ಗುಲ್ಮಾರ್ಗ್‌ನ ಎತ್ತರದ ಪ್ರದೇಶದಲ್ಲಿ ಶನಿವಾರ ಸಂಭವಿಸಿದ ಸ್ಫೋಟದಲ್ಲಿ ಒಬ್ಬರು ಮೃತಪಟ್ಟು, ನಾಲ್ವರು ಗಾಯಗೊಂಡಿದ್ದಾರೆ. ಗುಲ್ಮಾರ್ಗ್‌ನ ಆಶಾ ಪೋಸ್ಟ್ ಸಮೀಪದ ಸುಮ್ಮಿವಾಲಿ ಧೋಕ್ ಎಂಬಲ್ಲಿ ಭಾರಿ ಸ್ಫೋಟದಂತಹ ಸದ್ದು ಕೇಳಿಬಂದಿದೆ. ಬಾರಾಮುಲ್ಲಾ ಜಿಲ್ಲೆಯ ಚಂದೂಸಾ ಪ್ರದೇಶದ ಗಲಿಬಾಲ್ ಗ್ರಾಮದ ನಿವಾಸಿಯಾದ ಜುಬೈರ್ ಅಹ್ಮದ್ ಬಜಾದ್ ಎಂಬುವವರು ಸ್ಥಳದಲ್ಲೇ ಮೃತಪಟ್ಟರು. ಮತ್ತಿಬ್ಬರು ತೀವ್ರವಾಗಿ ಗಾಯಗೊಂಡಿದ್ದಾರೆ ಎಂದು ಪೊಲೀಸ್ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ವಿಷ ತುಂಬಿದ 14,900 ಕ್ಯಾಪ್ಸೂಲ್: ವ್ಯಕ್ತಿ ಬಂಧನ

ಮುಂಬಯಿ: ಮೊಹರಂ ಮೆರವಣಿಗೆಯ ಸಂದರ್ಭದಲ್ಲಿ ಇಲಿ ಪಾಷಾಣ ತುಂಬಿದ ಕ್ಯಾಪ್ಸೂಲ್‌ಗಳನ್ನು ವಿತರಿಸಲು ಮುಂದಾಗಿದ್ದ ವ್ಯಕ್ತಿಯೊಬ್ಬನನ್ನು ಪೊಲೀಸರು ಬಂಧಿಸಿದ್ದಾರೆ. ಆರೋಪಿಯನ್ನು ಪುಣೆ ನಿವಾಸಿ, ಬಣ್ಣದ ವ್ಯಾಪಾರಿ ಫಯಾಜ್ ಎಂದು ಗುರುತಿಸಲಾಗಿದೆ.

ಆರೋಪಿಯಿಂದ ಸುಮಾರು 14,900 ವಿಷ ತುಂಬಿದ ಕ್ಯಾಪ್ಸೂಲ್‌ಗಳನ್ನು ವಶಪಡಿಸಿಕೊಂಡಿದ್ದು, ಘಟನೆ ಹಿಂದೆ ದೊಡ್ಡ ಪಿತೂರಿಯೇ ಇದೆ ಎಂದು ಶಂಕಿಸಲಾಗಿದೆ. ಮೊಹರಂ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದ ಜನರನ್ನು ಗುರಿಯಾಗಿಸಿಕೊಂಡಿದ್ದ ಶಂಕಿತ ಆರೋಪಿಯು ಸಾಮೂಹಿಕ ವಿಷಪ್ರಾಶನಕ್ಕೆ ಸಂಚು ರೂಪಿಸಿದ್ದ. ಸಲ್ಮಾನ್ ಸಯ್ಯದ್ ಎಂಬ ವ್ಯಕ್ತಿಯೊಬ್ಬ ಒಂದು ಕ್ಯಾಪ್ಸೂಲ್ ಸೇವಿಸಿ ಅಸ್ವಸ್ಥರಾಗಿದ್ದರು. ಆ ದಿನ ಬೆಳಗ್ಗೆ 4 ಗಂಟೆ ಸುಮಾರಿಗೆ ವಾಂತಿ, ಹೊಟ್ಟೆ ನೋವಿನಿಂದ ಆತ ಬಳಲುತ್ತಿದ್ದಾನೆ ಅನ್ನೋ ಬಗ್ಗೆ ಮಾಹಿತಿ ಬಂದಿತು. ಈ ಕುರಿತು ಹೆಚ್ಚಿನ ತನಿಖೆ ಆರಂಭಿಸಿದಾಗ ಸಾಮೂಹಿಕ ವಿಷಪ್ರಾಶನ ಪ್ರಕರಣ ಬೆಳಕಿಗೆ ಬಂದಿತು. ''ಮೊಹರಂ ಮೆರವಣಿಗೆ ಸಂದರ್ಭದಲ್ಲಿ ಅನುಮಾನಾಸ್ಪದ ವ್ಯಕ್ತಿಯೊಬ್ಬ ಓಡಾಡುತ್ತಿದ್ದು ಔಷಧಿ ಮಾದರಿಯ ಕ್ಯಾಪ್ಸೂಲ್‌ಗಳನ್ನ ವಿತರಿಸುತ್ತಿದ್ದಾನೆ ಅನ್ನೋ ಮಾಹಿತಿ ಬಂದಿತು. ಕೂಡಲೇ ಆತನನ್ನು ಬಂಧಿಸಿ ಆಧಾರ್ ಮತ್ತು ಪಾಸ್‌ಪೋರ್ಟ್ ದಾಖಲೆಗಳೊಂದಿಗೆ ವಶಕ್ಕೆ ಪಡೆದೆವು,'' ಎಂದು ಡಿಸಿಪಿ ಜಯಂತ್ ಮೀನಾ ತಿಳಿಸಿದ್ದಾರೆ.

ಪ್ರತಿ ಕ್ಯಾಪ್ಸ್ಯೂಲ್‌ನಲ್ಲಿ 1 ಗ್ರಾಂ ವಿಷ

ಬಂಧಿತ ಫಯಾಜ್ 50 ಕೆ.ಜಿ ಜಿಂಕ್ ಫಾಸ್ಫೈಡ್ ಆರ್ಡರ್ ಮಾಡಿ ತರಿಸಿಕೊಂಡಿದ್ದ. ತನ್ನ ಮನೆಯಲ್ಲೇ ವಿಷವನ್ನು ಇಟ್ಟುಕೊಂಡು ತಲಾ 1 ಗ್ರಾಂ ವಿಷವನ್ನು ಪ್ರತಿ ಕ್ಯಾಪ್ಸೂಲ್ ನಲ್ಲಿ ತುಂಬಿಸಿದ್ದ. ಒಟ್ಟು 30,000 ಕ್ಯಾಪ್ಸೂಲ್‌ಗಳನ್ನು ತಯಾರಿಸಲು ಫಯಾಜ್ ಉದ್ದೇಶಿಸಿದ್ದ. ಅದಕ್ಕೂ ಮುನ್ನ ತಯಾರಿಸಲಾಗಿದ್ದ 14,900 ಕ್ಯಾಪ್ಸೂಲ್‌ಗಳನ್ನು ವಿತರಿಸಲು ಸಂಚು ರೂಪಿಸಿದ್ದ ಎನ್ನಲಾಗಿದೆ. 2025 ರಲ್ಲಿ ಇರಾನ್ ಮತ್ತು ಇರಾಕ್‌ಗೆ ಪ್ರಯಾಣಿಸಿದ್ದ ಫಯಾಜ್ ಐಸಿಸ್ ಅಥವಾ ಇತರ ಉಗ್ರ ಸಂಘಟನೆಗಳ ಸಂಪರ್ಕ ಹೊಂದಿರುವ ಬಗ್ಗೆ ತನಿಖೆ ಪ್ರಗತಿಯಲ್ಲಿದೆ.

ಮೋದಿ ಸಾರಥ್ಯದಲ್ಲಿ ಭಾರತ ಜಾಗತಿಕ ಶಕ್ತಿ

ಹೊಸದಿಲ್ಲಿ: ''ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಭಾರತ ಜಾಗತಿಕ ಶಕ್ತಿಯಾಗಿ ಹೊರಹೊಮ್ಮುತ್ತಿದೆ. ಅಮೆರಿಕ ಜತೆಗಿನ ಬಾಂಧವ್ಯ ಮತ್ತಷ್ಟು ಬಲವಾಗಿದೆ. ಉಭಯ ದೇಶಗಳ ಸಂಬಂಧ ಹಿಂದೆಂದು ಕಾಣದ ಮಟ್ಟದ ಎತ್ತರಕ್ಕೆ ಬೆಳೆದಿದೆ,'' ಎಂದು ಅಮೆರಿಕ ವಿದೇಶಾಂಗ ಸಚಿವ ಮಾರ್ಕೊ ರುಬಿಯೊ ಹೇಳಿದ್ದಾರೆ.

ಸುದ್ದಿ ಸಂಸ್ಥೆ 'ಐಎಎನ್‌ಎಸ್'ಗೆ ನೀಡಿದ ಸಂದರ್ಶನದಲ್ಲಿ ಭಾರತ-ಅಮೆರಿಕ ಬಾಂಧವ್ಯ, ನರೇಂದ್ರ ಮೋದಿ ಹಾಗೂ ಡೊನಾಲ್ಡ್ ಟ್ರಂಪ್ ಸ್ನೇಹವನ್ನು ಉಲ್ಲೇಖಿಸಿದ ರುಬಿಯೊ, ''ಅಮೆರಿಕ ಎಂದಿಗೂ ಭಾರತವನ್ನು ನಿಕಟ ಮಿತ್ರ ರಾಷ್ಟ್ರವಾಗಿ ಪರಿಗಣಿಸಿದೆ. ಟ್ರಂಪ್ ಹಾಗೂ ಮೋದಿ ಅವರ ನಡುವಿನ ನಿಕಟ ಸ್ನೇಹ ಉಭಯ ದೇಶಗಳ ಸಂಬಂಧವನ್ನು ಮತ್ತಷ್ಟು ಗಾಢವಾಗಿಸಿದೆ,'' ಎಂದು ಹೇಳಿದರು.

''ಮೋದಿ ಆಡಳಿತದಲ್ಲಿ ಭಾರತ ಅಪಾರ ಬೆಳವಣಿಗೆ ಕಂಡಿದೆ. ದೂರದೃಷ್ಟಿ ಹಾಗೂ ಉತ್ತಮ ಆಡಳಿತದ ಫಲವಾಗಿ ಆರ್ಥಿಕ ಶಕ್ತಿಯಾಗಿ ರೂಪಾಂತರಗೊಂಡಿದೆ. ತಮ್ಮ ಕಠಿಣ ನಿರ್ಧಾರಗಳಿಂದ ಭಾರತವನ್ನು ಜಾಗತಿಕ ಶಕ್ತಿಯಾಗಿ ಪರಿವರ್ತಿಸಿದ್ದಾರೆ,'' ಎಂದು ಹೇಳಿರುವ ರುಬಿಯೊ, ''ಬೆಳೆಯುತ್ತಿರುವ ಉಭಯ ದೇಶಗಳ ನಡುವಿನ ಕಾರ್ಯತಂತ್ರ ಪಾಲುದಾರಿಕೆ ಸಂಬಂಧ ಏಷ್ಯಾ-ಪೆಸಿಫಿಕ್ ವಲಯದಲ್ಲಿ ಮಹತ್ವಪೂರ್ಣವಾಗಲಿದೆ. ಭಾರತದ ಇಂಧನ ಅವಶ್ಯಕತೆ ಪೂರೈಸಲು ಅಮೆರಿಕ ಸಹಕಾರ ನೀಡಲಿದೆ. ಭಾರತ ವೈವಿಧ್ಯಮಯಗೊಳಿಸಿದ ಇಂಧನ ಮೂಲಗಳಿಗೆ ಅಮೆರಿಕ ಖಾತರಿ ನೀಡಲಿದೆ,'' ಎಂದರು.

ಕ್ವಾಡ್‌ನಲ್ಲಿ ಮತ್ತೆ ಭೇಟಿ: ಕ್ವಾಡ್ ದೇಶಗಳ ಶೃಂಗಸಭೆಯಲ್ಲಿ ಉಭಯ ದೇಶಗಳ ಮಧ್ಯೆ ಮತ್ತೆ ಮಹತ್ವದ ಸಭೆ ನಡೆಯಲಿದೆ. ಭಾರತದ ಜತೆಗಿನ ಸಭೆಯನ್ನು ಅಮೆರಿಕ ಎದುರು ನೋಡುತ್ತಿದೆ. ಮುಂದಿನ ವರ್ಷ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಭಾರತಕ್ಕೆ ಬರಲಿದ್ದಾರೆ. ಅದಕ್ಕೂ ಮೊದಲು ಕ್ವಾಡ್ ಪೂರ್ವಭಾವಿ ಸಭೆಯಲ್ಲಿ ಪಾಲ್ಗೊಳ್ಳಲು ವರ್ಷಾಂತ್ಯದಲ್ಲಿ ಮರಳಿ ಭಾರತಕ್ಕೆ ಬರುವೆ,'' ಎಂದು ಹೇಳಿದರು.

ಕ್ಷುಲ್ಲಕ ಕಾರಣಕ್ಕಾಗಿ 29 ವರ್ಷಗಳ ಹಿಂದೆ ಜೈಲು ಸೇರಿದ್ದ ವ್ಯಕ್ತಿಗೆ ರಿಲೀಫ್

ಹೊಸದಿಲ್ಲಿ: ಕೇವಲ 500 ರೂ. ಬೆಲೆಯ ವಾಚ್‌ಗೆ ಸಂಬಂಧಿಸಿದಂತೆ ಉತ್ತರಾಖಂಡದ ವ್ಯಕ್ತಿಯೊಬ್ಬರು ಮೃತಪಟ್ಟಿದ್ದರು. ಈ ಘಟನೆಗೆ ಕಾರಣವಾಗಿದ್ದ 29 ವರ್ಷ ಹಳೆಯ ಪ್ರಕರಣವನ್ನು ಸುಪ್ರೀಂ ಕೋರ್ಟ್ ಮುಕ್ತಾಯಗೊಳಿಸಿದೆ. ಪ್ರಕರಣದಲ್ಲಿ ಜೀವಂತವಿರುವ ಕೊನೆಯ ವೃದ್ಧ ಅಪರಾಧಿಯ 5 ವರ್ಷಗಳ ಕಠಿಣ ಜೈಲು ಶಿಕ್ಷೆಯನ್ನು ಕಡಿತಗೊಳಿಸಿ ಬಿಡುಗಡೆ ಮಾಡಲು ನ್ಯಾಯಾಲಯ ಅನುಮತಿಸಿದೆ.

ನ್ಯಾಯಮೂರ್ತಿ ಉಜ್ವಲ್ ಭುಯಾನ್ ಅವರನ್ನೊಳಗೊಂಡ ಪೀಠವು, ''1997ರಲ್ಲಿ ಘಟನೆ ನಡೆದಾಗ ಅರ್ಜಿದಾರನಿಗೆ (ಜಗದೀಶ್) 33 ವರ್ಷ ವಯಸ್ಸಾಗಿತ್ತು. ಇಂದು ನಾವು 2026ರಲ್ಲಿದ್ದೇವೆ. ಅಂದರೆ ಸುಮಾರು ಮೂರು ದಶಕಗಳು ಕಳೆದಿವೆ. ಅರ್ಜಿದಾರನಿಗೆ ಈಗ 60 ವರ್ಷ ದಾಟಿದೆ. ಮೃತ ವ್ಯಕ್ತಿ ಮತ್ತು ಆರೋಪಿಗಳ ನಡುವೆ ಕೈಗಡಿಯಾರದ ವಿಷಯವಾಗಿ ಆರಂಭವಾದ ಸಣ್ಣ ಜಗಳವು ಹೇಗೆ ಕೈಕೈ ಮಿಲಾಯಿಸುವ ಹಂತಕ್ಕೆ ತಲುಪಿತು ಮತ್ತು ಆ ಗಲಾಟೆಯಲ್ಲಿ ಮೃತ ವ್ಯಕ್ತಿ ಪಕ್ಕದಲ್ಲಿದ್ದ ಒಣ ಕಾಲುವೆಗೆ ಬಿದ್ದು ಮೃತಪಟ್ಟರು ಎಂಬುದನ್ನು ಗಮನಿಸಬೇಕು,'' ಎಂದು ನ್ಯಾಯಾಲಯ ಹೇಳಿದೆ.

ಈ ಆದೇಶದೊಂದಿಗೆ, ವರ್ಷಗಳ ಕಾಲ ನಡೆದ ಸುದೀರ್ಘ ಕಾನೂನು ಹೋರಾಟಕ್ಕೆ ಕೊನೆಗೂ ತೆರೆ ಬಿದ್ದಿದ್ದು, ವೃದ್ಧ ಅಪರಾಧಿ ಮುಕ್ತವಾಗಿ ಹೊರನಡೆಯಲಿದ್ದಾರೆ.

ಗಾಜಾ ಸಂಘರ್ಷ: ಭಾರತದ ಮೌನಕ್ಕೆ ಸೋನಿಯಾ ಟೀಕೆ

ಹೊಸದಿಲ್ಲಿ: ಗಾಜಾ ಪಟ್ಟಿಯಲ್ಲಿ ನಡೆಯುತ್ತಿರುವ ಸಂಘರ್ಷದ ಕುರಿತು ಕೇಂದ್ರ ಸರಕಾರದ ಮೌನವನ್ನು ಪ್ರಶ್ನಿಸಿ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಬರೆದಿರುವ ಲೇಖನವೊಂದು ಭಾರಿ ಚರ್ಚೆಗೆ ಗ್ರಾಸವಾಗಿದೆ. ''ಪ್ಯಾಲೆಸ್ತೀನಿಯರ ಹಕ್ಕುಗಳ ಪರವಾಗಿದ್ದ ತನ್ನ ಐತಿಹಾಸಿಕ ನಿಲುವಿಗಿಂತ, ಇಸ್ರೇಲ್ ಜತೆಗಿನ ನಿಕಟ ಸಂಬಂಧಕ್ಕೆ ಭಾರತ ಹೆಚ್ಚಿನ ಆದ್ಯತೆ ನೀಡುತ್ತಿದೆ,'' ಎಂದು ಸೋನಿಯಾ ಗಾಂಧಿ ಆರೋಪ ಮಾಡಿದ್ದಾರೆ. ಸಂಘರ್ಷದಲ್ಲಿ 20,000 ಕ್ಕೂ ಹೆಚ್ಚು ಮಕ್ಕಳು ಮೃತಪಟ್ಟಿದ್ದು, 44,000 ಕ್ಕೂ ಹೆಚ್ಚು ಜನ ಗಾಯಗೊಂಡಿದ್ದಾರೆ ಎಂದು ಅವರು ಆತಂಕ ವ್ಯಕ್ತಪಡಿಸಿದ್ದಾರೆ. ಲೇಖನಕ್ಕೆ ಕೌಂಟರ್ ನೀಡಿರುವ ಬಿಜೆಪಿ ವಕ್ತಾರ ಶೆಹಜಾದ್ ಪೂನಾವಾಲಾ, ''ಕಾಂಗ್ರೆಸ್ ವಿದೇಶಾಂಗ ನೀತಿಯ ವಿಷಯದಲ್ಲೂ ವೋಟ್ ಬ್ಯಾಂಕ್ ರಾಜಕಾರಣ ಮಾಡುತ್ತಿದೆ. ಭಾರತವು ಗಾಜಾ ಮತ್ತು ಪ್ಯಾಲೆಸ್ತೀನ್ ವಿಷಯದಲ್ಲಿ ತನ್ನ ನಿಲುವನ್ನು ಹಲವು ಬಾರಿ ಸ್ಪಷ್ಟಪಡಿಸಿದೆ,'' ಎಂದಿದ್ದಾರೆ.

ಮತಾಂತರ ಆದವರು ಮುಸ್ಲಿಂ ಮಾತ್ರ, ಅಲ್ಲಿ ಜಾತಿ ಪ್ರಶ್ನೆ ಇಲ್ಲ ಎಂದು ಸ್ಪಷ್ಟಪಡಿಸಿದ ನ್ಯಾಯಾಲಯ

ಮತಾಂತರಿಗಳು ಮೀಸಲಿಗೆ ಅರ್ಹರಲ್ಲ: ಮದ್ರಾಸ್ ಹೈಕೋರ್ಟ್

ಚೆನ್ನೈ: ಹಿಂದೂ ಧರ್ಮದಿಂದ ಇಸ್ಲಾಂಗೆ ಮತಾಂತರಗೊಂಡವರು ಹಿಂದುಳಿದ ವರ್ಗ (ಬಿಸಿ) ಕೋಟಾದಡಿ ಮೀಸಲಿಗೆ ಅರ್ಹರಲ್ಲ ಎಂದು ಮದ್ರಾಸ್ ಹೈಕೋರ್ಟ್‌ನ ಮದುರೈ ಪೀಠ ಚಾರಿತ್ರಿಕ ತೀರ್ಪು ನೀಡಿದೆ.

ಇಸ್ಲಾಂಗೆ ಮತಾಂತರಗೊಂಡವರು ಮುಸ್ಲಿಮರು ಮಾತ್ರವೇ ಹೊರತು, ಹಿಂದಿನ ಧರ್ಮ, ಜಾತಿಗೂ ಸಂಬಂಧ ಇರುವುದಿಲ್ಲ ಎಂದು ಹೇಳಿರುವ ನ್ಯಾಯಾಲಯ, ಮತಾಂತರಗೊಂಡವರಿಗೆ ಹಿಂದುಳಿದ ವರ್ಗಗಳ ಅಡಿ ಮೀಸಲು ನೀಡುವ ತಮಿಳುನಾಡು ಸರಕಾರದ 2024ರ ಆದೇಶವನ್ನು ಅಸಾಂವಿಧಾನಿಕ ಎಂದು ಘೋಷಿಸಿದೆ. ಇಸ್ಲಾಂಗೆ ಮತಾಂತರೊಂಡಿದ್ದ ತೂತುಕುಡಿ ಜಿಲ್ಲೆಗೆ ಸೇರಿದ ವ್ಯಕ್ತಿಯೊಬ್ಬರು ಬಿಸಿ ವರ್ಗದ ಪ್ರಮಾಣಪತ್ರ ಕೋರಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾ.ಜಿ.ಆರ್. ಸ್ವಾಮಿನಾಥನ್ ಹಾಗೂ ನ್ಯಾ.ಪಿ.ಬಿ.ಬಾಲಾಜಿ ಅವರಿದ್ದ ಮದುರೈ ವಿಭಾಗೀಯ ಪೀಠ, ''ಸಂವಿಧಾನದ 25ನೇ ವಿಧಿಯ ಅಡಿಯಲ್ಲಿ ಧರ್ಮವನ್ನು ಬದಲಾಯಿಸುವುದು ಮೂಲಭೂತ ಹಕ್ಕಾಗಿದ್ದರೂ, ಧರ್ಮವನ್ನು ಬದಲಾಯಿಸಿದ ನಂತರವೂ ಮೀಸಲು ಸೌಲಭ್ಯಗಳನ್ನು ಪಡೆಯುವುದಕ್ಕೆ ಸಂವಿಧಾನಾತ್ಮಕವಾಗಿ ಅವಕಾಶವಿಲ್ಲ,'' ಎಂದು ಹೇಳಿದೆ.

ಇಸ್ಲಾಂನಲ್ಲಿ ಜಾತಿ ವರ್ಗೀಕರಣ ಇಲ್ಲ: ಹಿಂದೂ ವ್ಯಕ್ತಿಯೊಬ್ಬರು ಇಸ್ಲಾಂಗೆ ಮತಾಂತರಗೊಂಡಾಗ ಆತ ಕೇವಲ ಮುಸಲ್ಮಾನನಾಗುತ್ತಾನೆ. ಮುಸ್ಲಿಂ ಸಮಾಜದಲ್ಲಿ ಆತನ ಸ್ಥಾನವನ್ನು ಮತಾಂತರಗೊಳ್ಳುವ ಮೊದಲು ಯಾವ ಜಾತಿಗೆ ಸೇರಿದವರು ಎಂಬುದರ ಮೇಲೆ ನಿರ್ಧರಿಸುವುದಿಲ್ಲ, ಯಾವುದೇ ಜಾತಿ ಅಥವಾ ಉಪಜಾತಿಗಳ ಸದಸ್ಯರು ಇಸ್ಲಾಂಗೆ ಮತಾಂತರಗೊಂಡ ಬಳಿಕ ಮೂಲ ಜಾತಿಯ ಸದಸ್ಯರಾಗಿ ಉಳಿಯುವುದಿಲ್ಲ ಎಂಬ 1951ರಲ್ಲಿ ಹೈಕೋರ್ಟ್ ನೀಡಿದ ಆದೇಶ ಉಲ್ಲೇಖಿಸಿದ ನ್ಯಾಯಪೀಠ, ''ಇಸ್ಲಾಂನಲ್ಲಿ ಎಲ್ಲಾ ಮನುಷ್ಯರನ್ನು ಸಮಾನರು ಎಂದು ಗುರುತಿಸುತ್ತದೆ. ಜಾತಿಯ ಆಧಾರದ ಮೇಲೆ ಹಿಂದುಳಿದವರು ಅಥವಾ ಮುಂದುವರಿದವರು ಎಂಬುದಾಗಿ ವರ್ಗೀಕರಿಸುವುದಿಲ್ಲ, ವರ್ಗ ಆಧಾರಿತ ವ್ಯವಸ್ಥೆ ಇಸ್ಲಾಂನ ಮೂಲಭೂತ ತತ್ವಗಳಿಗೆ ವಿರುದ್ಧವಾಗಿದೆ,'' ಎಂದು ವಿಶ್ಲೇಷಿಸಿದೆ.

ಪ್ರಕರಣದ ಹಿನ್ನೆಲೆ: ಹಿಂದೂ ಧರ್ಮದಿಂದ ಇಸ್ಲಾಂಗೆ ಮತಾಂತರಗೊಂಡಿದ್ದ ವ್ಯಕ್ತಿಯೊಬ್ಬ 2016ರಲ್ಲಿ ಮುಸ್ಲಿಂ ಪದ್ಧತಿಗಳ ಪ್ರಕಾರ ವಿವಾಹವಾದರು. ಇಬ್ಬರು ಮಕ್ಕಳು ಪಡೆದ ವ್ಯಕ್ತಿ, ಮುಸ್ಲಿಂ ಸಮುದಾಯದ ಲೆಬ್ಬೈ ಪ್ರಮಾಣಪತ್ರಕ್ಕೆ ಅರ್ಜಿ ಸಲ್ಲಿಸಿದರು. ಕಾಯಥಾರ್ ತಹಶೀಲ್ದಾರ್ ಅರ್ಜಿಯನ್ನು ತಿರಸ್ಕರಿಸಿದರು. ಹೈಕೋರ್ಟ್ ಮೆಟ್ಟಿಲೇರಿದ ವ್ಯಕ್ತಿ, ಮುಸ್ಲಿಂ ಸಮುದಾಯದ ನಿಯಮಗಳನ್ನು ಪಾಲಿಸುತ್ತಿರುವೆ. ಸ್ಥಳೀಯ ಸಮುದಾಯ ಒಪ್ಪಿಕೊಂಡು ಲೆಬ್ಬೈ ಪ್ರಮಾಣಪತ್ರ ನೀಡಿದೆ. ಕಂದಾಯ ಇಲಾಖೆ ಅಧಿಕಾರಿಗೆ ನಮ್ಮ ಸಮುದಾಯ ನೀಡಿದ ಪ್ರಮಾಣಪತ್ರವನ್ನು ತಿರಸ್ಕರಿಸುವ ಹಕ್ಕಿಲ್ಲ ಎಂದು ವಾದಿಸಿದರು. ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠ, ''ಧರ್ಮವನ್ನು ಬದಲಾಯಿಸುವುದು ಮೂಲಭೂತ ಹಕ್ಕಾದರೂ, ಧರ್ಮ ಬದಲಾವಣೆ ಬಳಿಕವೂ ಮೀಸಲು ಸೌಲಭ್ಯ ಪಡೆಯುವುದು ಕಾನೂನುಬದ್ಧವಾಗಿ ಅಮಾನ್ಯವಾಗಿದೆ,'' ಎಂದು ಷರಾ ಬರೆದಿದೆ.

2024ರ ಆದೇಶ ಸಂವಿಧಾನ ಬಾಹಿರ

ಮುಸ್ಲಿಂ ಸಮಾಜದಲ್ಲಿ ರಾವತ್, ಮರಕ್ಕಾಯರ್ ಅಥವಾ ಡೆಕ್ಕನಿ ಮುಂತಾದ ವರ್ಗಗಳಿವೆ. ಈ ವರ್ಗಗಳನ್ನು ಹುಟ್ಟಿನಿಂದಲೇ ನಿರ್ಧರಿಸಲಾಗುತ್ತದೆ. ಒಬ್ಬ ವ್ಯಕ್ತಿ ಬೇರೆ ಧರ್ಮಕ್ಕೆ ಮತಾಂತರಗೊಂಡ ಬಳಿಕವೂ ಮೂಲ ಜಾತಿ ಅಥವಾ ವರ್ಗದ ಭಾಗವಾಗಲು ಸಾಧ್ಯವಿಲ್ಲ, ತಮಿಳುನಾಡು ಕಾನೂನು ಅಡಿಯಲ್ಲಿ ಹಿಂದುಳಿದ ವರ್ಗದ ಸ್ಥಾನಮಾನ ನೀಡಲಾದ ಅನ್ಸಾರ್, ಡೆಕ್ಕನಿ, ದುಡೇಕುಲಾ, ಲಬ್ಬೈ, ಮಾಪ್ಪಿಲ್ಲ, ಶೇಖ್, ಸೈಯದ್ ಸಮುದಾಯಗಳಿಗೆ ಮಾತ್ರ ಮೀಸಲಿಗೆ ಅರ್ಹ. ಈ ಸಮುದಾಯಗಳಲ್ಲಿ ಜನಿಸದ ವ್ಯಕ್ತಿಗಳು ಹಿಂದುಳಿದ ವರ್ಗದ ಅಡಿಯಲ್ಲಿ ಪ್ರಮಾಣಪತ್ರ ಪಡೆಯುವುದು ಕಾನೂನು ಬಾಹಿರ ಎಂದು ನ್ಯಾಯಾಲಯ ಹೇಳಿದೆ.

ತಮಿಳುನಾಡು ಸರಕಾರ 2024ರಲ್ಲಿ ಹೊರಡಿಸಿದ ಸರಕಾರದ ಅಧಿಸೂಚನೆಯಂತೆ ಹಿಂದುಳಿದ ವರ್ಗಗಳು, ಅತ್ಯಂತ ಹಿಂದುಳಿದ ವರ್ಗಗಳು, ಅಧಿಸೂಚಿತ ಸಮುದಾಯಗಳು ಅಥವಾ ಪರಿಶಿಷ್ಟ ಜಾತಿಗಳಿಂದ ಇಸ್ಲಾಂಗೆ ಮತಾಂತರಗೊಂಡವರಿಗೆ ಮೀಸಲು ಪ್ರಯೋಜನ ನೀಡಲು ಹಿಂದುಳಿದ ವರ್ಗದವರು ಎಂದು ಪರಿಗಣಿಸಬಹುದು. ಇಸ್ಲಾಂಗೆ ಮತಾಂತರಗೊಂಡವರನ್ನು

ಹಿಂದುಳಿದವರು ಎಂದು ಪರಿಗಣಿಸಲು ಮುಸ್ಲಿಂ ಸಮುದಾಯದ ಅಧಿಸೂಚಿತ ಏಳು ಪಂಗಡಗಳಲ್ಲಿ ಒಂದಕ್ಕೆ ಸೇರಿದವರು ಎಂಬ ಪ್ರಮಾಣಪತ್ರವನ್ನು ನೀಡಬಹುದು ಎಂದು ಆದೇಶಿಸಿತ್ತು. ಇದೇ ವೇಳೆ ಮುಂದುವರಿದ ಸಮುದಾಯದಿಂದ ಇಸ್ಲಾಂಗೆ ಮತಾಂತರಗೊಂಡವರಿಗೆ ಹಿಂದುಳಿದ ವರ್ಗದ ಪ್ರಮಾಣಪತ್ರ ನೀಡಲು ಬರುವುದಿಲ್ಲ, ಮೂಲ ಧರ್ಮದಲ್ಲಿ ಮೀಸಲು ಪ್ರಯೋಜನ ಪಡೆಯುತ್ತಿದ್ದವರು ಮಾತ್ರ ಇಸ್ಲಾಂಗೆ ಮತಾಂತರಗೊಂಡ ಬಳಿಕವೂ ಮೀಸಲು ಸೌಲಭ್ಯ ಪಡೆಯಲು ಅರ್ಹರು ಎಂದು ಸರಕಾರದ ಆದೇಶದಲ್ಲಿ ತಿಳಿಸಲಾಗಿದೆ.

ಗಾಯಾಳು ಮನಿಕಿ ಯಾತನೆಗೆ ಅನಂತ್ ವಂತಾರದಲ್ಲಿ ಮುಕ್ತಿ

ಜಾಮ್‌ನಗರ: ವಯೋಸಹಜ ಆರೋಗ್ಯ ಸಮಸ್ಯೆ, ಗಾಯಗಳ ಸೋಂಕು, ಒಂದು ಕಣ್ಣಿನ ದೃಷ್ಟಿ ದೋಷ, ನಿರ್ಜಲೀಕರಣದಿಂದ ಬಳಲುತ್ತಿದ್ದ ಮನಿಕಿ ಎಂಬ 48 ವರ್ಷದ ಹೆಣ್ಣಾನೆಗೆ 'ವಂತಾರ' ಹೊಸ ಚೈತನ್ಯ ನೀಡಿದೆ. ಮುಂಗಾಲಿನಲ್ಲಿ ಆಗಿದ್ದ ದೊಡ್ಡ ವ್ರಣ ಗುಣಮುಖವಾಗಿ ಮನಿಕಿ ಚುರುಕಿನ ಹೆಜ್ಜೆಗಳನ್ನು ಹಾಕುತ್ತಿದೆ.

ಗಾಯ ಹಾಗೂ ಇತರ ಸಮಸ್ಯೆಗಳಿಂದ ಅಸ್ಸಾಂ ಹೆದ್ದಾರಿಯೊಂದರಲ್ಲಿ ಮನಿಕಿ ಕುಂಟುತ್ತ ಸಾಗುತ್ತಿರುವ ದೃಶ್ಯ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿತ್ತು. ಇದನ್ನು ಕಂಡವರು ಅದರ ಆರೈಕೆಗೆ ದೊಡ್ಡ ಅಭಿಯಾನ ನಡೆಸಿದರು. ಕೊನೆಗೆ ಆ ಆನೆಯನ್ನು ನೋಡಿಕೊಳ್ಳುತ್ತಿದ್ದ ರುಚಿ ಚೇತಿಯಾ ಸುಪ್ರೀಂ ಕೋರ್ಟ್ ನೇಮಿಸಿದ ವನ್ಯಜೀವಿಗಳ ರಕ್ಷಣೆ ಮತ್ತು ಆರೈಕೆ ಸಮಿತಿಗೆ ಪತ್ರ ಬರೆದರು. ಸುಧಾರಿತ ಚಿಕಿತ್ಸೆ ಮತ್ತು ದೀರ್ಘಕಾಲೀನ ಆರೈಕೆಗಾಗಿ ಆನೆಯನ್ನು 'ವಂತಾರ'ಕ್ಕೆ ವರ್ಗಾಯಿಸುವಂತೆ ವಿನಂತಿಸಿದರು. ಅವರ ಮನವಿಗೆ ಮಾನ್ಯತೆ ಸಿಕ್ಕಿತು. ಮನಿಕಿಯನ್ನು ವಂತಾರಕ್ಕೆ ಸಾಗಿಸಲಾಯಿತು.

ಈ ಕುರಿತು ವಂತಾರ ವಕ್ತಾರರು ಮಾತನಾಡಿ, ''ಮನಿಕಿಯ ಅಸಹಜ ನಡಿಗೆ, ಕುಂಟುವಿಕೆ, ನಿರ್ಜಲೀಕರಣ, ಕ್ಷೀಣಿಸಿದ ದೈಹಿಕ ಸ್ಥಿತಿ, ಗಾಯಗಳ ಸೋಂಕು ಮತ್ತು ಇತರ ಆರೋಗ್ಯ ಸಮಸ್ಯೆಗಳಿಂದಾಗಿ ವ್ಯವಸ್ಥಿತ ದೀರ್ಘಕಾಲೀನ ಚಿಕಿತ್ಸಾ ಯೋಜನೆಯು ಅತ್ಯಗತ್ಯವಾಗಿದೆ. ಔಷಧೋಪಚಾರ, ಹೈಡ್ರೋಥೆರಪಿ (ಜಲ ಚಿಕಿತ್ಸೆ) ಮತ್ತು ಅಕ್ಯುಪಂಕ್ಚರ್ ಮೂಲಕ ಅವಳ ನೋವನ್ನು ಉಪಶಮನಗೊಳಿಸಲಾಗುತ್ತಿದೆ,'' ಎಂದಿದ್ದಾರೆ.

ಮನಿಕಿಯ ಚೇತರಿಕೆ ಕೇವಲ ಔಷಧಗಳಿಗೆ ಮಾತ್ರ ಸೀಮಿತವಾಗಿಲ್ಲ, ಗಾಯಗೊಂಡ ಅವಳ ಕಾಲಿನ ಮೇಲಿನ ಒತ್ತಡವನ್ನು ಕಡಿಮೆ ಮಾಡಲು ಮೃದುವಾದ ಮಣ್ಣು ಮತ್ತು ನೈಸರ್ಗಿಕ ನೆಲದ ವ್ಯವಸ್ಥೆ, ಅಂಗಾಂಗಗಳ ಮೇಲಿನ ಭಾರವನ್ನು ತಗ್ಗಿಸಲು ನೈಸರ್ಗಿಕ ಕೊಳಗಳ ಸೌಲಭ್ಯ ಮತ್ತು ಇತರ ಆನೆಗಳ ಒಡನಾಟದೊಂದಿಗೆ ಅವಳಿಗೆ ಪ್ರತಿದಿನ ಅಗತ್ಯವಿರುವ ಕಾಳಜಿ, ಆರಾಮ ಮತ್ತು ಘನತೆಯ ಜೀವನ ಸಿಗಲಿದೆ.

Bennett & Coleman
THE TIMES OF INDIA
www.vijaykarnataka.com
ಸಂಪುಟ: 27 | ಸಂಚಿಕೆ: 178
ಭಾನುವಾರ,28 ಜೂನ್ 2026 | ಪುಟಗಳು: 16 | ಬೆಲೆ: ₹ 5.00 (ವಿಕ ಮನಿ ಜತೆ ₹10.00)
c
ಬೆಂಗಳೂರು | ಮೈಸೂರು | ಶಿವಮೊಗ್ಗ | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ
PRIDE OF YOUNG KARNATAKA

VK ವಿಜಯ ಕರ್ನಾಟಕ

ಸರಕಾರಿ ಆಸ್ಪತ್ರೆಯಲ್ಲಿ ಜನಿಸಿದ ಮಕ್ಕಳಿಗೆ 1 ಗ್ರಾಂ ಚಿನ್ನದ ಉಂಗುರ: ಆದೇಶಕ್ಕೆ ಸಿಎಂ ವಿಜಯ್ ಸಹಿ

ಬೆಂಗಳೂರು ದರ

₹13,195 1 ಗ್ರಾಂ ದರ 22 ಕ್ಯಾರೆಟ್ (ಆಭರಣ ಚಿನ್ನ)

₹14,395 1 ಗ್ರಾಂ ದರ 24 ಕ್ಯಾರೆಟ್ (ಗಟ್ಟಿ ಚಿನ್ನ)

₹2,40,000 1 ಕೆಜಿ ಬೆಳ್ಳಿ ದರ (ಜಿಎಸ್‌ಟಿ ಪ್ರತ್ಯೇಕ)

ಹೈದರಾಬಾದ್‌ನ ರಸ್ತೆಗೆ ಟ್ರಂಪ್ ಹೆಸರು: ಭಾರತದ ಬಗ್ಗೆ ಅಮೆರಿಕ ಅಧ್ಯಕ್ಷರ ಪ್ರಶಂಸೆ

ವಿಕ ಹೊಂಗಿರಣ

ನಮ್ಮ ಮಾತು ಹೇಗಿರಬೇಕೆಂದರೆ,
ಬೇರೆಯವರು ಮತ್ತಷ್ಟು ಕೇಳಲು
ಬಯಸುವಂತಿರಬೇಕು.
ನಮ್ಮ ಆಲಿಕೆ ಹೇಗಿರಬೇಕೆಂದರೆ,
ಬೇರೆಯವರನ್ನು ಮತ್ತಷ್ಟು
ಮಾತನಾಡಲು
ಹುರಿದುಂಬಿಸುವಂತಿರಬೇಕು.

-ಅನಾಮಿಕ

SBI
The banker to every Indian
ಎಸ್‌ಬಿಐ ಡಿಜಿಟಲ್ ಎಂಎಸ್‌ಎಂಇ ಸಾಲಗಳು
• ರೂ. 5 ಕೋಟಿವರೆಗೆ ಸಾಲಗಳು
• ರೂ. 50 ಲಕ್ಷದವರೆಗಿನ ಸಾಲಗಳ ತ್ವರಿತ ಡಿಜಿಟಲ್ ಮಂಜೂರಾತಿ
• ಅವಧಿ: 10 ವರ್ಷಗಳವರೆಗೆ
• ಆಕರ್ಷಕ ಬಡ್ಡಿದರಗಳು
• ಕ್ರೆಡಿಟ್ ಗ್ಯಾರೆಂಟಿ ಸುರಕ್ಷಿತ ಸಾಲಗಳಿಗೆ ಶೂನ್ಯ ಆಧಾರ
ಈಗಲೇ ಅರ್ಜಿ ಸಲ್ಲಿಸಲು ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ
*ಷರತ್ತುಗಳು ಅನ್ವಯಿಸುತ್ತವೆ
BANKING AS EASY AS 1-2-3-4
1800 1234 1800 2100

Vencobb
ಫಾರಂ ಧಾರಣೆ ಮಾರಾಟದ ಪ್ರತಿ ಕೆಜಿಗೆ ಸಲಹೆಯ ಬೆಲೆ
₹130/- ಕೋಲಾರ 130/- ತುಮಕೂರು 128/-
ರೀಟೇಲ್ ಮಾರಾಟದ ದರ ಪ್ರತಿ ಕೆಜಿಗೆ ಬೆಲೆ ₹170/-
ಕೋಲಾರ 170/- ತುಮಕೂರು 168/-
ವಿಥ್ ಸ್ಕಿನ್ ₹240/- ಕೋಲಾರ 240/- ತುಮಕೂರು 237/-
ವಿಥೌಟ್ ಸ್ಕಿನ್ ₹274/- ಕೋಲಾರ 274/- ತುಮಕೂರು 270/-
ಗ್ರಾಹಕರಿಗೋಸ್ಕರ ನೀಡಲಾಗಿದೆ

ಬಿಜೆಪಿ ರಾಜ್ಯಾಧ್ಯಕ್ಷರ ಕೈ ಸೇರಿದ ಅಡ್ಡಮತದಾನ ವರದಿ »02

ವಿವಾಹಿತ ಪುತ್ರಿಯೂ ಅನುಕಂಪ ನೌಕರಿಗೆ ಅರ್ಹ »04

ಲಕ್ಷಾಂತರ ಆಸ್ತಿಗಳ ಆರ್‌ಟಿಸಿ ಕಾಲಂ 11ರಲ್ಲಿ ಹೈಕೋರ್ಟ್ ತೀರ್ಪಿನ ಉಲ್ಲೇಖ
ಸಾಲ ಪಡೆಯಲು, ಮಾರಾಟ ಮಾಡಲು ವಕ್ಫ್ ಮಂಡಳಿ ಅನುಮತಿ ಅಗತ್ಯ!

ರೈತರ ಬೆನ್ನತ್ತಿದ ವಕ್ಫ್ ಭೂತ

■ **ಸಂತೋಷ್ ಕಾಚಿನಕಟ್ಟೆ** ಶಿವಮೊಗ್ಗ
lakshmikanthakumar.boraiah@timesofindia.com

ಒಂದೂವರೆ ವರ್ಷದ ಹಿಂದೆ ಉತ್ತರ ಕರ್ನಾಟಕದಲ್ಲಿ ರೈತರ ಜಮೀನಿನ ಖಾತೆಗಳಿಗೆ ಕುತ್ತು ತಂದಿದ್ದ ವಕ್ಫ್ ಆಸ್ತಿ ವಿವಾದ ಸದ್ದಿಲ್ಲದೆ ರಾಜ್ಯದೆಲ್ಲೆಡೆಗೆ ವಿಸ್ತರಿಸಿದ್ದು, ಲಕ್ಷಾಂತರ ರೈತರ ಭೂಮಿ ಹಕ್ಕಿಗೆ ಆಪತ್ತು ಎದುರಾಗಿದೆ.

ಕಂದಾಯ ಭೂಮಿಯಲ್ಲಿ ಸಾಗುವಳಿ ಮಾಡಿ ಭೂ ಸುಧಾರಣೆ ಕಾಯಿದೆ, ಉಳುವವನೆ ಹೊಲದೊಡೆಯ, ಬಗರ್ ಹುಕುಂ ಸೇರಿದಂತೆ ವಿವಿಧ ಯೋಜನೆಗಳಡಿ ಭೂಮಿ ಹಕ್ಕು ಪಡೆದುಕೊಂಡ ಹಲವು ದಶಕಗಳ ಬಳಿಕ ರೈತರ ಖಾತೆಯ ಭೂಮಿಗಳಿಗೆ ಹೊಸ ತಗಾದೆ ತಗುಲಿಕೊಂಡಿದೆ. ಈ ಅವಧಿಯಲ್ಲಿ ಹಲವು ಜಮೀನುಗಳು ಮಾರಾಟವಾಗಿವೆ ಮತ್ತು ಹಕ್ಕುದಾರಿಕೆಯೂ ಬದಲಾಗಿದೆ. ಇದುವರೆಗೆ ಖಾಲಿ ಇದ್ದ ರೈತರ ಆರ್‌ಟಿಸಿಯ 11ನೇ ಕಾಲಂನ ಋಣಗಳು ಉಪ ಕಾಲಂನಲ್ಲಿ ಹೊಸ ಉಲ್ಲೇಖ ಕಂಡು ಬಂದಿದ್ದು ರೈತರು ಆತಂಕಗೊಂಡಿದ್ದಾರೆ. ಮ್ಯುಟೇಷನ್ ರಿಜಿಸ್ಟರ್ ಮೂಲಕ 'ಕರ್ನಾಟಕ ಉಚ್ಚ ನ್ಯಾಯಾಲಯದ ಕಲಬುರಗಿ ಪೀಠದ ಡಬ್ಲ್ಯೂಪಿ ನಂ.201023/2024 ದಿನಾಂಕ 01-10-2024ರ ಆದೇಶದಂತೆ ಭೂ ನ್ಯಾಯಮಂಡಳಿ ಪ್ರಕರಣ ಸಂಖ್ಯೆ ಎಲ್‌ಆರ್ ಎಫ್‌ಟಿ/ಸಿಆರ್:7/1974-75' ಎಂದು ನಮೂದಿಸಲಾಗಿದೆ. ಇದರ ಅರ್ಥ ಏನೆಂಬುದು ರೈತರಿಗೆ ಇರಲಿ, ಕಂದಾಯ ಇಲಾಖೆಯ ಗ್ರಾಮ ಲೆಕ್ಕಿಗ, ಕಂದಾಯ ನಿರೀಕ್ಷಕರಿಗೂ ಗೊತ್ತಿಲ್ಲ. ತಮ್ಮ ಒಡೆತನದ ಭೂಮಿ ಆರ್‌ಟಿಸಿಯಲ್ಲಿ ಹೊಸ ನಮೂದು ಏನೆಂದು ಅನುಮಾನಗೊಂಡು ಉಲ್ಲೇಖಿತ ಕಲಬುರಗಿ ಪೀಠದ ಆದೇಶವನ್ನು ತೆಗೆಸಿ ನೋಡಿದಾಗ ಆಘಾತಕಾರಿ ಸಂಗತಿ ಗೊತ್ತಾಗಿದೆ. ಆರ್‌ಟಿಸಿಯ ಋಣಗಳು ಕಾಲಂನಲ್ಲಿ ನಮೂದಾಗಿರುವ ಈ ಉಲ್ಲೇಖದ ಅರ್ಥ ''ಆಸ್ತಿಯ ಜಂಟಿ ಹಕ್ಕುದಾರಿಕೆಯನ್ನು ಸೂಚಿಸುತ್ತದೆ. ಸಾಲ, ಆಸ್ತಿ ವರ್ಗಾವಣೆ ಅಥವಾ ಮಾರಾಟದಲ್ಲಿ ವಕ್ಫ್ ಬೋರ್ಡ್‌ನ ಅನುಮತಿ ಪಡೆಯಬೇಕಾಗುತ್ತದೆ,'' ಎಂದು ಕೆಲ ಅಧಿಕಾರಿಗಳು ಹೇಳುತ್ತಿದ್ದಾರೆ.

3,00,000 ರಾಜ್ಯದ ಆರ್‌ಟಿಸಿಗಳಲ್ಲಿ ಹೈಕೋರ್ಟ್ ತೀರ್ಪು ಉಲ್ಲೇಖದ ಗುರಿ

1,80,000 ಆರ್‌ಟಿಸಿಗಳಲ್ಲಿ ಈಗಾಗಲೇ ನಮೂದು (1974ರ ಫೆ. 2ರ ಪೂರ್ವದಲ್ಲಿ ವಕ್ಫ್ ಒಡೆತನದಲ್ಲಿದ್ದ ಎಲ್ಲ ಆಸ್ತಿಗಳಿಗೂ ಅನ್ವಯ)

ಯಾವ ಜಿಲ್ಲೆಗಳಲ್ಲಿ ಗರಿಷ್ಠ?

ಉತ್ತರ ಕನ್ನಡ	73,000
ದಕ್ಷಿಣ ಕನ್ನಡ	48,000
ಶಿವಮೊಗ್ಗ	38,000
ಬೆಂಗಳೂರು ದಕ್ಷಿಣ	18,000
ಕಲಬುರಗಿ	17,000
ಬಾಗಲಕೋಟೆ	17,000

ಜಂಟಿ ಹಕ್ಕುದಾರಿಕೆ: ಪೀಠದ ಈ ತೀರ್ಪಿನ ಉಲ್ಲೇಖವನ್ನು 1974ರ ಫೆ. 2ರ ಪೂರ್ವದಲ್ಲಿ ವಕ್ಫ್ ಒಡೆತನದಲ್ಲಿದ್ದ ಎಲ್ಲ ಆಸ್ತಿಗಳಿಗೂ ಅನ್ವಯವಾಗುವಂತೆ ರಾಜ್ಯದ 31 ಜಿಲ್ಲೆಗಳ ಸುಮಾರು 3 ಲಕ್ಷ ರೈತರ ಖಾತೆ ಭೂಮಿಗಳ ಆರ್‌ಟಿಸಿಯ ಕಾಲಂ 11ರಲ್ಲಿ ನಮೂದಿಸುವ ಪ್ರಯತ್ನ ಕಂದಾಯ ಇಲಾಖೆಯಿಂದ ನಡೆದಿದೆ. ಏಪ್ರಿಲ್‌ನಿಂದ ಈ ಪ್ರಕ್ರಿಯೆ ಆರಂಭವಾಗಿದ್ದು ಈಗಾಗಲೆ 1.80 ಲಕ್ಷ ಖಾತೆಗಳ ಆರ್‌ಟಿಸಿಗಳಲ್ಲಿ ಈ ಉಲ್ಲೇಖ ನಮೂದಾಗಿದೆ. ಇನ್ನೂ 1.20 ಲಕ್ಷ ಆರ್‌ಟಿಸಿಗಳಲ್ಲಿ ನಮೂದಿಸುವಿಕೆ ಪ್ರಗತಿಯಲ್ಲಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಅತಿಹೆಚ್ಚು 73 ಸಾವಿರ, ದಕ್ಷಿಣ ಕನ್ನಡ ಜಿಲ್ಲೆಯ 48 ಸಾವಿರ, ಶಿವಮೊಗ್ಗ ಜಿಲ್ಲೆಯ 38 ಸಾವಿರ ಆರ್‌ಟಿಸಿಗಳಲ್ಲಿ ವಕ್ಫ್ ಆಸ್ತಿ ವಿವಾದ ತಗುಲಿ ಹಾಕಿಕೊಂಡಿದೆ. »06

ಹಸಿರು ಬೆಂಗಳೂರು
ಸೃಷ್ಟಿಗಾಗಿ ಗಿನ್ನೆಸ್ ದಾಖಲೆ
12 ಗಂಟೆಯಲ್ಲಿ 15 ಲಕ್ಷ ಸಸಿ, ಇಂದೋರ್ ದಾಖಲೆ ಬ್ರೇಕ್

■ **ವಿಕ ಸುದ್ದಿಲೋಕ** ಬೆಂಗಳೂರು

ಬೆಂಗಳೂರಿನ ಹಸಿರೀಕರಣಕ್ಕೆ ಉತ್ತೇಜನ ನೀಡಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ಹಮ್ಮಿಕೊಂಡಿದ್ದ ಅಭಿಯಾನದಲ್ಲಿ ಕೇವಲ 12 ಗಂಟೆಗಳಲ್ಲಿ 15 ಲಕ್ಷ ಸಸಿಗಳನ್ನು ನೆಡುವ ಮೂಲಕ ಗಿನ್ನೆಸ್ ದಾಖಲೆ ನಿರ್ಮಿಸಲಾಗಿದೆ.

ಜಾಗತಿಕ ಮಟ್ಟದಲ್ಲಿ 'ಸಿಲಿಕಾನ್ ಸಿಟಿ' ಎಂದು ಹೆಸರಾಗಿರುವ ಬೆಂಗಳೂರು ನಗರವನ್ನು ಮತ್ತೆ 'ಗಾರ್ಡನ್ ಸಿಟಿ'ಯನ್ನಾಗಿ ಪರಿವರ್ತಿಸಲು ಬೃಹತ್ ಹೆಜ್ಜೆ ಇಟ್ಟಿರುವ ಬಿಡಿಎ, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾರ್ಗದರ್ಶನದಲ್ಲಿ ನಾಡಪ್ರಭು ಕೆಂಪೇಗೌಡ ಜಯಂತಿಯ ಅಂಗವಾಗಿ ನಗರದಲ್ಲಿ 15 ಲಕ್ಷ ಗಿಡ ನೆಡುವ ಅಭಿಯಾನ ಹಮ್ಮಿಕೊಂಡಿತ್ತು. ಈ ಕಾರ್ಯಕ್ರಮದಲ್ಲಿ ಬಿಡಿಎ ಅಧಿಕಾರಿಗಳು, ಸಿಬ್ಬಂದಿ, ಅರಣ್ಯ ಇಲಾಖೆ, ಸರಕಾರೇತರ ಸಂಘ-ಸಂಸ್ಥೆಗಳು, ಶಾಲಾ-ಕಾಲೇಜು ವಿದ್ಯಾರ್ಥಿಗಳು, ಸ್ವಯಂ ಸೇವಕರು ಸೇರಿದಂತೆ ಸುಮಾರು 60 ಸಾವಿರ ಮಂದಿ ಭಾಗವಹಿಸಿದ್ದರು. »06

ಬೆಂಗಳೂರಿನ ಕೆಂಪೇಗೌಡ ಬಡಾವಣೆಯಲ್ಲಿ ಸಿಎಂ ಡಿ.ಕೆ.ಶಿವಕುಮಾರ್ ಗಿಡ ನೆಟ್ಟರು.

15 ಲಕ್ಷ ದೇಸಿ ಸಸಿಗಳನ್ನು ನೆಡುವ ಕಾರ್ಯಕ್ರಮವು ಕರ್ನಾಟಕದ ಸುಸ್ಥಿರ ಅಭಿವೃದ್ಧಿಯ ಪಯಣದಲ್ಲಿ ಐತಿಹಾಸಿಕ ಮೈಲುಗಲ್ಲು. ಬೆಂಗಳೂರು ಬೆಳೆದಂತೆ, ಹಸಿರು ಹೊದಿಕೆ ಸಂರಕ್ಷಣೆ ಮತ್ತು ವಿಸ್ತರಣೆ ಮಾಡುವುದು ನಮ್ಮ ಸರಕಾರದ ಆದ್ಯತೆ. ನಗರಾಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆಯ ನಡುವೆ ಸಮತೋಲನ ಬದ್ಧತೆಯಾಗಿದೆ. ಇಂದು ನೆಡಲಾದ ಪ್ರತಿಯೊಂದು ಸಸಿಯೂ ಶುದ್ಧ ಗಾಳಿ, ಉತ್ತಮ ಪರಿಸರ ಸಮತೋಲನ ಹಾಗೂ ಮುಂದಿನ ಪೀಳಿಗೆಗೆ ಆರೋಗ್ಯಕರ ಭವಿಷ್ಯಕ್ಕಾಗಿ ಮಾಡಿದ ಅಮೂಲ್ಯ ಹೂಡಿಕೆ.

- ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ

ಸಿಎಂಗಾಗಿ ಕುರ್ಚಿ ಖಾಲಿ ಇಟ್ಟು ರೈತರ ಜತೆ ಎಚ್‌ಡಿಕೆ ಸಭೆ

ರಾಮನಗರ: ರಾಜ್ಯಾದ್ಯಂತ ಭಾರಿ ಕುತೂಹಲಕ್ಕೆ ಕಾರಣವಾಗಿದ್ದ ಬಿಡದಿ ಟೌನ್‌ಶಿಪ್ ಬಹಿರಂಗ ಚರ್ಚೆಯ ಪಂಥಾಹ್ವಾನವು ಕೇಂದ್ರ ಸಚಿವರ ಸಮಸ್ಯೆ ಆಲಿಸುವ ಸಭೆಯಾಯಿತು.

ಭೈರಮಂಗಲ ಗ್ರಾಮದ ವೃತ್ತದಲ್ಲಿ ಸಿದ್ಧಪಡಿಸಲಾಗಿದ್ದ ವೇದಿಕೆಯಲ್ಲಿ 'ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್' ಎಂಬ ನಾಮಫಲಕ ಅಂಟಿಸಿದ್ದ ಖಾಲಿ ಕುರ್ಚಿಯೊಂದನ್ನು ಇರಿಸಲಾಗಿತ್ತು. ಸಿಎಂ ಅವರನ್ನು ರೈತರ ಮುಂದೆಯೇ ಚರ್ಚೆ ನಡೆಸಲು ಆಹ್ವಾನಿಸಿದ್ದ ಕುಮಾರಸ್ವಾಮಿ, ಈ ಕುರ್ಚಿಯನ್ನು ಖಾಲಿ ಬಿಟ್ಟು ಪಕ್ಕದಲ್ಲಿ ಕುಳಿತುಕೊಂಡು ರೈತರ ಜತೆ ಸಭೆ ನಡೆಸಿದರು.

ಯೋಜನೆ ಪರ ಇರುವ ರೈತರು ಎಚ್‌ಡಿಕೆ ಅವರಿಗೆ ಕಪ್ಪುಬಾವುಟ ಪ್ರದರ್ಶಿಸಲು ಯತ್ನಿಸಿದರೂ, ಪೊಲೀಸರು ಅವಕಾಶ ನೀಡಲಿಲ್ಲ, ಯೋಜನೆ ಪರ-ವಿರೋಧ ರೈತರ ಹೋರಾಟ, ಬಹಿರಂಗ ಚರ್ಚೆ ವೇಳೆ ಯಾವುದೇ ಕಹಿಘಟನೆಗೆ ಅವಕಾಶ ನೀಡದಂತೆ ಗ್ರಾಮದಲ್ಲಿ 500ಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿ ನಿಯೋಜಿಸಿ ಬಿಗಿ ಬಂದೋಬಸ್ತ್ ಮಾಡಲಾಗಿತ್ತು. ವಿವರ»02

ಮತ್ತೊಂದು ಪ್ರಶ್ನೆಪತ್ರಿಕೆ ಲೀಕ್!

ಮಹಾರಾಷ್ಟ್ರದಲ್ಲಿ ಟಿಇಟಿ ಪರೀಕ್ಷೆ ಮುಂದೂಡಿಕೆ

ಪುಣೆ: ನೀಟ್ ಯುಜಿ-2026 ಪ್ರಶ್ನೆಪತ್ರಿಕೆ ಸೋರಿಕೆ ವಿವಾದ ಮುಗಿಯುವ ಮುನ್ನವೇ ಮತ್ತೊಂದು ಪ್ರಶ್ನೆಪತ್ರಿಕೆ ಲೀಕ್ ವಿವಾದ ಭುಗಿಲೆದ್ದಿದೆ.

ಮಹಾರಾಷ್ಟ್ರದಲ್ಲಿ ಶಿಕ್ಷಕರ ನೇಮಕಾತಿಗಾಗಿ ನಡೆಸುವ ಅರ್ಹತಾ ಪರೀಕ್ಷೆ 'ಟಿಇಟಿ' ಪ್ರಶ್ನೆಪತ್ರಿಕೆ ಸೋರಿಕೆ ಆರೋಪ ಕೇಳಿಬಂದಿದ್ದು, ಜೂನ್ 28ರಂದು ಭಾನುವಾರ ನಡೆಯಬೇಕಿದ್ದ ಪರೀಕ್ಷೆಯನ್ನು ಮುಂದೂಡಲಾಗಿದೆ.

ಪೊಲೀಸರು ಠಾಣೆ ಜಿಲ್ಲೆಯ ಭಿವಂಡಿಯಲ್ಲಿ ಬಿಹಾರ ಮತ್ತು ಹರಿಯಾಣ ಮೂಲದ ಮೂವರನ್ನು ಶನಿವಾರ ಬಂಧಿಸಿದ್ದು, ಇತರ ರಾಜ್ಯಗಳಿಗೂ ಈ ಜಾಲ ವ್ಯಾಪಿಸಿರುವುದು ಖಚಿತಪಟ್ಟಿದೆ.

ಈ ಮಧ್ಯೆ ಪ್ರಕರಣದ ತನಿಖೆಗೆ ಮಹಾರಾಷ್ಟ್ರ ಸರಕಾರ ವಿಶೇಷ ತನಿಖಾ ತಂಡ ರಚಿಸಿದ್ದು, ಹಗರಣದ ಮಾಸ್ಟರ್ ಮೈಂಡ್ ಪತ್ತೆಗಾಗಿ ವಿವಿಧ ರಾಜ್ಯಗಳಿಗೆ ತಂಡವನ್ನು ಕಳುಹಿಸಲಾಗಿದೆ. ಪೊಲೀಸರು ವಶಪಡಿಸಿಕೊಂಡ ದಾಖಲೆಗಳು ಜೂನ್ 28ರಂದು ನಡೆಯಬೇಕಿದ್ದ ಪರೀಕ್ಷೆ ಪ್ರಶ್ನೆಪತ್ರಿಕೆಗೆ ಸಾಮ್ಯವಾಗಿರುವುದನ್ನು ಶಿಕ್ಷಣ ಇಲಾಖೆ ಅಧಿಕಾರಿಗಳು ದೃಢಪಡಿಸಿದ್ದಾರೆ.

ಇಸ್ಲಾಂಗೆ ಮತಾಂತರಗೊಂಡರೆ ಹಿಂದುಳಿದ ವರ್ಗ ಮೀಸಲಿಲ್ಲ

ಚೆನ್ನೈ: ಹಿಂದೂ ಧರ್ಮದಿಂದ ಇಸ್ಲಾಂಗೆ ಮತಾಂತರಗೊಂಡವರು ಹಿಂದುಳಿದ ವರ್ಗ (ಬಿಸಿ) ಕೋಟಾದಡಿ ಮೀಸಲಿಗೆ ಅರ್ಹರಲ್ಲ ಎಂದು ಮದ್ರಾಸ್ ಹೈಕೋರ್ಟ್‌ನ ಮದುರೈ ಪೀಠ ಮಹತ್ವದ ತೀರ್ಪು ನೀಡಿದೆ.

ಇಸ್ಲಾಂಗೆ ಮತಾಂತರಗೊಂಡವರು ಮುಸ್ಲಿಮರೇ ಹೊರತು, ಹಿಂದಿನ ಧರ್ಮ, ಜಾತಿಗೂ ಸಂಬಂಧ ಇರುವುದಿಲ್ಲ ಎಂದು ಹೇಳಿರುವ ಕೋರ್ಟ್, ಮತಾಂತರಗೊಂಡವರಿಗೆ ಹಿಂದುಳಿದ ವರ್ಗಗಳ ಅಡಿ ಮೀಸಲು ನೀಡುವ ತಮಿಳುನಾಡು ಸರಕಾರದ 2024ರ ಆದೇಶವನ್ನು ಅಸಾಂವಿಧಾನಿಕ ಎಂದು ಘೋಷಿಸಿದೆ.

ಇಸ್ಲಾಂಗೆ ಮತಾಂತರಗೊಂಡಿದ್ದ ತೂತುಕುಡಿ ಜಿಲ್ಲೆಗೆ ಸೇರಿದ ವ್ಯಕ್ತಿಯೊಬ್ಬರು ಬಿಸಿ ವರ್ಗದ ಪ್ರಮಾಣಪತ್ರ ಕೋರಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ವಿಭಾಗೀಯ ಪೀಠ ಈ ತೀರ್ಪು ನೀಡಿದೆ. ''ಧರ್ಮವನ್ನು ಬದಲಾಯಿಸಿದ ನಂತರವೂ ಮೀಸಲು ಸೌಲಭ್ಯಗಳನ್ನು ಪಡೆಯುವುದಕ್ಕೆ ಸಂವಿಧಾನಾತ್ಮಕವಾಗಿ ಅವಕಾಶವಿಲ್ಲ,'' ಎಂದು ಹೇಳಿದೆ.

ವಿಕ ಮನಿ
From The House of THE ECONOMIC TIMES
ಕನ್ನಡದ ಏಕೈಕ ಹಣಕಾಸು ವಾರಪತ್ರಿಕೆ

ಐಟಿ ರಿಟರ್ನ್ಸ್ ABCD

ಸಂಬಳದಾರರಿಂದ ಉದ್ಯಮಿಗಳವರೆಗೆ ಐಟಿ ರಿಟರ್ನ್ಸ್ ಸಲ್ಲಿಸಲು ವಿಕಮನಿ ಕಂಪ್ಲೀಟ್ ಗೈಡ್. ಸರಿಯಾದ ಐಟಿಆರ್ ಆಯ್ಕೆ ಹೇಗೆ? ಮಾಡಬಾರದ ತಪ್ಪುಗಳು ಯಾವುವು? ಯಾವ ದಾಖಲೆ ಬೇಕು? ಸಮಗ್ರ ಮಾಹಿತಿ ನೀಡಿದ್ದಾರೆ ರಾಕೇಶ್ ಪಿ.

- ಮನೆಗಾಗಿ ಸಾಲ ಬೆಸ್ಟಾ ಅಥವಾ ಹೂಡಿಕೆ ಖಾಲಿ ಮಾಡ್ಬೇಕಾ? **ಶರತ್ ಎಂ.ಎಸ್.** ಕಾಲಂ
- ಬಿಸಿನೆಸ್ ಕೆಫೆ: ಇಂಡಸ್ಟ್ರಿ ಮಾಡಿ ಗೆಲ್ಲಲು **idea** ಮಾತ್ರ ಸಾಕಾಗದು! **ಜಿ.ಕೆ.ಪ್ರಮೋದ್** ಒಳನೋಟ
- ಚೀನಾ ಜಾರುತ್ತಿದೆ, ಭಾರತ ಏರುತ್ತಿದೆಯೇ? ದೇಶದ ಕಸುವು ಇರುವುದೆಲ್ಲಿ?
- ಶ್ರೀರಾಮನ ಅಸಲಿ ಸಂಪತ್ತು, ಹೂಡಿಕೆ ಯಾವುದು ಗೊತ್ತೆ? **ಡಾ.ವೆಂಕಟೇಶ್ ಆರ್. ವೇದಾಂತಿ, ಡಾ.ಜಿ.ಎಸ್. ಜಗನ್ನಾಥ್** ಅಂಕಣ
- ಬೆಂಗಳೂರು to ದಿ ವರ್ಲ್ಡ್: ಇನ್ನೊಂದು ಸ್ವಿಗ್ಗಿ, ಫ್ಲಿಪ್‌ಕಾರ್ಟ್ ಕಟ್ಟುವ ಕಾಲ ಇದಲ್ಲ - **ವಸಂತ ಶೆಟ್ಟಿ** ಲೇಖನ
- ಜುಲೈ 1ರಿಂದ ದುಡ್ಡಿನ ದುನಿಯಾ ಬದಲು: ಜನರಿಗೆ ಯಾವುದು ಹೊರೆ? ಯಾವುದು ಅಗ್ಗ?
- ವಿದೇಶಿ ಹೂಡಿಕೆ ಈಗ ತೆರಿಗೆ ಮುಕ್ತ; ಇದು ಹೇಗೆ ಭಾರತಕ್ಕೆ ಉಪಯುಕ್ತ? **ಆಶಿಶ್ ಸಾರಡ್ಕ** ವಿಶ್ಲೇಷಣೆ
- ಮಾರ್ಕೆಟ್ ಸ್ಕ್ಯಾನ್: ಪ್ರಾಫಿಟ್ ಬುಕಿಂಗ್ ನಡುವೆಯೂ ಮಾರ್ಕೆಟ್‌ನಲ್ಲಿ ಸ್ಮೈಲ್
- ನಂದಿನಿ, ಮೈಸೂರು ಸ್ಯಾಂಡಲ್ ನಮ್ಮದಾದರೆ, ಬೆಸ್ಕಾಂ ನಮ್ಮ ಕೈ ತಪ್ಪುತ್ತಾ? **ಕೆ.ಎಂ.ನಾಗರಾಜ** ಆರ್ಟಿಕಲ್
- ಕಾಮರ್ಸ್ ವಿದ್ಯಾರ್ಥಿಗಳೇ, ಜಾಬ್‌ಗೆ ನಿಮ್ಮ ಡಿಗ್ರಿ ಸಾಲದು: **ಡಾ.ಬಾಲಾಜಿ ರಾವ್ ಡಿ.ಜಿ.** ಕಾಲಂ

ಪತ್ರಿಕೆಗಾಗಿ ಸಂಪರ್ಕಿಸಿ
72594 58080
ಪ್ರತಿ ಭಾನುವಾರ ನಿಮ್ಮ ಕೈ ಸೇರಲಿದೆ
ಬೆಲೆ ₹5
ಪ್ರತಿ ಭಾನುವಾರ ಮಾರುಕಟ್ಟೆಯಲ್ಲಿ ವಿಕ ಮನಿ ಬಿಡುಗಡೆ
ಪತ್ರಿಕೆಗಾಗಿ ಸ್ಕ್ಯಾನ್ ಮಾಡಿ ನಿಮ್ಮ ವಿಳಾಸ ಬರೆದು submit ಮಾಡಿ

ಬೈರಮಂಗಲದಲ್ಲಿ ಎಚ್‌ಡಿಕೆ ಕಾರು ಅಡ್ಡಗಟ್ಟಲು ಯತ್ನ | ಪೊಲೀಸರ ತಡೆ

ನಡೆಯದ ಬಹಿರಂಗ ಚರ್ಚೆ

■ **ವಿಕ ಸುದ್ದಿಲೋಕ** ಬಿಡದಿ / ರಾಮನಗರ (ಬೆಂ.ದಕ್ಷಿಣ)

ಬಿಡದಿ ಹೋಬಳಿಯಲ್ಲಿ ನಿರ್ಮಿಸಲು ಉದ್ದೇಶಿಸಿರುವ ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ (ಜಿಬಿಐಟಿ) ಯೋಜನೆಯ ವಿಚಾರದ ಜಟಾಪಟಿ ತಾರಕಕ್ಕೇರಿದ್ದು, ಪರ-ವಿರೋಧದ ಬಣಗಳ ಜಿದ್ದಾಜಿದ್ದಿಗೆ ಶನಿವಾರ ಭೈರಮಂಗಲ ಗ್ರಾಮ ಸಾಕ್ಷಿಯಾಯಿತು.

ಬಿಡದಿ ಟೌನ್‌ಶಿಪ್ ಗದ್ದಲ

ಪೂರ್ವ ನಿಗದಿಯಂತೆ ಶನಿವಾರ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಗ್ರಾಮಕ್ಕೆ ಭೇಟಿ ನೀಡಿದರು. ಯೋಜನೆ ಪರ-ವಿರೋಧ ರೈತರ ಹೋರಾಟ, ಬಹಿರಂಗ ಚರ್ಚೆ ವೇಳೆ ಯಾವುದೇ ಕಹಿಘಟನೆಗೆ ಅವಕಾಶ ನೀಡದಂತೆ ಗ್ರಾಮದಲ್ಲಿ ಬೆಳಗ್ಗಿನಿಂದಲೇ ಬೆಂಗಳೂರು ದಕ್ಷಿಣ ಎಸ್‌ಪಿ ಶ್ರೀನಿವಾಸ್ ಗೌಡ ನೇತೃತ್ವದಲ್ಲಿ 500ಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿ ನಿಯೋಜಿಸಿ ಬಿಗಿ ಬಂದೋಬಸ್ತ್ ಮಾಡಲಾಗಿತ್ತು.

ಯೋಜನೆ ವಿರೋಧಿ ರೈತರು ತಾವು ಅನಿರ್ದಿಷ್ಟಾವಧಿ ಧರಣಿ ನಡೆಸುತ್ತಿರುವ ಜಾಗ, ಭೈರಮಂಗಲ ವೃತ್ತದ ವೇದಿಕೆ ಸಿದ್ಧಪಡಿಸಿದ್ದರು. ಇನ್ನೊಂದೆಡೆ ಈ ಜಾಗದಿಂದ ಕೇವಲ ನೂರು ಮೀಟರ್ ಅಂತರದಲ್ಲಿ ಶಾಮಿಯಾನ ಹಾಕಿ ಕುಳಿತು ಕುಶಲವಾರಿಯಾದ ಧರಣಿ ಆರಂಭಿಸಿದ್ದ ಯೋಜನೆಯ ಪರ ಇರುವ ರೈತರು, ಕುಮಾರಸ್ವಾಮಿ ಕಾರನ್ನು ಅಡ್ಡಹಾಕಲು ನಿರ್ಧರಿಸಿದ್ದರು. ಕುಮಾರಸ್ವಾಮಿ ಭೈರಮಂಗಲ ಗ್ರಾಮ ಪ್ರವೇಶಿಸುತ್ತಿದ್ದಂತೆ ಯೋಜನೆ ಪರ ಇರುವ ರೈತರು ಕಾರನ್ನು ತಡೆಯಲು ಮುಂದಾದರು. ಕೇಂದ್ರ ಸಚಿವರಿಗೆ ಕೆಲವು ಪ್ರಶ್ನೆಗಳನ್ನು ಕೇಳಬೇಕು ಅವಕಾಶ ಕೊಡಿ ಎಂದು ಪೊಲೀಸರನ್ನು ಕೇಳಿಕೊಂಡರು. ಆದರೆ, ಪೊಲೀಸರು ಅದಕ್ಕೆ ಅವಕಾಶ ಕೊಡದೇ ಇದ್ದಾಗ, ಕುಮಾರಸ್ವಾಮಿ ಹಾಗೂ ಪೊಲೀಸರ ವಿರುದ್ಧ ಧಿಕ್ಕಾರ ಕೂಗಿದರು. ಕುಮಾರಸ್ವಾಮಿ ಸಭೆ ಮುಗಿಸಿ ಹೊರಡುವಾಗಲೂ ಯೋಜನೆಯ ಪರವಿರುವ ರೈತರು ಅವರಿಗೆ ಕಪ್ಪು ಬಾವುಟ ಪ್ರದರ್ಶಿಸಲು ಮುಂದಾದರು. ಆದರೆ, ಪೊಲೀಸರು ಅವರನ್ನು ತಡೆದರು. ಮಾಜಿ ಶಾಸಕ ಎ.ಮಂಜು ವಿರುದ್ಧ ಕೆಲ ಅವಾಚ್ಯ ಶಬ್ದಗಳನ್ನು ಬಳಸಿ ಆಕ್ರೋಶ ಹೊರಹಾಕಿದ ಯೋಜನೆ ಪರ ಹೋರಾಟಗಾರರು, ರಸ್ತೆಯಲ್ಲಿ ಕುಳಿತು ಅವರ ಕಾರನ್ನು ತಡೆಯುವ ಪ್ರಯತ್ನ ಮಾಡಿದರು. ಈ ವೇಳೆ ಕೆಲಕಾಲ ಸ್ಥಳದಲ್ಲಿ ಉದ್ವಿಗ್ನ ವಾತಾವರಣ ನಿರ್ಮಾಣವಾಯಿತು.

ಯೋಜನೆ ವಿರುದ್ಧ ರೈತರನ್ನು ಉದ್ದೇಶಿಸಿ ಮಾತನಾಡಿದ ಕುಮಾರಸ್ವಾಮಿ ಅವರು, ''ಬೆಂಗಳೂರು ನಗರದ ಸುತ್ತ 5 ಟೌನ್‌ಶಿಪ್ ವಿಚಾರವಾಗಿ ನಾನು ಮುಖ್ಯಮಂತ್ರಿ ಇದ್ದಾಗ, ವಿಧಾನಸಭೆಯಲ್ಲಿ ಎರಡು ದಿನ ಚರ್ಚೆ ನಡೆಯಿತು. ರೈತರ ಫಲವತ್ತಾದ ಭೂಮಿ ಸ್ವಾಧೀನಪಡಿಸಿಕೊಳ್ಳಬಾರದು ಎಂದು ಸಿದ್ದರಾಮಯ್ಯ, ಖರ್ಗೆ, ಧರ್ಮಸಿಂಗ್, ಡಿಕೆ ಶಿವಕುಮಾರ್ ಎಲ್ಲರೂ ಭಾಷಣ ಮಾಡಿದ್ದರು. ಇದಕ್ಕೆ ಉತ್ತರವಾಗಿ ನಾನು, ''ನನಗೆ ಮತ ಕೊಟ್ಟ ಪುಣ್ಯಾತ್ಮರು ಅವರು. ಅವರನ್ನು ಒಕ್ಕಲೆಬ್ಬಿಸಿ ಟೌನ್ ಶಿಪ್ ಮಾಡುವ ಆವಶ್ಯಕತೆ ನನಗಿಲ್ಲ ಎಂದು ಉತ್ತರಿಸಿದ್ದೆ'' ಎಂದು ದಾಖಲೆ ಸಮೇತ ವಿವರಿಸಿದರು.

ಟೌನ್‌ಶಿಪ್ ವಿಚಾರವಾಗಿ ಚರ್ಚಿಸುವ ಸಲುವಾಗಿ ಡಿ.ಕೆ.ಶಿವಕುಮಾರ್‌ಗೆ ಕುರ್ಚಿ ಬಿಟ್ಟು ಕುಳಿತ ಎಚ್‌ಡಿಕೆ

ನನ್ನ ಫೋಟೋ ಹಾಕಿ ಕುಮಾರಸ್ವಾಮಿಯವರನ್ನು ಜೈಲಿಗೆ ಕಳುಹಿಸುತ್ತೀನಿ ಅಂತಾ ಪೋಸ್ಟರ್ ಹಾಕೊಂಡಿದ್ದಾರೆ. ನನ್ನನ್ನು ಜೈಲಿಗೆ ಕಳುಹಿಸಲು ನೂರು ಜನ್ಮ ಎತ್ತಿ ಬರಬೇಕು. ಏನು ಘನಂದಾರಿ ಕೆಲಸ ಮಾಡಿದ್ದರು ಅಂತ ಅವರನ್ನು (ಡಿಕೆಶಿ) ತಿಹಾರ್ ಜೈಲಿಗೆ ಕರೆದುಕೊಂಡು ಹೋಗಿದ್ದು? ಸ್ವಾತಂತ್ರ್ಯ ಹೋರಾಟ ಮಾಡ್ತಿದ್ರಾ? ಈ ರಾಜ್ಯದ ಜನರಿಗೋಸ್ಕರ, ಕಾವೇರಿ, ಮೇಕೆದಾಟು ಹೋರಾಟ ಮಾಡಿದ್ರಾ?

- ಎಚ್.ಡಿ.ಕುಮಾರಸ್ವಾಮಿ ಕೇಂದ್ರ ಸಚಿವ

ರೆಡ್ ಝೋನ್ ನಾನು ಮಾಡಿದ್ದಲ್ಲ

''ಕೆಂಪು ವಲಯ (ರೆಡ್ ಝೋನ್) ಎನ್ನುವುದು ನಾನು ಮಾಡಿದ್ದಲ್ಲ, ನಗರ ಯೋಜನಾ ಸಂಸ್ಥೆ ಬಿಡಿಎ ಎನ್ನುವ ಮಾಸ್ಟರ್ ಪ್ಲಾನ್ ಅನ್ನುವುದು ಮಾಡುತ್ತಾರೆ. ಇದು ಹತ್ತು ವರ್ಷಕ್ಕೊಮ್ಮೆ ಮಾಡುವ ಯೋಜನೆ. ಬೆಂಗಳೂರು ನಗರದ ಸುತ್ತಮುತ್ತ ಕೆಂಪು ವಲಯ ಎಂದು ಗುರುತಿಸುತ್ತಾರೆ. ಅದರಲ್ಲಿ ಈ ಭಾಗವನ್ನು ಕೆಂಪು ವಲಯ ಎಂದು ಗುರುತಿಸಿದ್ದಾರೆ,'' ಎಂದು ಎಚ್.ಡಿ.ಕುಮಾರಸ್ವಾಮಿ ಸ್ಪಷ್ಟಪಡಿಸಿದರು. ''ಈ ಕೆಂಪು ವಲಯವನ್ನು ಸಾರ್ವಜನಿಕ ಅಥವಾ ಉಪನಗರ ಉದ್ದೇಶಗಳಿಗಾಗಿ ಭೂಮಿ ತೆಗೆದುಕೊಳ್ಳಲು ಈ ಕೆಂಪು ವಲಯ ಗುರುತಿಸುತ್ತಾರೆ. ಅಂದರೆ ಸಾರ್ವಜನಿಕ ಶಾಲೆ, ಆಸ್ಪತ್ರೆ, ಸರಕಾರಿ ಕಟ್ಟಡ, ದೇವಸ್ಥಾನ ಅಥವಾ ಸಮುದಾಯ ಭವನಗಳನ್ನು ಕಟ್ಟುವ ಉದ್ದೇಶಕ್ಕಾಗಿ ಮಾತ್ರ ಅನುಮತಿ ನೀಡಬೇಕು ಎನ್ನುವ ಕಾರಣಕ್ಕೆ ಈ ಕೆಂಪು ವಲಯ ಘೋಷಿಸಲಾಗಿದೆ,'' ಎಂದು ಮಾಹಿತಿ ನೀಡಿದರು.

ಕುಮಾರಸ್ವಾಮಿಗೆ ಯೋಜನೆ ಪರ ರೈತರ ಕಪ್ಪು ಬಾವುಟ.

ಚಿಕ್ಕಬಳ್ಳಾಪುರ ಕೆಂಪೇಗೌಡ ಜಯಂತಿಯಲ್ಲಿ ಹೈಡ್ರಾಮಾ

ಎಚ್‌ಡಿಕೆ ವಿರುದ್ಧ ಶಾಸಕ ಪ್ರದೀಪ್ ಹೇಳಿಕೆ ಎನ್‌ಡಿಎ ಕಾರ್ಯಕರ್ತರ ಆಕ್ರೋಶ

ಕನ್ನಡ ಭವನದ ಹೊರಗೆ ಮೀಸೆ ತಿರುವಿ, ಭುಜತಟ್ಟಿ ತಗ್ಗೋದೇ ಇಲ್ಲ ಎಂದು ಶಾಸಕ ಪ್ರದೀಪ್ ಈಶ್ವರ್ ಎಚ್ಚರಿಕೆ.

■ **ವಿಕ ಸುದ್ದಿಲೋಕ** ಚಿಕ್ಕಬಳ್ಳಾಪುರ

ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ವಿರುದ್ಧ ಅಪದ್ಧ ಬಳಕೆ ಮಾತನಾಡಿದ್ದ ಶಾಸಕ ಪ್ರದೀಪ್‌ಈಶ್ವರ್ ವಿರುದ್ಧ ನಗರದ ಕನ್ನಡ ಭವನದಲ್ಲಿ ಶನಿವಾರ ನಡೆದ ಕೆಂಪೇಗೌಡ ಜಯಂತಿಯಲ್ಲಿ ಪ್ರತಿಭಟನೆ, ಗೊಂದಲ ನಡೆದು ದೊಡ್ಡ ಹೈಡ್ರಾಮಾ ನಡೆಯಿತು.

ಕುಮಾರಸ್ವಾಮಿ ವಿರುದ್ಧ ನೀಡಿರುವ ಹೇಳಿಕೆಗಾಗಿ ಶಾಸಕರು ಕ್ಷಮೆ ಕೇಳಬೇಕು. ಇಲ್ಲ ಕಾರ್ಯಕ್ರಮದಿಂದ ಹೊರಗೆ ಕಳಿಸಿ ಎಂದು ಏಕಾಏಕಿ ಒಳನುಗ್ಗಿದ ಎನ್‌ಡಿಎ ಕಾರ್ಯಕರ್ತರು ಆಕ್ರೋಶ ವ್ಯಕ್ತಪಡಿಸಿದರು.

ಸ್ವಾಮೀಜಿ ಪ್ರವೇಶ: ಗಲಾಟೆಯಿಂದ ಕಾರ್ಯಕ್ರಮ ನಡೆಯುವುದೇ ಇಲ್ಲ ಎನ್ನುವ ಪರಿಸ್ಥಿತಿ ನಿರ್ಮಾಣವಾಗಿತ್ತು. ಈ ಹಂತದಲ್ಲಿ ಆದಿಚುಂಚನಗಿರಿ ಶಾಖಾ ಮಠಾಧೀಶ ಶ್ರೀಮಂಗಳನಾಥ ಸ್ವಾಮೀಜಿ, ಎಲ್ಲರನ್ನೂ ಸಮಾಧಾನಿಸಿ ನಿಮ್ಮ ಸಮಸ್ಯೆಗೆ ಪರಿಹಾರ ಕೊಡಿಸುತ್ತೇವೆ ಎಂದು ಹೇಳಿ ಕಾರ್ಯಕ್ರಮ ನಡೆಯುವಂತೆ ನೋಡಿಕೊಂಡರು.

ಮೀಸೆ ತಿರುವಿದ ಶಾಸಕ: ಭವನಕ್ಕೆ ಬರುವಾಗ ಹಾಗೂ ಹೊರಗೆ ಬಂದಾಗ ಶಾಸಕ ಪ್ರದೀಪ್ ಈಶ್ವರ್ ಕಾರಿನ ಸನ್ ರೂಫ್‌ನಿಂದ ಹೊರಗೆ ನಿಂತು ತೋಳೇರಿಸಿ, ಮೀಸೆ ತಿರುವಿ, ಭುಜ ತಟ್ಟಿದರು. ಬಿಬಿ ರಸ್ತೆಯ ಶನಿಮಹಾತ್ಮ ದೇವಸ್ಥಾನದವರೆಗೂ ಶಾಸಕರು ಮತ್ತು ಎನ್‌ಡಿಎ ಕಾರ್ಯಕರ್ತರು ಪರ - ವಿರೋಧ ಘೋಷಣೆಗಳು ಮೊಳಗುತ್ತಲೇ ಇದ್ದವು.

ಚಪ್ಪಲಿ ಎಸೆದ ಕಾರ್ಯಕರ್ತ: ಶಾಸಕರ ನಡವಳಿಕೆಯಿಂದ ರೊಚ್ಚಿಗೆದ್ದ ಕಾರ್ಯಕರ್ತರೊಬ್ಬರು ಶಾಸಕರ ಕಾರಿನತ್ತ ಚಪ್ಪಲಿ ತೂರುತ್ತಿದ್ದಂತೆ ಪೊಲೀಸರು, ಕಾರ್ಯಕರ್ತರ ಮೇಲೆ ಮುಗಿಬಿದ್ದರು. ಇದರಿಂದ ಬಿಗುವಿನ ಪರಿಸ್ಥಿತಿ ನಿರ್ಮಾಣವಾಗಿ ತಳ್ಳಾಟ, ನೂಕಾಟ ನಡೆಯಿತು. ಪೊಲೀಸರು ಕೆಲವರನ್ನು ವಶಕ್ಕೆ ಪಡೆದು ನಂತರ ಬಿಡುಗಡೆ ಮಾಡಿದರು.

ಆರು ಬಂಧನ: ಕಾರ್ಯಕ್ರಮಕ್ಕೆ ನುಗ್ಗಿ ಗಲಾಟೆ ಮಾಡಿದ ಸಂಬಂಧ ಚಪ್ಪಲಿ ತೂರಿದ ವ್ಯಕ್ತಿ ಸೇರಿದಂತೆ 6 ಮಂದಿ ಜೆಡಿಎಸ್ ಹಾಗೂ ಬಿಜೆಪಿ ಕಾರ್ಯಕರ್ತರನ್ನು ಪೊಲೀಸರು ಬಂಧಿಸಿದ್ದಾರೆ.

ಕುಮಾರಸ್ವಾಮಿ ವಿರುದ್ಧ ಏಕವಚನ

ಕಾರ್ಯಕ್ರಮ ಮುಗಿದ ನಂತರ ಶಾಸಕ ಪ್ರದೀಪ್ ಈಶ್ವರ್ ಮತ್ತೆ ಅಪದ್ಧ ಪದ ಬಳಸಿದರು. ಒಬ್ಬ ಶೋಷಿತ ಸಮುದಾಯದ ಶಾಸಕನಿಗೆ ನಿಮ್ಮ ಚೇಲಾಗಳ ಮೂಲಕ ಬಾಯಿಗೆ ಬಂದಂತೆ ಬೈಸಿದ್ದೀರಿ. ನಿಮ್ಮ ಚೇಲಾಗಳಿಗೆ ಹೆದರಲ್ಲ ಎಂದು ಕುಮಾರಸ್ವಾಮಿ ವಿರುದ್ಧ ಏಕವಚನದಲ್ಲಿ ವಾಗ್ದಾಳಿ ನಡೆಸಿದರು. ನೀವು 32 ಎಕರೆ ಜಮೀನು ಖರೀದಿಸಲು ಯಾವ ಬದನೆ ಕಾಯಿ ಮಾರಿದ್ದೀರಿ... ನಿಮ್ಮ ಚೇಲಾಗಳಿಗೆ ಎಣ್ಣೆ ಕುಡಿಸಿ ಕಳಿಸಿಬಿಟ್ಟರೆ ಹೆದರಿ ಬೀಡ್ತೀವಾ? ನಿಮ್ಮಿಂದ ಏನು ಮಾಡಲು ಸಾಧ್ಯವಿಲ್ಲ,'' ಎಂದು ಶಾಸಕ ಪ್ರದೀಪ್ ಈಶ್ವರ್ ಎಚ್ಚರಿಕೆ ನೀಡಿದರು.

ಕಾರ್ಮಿಕ ಹಕ್ಕುಗಳಿಗಾಗಿ ಪ್ರಬಲ ಹೋರಾಟ: ಹರಿಪ್ರಸಾದ್

ಬೆಂಗಳೂರು: ಖಾಸಗಿಯವರಿಗೆ ಸಾರ್ವಜನಿಕ ಉದ್ದಿಮೆ ಮಾರಾಟ ಮಾಡುವ ಮೂಲಕ ಪ್ರಧಾನಿ ಮೋದಿ ಸರಕಾರ ಕಾರ್ಮಿಕರನ್ನು ಬೀದಿಗೆ ತಳ್ಳಿದೆ ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಟೀಕಿಸಿದರು.

ಪಕ್ಷದ ಕಚೇರಿಯಲ್ಲಿ ಶನಿವಾರ ಇಂಡಿಯನ್ ನ್ಯಾಷನಲ್ ಟ್ರೇಡ್ ಯೂನಿಯನ್ ಕಾಂಗ್ರೆಸ್ (ಇಂಟಕ್) ಸಭೆಯಲ್ಲಿ ಮಾತನಾಡಿ,''ಕಾರ್ಮಿಕರ ಹಕ್ಕುಗಳಿಗಾಗಿ ಬೀದಿಯಲ್ಲಿ ಹೋರಾಟ ಮಾಡಿದರೆ ಕಾಂಗ್ರೆಸ್ ಪಕ್ಷ ನಿಮ್ಮ ಜತೆಗಿರಲಿದೆ,'' ಎಂದರು.

ಕಾರ್ಮಿಕ ಹಿತಾಸಕ್ತಿ ಕಡೆಗಣನೆ: ವಿಧಾನ ಪರಿಷತ್ ಮುಖ್ಯ ಸಚೇತಕ ಸಲೀಂ ಅಹ್ಮದ್ ಮಾತನಾಡಿ, ''ಕೇಂದ್ರದಲ್ಲಿ ಕಳೆದ 12 ವರ್ಷಗಳಿಂದ ಅಧಿಕಾರದಲ್ಲಿರುವ ಬಿಜೆಪಿ ಸರಕಾರವು ರೈತರು ಹಾಗೂ ಕಾರ್ಮಿಕರ ಹಿತಾಸಕ್ತಿಯನ್ನು ನಿರಂತರವಾಗಿ ಕಡೆಗಣಿಸಿದೆ,'' ಎಂದು ದೂರಿದರು. ಕಾರ್ಮಿಕ ನಾಯಕ ಹಾಗೂ ಮಾಜಿ ಸಂಸದ ಸಂಜೀವ್ ರೆಡ್ಡಿ, ಎನ್.ಎಂ ಅಡಂತ್ಯಾಯ, ಕೆಪಿಸಿಸಿ ಕಾರ್ಯಾಧ್ಯಕ್ಷ ಮಂಜುನಾಥ್ ಭಂಡಾರಿ ಭಾಗವಹಿಸಿದ್ದರು.

ಸ್ಟೇಟ್ ನ್ಯೂಸ್

ಬರಗಾಲ ಘೋಷಿಸಿ: ಬೊಮ್ಮಾಯಿ

ಬೈಂದೂರು: ಇನ್ನೊಂದು ವಾರದೊಳಗೆ ಸಮರ್ಪಕ ಮಳೆಯಾಗದಿದ್ದರೆ ಕರ್ನಾಟಕ ಸಂಪೂರ್ಣ ಬರದತ್ತ ಸಾಗುವ ಸಾಧ್ಯತೆಯಿದೆ. ರಾಜ್ಯ ಸರಕಾರ ತಕ್ಷಣ ಬರಗಾಲ ಘೋಷಿಸಬೇಕು ಎಂದು ಮಾಜಿ ಸಿಎಂ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಆಗ್ರಹಿಸಿದರು. ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, ''ರಾಜ್ಯದಲ್ಲಿ ಈವರೆಗೆ ಕೇವಲ ಶೇ.30 ರಷ್ಟು ಮಾತ್ರ ಬಿತ್ತನೆಯಾಗಿದ್ದು, ಈ ಹಂತದಲ್ಲಿ ಕೃಷಿ ಸಚಿವರೇ ಇಲ್ಲದಿರುವುದು ದುರದೃಷ್ಟಕರ. ಎರಡು ಅಥವಾ ಮೂರು ಜಿಲ್ಲೆಗಳಿಗೆ ಒಬ್ಬ ಸಚಿವರನ್ನು ನೇಮಿಸಿರುವುದರಿಂದ ಯಾವುದೇ ಪ್ರಯೋಜನವಿಲ್ಲ,'' ಎಂದರು.

ಎನ್‌ಆರ್‌ಐ ಮಂತ್ರಿ: ಅಭಿಯಾನ ಟ್ರೆಂಡ್

ಮಂಗಳೂರು: ಅನಿವಾಸಿ ಭಾರತೀಯರ ಸಚಿವಾಲಯಕ್ಕೆ ಒತ್ತಾಯಿಸಿ ಅಂತಾರಾಷ್ಟ್ರೀಯ ಕನ್ನಡಿಗರ ಫೆಡರೇಷನ್ ಪೋಷಕರಾದ ರೊನಾಲ್ಡ್ ಕುಲಾಸೋ ನೇತೃತ್ವದಲ್ಲಿ ವಿಶ್ವದಾದ್ಯಂತ ನೆಲೆಸಿರುವ ಅನಿವಾಸಿ ಕನ್ನಡಿಗರು ಶುಕ್ರವಾರ ಟ್ವೀಟ್ ಅಭಿಯಾನ ನಡೆಸಿದ್ದು, ನಂಬರ್ ಒನ್ ಟ್ರೆಂಡಿಂಗ್ ಆಗಿ ಗಮನ ಸೆಳೆದಿದೆ. ಡಿಸಿಎಂ ಆಗಿದ್ದಾಗ ಡಿ.ಕೆ.ಶಿವಕುಮಾರ್ ಅನಿವಾಸಿ ಕನ್ನಡಿಗರ ಸಚಿವಾಲಯ ಸ್ಥಾಪಿಸುವ ಕುರಿತು ಘೋಷಿಸಿದ್ದರು. ಇದನ್ನು ಶೀಘ್ರ ಕಾರ್ಯರೂಪಕ್ಕೆ ತರಬೇಕು ಎಂದು ಒತ್ತಾಯಿಸಿ ಅಭಿಯಾನ ಹಮ್ಮಿಕೊಳ್ಳಲಾಗಿದೆ. ನಾನಾ ದೇಶಗಳಲ್ಲಿರುವ ಅನಿವಾಸಿ ಭಾರತೀಯರು, 200ಕ್ಕೂ ಹೆಚ್ಚು ಕನ್ನಡ ಪರ ಸಂಘಟನೆಗಳು ಈ ಟ್ವೀಟ್ ಅಭಿಯಾನಕ್ಕೆ ಸಾಥ್ ನೀಡಿ ಬೆಂಬಲ ಸೂಚಿಸಿದ್ದಾರೆ. ಟ್ವೀಟ್ ಅಭಿಯಾನಕ್ಕೆ ನಟ ನವೀನ್ ಡಿ.ಪಡೀಲ್, ಜಾದೂ ಮಾಂತ್ರಿಕ ಕುದ್ರೋಳಿ ಗಣೇಶ್, ನಿರೂಪಕ, ಕಲಾವಿದ ವಾಲ್ಟರ್ ನಂದಳಿಕೆ, ನಾನಾ ಕಲಾವಿದರು ಬೆಂಬಲ ಸೂಚಿಸಿದ್ದಾರೆ.

ಆರ್‌ಎಸ್‌ಎಸ್ ಅವಹೇಳನ: ಸಚಿವ ಪ್ರಿಯಾಂಕ್ ಖರ್ಗೆ ನೋಟಿಸ್ ಜಾರಿ

ಬೆಂಗಳೂರು: ಆರ್‌ಎಸ್‌ಎಸ್ ಬಗ್ಗೆ ಅವಹೇಳನಕಾರಿ ಹೇಳಿಕೆ ಸಂಬಂಧ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಹಾಗೂ ಮತ್ತಿತರ ವಿರುದ್ಧ ನಗರದ 42ನೇ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯದಲ್ಲಿ ಖಾಸಗಿ ದೂರು ದಾಖಲಿಸಲಾಗಿದೆ. ನಗರದ ಎ.ತೇಜಸ್ ಎಂಬುವರು ದೂರು ದಾಖಲಿಸಿದ್ದಾರೆ. ವಿಚಾರಣೆ ನಡೆಸಿದ ನ್ಯಾಯಾಲಯವು, ಪ್ರಿಯಾಂಕ್ ಖರ್ಗೆ, ದಿನೇಶ್ ಗುಂಡೂರಾವ್, ನಲಪಾಡ್ ಅವರಿಗೆ ನೋಟಿಸ್ ಜಾರಿಗೊಳಿಸಿ ವಿಚಾರಣೆಯನ್ನು ಜು.21ಕ್ಕೆ ಮುಂದೂಡಿದೆ.

ರಾಮನ ದೇಣಿಗೆ ಲೆಕ್ಕಕ್ಕೆ ರಾಜಕೀಯ ಲೇಪನ

ಅಂಬಾನಿ 900 ಕೋಟಿ ರೂ. ದೇಣಿಗೆ ಲೆಕ್ಕ ಎಲ್ಲಿದೆ?

■ **ವಿಕ ಸುದ್ದಿಲೋಕ** ಬೆಂಗಳೂರು

''ರಾಮಮಂದಿರಕ್ಕೆ ಮುಕೇಶ್ ಅಂಬಾನಿ ನೀಡಿದ್ದ 900 ಕೋಟಿ ರೂ. ದೇಣಿಗೆಗೆ ಲೆಕ್ಕ ಎಲ್ಲಿ,'' ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಪ್ರಶ್ನಿಸಿದ್ದಾರೆ.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, ''ಬಿಜೆಪಿಯವರೇ ದೇಶವನ್ನು ಹೆಚ್ಚು ಲೂಟಿ ಮಾಡಿದ್ದು, ರಾಮನ ಹೆಸರಿನಲ್ಲೂ ಕಳ್ಳತನ ಮಾಡಿದ್ದಾರೆ,'' ಎಂದು ವಾಗ್ದಾಳಿ ನಡೆಸಿದ್ದಾರೆ.

''ಪೇಜಾವರ ಶ್ರೀಗಳು ಕೇಳಿರುವುದಕ್ಕಾದರೂ ಲೆಕ್ಕ ಕೊಡಬೇಕು. ಕೇಂದ್ರದಲ್ಲಿ ಸಚಿವರಾಗಿರುವ ಪ್ರಹ್ಲಾದ ಜೋಶಿ ಅವರು ಈ ಭ್ರಷ್ಟಾಚಾರದ ಬಗ್ಗೆ ಮಾತನಾಡಬೇಕು. ಯಡಿಯೂರಪ್ಪ ಅವರು ಈ ಹಿಂದೆ ಪಕ್ಷ ತೊರೆದಿದ್ದಾಗ ಪ್ರಲ್ಹಾದ ಜೋಶಿ ಏನೆಲ್ಲಾ ಹೇಳಿದ್ದರು,'' ಎಂದು ಹೇಳಿದರು.

ಮೋದಿ ಮೌನ ಮುರಿದು ಸ್ಪಷ್ಟಪಡಿಸಲಿ

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಗೃಹ ಸಚಿವ ಪ್ರಿಯಾಂಕ್ ಖರ್ಗೆ,''ಅಯೋಧ್ಯೆ ರಾಮಮಂದಿರ ದೇಣಿಗೆ ಹಣ ದುರ್ಬಳಕೆ ಪ್ರಕರಣದಲ್ಲಿ ಪ್ರಧಾನಿ ಮೋದಿ ಹಾಗೂ ಉತ್ತರ ಪ್ರದೇಶ ಸರಕಾರ ಮೌನ ಮುರಿದು ಸ್ಪಷ್ಟನೆ ನೀಡಬೇಕು. ಭ್ರಷ್ಟಾಚಾರದ ಬಗ್ಗೆ ಸಮಗ್ರ ತನಿಖೆ ನಡೆಸಿ ಸತ್ಯಾಂಶವನ್ನು ದೇಶದ ಜನರ ಮುಂದಿಡಬೇಕು ಎಂದು ಆಗ್ರಹಿಸಿದ್ದಾರೆ.

''ಬಿಜೆಪಿಯವರು ರಾಮನ ಹೆಸರಲ್ಲಿ ಮೋಸ ಮಾಡುತ್ತಿದ್ದಾರೆ ಎಂದು ಈ ಹಿಂದೆಯೇ ಹೇಳಿದ್ದೆ. ಪ್ರಾಣ ಪ್ರತಿಷ್ಠಾಪನೆ ಮಾಡಿದವರು, ಪೂಜೆ ಮಾಡಿದವರು ಮೋದಿ. ಅವರು ದುಡ್ಡು ಹೊಡೆದಿಲ್ಲ ಎಂದು ಹೇಗೆ ನಂಬುವುದು. ಪ್ರಧಾನಿಯವರು ಈ ಬಗ್ಗೆ ಯಾವಾಗ ಮನ್ ಕೀ ಬಾತ್ ಮಾಡುತ್ತಾರೆ,'' ಎಂದು ಪ್ರಶ್ನಿಸಿದರು.

ರಾಮನ ಅಸ್ತಿತ್ವ ಪ್ರಶ್ನಿಸಿದವರು ಹೇಗೆ ಕೇಳ್ತಿರಾ?

■ **ವಿಕ ಸುದ್ದಿಲೋಕ** ಹುಬ್ಬಳ್ಳಿ

ರಾಮ ಮಂದಿರದ ದೇಣಿಗೆ ಅವ್ಯವಹಾರ ಮಾಡಿದವರ ಮೇಲೆ ಈಗಾಗಲೇ ದೂರು ದಾಖಲಾಗಿದ್ದು, ತಪ್ಪಿತಸ್ಥರ ಬಂಧನವಾಗುತ್ತಿದೆ. ಈ ವಿಚಾರದಲ್ಲಿ ಕಾಂಗ್ರೆಸ್ಸಿಗರಿಗೆ ಮಾತನಾಡುವ ನೈತಿಕತೆ ಇಲ್ಲ ಎಂದು ಬಿಜೆಪಿ ವಾಗ್ದಾಳಿ ನಡೆಸಿದೆ.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಕೇಂದ್ರ ಸಚಿವ ಪ್ರಹ್ಲಾದ ಜೋಶಿ, ''ನಾವು ಶ್ರೀರಾಮನ ಬಗ್ಗೆ ಪ್ರಸ್ತಾಪಿಸಿದಾಗಲೆಲ್ಲಾ, ಆತನ ಅಸ್ತಿತ್ವವನ್ನೇ ಪ್ರಶ್ನಿಸಿದ್ದ ಕಾಂಗ್ರೆಸ್ ಪಕ್ಷಕ್ಕೆ ಶ್ರೀರಾಮನ ಬಗ್ಗೆ ಮಾತನಾಡುವ ಯಾವುದೇ ನೈತಿಕ ಹಕ್ಕಿಲ್ಲ,'' ಎಂದು ಕಿಡಿಕಾರಿದರು.

''ದೇಣಿಗೆ ಅವ್ಯವಹಾರಕ್ಕೆ ಸಂಬಂಧಿಸಿದಂತೆ ಈಗಾಗಲೇ ಸಿಎಂ ಯೋಗಿ ಸ್ಪಷ್ಟನೆ ನೀಡಿದ್ದಾರೆ. ತಪ್ಪಿತಸ್ಥರ ಬಂಧನಸತ್ರ ನಡೆದಿದೆ. ಕಾನೂನು ಪ್ರಕಾರ ತನಿಖೆ ನಡೆಸಲಾಗುತ್ತಿದೆ,'' ಎಂದರು.

''ಪ್ರಧಾನಿ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ವಿರುದ್ಧ ಕಾಂಗ್ರೆಸ್ ನಾಯಕರು ಬಳಸುತ್ತಿರುವ ಭಾಷೆ ನಮ್ಮ ಸಂಸ್ಕೃತಿಗೆ ವಿರುದ್ಧವಾಗಿದೆ. ಕಾಂಗ್ರೆಸ್ ನಾಯಕರ ಹೇಳಿಕೆ ಸರಿಯಲ್ಲ,'' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕಾಂಗ್ರೆಸ್‌ನಿಂದ ಶ್ರೀರಾಮ ಹೆಸರಿಗೆ ಧಕ್ಕೆ

ಮಾಜಿ ಸಿಎಂ ಹಾಗೂ ಸಂಸದ ಜಗದೀಶ ಶೆಟ್ಟರ್, ''ದೇಣಿಗೆ ಅವ್ಯವಹಾರ ಮಾಡಿದವರ ಮೇಲೆ ಈಗಾಗಲೇ ದೂರು ದಾಖಲಾಗಿದ್ದು, ತಪ್ಪಿತಸ್ಥರ ಬಂಧನವಾಗುತ್ತಿದೆ. ಇದನ್ನೇ ಮುಂದಿಟ್ಟುಕೊಂಡು ಕಾಂಗ್ರೆಸ್ ನಾಯಕರು ಶ್ರೀರಾಮನ ಹೆಸರಿಗೆ ಧಕ್ಕೆ ತರುವ ಕೆಲಸ ಮಾಡುತ್ತಿದ್ದಾರೆ,'' ಎಂದು ಆರೋಪಿಸಿದರು.

500 ಕಿ.ಮೀ ಮೆಟ್ರೊ ಚಿಂತನೆ

■ **ವಿಕ ಸುದ್ದಿಲೋಕ** ಬೆಂಗಳೂರು ಗ್ರಾಮಾಂತರ

ಸರಕಾರದ ಮುಂದಿನ 2 ವರ್ಷಗಳಲ್ಲಿ 500 ಕಿ.ಮೀ ಉದ್ದದ ಮೆಟ್ರೊ ವಿಸ್ತರಣೆಗೆ ಚಿಂತನೆ ಹೊಂದಿದೆ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ದೇವನಹಳ್ಳಿ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿನ ಕೆಂಪೇಗೌಡ ಪ್ರತಿಮೆ ಮುಂಭಾಗದಲ್ಲಿ ನಡೆದ 517ನೇ ಕೆಂಪೇಗೌಡ ಜಯಂತಿಯಲ್ಲಿ ಅವರು ಮಾತನಾಡಿ, ''ಬೆಂಗಳೂರಿನಲ್ಲಿ 1.40 ಕೋಟಿ ಜನಸಂಖ್ಯೆ ಇದ್ದು, 1.30 ಕೋಟಿ ವಾಹನಗಳು ಇವೆ. ಮೆಟ್ರೊ, ಸಾರ್ವಜನಿಕ ಸಾರಿಗೆ ತಂದರೂ ಕೂಡ ಒಬ್ಬರು ಒಂದೊಂದು ವಾಹನ ಇಟ್ಟುಕೊಂಡಿದ್ದಾರೆ,'' ಎಂದರು.

ಆದಿಚುಂಚನಗಿರಿಯ ನಿರ್ಮಲಾನಂದನಾಥ ಸ್ವಾಮೀಜಿ, ಸ್ಫಟಿಕಪುರಿಯ ನಂಜಾವಧೂತ ಸ್ವಾಮೀಜಿ ಹಾಗೂ ವಿಶ್ವ ಒಕ್ಕಲಿಗರ ಸಂಸ್ಥಾನದ ನಿಶ್ಚಲಾನಂದನಾಥ ಸ್ವಾಮೀಜಿ ಸಾನ್ನಿಧ್ಯವನ್ನು ವಹಿಸಿದ್ದರು.

■ ದೇವನಹಳ್ಳಿಯಲ್ಲಿನ ಕೆಂಪೇಗೌಡ ಜಯಂತಿಯಲ್ಲಿ ಸಿಎಂ ಡಿಕೆಶಿ ಹೇಳಿಕೆ

ಸಚಿವರಾದ ಕೆ. ಎಚ್. ಮುನಿಯಪ್ಪ, ಕೃಷ್ಣ ಭೈರೇಗೌಡ, ಶಾಸಕರಾದ ಪ್ರದೀಪ್ ಈಶ್ವರ, ರಿಜ್ವಾನ್ ಅರ್ಷದ್ ಹಾಜರಿದ್ದರು.

ಥೀಮ್ ಪಾರ್ಕ್ ವೀಕ್ಷಣೆ: ದೇವನಹಳ್ಳಿ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿನ 108 ಅಡಿಯ ಈ ಕಂಚಿನ ಪ್ರತಿಮೆ ಬಳಿ ನಿರ್ಮಾಣವಾಗುತ್ತಿರುವ ಥೀಮ್ ಪಾರ್ಕ್ ಕಾಮಗಾರಿಯನ್ನು ಸಿಎಂ ವೀಕ್ಷಿಸಿದರು.

ಆರೋಗ್ಯ ಸಿಬ್ಬಂದಿ ಭರ್ತಿಗೆ ಆಗ್ರಹ

ಬೆಂಗಳೂರು: ಸರಕಾರ ಬದಲಾದರೂ, ಆರೋಗ್ಯ ಸಚಿವರು ಬದಲಾದರೂ ರಾಜ್ಯದ ಆರೋಗ್ಯ ಇಲಾಖೆಯೇ ಐಸಿಯುನಲ್ಲಿದೆ ಎಂದು ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ್ ಆರೋಪಿಸಿದ್ದಾರೆ.

ಈ ಬಗ್ಗೆ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಅವರು,''ಜೀವ ಉಳಿಸಬೇಕಾದ ಆರೋಗ್ಯ ಇಲಾಖೆಯಲ್ಲಿ 35,196 ಹುದ್ದೆಗಳು ಖಾಲಿ ಇವೆ. ಇದನ್ನು ಭರ್ತಿ ಮಾಡಿ. ಸರಕಾರಿ ಆಸ್ಪತ್ರೆಗಳು ಕೇವಲ ಹೆಸರಿಗಷ್ಟೇ ಎಂಬಂತಾಗಿದ್ದು, ಸಮಸ್ಯೆಗಳ ಆಗರವೆನಿಸಿದೆ. ಕನಿಷ್ಠ ಪ್ಯಾರಾಸಿಟಮಾಲ್ ಮಾತ್ರೆಗೂ ಬಡ ರೋಗಿಗಳು ಆಸ್ಪತ್ರೆಯಿಂದ ಆಸ್ಪತ್ರೆಗೆ ಅಲೆದಾಡುವ ದುಸ್ಥಿತಿ ಎದುರಾಗಿದೆ,'' ಎಂದು ದೂರಿದ್ದಾರೆ.

ನಿರ್ವಹಣೆಗೆ ಎಸ್‌ಒಪಿಯೇ ಇರಲಿಲ್ಲ: ಎಸ್‌ಐಟಿ

ಹೊಸದಿಲ್ಲಿ: ಅಯೋಧ್ಯೆ ರಾಮಮಂದಿರದ ನಿರ್ವಹಣೆಯಲ್ಲಿ ಪ್ರಮಾಣೀಕೃತ ಕಾರ್ಯವಿಧಾನದ (ಎಸ್‌ಒಪಿ) ಲೋಪಗಳನ್ನು ವಿಶೇಷ ತನಿಖಾ ತಂಡ ಪತ್ತೆ ಮಾಡಿದೆ.

ಭದ್ರತಾ ಸಿಬ್ಬಂದಿ ನಿಯೋಜನೆ, ಹುಂಡಿ ಹಣ ಎಣಿಕೆ ಸಿಬ್ಬಂದಿ ತಪಾಸಣೆ, ಸಿಸಿಟಿವಿ ದೃಶ್ಯಗಳ ಸಂರಕ್ಷಣೆಯಲ್ಲಿ ಲೋಪವಾಗಿರುವುದು ತನಿಖೆಯಲ್ಲಿ ಕಂಡು ಬಂದಿದೆ. ದೇವಾಲಯದ ದೇಣಿಗೆ ನಿರ್ವಹಣೆ ವ್ಯವಸ್ಥೆ, ಭದ್ರತಾ ಸಿಬ್ಬಂದಿ ನಿಯೋಜನೆ, ನಗದು ಹಣ ಕೊಠಡಿಗೆ ಬಂದು ಹೋಗುವ ಸಿಬ್ಬಂದಿಯ ತಪಾಸಣೆ, ಸಿಸಿಟಿವಿ ದೃಶ್ಯ ಸಂರಕ್ಷಣೆಯಲ್ಲಿ ದೊಡ್ಡಮಟ್ಟದ ಲೋಪಗಳಾಗಿರುವುದನ್ನು ಎಸ್‌ಐಟಿ ಪತ್ತೆ ಹಚ್ಚಿದೆ. ಹುಂಡಿಗಳ ನಿರ್ವಹಣೆ ಮಾಡುತ್ತಿದ್ದ ಟಿನ್ನು ಯಾದವ್, ಕಾಣಿಕೆ ಸ್ವೀಕಾರದ ಕುರಿತು ಸರಿಯಾದ ಪ್ರಮಾಣೀಕೃತ ಕಾರ್ಯವಿಧಾನ ಅನುಷ್ಠಾನಗೊಳಿಸಿರಲಿಲ್ಲ ಎಂಬ ಸಂಗತಿ ಎಸ್‌ಐಟಿಯ ವರದಿಯಲ್ಲಿ ಉಲ್ಲೇಖಿಸಲಾಗಿದೆ.



ಸಿಇಒ ನೇಮಕ: ದೇಗುಲದ ಸಂಪೂರ್ಣ ಆಡಳಿತ ವ್ಯವಸ್ಥೆ ಬದಲಿಸಲು ಮುಂದಾಗಿರುವ ರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್ ದೇವಾಲಯದ ಆಡಳಿತ, ಹಣಕಾಸು ನಿರ್ವಹಣೆಗೆ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ (ಸಿಇಒ) ನೇಮಕ ಮಾಡಲು ಚಿಂತನೆ ನಡೆಸಿದೆ. ದೇವಾಲಯದ ಆಡಳಿತ ಮಂಡಳಿ ಕಾರ್ಯಕ್ಷಮತೆ ಹೆಚ್ಚಿಸುವ ಜತೆಗೆ ಪಾರದರ್ಶಕತೆ ಕಾಯ್ದುಕೊಳ್ಳುವ ಸಲುವಾಗಿ ಹಣಕಾಸು ಹಾಗೂ ಆಡಳಿತಾತ್ಮಕ ನಿರ್ವಹಣೆ ಹೊಣೆಯನ್ನು ಸಿಇಒಗೆ ವಹಿಸಲು ಚಿಂತನೆ ನಡೆಸಲಾಗಿದೆ. ತೀರ್ಥಕ್ಷೇತ್ರ ಟ್ರಸ್ಟ್ ಮುಖ್ಯಸ್ಥರಾಗಿರುವ ನೃಪೇಂದ್ರ ಮಿಶ್ರ ಅವರು ಹೊಸ ಕಾರ್ಯ ನಿರ್ವಾಹಕ ಅಧಿಕಾರಿಯನ್ನು ನೇಮಕ ಮಾಡಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್, ಟ್ರಸ್ಟಿ ಅನಿಲ್ ಮಿಶ್ರಾ ರಾಜೀನಾಮೆಯನ್ನು ರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್ ದೃಢಪಡಿಸಿದೆ. ''ರಾಮದೇವರಿಗೆ ಭಕ್ತರು ನೀಡಿದ ಬೆಲೆ ಬಾಳುವ ಕಾಣಿಕೆಗಳು, ಬೆಳ್ಳಿ ಇಟ್ಟಿಗೆ ಸೇರಿ ಎಲ್ಲಾ ಆಭರಣಗಳು ಸುರಕ್ಷಿತವಾಗಿವೆ. ಭಕ್ತರು ನೀಡಿದ ಕಾಣಿಕೆ, ದೇಣಿಗೆ ಕುರಿತ ಮಾಹಿತಿಯನ್ನು ಸಂಪೂರ್ಣ ಲೆಕ್ಕಪತ್ರದಲ್ಲಿ ಇಡಲಾಗಿದೆ,'' ಎಂದು ಟ್ರಸ್ಟ್ ತಿಳಿಸಿದೆ.

ಬೆಂಗಳೂರು ವಿಶ್ವ ಖ್ಯಾತಿಗೆ ಕೆಂಪೇಗೌಡರು ಕಾರಣ: ಬಿವೈವಿ

■ **ವಿಕ ಸುದ್ದಿಲೋಕ** ಬೆಂಗಳೂರು

ಬೆಂಗಳೂರು ನಗರವನ್ನು ರಾಷ್ಟ್ರಮಟ್ಟದಲ್ಲಿ ಮಾತ್ರವಲ್ಲದೇ ಅಂತಾರಾಷ್ಟ್ರೀಯ ಮಟ್ಟದಲ್ಲೂ ನೆನಪಿಸಿಕೊಳ್ಳಲು ನಾಡಪ್ರಭು ಕೆಂಪೇಗೌಡರೇ ಕಾರಣ ಎನ್ನಲು ಹೆಮ್ಮೆ ಎನಿಸುತ್ತದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಹೇಳಿದರು.

ಕೆಂಪೇಗೌಡ ಪ್ರತಿಷ್ಠಾನದ ವತಿಯಿಂದ ಸದಾಶಿವನಗರದ ಕೆಂಪೇಗೌಡ ಗಡಿ ಗೋಪುರ ಉದ್ಯಾನವನದಲ್ಲಿ ಶನಿವಾರ ನಡೆದ ಕೆಂಪೇಗೌಡ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿ, ''ಯಡಿಯೂರಪ್ಪ ಸರಕಾರ ಇದ್ದಾಗ ಕೆಂಪೇಗೌಡರ ಪ್ರತಿಮೆ ನಿರ್ಮಾಣಕ್ಕೂ ಅನುದಾನ ನೀಡಿದ್ದಲ್ಲದೆ, ಪಾರ್ಕ್ ನಿರ್ಮಿಸಲು ಸೂಚಿಸಿದ್ದರು. ಅಂತಾರಾಷ್ಟ್ರೀಯ ವಿಮಾನನಿಲ್ದಾಣಕ್ಕೆ ಹೆಸರಿಡುವುದಕ್ಕೂ ತೀರ್ಮಾನಿಸಿದ್ದರು,'' ಎಂದು ಸ್ಮರಿಸಿದರು. ಸಮಾಜ ಸೇವಕ ಆರ್.ಪಿ.ರವಿಶಂಕರ್ ಅವರನ್ನು ಸನ್ಮಾನಿಸಲಾಯಿತು. ಮಾಜಿ ಡಿಸಿಎಂ ಡಾ.ಸಿ.ಎನ್.ಅಶ್ವತ್ಥನಾರಾಯಣ್, ಕರ್ನಾಟಕ ರಕ್ಷಣಾ ವೇದಿಕೆ ಅಧ್ಯಕ್ಷ ಶಿವರಾಮೇಗೌಡ ಪಾಲ್ಗೊಂಡಿದ್ದರು.

ಎನ್‌ಡಿಎ ಶಾಸಕರಲ್ಲಿ 11 ಅಡ್ಡ ಮತ, 1 ಅಸಿಂಧು ಮತ | ನಿಖರ ಮಾಹಿತಿ ನೀಡದ ಕಮಿಟಿ

ರಾಜ್ಯಾಧ್ಯಕ್ಷರ ಕೈಗೆ ಅಡ್ಡಮತದ ಸತ್ಯ ಸಮಿತಿ ವರದಿ

■ **ವಿಕ ಸುದ್ದಿಲೋಕ** ಬೆಂಗಳೂರು

ವಿಧಾನ ಪರಿಷತ್ ಚುನಾವಣೆಯಲ್ಲಿ ಕೆಲ ಶಾಸಕರ ಅಡ್ಡ ಮತದಾನದಿಂದ ಮುಖಭಂಗಕ್ಕೆ ಒಳಗಾಗಿರುವ ಬಿಜೆಪಿಯು ಸತ್ಯಾಂಶ ತಿಳಿಯಲು ರಚಿಸಿದ್ದ ಮೂವರು ಮುಖಂಡರ ಸಮಿತಿ ಶನಿವಾರ ತನಿಖಾ ವರದಿ ಸಲ್ಲಿಸಿದೆ.

ಬಿಜೆಪಿಗೆ ಬರಬೇಕಿದ್ದ ಮತಗಳ ಪೈಕಿ ಮೂರು ಅಡ್ಡ ಮತದಾನವಾಗಿದ್ದರೆ ಒಂದು ಮತ ಅಸಿಂಧುವಾಗಿದೆ. ಎನ್‌ಡಿಎ ವತಿಯಿಂದ ಒಟ್ಟು 11 ಅಡ್ಡಮತದಾನ, 1 ಮತ ಅಸಿಂಧುವಾಗಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ. ರಾಜ್ಯ ಬಿಜೆಪಿ ಕೋರ್ ಕಮಿಟಿ ಸಭೆಯಲ್ಲಿ ಚರ್ಚಿಸಿ ಮುಂದಿನ ನಡೆ ಬಗ್ಗೆ ತೀರ್ಮಾನಿಸಲಿದ್ದಾರೆ.

ಅಡ್ಡ ಮತದಾನದ ಬಗ್ಗೆ ಸತ್ಯಾಂಶ ತಿಳಿಯಲು ರಚನೆಯಾದ ಸಮಿತಿಯಲ್ಲಿದ್ದ ಮಾಜಿ ಸಚಿವರಾದ ಸಿ.ಟಿ.ರವಿ, ಎನ್.ಮಹೇಶ್ ಅವರು ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರಿಗೆ ವರದಿ ಸಲ್ಲಿಸಿದರು. ಬಳಿಕ ಪ್ರತಿಕ್ರಿಯಿಸಿದ ಸಿ.ಟಿ.ರವಿ, ''ಅಡ್ಡ ಮತದಾನ ಕುರಿತಂತೆ ಆಂತರಿಕ ಸತ್ಯ ಶೋಧನೆಗೆ ನಾನು ಸೇರಿದಂತೆ ಎನ್. ಮಹೇಶ್, ಮಹೇಶ್ ಟೆಂಗಿನಕಾಯಿ ಅವರ ಸಮಿತಿ ವರ್ಚುವಲ್ ಸಭೆ ನಡೆಸಿ ಯಾವೆಲ್ಲಾ ಅಂಶಗಳನ್ನು ಗಮನಿಸಬೇಕು ಎಂಬ ಬಗ್ಗೆ ಚರ್ಚಿಸಲಾಗಿತ್ತು. ಮಾಧ್ಯಮಗಳು ಹಾಗೂ ಸಾರ್ವಜನಿಕ ವಲಯದಲ್ಲಿ ಅನುಮಾನ ವ್ಯಕ್ತವಾದವರ ಪಟ್ಟಿ ಮಾಡಿಕೊಂಡು ಅವರೊಂದಿಗೆ ವೈಯಕ್ತಿಕ ಸಮಾಲೋಚನೆ ನಡೆಸಲಾಯಿತು,'' ಎಂದರು.

''ಪಕ್ಷದ ಅಭ್ಯರ್ಥಿಯಾಗಿದ್ದವರೊಂದಿಗೂ ಮಾತನಾಡಿ ಅಭಿಪ್ರಾಯ ಸಂಗ್ರಹಿಸಲಾಯಿತು. ಜೆಡಿಎಸ್ ಮುಖಂಡರಿಂದಲೂ ಮಾಹಿತಿ ಪಡೆಯಲಾಯಿತು. ಲಭ್ಯವಿರುವ ಮಾಹಿತಿ ಹಾಗೂ ಸಾಂದರ್ಭಿಕ ಸಾಕ್ಷ್ಯಗಳನ್ನು ಪರಿಗಣಿಸಿ ವರದಿ ಸಲ್ಲಿಸಿದ್ದೇವೆ. ಸಮಿತಿಯಲ್ಲಿದ್ದ ಮೂವರು ಪರಸ್ಪರ ಚರ್ಚಿಸಿ ಮೂವರಿಗೂ ಸಹಮತವೆನಿಸುವ ಅಂಶಗಳನ್ನಷ್ಟೇ ಉಲ್ಲೇಖಿಸಿ ವರದಿ ಸಲ್ಲಿಸಲಾಗಿದೆ. ಇದು ಆಂತರಿಕ ತನಿಖೆಯಾಗಿರುವುದರಿಂದ ಹೆಚ್ಚಿನ ಮಾಹಿತಿ ಹಂಚಿಕೊಳ್ಳುವುದು ಸೂಕ್ತವೆನಿಸುವುದಿಲ್ಲ'' ಎಂದು ತಿಳಿಸಿದರು.

■ ಕಾಂಗ್ರೆಸ್ ಮೇಲಿನ ಪ್ರೀತಿಗಲ್ಲ, ಅನೈತಿಕ ಮಾರ್ಗದಿಂದ ಅಡ್ಡ ಮತದಾನ

■ ಅನುಮಾನ ವ್ಯಕ್ತವಾದವರೊಂದಿಗೂ ವೈಯಕ್ತಿಕ ಸಮಾಲೋಚನೆ

ಎನ್‌ಡಿಎ 12 ಶಾಸಕರಿಂದ ಅಡ್ಡಮತ: ''ಬಿಜೆಪಿಯ ಇಬ್ಬರು ಅಭ್ಯರ್ಥಿಗಳಿಗೆ ತಲಾ 30 ಶಾಸಕರ ಮತ ಹಂಚಿಕೆಯಾಗಿತ್ತು. ಈ ಪೈಕಿ ರಘು ಕೌಟಿಲ್ಯ ಅವರಿಗೆ 29 ಮತ ಬಂದಿದ್ದು, ಒಂದು ಮತ ಅಸಿಂಧುಗೊಂಡಿದೆ. ಲಿಂಗರಾಜ್ ಪಾಟೀಲ್ ಅವರಿಗೆ ಹಂಚಿಕೆಯಾಗಿದ್ದ 30 ಮತಗಳ ಪೈಕಿ 27 ಮತ ಬಂದಿದ್ದು, ಮೂರು ಅಡ್ಡ ಮತದಾನವಾಗಿದೆ. ಜೆಡಿಎಸ್ ಅಭ್ಯರ್ಥಿಗೆ ಒಟ್ಟಾರೆ 22 ಮತ ಬರಬೇಕಿತ್ತು. ಆದರೆ ಕೇವಲ 14 ಮತಗಳಷ್ಟೇ ಬಂದಿದ್ದು, 8 ಮತ ಕೈತಪ್ಪಿವೆ,'' ಎಂದು ಹೇಳಿದರು.

''ಆಂತರಿಕ ತನಿಖೆ ವರದಿಯಲ್ಲಿ ಪಕ್ಷ ಎಲ್ಲೆಲ್ಲಿ ಎಚ್ಚರಿಕೆ ವಹಿಸಬೇಕಿತ್ತು ಎಂಬ ಬಗ್ಗೆಯೂ ದಾಖಲಿಸಲಾಗಿದೆ. ಎಲ್ಲಿ ವಹಿಸಲಾಗಿದೆ, ಎಲ್ಲೆಲ್ಲಿ ವಹಿಸಿಲ್ಲ ಎಂಬ ಬಗ್ಗೆಯೂ ವಿವರ ನೀಡಲಾಗಿದೆ. ಉಳಿದ ಸಂಗತಿಗಳ ಬಗ್ಗೆ ರಾಜ್ಯಾಧ್ಯಕ್ಷರು ಗಮನಿಸುತ್ತಾರೆ. ರಾಜ್ಯ ಕೋರ್ ಕಮಿಟಿ ಚರ್ಚೆ, ನಿರ್ಣಯದ ಮೇಲೆ ಮುಂದಿನ ತೀರ್ಮಾನವಾಗಲಿದೆ,'' ಎಂದು ತಿಳಿಸಿದರು.

ಅನೈತಿಕ ಮಾರ್ಗದಿಂದ ಅಡ್ಡ ಮತದಾನ: ''ಅಡ್ಡ ಮತದಾನ ಮಾಡಿರುವುದು ಕಾಂಗ್ರೆಸ್ ಮೇಲಿನ ಅಭಿಮಾನಕ್ಕೆ ಎಂಬುದಾಗಿ ಕಾಂಗ್ರೆಸ್‌ನವರು ಭಾವಿಸಬಾರದು. ಅನೈತಿಕ ಮಾರ್ಗದಿಂದ ಅಡ್ಡ ಮತದಾನ ಮಾಡಿಸಿದ್ದಾರೆ. ನಾನಾ ರಾಜ್ಯಗಳಲ್ಲಿ ಅಡ್ಡ ಮತದಾನ ನಡೆದಾಗ ಉಪದೇಶ ನೀಡುತ್ತಿದ್ದ ಕಾಂಗ್ರೆಸ್‌ನವರು ಇದೀಗ ಅಡ್ಡ ಮತದಾನ ಮಾಡಿಸುವ ಮೂಲಕ ಪ್ರಜಾಪ್ರಭುತ್ವವನ್ನು ಅಪಮೌಲ್ಯಗೊಳಿಸಿದ್ದಾರೆ. ಹಾಗಾಗಿ ಮುಂದೆ ಯಾವುದೇ ರಾಜ್ಯ, ಚುನಾವಣೆಗಳಲ್ಲಿ ಅಡ್ಡ ಮತದಾನವಾದರೆ ಪ್ರಶ್ನಿಸುವ ನೈತಿಕತೆ ಕಾಂಗ್ರೆಸ್‌ಗೆ ಇಲ್ಲ,'' ಎಂದು ತಿಳಿಸಿದರು.

ಮೋಹದ ಮೋಡಗಳಿಂದ ಮಳೆ ಸುರಿದಾಗ...

ಮೋಡ ಕವಿದ ವಾತಾವರಣ

ಮನೆಯವರ ಆಸೆಯಂತೆ ಧನುವನ್ನು ಎಂಗೇಜ್‌ಮೆಂಟ್ ಮಾಡಿಕೊಂಡ ಸೌಪರ್ಣಿಕಾ ಹಾಗೂ ಲವ್ ಬ್ರೇಕಪ್ ಸರಿ ಮಾಡಿಕೊಳ್ಳಲು ಚೆರಿಶ್, ಸಾತ್ವಿಕಾ ಜೋಡಿ ಸದಾ ಕಾಲ ಮೋಡ ಕವಿದು ಮಳೆ ಸುರಿವ ಪ್ರಕೃತಿ ಸೊಬಗಿನ ರೆಸಾರ್ಟ್‌ಗೆ ಹೋಗುತ್ತಾರೆ. ಅಲ್ಲಿ ಸೌಪರ್ಣಿಕಾಗೂ, ಚೆರಿಶ್‌ಗೂ ಸ್ನೇಹ ಬೆಳೆದು ಇಬ್ಬರು ಪರಸ್ಪರ ತಮ್ಮ ಹಿನ್ನಲೆ ಹಾಗೂ ವೈಯಕ್ತಿಕ ವಿಚಾರಗಳನ್ನು ಹಂಚಿಕೊಳ್ಳುತ್ತಾರೆ.

ಸೌಪರ್ಣಿಕಾ ಭಾವಿ ಪತಿ ಧನು, ಚೆರಿಶ್ ಗರ್ಲ್‌ಫ್ರೆಂಡ್ ಸಾತ್ವಿಕಾಗೆ ಉದ್ಯೋಗವೇ ಪ್ರಧಾನ. ರೆಸಾರ್ಟ್‌ನಲ್ಲೂ ಕೆಲಸದಲ್ಲೇ ನಿರತರಾಗಿರುತ್ತಾರೆ. ಇತ್ತ ಸುರಿವ ಮಳೆಯಲ್ಲಿ ಪ್ರಕೃತಿಯ ಸೊಬಗಲ್ಲಿ ಮನಬಿಚ್ಚಿ ಮಾತನಾಡಿಕೊಳ್ಳುವ ಚೆರಿಶ್ ಹಾಗೂ ಸೌಪರ್ಣಿಕ ಇನ್ನಷ್ಟು ಹತ್ತಿರವಾಗುತ್ತಾರೆ. ಈಗಾಗಲೇ ಕಮಿಟ್ ಆಗಿರುವ ಇಬ್ಬರ ನಡುವೆ ಲವ್ವಾಗುತ್ತೆ. ಆದರೆ ಸೌಪರ್ಣಿಕಾಳನ್ನು ಆಗಂತುಕನೊಬ್ಬ ಹಿಂಬಾಲಿಸುತ್ತಿರುವ ವಿಷಯ ಚೆರಿಶ್‌ಗೆ ತಿಳಿಯುತ್ತೆ. ವೃತ್ತಿಯಲ್ಲಿ ಮನಃಶಾಸ್ತ್ರಜ್ಞನಾಗಿರುವ ಚೆರಿಶ್ ಸೌಪರ್ಣಿಕಾಳ ಸಮಸ್ಯೆಯನ್ನು ಹೇಗೆ ನಿವಾರಿಸುತ್ತಾನೆ? ಚೆರಿಶ್, ಸೌಪರ್ಣಿಕ ಲವ್ ಸ್ಟೋರಿ ಏನಾಗುತ್ತದೆ? ಅವರಿಬ್ಬರ ಫ್ಲಾಶ್‌ಬ್ಯಾಕ್ ತಿಳಿಸುವುದೇ ಸಿನಿಮಾ ಸ್ಟೋರಿ.

ಸಿನಿ ವಿಮರ್ಶೆ

ಮಾನ್ಸೂನ್ ಮಾಸದಲ್ಲಿ ಕಣ್ಣಿಗೆ ತಂಪೆರೆವಂತೆ ಕಟ್ಟಿಕೊಟ್ಟಿರುವ ಜೆನ್‌ಜಿ ಕಾಲದ ಸಿಂಪಲ್ ಲವ್ ಸ್ಟೋರಿಯ ಕಾಂಪ್ಲಿಕೇಟೆಡ್ ರೂಪವಿದು. ಮೊದಲರ್ಧದಲ್ಲಿ ಸಿಂಪಲ್ ಸುನಿ ಶೈಲಿಯಲ್ಲಿ ಸಾಗುವ ಸಿನಿಮಾ ದ್ವಿತೀಯಾರ್ಧದಲ್ಲಿ ರೋಚಕತೆಯ ಕಡೆಗೆ ತಿರುಗುತ್ತದೆ. ಮೊದಲರ್ಧದಲ್ಲಿ ಹೆಚ್ಚೇನೂ ಕುತೂಹಲ ಹುಟ್ಟಿಸದೇ ಲವಲವಿಕೆಯಿಂದ ಸಾಗುವ ಸಿನಿಮಾ, ದ್ವಿತೀಯಾರ್ಧದಲ್ಲಿ ಡಜನ್‌ಗಟ್ಟಲೆ ಟ್ವಿಸ್ಟ್‌ಗಳಿಂದ ಸೀಟಿನ ತುದಿಗೆ ಕೂರಿಸುತ್ತೆ. ಚೆರಿಶ್ ಪಾತ್ರದಲ್ಲಿ ಶೀಲಮ್ ಮೊದಲ ಸಿನಿಮಾದಲ್ಲಿ ತಮ್ಮ ಆಷ್ಟೂ ಟ್ಯಾಲೆಂಟ್‌ನ ಹೊರಹಾಕಿ ಗೆದ್ದಿದ್ದಾರೆ. ವೈಡ್ ಆ್ಯಂಗಲ್‌ನಲ್ಲಿ ಪ್ರಕೃತಿಯನ್ನು ಸೆರೆಹಿಡಿದಿರುವ ಸಂತೋಷ್ ರೈ ಪಾತಾಜೆ ಹಾಗೂ ಕ್ಲೋಸಪ್‌ನಲ್ಲಿ ಭಾವನೆಗಳನ್ನು ತೆರೆಗಿಡುವಲ್ಲಿ ಸುನಿ ಕೈಚಳಕ ಎದ್ದು ಕಾಣುತ್ತದೆ.

ಸಾತ್ವಿಕಾ, ಮೋಕ್ಷಾ ಇಬ್ಬರೂ ಪ್ರತ್ಯೇಕ ಹೆಣ್ಣುಮಕ್ಕಳ ಸಮುದಾಯವನ್ನು ಪ್ರತಿನಿಧಿಸುತ್ತಾರೆ. ಎಂದಿನಂತೆ ಸಾತ್ವಿಕಾ ನಟನೆಯಲ್ಲಿ ನೈಜತೆ, ಪ್ರಾವೀಣ್ಯ ಕಂಡರೆ, ಮೋಕ್ಷಾ ಪಾತ್ರ ಮೋಹಕ ಹಾಗೂ ಭಯಾನಕ. ಅತಿಥಿ ಪಾತ್ರದಲ್ಲಿ ರಿಷಿ ರೋಮಾಂಚಕ. ಸುನಿ ದೃಶ್ಯಕಾವ್ಯದ ಮತ್ತೊಂದು ಪ್ಲಸ್ ಪಾಯಿಂಟ್ ಜ್ಯೂಡಾ ಸ್ಯಾಂಡಿ ಸಂಗೀತ. ಸುನಿ ಅವರ ಚೊಚ್ಚಲ ನಿರ್ದೇಶನದ 'ಸಿಂಪಲ್ಲಾಗೊಂದು ಲವ್ ಸ್ಟೋರಿ'ಯ ಕಾವ್ಯಾತ್ಮಕ ಸಾಲುಗಳು, ಪ್ರಾಕೃತಿಕ ದೃಶ್ಯವೈಭವ, ತಿಳಿಹಾಸ್ಯದ ಸಂಭಾಷಣೆ ಇಷ್ಟಪಟ್ಟವರಿಗೆ ಇದು ಫ್ರೆಶ್ ಸ್ಯಾಂಪಲ್. ಮುಂಗಾರಿನ ಮಾಸದಲ್ಲಿ ಟೀನೇಜ್ ಮಾತ್ರವಲ್ಲದೆ ಎಲ್ಲಾ ಏಜ್‌ನವರು ತಪ್ಪದೇ ನೋಡಬಹುದಾದ ಸಿನಿಮಾ ಇದು.

- ಕಿರಣ್ ಚಂದ್ರ

ತಾರಾಗಣ: ಶೀಲಮ್ ಎಮ್. ಸ್ವಾಮಿ, ಮೋಕ್ಷಾ ಕುಶಾಲ್, ಸಾತ್ವಿಕಾ ರಾವ್, ರಿಷಿ, ಧನಂಜಯ್ ದಿಡಗ, ಸ್ಪರ್ಶ ರೇಖಾ
ನಿರ್ದೇಶನ: ಸಿಂಪಲ್ ಸುನಿ
ಸಂಗೀತ ನಿರ್ದೇಶನ: ಜೂಡಾ ಸ್ಯಾಂಡಿ
ಛಾಯಾಗ್ರಹಣ: ಸಂತೋಷ್ ರೈ ಪಾತಾಜೆ
ರೇಟಿಂಗ್: ★★★½ /5.0

Rating Scale: TRASH* | BELOW AVERAGE** | AVERAGE **1/2 | ABOVE AVERAGE *** GOOD ***1/2 VERY GOOD **** | OUTSTANDING ****1/2 | MASTERPIECE *****

Published for the Proprietors, Metropolitan Media Company Limited, by Lokesh KV at No. 74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru560011. (Ph: 08040877666) and printed by him at Bennett Coleman & Co Ltd., The Times of India Press, No. 9/10/11A, 4th Main, KIADB Bommasandra Industrial Area, Anekal Taluk, Bangalore 560 099 (Ph: 08042200500) Regd. Office: No. 74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru560011 (Ph: 08040877666), Editor: Sudarshan Channangihalli – responsible for selection of news under PRB Act.
©All Rights Reserved. Reproduction in whole or in part without written permission is prohibited.
RNI No. 71653/99
Vol. 27 Issue No.178

ಯುವತಿ ರಕ್ಷಿಸಿ ತಾನೂ ಬಚಾವಾದ ಚಾಲಕ | 6 ವರ್ಷದ 'ಕಿರಿಕ್ ಲವ್' ದುರಂತ ಅಂತ್ಯ

ಕಾರು ಸ್ಫೋಟಿಸಿಕೊಂಡು ಪ್ರೇಮಿ ಸಜೀವ ದಹನ

■ **ವಿಕ ಸುದ್ದಿಲೋಕ** ತುಮಕೂರು

ಪ್ರೇಯಸಿಯನ್ನು ತನ್ನ ಊರಿಗೆ ಕರೆದೊಯ್ಯುತ್ತಿದ್ದ ಯುವಕ ಮಾರ್ಗಮಧ್ಯದಲ್ಲಿ ಆಕೆಯ ಜತೆ ವಾಗ್ವಾದಕ್ಕಿಳಿದು ಕಾರನ್ನು ಸ್ಫೋಟಿಸಿಕೊಂಡು ಸಜೀವ ದಹನವಾಗಿದ್ದಾನೆ. ಕಾರಿನ ಚಾಲಕ ಯುವತಿಯನ್ನು ರಕ್ಷಿಸಿ ತಾನೂ ಬಚಾವಾಗಿದ್ದಾನೆ.

ಜಿಲ್ಲೆಯ ಶಿರಾ ತಾಲೂಕಿನ ಜೋಗಿಹಳ್ಳಿ ಸಮೀಪ ರಾಷ್ಟ್ರೀಯ ಹೆದ್ದಾರಿ-48ರಲ್ಲಿ ಶನಿವಾರ ಈ ದುರಂತ ಸಂಭವಿಸಿದೆ. ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲೂಕಿನ ಹೆಬ್ಬುಳ ಗ್ರಾಮದ ನಾಗೇಂದ್ರ (30) ಕಾರಿನಲ್ಲಿ ಜೀವಂತ ದಹನವಾದ ಯುವಕ. ಇದೇ ಊರಿನ ಸಮೀಪದ ಸರಳೆಬೈಲ್‌ನ ರಮ್ಯಾ (23) ಗಾಯಗೊಂಡಿದ್ದಾರೆ. ಚಾಲಕ ಪ್ರವೀಣ್ ಅವರು ರಮ್ಯಾಳನ್ನು ಕಾಪಾಡಿ ತಾನೂ ಅಪಾಯದಿಂದ ಪಾರಾಗಿದ್ದಾರೆ.

ಬೆಂಗಳೂರಿನಿಂದ ಅಂಕೋಲಾ ಕಡೆಗೆ ತೆರಳುತ್ತಿದ್ದ ವೇಳೆ ನಾಗೇಂದ್ರ ಲೈಟರ್ ಬಳಸಿ ಸ್ಫೋಟಿಸಿಕೊಂಡಿದ್ದು, ಕಾರು ಧಗಧಗಿಸಿದೆ. ಅಷ್ಟೊತ್ತಿಗಾಗಲೇ ಪ್ರವೀಣ್, ರಮ್ಯಾ ಅವರನ್ನು ಕೆಳಕ್ಕಿಳಿಸಿ ಕಾಪಾಡಿದ್ದರು. ಕಾರು ಸ್ಫೋಟದಿಂದ ರಾಷ್ಟ್ರೀಯ ಹೆದ್ದಾರಿಯಲ್ಲಿ ಸುಮಾರು ಒಂದು ಕಿಲೋ ಮೀಟರ್‌ವರೆಗೂ ವಾಹನ ಸಂಚಾರ ಅಸ್ತವ್ಯಸ್ತಗೊಂಡಿತು.

ಸ್ಫೋಟಗೊಂಡ ಬಳಿಕ ಧಗಧಗಿಸುತ್ತಿರುವ ಕಾರು.

ಮದುವೆ ಮುಂದೂಡಿಕೆ, ಮನಸ್ತಾಪ: ರಮ್ಯಾ ಮತ್ತು ನಾಗೇಂದ್ರ ಕಳೆದ 6 ವರ್ಷಗಳಿಂದ ಒಬ್ಬರನೊಬ್ಬರು ಪ್ರೀತಿಸುತ್ತಿದ್ದರು. ನಾಗೇಂದ್ರ ಪದೇಪದೆ ಹೊಡೆಯುತ್ತಿದ್ದ ಎಂದು ತಿಳಿದುಬಂದಿದೆ. ಈ ಕಾರಣದಿಂದ ರಮ್ಯಾ ಅಂತರ ಕಾಯ್ದುಕೊಂಡಿದ್ದರು. ಮತ್ತೆ ಇಬ್ಬರೂ ಪರಸ್ಪರ ಮಾತನಾಡಿಕೊಂಡು ಏಪ್ರಿಲ್‌ನಲ್ಲಿ ಮದುವೆ ಆಗಲು ಯೋಜಿಸಿದ್ದರು. ಕಾರಣಾಂತರದಿಂದ ಮದುವೆಯನ್ನು ಮೇ ತಿಂಗಳಿಗೆ ಮುಂದೂಡಿದ್ದರೂ ಆಗಿರಲಿಲ್ಲ, ಇಬ್ಬರ ನಡುವೆ ಮನಸ್ತಾಪ ಹೆಚ್ಚಿತ್ತು. ರಮ್ಯಾ ಬೆಂಗಳೂರಿನಲ್ಲಿ ಖಾಸಗಿ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಯುವತಿಯನ್ನು ನಾಗೇಂದ್ರ ಬಾಡಿಗೆ ಕಾರಿನಲ್ಲಿ ಅಂಕೋಲಾಕ್ಕೆ ಕರೆದುಕೊಂಡು ಹೊರಟಿದ್ದ. ಮಾರ್ಗಮಧ್ಯೆ ಜಗಳವಾಗಿ ಜೋಗಿಹಳ್ಳಿ ಸಮೀಪ ರಮ್ಯಾಗೆ ಚಾಕುವಿನಿಂದ ಇರಿದಿದ್ದಾನೆ. ಈ ವೇಳೆ ಚಾಲಕ ಪ್ರವೀಣ್ ಕಾರನ್ನು ನಿಲ್ಲಿಸಿ ರಮ್ಯಾಳನ್ನು ಕೆಳಕ್ಕಿಳಿಸಿದ್ದಾರೆ. ಅಲ್ಲದೆ ನಾಗೇಂದ್ರ ಕೈಯಲ್ಲಿದ್ದ 3 ಸ್ಫೋಟಕಗಳಲ್ಲಿ ಎರಡನ್ನು ಕಸಿದು ಹೊರಕ್ಕೆ ಎಸೆದಿದ್ದಾರೆ. ಇನ್ನೊಂದು ನಾಗೇಂದ್ರ ಕೈಯಲ್ಲೇ ಇತ್ತು. ಆಗ ಆತ ಲೈಟರ್ ಬಳಸಿ ಸ್ಫೋಟಿಸಿಕೊಂಡಿದ್ದಾನೆ. ಕಳ್ಳಂಬೆಳ್ಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

> ನಾಗೇಂದ್ರ ಮತ್ತು ಯುವತಿ ಪ್ರೀತಿಸುತ್ತಿದ್ದರು. ಬೆಂಗಳೂರಿನಿಂದ ಅಂಕೋಲಾಕ್ಕೆ ಬಾಡಿಗೆ ಕಾರಲ್ಲಿ ಹೋಗುವಾಗ ಜಗಳವಾಗಿದೆ. ನಾಗೇಂದ್ರ ಸ್ಫೋಟಿಸಿಕೊಂಡಿರುವುದಾಗಿ ತಿಳಿದಿದೆ. ದೊಡ್ಡ ಪ್ರಮಾಣದ ಸ್ಫೋಟದ ಸದ್ದು ಕೇಳಿಸಿದ್ದು, ಯಾವ ಸ್ಫೋಟಕ ಎಂದು ಸದ್ಯ ಪತ್ತೆಯಾಗಿಲ್ಲ.
>
> -**ಕೆ.ವಿ.ಅಶೋಕ್** ಎಸ್‌ಪಿ, ತುಮಕೂರು

ಬೆಂಗಳೂರು ಪೊಲೀಸರಿಂದ ಕರೆ

ಬೆಂಗಳೂರಿನ ಜಯನಗರ ಸಮೀಪದ ಸಿದ್ದಾಪುರ ಪೊಲೀಸ್ ಠಾಣೆಯಲ್ಲಿ ರಮ್ಯಾ ಸ್ನೇಹಿತೆ ಬೆಳಗ್ಗೆ 11.30ರ ಸುಮಾರಿಗೆ ದೂರು ನೀಡಿದ್ದರು. ರಮ್ಯಾಳನ್ನು ನಾಗೇಂದ್ರ ಎಂಬಾತ ಹೆದರಿಸಿ, ಚಾಕು ತೋರಿಸಿ ಕಾರಿನಲ್ಲಿ ಕರೆದುಕೊಂಡು ಹೋಗುತ್ತಿದ್ದಾನೆ ಎಂದು ಪೊಲೀಸರಿಗೆ ತಿಳಿಸಿದ್ದಾರೆ. ಅಲ್ಲದೆ ಕಾರಿನ ನಂಬರ್ ಸಹಿತ ಮಾಹಿತಿ ಕೊಟ್ಟಿದ್ದಾರೆ. ಪೊಲೀಸರು ಕಾರು ಚಾಲಕ ಪ್ರವೀಣ್‌ಗೆ ಕರೆ ಮಾಡಿ, ಸಮೀಪದ ಪೊಲೀಸ್ ಠಾಣೆ ಬಳಿ ಕಾರು ನಿಲ್ಲಿಸುವಂತೆ ಸೂಚಿಸಿದ್ದಾರೆ. ಅದನ್ನು ಕೇಳಿಸಿಕೊಂಡ ನಾಗೇಂದ್ರ ಜಗಳ ಶುರು ಮಾಡಿಕೊಂಡಿದ್ದಾನೆ. ಸಿದ್ದಾಪುರ ಠಾಣೆ ಪೊಲೀಸರು ತುಮಕೂರು ಪೊಲೀಸರಿಗೆ ಮಾಹಿತಿ ನೀಡಿದ್ದು, ಅವರು ಯುವತಿಯ ರಕ್ಷಣೆಗೆ ಮುಂದಾಗುವಷ್ಟರಲ್ಲಿ, ಕಾರು ಸ್ಫೋಟದ ಮಾಹಿತಿ ಬಂದಿದೆ. ಸ್ಥಳಕ್ಕೆ ಧಾವಿಸುವಷ್ಟರಲ್ಲಿ ನಾಗೇಂದ್ರ ಸಜೀವ ದಹನವಾಗಿದ್ದ.

ಅಪಘಾತ: ಒಂದೇ ಕುಟುಂಬದ ಮೂವರ ಸಾವು

ಮುಳಬಾಗಲು (ಕೋಲಾರ): ಟ್ರ್ಯಾಕ್ಟರ್‌ಗೆ ಬೈಕ್ ಡಿಕ್ಕಿಯಾಗಿ ಒಂದೇ ಕುಟುಂಬದ ಮೂವರು ಸ್ಥಳದಲ್ಲೇ ಮೃತಪಟ್ಟ ಘಟನೆ ಮುಳಬಾಗಲು ತಾಲೂಕಿನ ಜಮ್ಮನಹಳ್ಳಿ ಗೇಟ್ ಬಳಿ ಶನಿವಾರ ನಡೆದಿದೆ. ಅಬೂಬ್ ಕರ್ (40), ಪತ್ನಿ ಸಾಬೀರಾ (37) ಹಾಗೂ ಪುತ್ರಿ ಜೋಯಾ (20) ಎಂಬುವರೇ ಮೃತರು. ಇವರು ಮುಳಬಾಗಲು ತಾಲೂಕಿನ ಚಮಕಲಹಳ್ಳಿ ಗ್ರಾಮದ ನಿವಾಸಿಗಳಾಗಿದ್ದು, ಬಯಲು ನರಸಾಪುರ ಗ್ರಾಮದಲ್ಲಿ ಕಲ್ಲು ಒಡೆಯುವ ಕೆಲಸ ಮಾಡುತ್ತಿದ್ದರು. ಕೆಲಸ ಮುಗಿಸಿಕೊಂಡು ಸ್ವಗ್ರಾಮ ಚಮಕಲಹಳ್ಳಿಗೆ ತೆರಳುತ್ತಿದ್ದಾಗ ಈ ದುರಂತ ಸಂಭವಿಸಿದೆ. ಟ್ರ್ಯಾಕ್ಟರ್ ಚಾಲಕನ ಅಜಾಗರೂಕತೆಯೇ ಅಪಘಾತಕ್ಕೆ ಕಾರಣ ಎಂದು ತಿಳಿದುಬಂದಿದೆ. ಟ್ರ್ಯಾಕ್ಟರ್ ಕೆಳಗೆ ಸಿಲುಕಿದ್ದ ಬೈಕ್ ನಜ್ಜುಗುಜ್ಜಾಗಿದೆ.

ಕೆಂಪೇಗೌಡ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಉಪ ರಾಷ್ಟ್ರಪತಿ ಪ್ರತಿಪಾದನೆ

ನದಿ ಜೋಡಣೆಯೇ ಪರಿಹಾರ

■ **ವಿಕ ಸುದ್ದಿಲೋಕ** ಬೆಂಗಳೂರು

ನದಿಗಳ ಜೋಡಣೆಯು ನೀರಿನ ಕೊರತೆ ಸಮಸ್ಯೆಯನ್ನು ಪರಿಹರಿಸಲು ಉತ್ತಮ ಪರಿಹಾರಗಳಲ್ಲಿ ಒಂದಾಗಿದೆ ಎಂದು ಉಪ ರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅಭಿಪ್ರಾಯಪಟ್ಟರು.

ನಗರದ ಜ್ಞಾನಜ್ಯೋತಿ ಸಭಾಂಗಣದಲ್ಲಿ ಕೆಂಪೇಗೌಡ ಪ್ರತಿಷ್ಠಾನದಿಂದ ಶನಿವಾರ ಆಯೋಜಿಸಿದ್ದ ಕೆಂಪೇಗೌಡ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, ''ಕರ್ನಾಟಕ ಮತ್ತು ತಮಿಳುನಾಡು ನಡುವಿನ ನೀರಿನ ವಿವಾದ ಪರಿಹರಿಸಬೇಕಿದೆ. ರೈತರಿಗೆ ನೀರನ್ನು ಸಮಾನವಾಗಿ ಹಂಚುವ ಮೂಲಕ ರಾಜ್ಯಗಳ ನಡುವಿನ ನೀರಿನ ವಿವಾದಗಳನ್ನು ಬಗೆಹರಿಸಬೇಕಿದೆ,'' ಎಂದು ಹೇಳಿದರು.

''ನಾಡಪ್ರಭು ಕೆಂಪೇಗೌಡರು ಭವಿಷ್ಯದ ದೃಷ್ಟಿಕೋನದಿಂದ ಬೆಂಗಳೂರನ್ನು ನಿರ್ಮಿಸಿದರು. ರೈತರು, ವ್ಯಾಪಾರಿಗಳು, ಕುಶಲಕರ್ಮಿಗಳು, ವಿದ್ವಾಂಸರು ಮತ್ತು ನಾನಾ ಧರ್ಮಗಳ ಜನರು ಒಟ್ಟಾಗಿ ಬದುಕುವ ಮತ್ತು ಸಮೃದ್ಧಿ ಹೊಂದುವಂತಹ ಅಂತರ್ಗತ ನಗರವನ್ನು ಕೆಂಪೇಗೌಡರು ಕಲ್ಪಿಸಿಕೊಂಡಿದ್ದರು. ಇಂದಿನ ಬೆಂಗಳೂರು ಆ ದೂರದೃಷ್ಟಿಯನ್ನು ಪ್ರತಿಬಿಂಬಿಸುವ ನಿಜವಾದ 'ಸಣ್ಣ ಭಾರತ'ವಾಗಿದೆ,'' ಎಂದು ಶ್ಲಾಘಿಸಿದರು.

''ಕೆಂಪೇಗೌಡರು ಪರಿಸರಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಿದ್ದರಿಂದಾಗಿ 500 ವರ್ಷಗಳ ನಂತರವೂ ಬೆಂಗಳೂರು ಹಸಿರು ನಗರವಾಗಿದೆ,'' ಎಂದರು.

ಉಪ ರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಅವರು ಕೆಂಪೇಗೌಡರ ಭಾವಚಿತ್ರಕ್ಕೆ ನಮನ ಸಲ್ಲಿಸಿದರು. ನಿರ್ಮಲಾನಂದನಾಥ ಸ್ವಾಮೀಜಿ ಇದ್ದರು.

ರಸ್ತೆ, ಕಟ್ಟಡಗಳನ್ನಷ್ಟೇ ನಿರ್ಮಿಸಲಿಲ್ಲ: ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಮಾತನಾಡಿ, ''ಕೆಂಪೇಗೌಡರು ಕೇವಲ ರಸ್ತೆಗಳು ಮತ್ತು ಕಟ್ಟಡಗಳನ್ನು ನಿರ್ಮಿಸಲಿಲ್ಲ, ಸಮಗ್ರ ಸಮಾಜವನ್ನು ನಿರ್ಮಿಸಲು ಶ್ರಮಿಸಿದರು. ವಿಶೇಷವಾಗಿ ನೀರಿನ ಸಂರಕ್ಷಣೆಗೆ ಹಾಗೂ ಪರಿಸರ ಸಂರಕ್ಷಣೆಗೆ ಪ್ರಾಮುಖ್ಯತೆ ನೀಡಿದ್ದರು,'' ಎಂದು ಸ್ಮರಿಸಿದರು.

ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಮಾತನಾಡಿ, ''ಕೆಂಪೇಗೌಡರ ದೂರದೃಷ್ಟಿಯಿಂದ ಬೆಂಗಳೂರು ಅಂತಾರಾಷ್ಟ್ರೀಯ ಮಟ್ಟಕ್ಕೆ ಬೆಳೆಯಲು ಕಾರಣವಾಯಿತು. ಬೆಂಗಳೂರಿನ ನಾನಾ ಭಾಗಗಳಲ್ಲಿ ಕೆಂಪೇಗೌಡರು ಕೆರೆಗಳನ್ನು ಕಟ್ಟಿಸಿದರು. ಆದರೆ, ಭೂಗಳ್ಳರು, ಮನುಷ್ಯನ ಸ್ವಾರ್ಥದಿಂದಾಗಿ ಈಗ ಕೆರೆಗಳು ಕಾಣೆಯಾಗಿ, ಲೇಔಟ್‌ಗಳು, ಕಟ್ಟಡಗಳು ನಿರ್ಮಾಣವಾಗಿವೆ,'' ಎಂದು ವಿಷಾದ ವ್ಯಕ್ತಪಡಿಸಿದರು.

ಇದೇ ವೇಳೆ ಬೆಂಗಳೂರಿನ ನೀರಿನ ಅಭಾವ ನೀಗಿಸಲು ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಕೇಂದ್ರ ಸರಕಾರದ ಮಟ್ಟದಲ್ಲಿ ಕರ್ನಾಟಕದ ಪರವಾಗಿ ನಿಲ್ಲಬೇಕು ಎಂದು ಮನವಿ ಮಾಡಿದರು.

ಪ್ರಶಸ್ತಿ ಪ್ರದಾನ: ಇನ್ಫೋಸಿಸ್ ಸಿಇಒ ಹಾಗೂ ಖ್ಯಾತ ಉದ್ಯಮಿ ಮೋಹನ್ ದಾಸ್ ಪೈ, ಚಿತ್ರದುರ್ಗದ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ, ಅರಣ್ಯ ಇಲಾಖೆಯ ನಿವೃತ್ತ ಕಾರ್ಯದರ್ಶಿ ಎ.ಸಿ.ಲಕ್ಷ್ಮಣ್ ಅವರಿಗೆ ಕೆಂಪೇಗೌಡ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕೇಂದ್ರ ಸಚಿವ ವಿ.ಸೋಮಣ್ಣ, ವಿಧಾನಸಭೆ ಪ್ರತಿಪಕ್ಷ ನಾಯಕ ಆರ್. ಅಶೋಕ್, ಶಾಸಕ ಡಾ. ಸಿ.ಎನ್. ಅಶ್ವತ್ಥ ನಾರಾಯಣ್, ನಿರ್ಮಲಾನಂದನಾಥ ಸ್ವಾಮೀಜಿ ಉಪಸ್ಥಿತರಿದ್ದರು.

ಜನರಿಗೆ ಹೊರೆಯಾಗದಂತೆ ಬಸ್ ಪ್ರಯಾಣ ದರ ಏರಿಕೆ

ಬೆಂಗಳೂರು: ಜನ ಸಾಮಾನ್ಯರಿಗೆ ಹೊರೆಯಾಗದಂತೆ ಬಸ್ ಪ್ರಯಾಣ ದರ ಏರಿಕೆ ಮಾಡುವ ಕುರಿತು ಚಿಂತನೆ ನಡೆಸಲಾಗಿದೆ ಎಂದು ಸಾರಿಗೆ ಸಚಿವ ಬೈರತಿ ಸುರೇಶ್ ತಿಳಿಸಿದರು.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ''ದಿನದಿಂದ ದಿನಕ್ಕೆ ಪೆಟ್ರೋಲ್, ಡೀಸೆಲ್ ದರಗಳು ಹೆಚ್ಚಾಗುತ್ತಿವೆ. ಎಲ್ಲಾ ಸಾರಿಗೆ ನಿಗಮಗಳಿಗೆ ಸುಮಾರು 5 ಸಾವಿರ ಕೋಟಿ ರೂ. ನಷ್ಟವಾಗುತ್ತಿದೆ. ಈ ಹಿನ್ನೆಲೆಯಲ್ಲಿ ಬಸ್ ಪ್ರಯಾಣ ದರ ಏರಿಕೆ ಮಾಡುವ ಬಗ್ಗೆ ಚಿಂತಿಸಲಾಗಿದೆ. ಆದರೆ, ನಿಗಮಗಳಿಂದ ಸರಕಾರಕ್ಕೆ ಯಾವುದೇ ಪ್ರಸ್ತಾವನೆ ಸಲ್ಲಿಸಿಲ್ಲ,'' ಎಂದರು. ''ಮುಂಬರುವ ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ಪ್ರಸ್ತಾವ ಮಂಡಿಸಲಾಗುವುದು. ಪ್ರಯಾಣ ದರ ಏರಿಕೆ ಕುರಿತು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಮತ್ತು ಸರಕಾರ ಅಂತಿಮ ನಿರ್ಧಾರ ತೆಗೆದುಕೊಳ್ಳಲಿದೆ,'' ಎಂದು ಹೇಳಿದರು.

ರಾಷ್ಟ್ರೀಯ ಶಿಕ್ಷಕರ ಪ್ರಶಸ್ತಿಗೆ ಅರ್ಜಿ ಆಹ್ವಾನ

■ **ವಿಕ ಸುದ್ದಿಲೋಕ** ಬೆಂಗಳೂರು

2026ನೇ ಸಾಲಿನ ರಾಷ್ಟ್ರೀಯ ಶಿಕ್ಷಕರ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಹ ಶಿಕ್ಷಕರು ಜು.13ರೊಳಗೆ ಅರ್ಜಿ ಸಲ್ಲಿಸಬಹುದು ಎಂದು ಸಮಗ್ರ ಶಿಕ್ಷಣ ಕರ್ನಾಟಕದ ರಾಜ್ಯ ಯೋಜನಾ ನಿರ್ದೇಶಕರು ಸುತ್ತೋಲೆ ಹೊರಡಿಸಿದ್ದಾರೆ.

ರಾಜ್ಯದ ಎಲ್ಲಾ ಸರಕಾರಿ, ಅನುದಾನಿತ ಹಾಗೂ ಅನುದಾನ ರಹಿತ ಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರು ರಾಷ್ಟ್ರೀಯ ಶಿಕ್ಷಕರ ಪ್ರಶಸ್ತಿಗೆ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಂಡು ಸ್ವಯಂ ನಾಮನಿರ್ದೇಶನ ಸಲ್ಲಿಸಬಹುದು ಎಂದು ಸೂಚಿಸಲಾಗಿದೆ.

ಅರ್ಹ ಶಿಕ್ಷಕರ ನಾಮನಿರ್ದೇಶನಕ್ಕೆ ಜು.17 ಕೊನೆಯ ದಿನವಾಗಿದ್ದು, ಪ್ರತಿ ಜಿಲ್ಲೆಯಿಂದ 60 ಶಿಕ್ಷಕರನ್ನು ನಾಮನಿರ್ದೇಶನ ಮಾಡುವಂತೆ ಆಯಾ ವ್ಯಾಪ್ತಿಯ ಉಪ ನಿರ್ದೇಶಕರು ಕ್ರಮ ಕೈಗೊಳ್ಳಬೇಕು. ಜಿಲ್ಲಾ ಉಪ ನಿರ್ದೇಶಕರು (ಆಡಳಿತ) ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು ತಮ್ಮ ವ್ಯಾಪ್ತಿಯ ಎಲ್ಲಾ ಶಾಲೆಗಳಿಗೆ ಮಾಹಿತಿ ರವಾನಿಸುವ ಜತೆಗೆ ನಿಗದಿತ ಅವಧಿಯೊಳಗೆ ಅರ್ಜಿ ಸಲ್ಲಿಸುವಂತೆ ಕ್ರಮವಹಿಸಬೇಕು ಎಂದು ತಿಳಿಸಲಾಗಿದೆ.



ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ-590009.

ವಾಕ್-ಇನ್-ಸಂದರ್ಶನ

ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿಯ ಎಂ.ಎಸ್ಸಿ (ಸಕ್ಕರೆ ವಿಜ್ಞಾನ ಮತ್ತು ತಂತ್ರಜ್ಞಾನ) ಪದವಿ ಕೋರ್ಸಿಗೆ ಹಾಗೂ ಎಂ.ಎಸ್ಸಿ (ಸಕ್ಕರೆ ತಂತ್ರಜ್ಞಾನ) ಸ್ನಾತಕೋತ್ತರ ಪದವಿ ಕೋರ್ಸಿಗೆ ತಾತ್ಕಾಲಿಕ ಉಪನ್ಯಾಸಕರನ್ನು ನೇಮಕಾತಿ ಮಾಡಿಕೊಳ್ಳಲು ದಿನಾಂಕ:07.07.2026 ರಂದು ಸಿಟಿಎಸ್.ನಂ: 4125/1 ಬಿ, ಗಣೇಶಪೂರ ರಸ್ತೆ, ಲಕ್ಷ್ಮಿಟೇಕ್, ಬೆಳಗಾವಿಯಲ್ಲಿ ಮುಂಜಾನೆ 09.30 ಗಂಟೆಗೆ ವಾಕ್-ಇನ್-ಸಂದರ್ಶನ ಏರ್ಪಡಿಸಲಾಗಿದೆ. ತಾತ್ಕಾಲಿಕ ಉಪನ್ಯಾಸಕರ ಹುದ್ದೆಗಳಿಗೆ ವಿದ್ಯಾರ್ಹತೆ, ಸಂಭಾವನೆ, ಅನುಭವ ಹಾಗೂ ಇತರ ಶರತ್ತುಗಳ ವಿವರವನ್ನು ಸಂಸ್ಥೆಯ ಜಾಲತಾಣ www.nijalingappasugar.com ರಲ್ಲಿ ಪಡೆಯಬಹುದಾಗಿದೆ.

ದಿನಾಂಕ:27.06.2026

ಸಹಿ/-
ನಿರ್ದೇಶಕರು

PRESIDENCY UNIVERSITY

Presidency University Act, 2013 of the Karnataka Act No. 41 of 2013 | Established under Section 2(f) of UGC Act, 1956 Approved by AICTE New Delhi | Approved By BCI | NAAC 'A' Accredited

NAAC A ACCREDITED UNIVERSITY

50 YEARS OF ACADEMIC EXCELLENCE

INVITING APPLICATIONS FOR

Ph.D. PROGRAMME AUGUST 2026

Join the Research & Innovation Hub at Presidency University

ENGINEERING & TECHNOLOGY
CSE, ECE, EEE, Mech, Civil, Petroleum
Computer Applications

MANAGEMENT & COMMERCE
GM | HRM | Marketing Management
Accounting & Finance | Banking & Insurance
Digital Commerce | Sustainability & Green Practices | International Business

MEDIA STUDIES
AI and Digital Media | Media Literacy
Advertising | PR & Strategic Communications

APPLIED SCIENCES
Physics, Chemistry, Mathematics

LAW
Business and Trade Law Cyber and Technology Laws | Health Laws
Constitutional and Administrative Law
Intellectual Property Laws

LIBERAL ARTS
English

LIBRARY SCIENCE
LIS Education & Research, Information & Communication Technology (ICT)

University Fellowship of ₹37,000 per month (for first 2 years) and ₹42,000 per month (for the third year), for Eligible Full-time Scholars.

ELIGIBILITY & ADMISSION PROCEDURE

The eligibility criteria is as per UGC and / or Presidency University Norms. The admission is based on a Written Examination followed by an Interview.

Applicants who have qualified in the nationwide examinations like UGC-NET / Joint UGC-CSIR NET / ICAR (ASRB)-NET / ICMR JRF / DBT-JRF / NBHM / are exempted from entrance examination.

IMPORTANT DATES

Online Application Deadline	TUESDAY, JUNE 30, 2026
Entrance Test and Interview	SATURDAY, JULY 11, 2026

Scan For Details

+91-99453-42341 | +91-96200-63427
phd@presidencyuniversity.in www.presidencyuniversity.in



DS MAX®

DS MAX SKY STANZA

2 & 3-BHK HOMES | G + 14 FLOORS

LUXURIOUS 2 & 3-BHK APARTMENTS

Jigani | 5 mins. APC Circle

2-BHK STARTS @ ₹ 61 L* | 3-BHK STARTS @ ₹ 78 L*

PRICE INCREASE ALERT!

Due to Shifting Market Factors and Rising Material Costs

DS MAX Property Prices will Adjust Upward Soon.
Secure Your Investment at Current Rates Today.

2, 3 & 4-BHK APARTMENTS FOR SALE IN VARIOUS LOCATIONS

RERA No.	Location	Landmark	Price	Phone	Floors
PRM/KA/RERA/1251/308/PR/160824/006973	BANNERGHATTA RD	NEAR KOPPA GATE	₹ 59.86 - 85.23 Lakhs*	8880 013 310	G+14
PRM/KA/RERA/1251/310/PR/210324/006724	SILKBOARD	NEAR SINGASANDRA METRO	₹ 91.27 L - 1.47 Cr*	8880 013 310	G+14
PRM/KA/RERA/1251/472/PR/250225/007524	AIRPORT ROAD	NEAR PRESTIGE TECH IT PARK	₹ 87.89 L - 1.21 Cr*	8880 465 465	G+14
PRM/KA/RERA/1251/310/PR/150223/005721	MYSORE ROAD	NEAR CHALLAGHATTA METRO	₹ 75.00 L - 1.06 Cr*	8880 461 461	G+14
PRM/KA/RERA/1250/304/PR/251024/007179	WHITEFIELD	10 MINS. HOPEFARM METRO	₹ 77.91 L - 1.32 Cr*	8880 461 461	G+14
PRM/KA/RERA/1251/310/PR/151223/006489	BANASHANKARI	OPP. NPS SCHOOL	₹ 1.45 - 2.17 Cr* (3 & 4-BHK)	8880 461 461	G+3
PRM/KA/RERA/1251/308/PR/291225/008366	HOSUR ROAD	10 MINS. ELECTRONIC CITY	₹ 62.71 L - 1.01 Cr*	8880 003 003	G+22
PRM/KA/RERA/1250/304/PR/150224/006622	WHITEFIELD	SOUKYA ROAD	₹ 72.86 L - 1.12 Cr*	8880 461 461	G+14
PRM/KA/RERA/1251/308/PR/230126/008427	SARJAPURA	SARJAPUR - ATTIBELE ROAD	₹ 60.01 - 83.25 Lakhs*	8880 003 003	G+4
PRM/KA/RERA/1251/310/PR/050526/008622	MAGADI ROAD	10 MINS. NICE ROAD TOLL	₹ 92.49 L - 1.23 Cr*	8880 465 465	G+14
PRM/KA/RERA/1251/308/PR/160824/006972	HOSA ROAD	NEAR ELECTRONIC CITY	₹ 80.01 L - 1.44 Cr*	8880 013 310	G+4
PRM/KA/RERA/1251/301/PR/251024/007178	YELAHANKA	5 MINS. RAJANUKUNTE	₹ 56.25 - 97.21 Lakhs*	8880 465 465	G+14

Disclaimer: Information provided in this advertisement is for reference only, and all data is sourced internally. The images, illustrations, and artist's impressions used in this advertisement are for representational purposes only. The prices mentioned are indicative and base prices. Any offers, discounts, or incentives mentioned in this advertisement are subject to specific terms and conditions. All taxes, registration charges, stamp duty, and any other statutory payments are applicable as per government regulations. All directions, locations, and landmarks are approximate. Please use reliable resources for accurate travel times. Mentioning a specific product, process, or service does not imply endorsement. Please contact our Sales Team for detailed information about specific projects, pricing, availability, and other inquiries. DS-MAX Properties ensures that all its projects comply with the Real Estate (Regulation and Development) Act, 2016 (RERA) and its regulations. Visit : www.rera.karnataka.gov.in *T & C Apply

CREDAI

ವೀರಲೋಕ ಪುಸ್ತಕಸಂತೆಯ ಗೋಷ್ಠಿಯಲ್ಲಿ ರಾಜಪ್ಪ ದಳವಾಯಿ ಅಭಿಪ್ರಾಯ

ಕನ್ನಡ ಶಾಲೆ, ಸಿನಿಮಾ ಉಳಿದರೆ ಭವಿಷ್ಯ ಭದ್ರ

ವಿಕ ಸುದ್ದಿಲೋಕ ತುಮಕೂರು

ಕನ್ನಡ ಚಲನಚಿತ್ರಗಳು ಮತ್ತು ಕನ್ನಡ ಶಾಲೆಗಳು ಉಳಿದರೆ ಮಾತ್ರ ಕನ್ನಡ ಭಾಷೆಯ ಭವಿಷ್ಯ ಭದ್ರವಾಗಿರುತ್ತದೆ. ಹೋಬಳಿ ಹಾಗೂ ತಾಲೂಕು ಕೇಂದ್ರಗಳಲ್ಲಿ ಚಿತ್ರ ಮಂದಿರಗಳನ್ನು ನಿರ್ಮಿಸಿ ಕನ್ನಡ ಚಿತ್ರಗಳ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಬೇಕು. ಇಲ್ಲದಿದ್ದರೆ ಕನ್ನಡ ಚಿತ್ರರಂಗ ಮತ್ತಷ್ಟು ಸಂಕಷ್ಟಕ್ಕೆ ಸಿಲುಕಲಿದೆ ಎಂದು ಸಾಹಿತಿ ಡಾ. ರಾಜಪ್ಪ ದಳವಾಯಿ ಆತಂಕ ವ್ಯಕ್ತಪಡಿಸಿದರು.

ನಗರದ ಅಮಾನಿಕೆರೆ ಗಾಜಿನ ಮನೆಯಲ್ಲಿ ನಡೆಯುತ್ತಿರುವ ವೀರಲೋಕ ಪುಸ್ತಕ ಸಂತೆಯ ಎರಡನೇ ದಿನ ಶನಿವಾರ ನಡೆದ 'ಸಿನಿಮಾ ಸಂಸ್ಕೃತಿ ಮತ್ತು ಸಾಹಿತ್ಯ' ಗೋಷ್ಠಿಯಲ್ಲಿ 'ಸಿನಿಮಾ ಮತ್ತು ಸಮಾಜ ಬದಲಾವಣೆಗಳು: ಅನುಸಂಧಾನ' ವಿಷಯದ ಕುರಿತು ಅವರು ಮಾತನಾಡಿದರು.

ಕನ್ನಡ ಶಾಲೆ ಇಲ್ಲದಿದ್ದರೆ ಆ ಊರಲ್ಲಿ ಯಾವುದೇ ಸರಕಾರಿ ಕಾರ್ಯಕ್ರಮಗಳು ನಡೆಯುವುದಿಲ್ಲ, ಅಂತೆಯೇ ಸಿನಿಮಾ ಮರೆಯಾದರೆ ಬಳಸುವ ಭಾಷೆ ಮರೆಯಾಗುತ್ತದೆ. ಇಂದು ಕನ್ನಡ ಚಿತ್ರರಂಗದ ಗತವೈಭವ ನೆನೆಯುವಾಗ ಹಳೆಯ ಸಿನಿಮಾಗಳ ಉದಾಹರಣೆಯನ್ನೇ ತೆಗೆದುಕೊಳ್ಳಬೇಕಿದೆ. ಹೊಸದನ್ನು ಮಾತನಾಡಲಾಗದ ದುರಂತಮಯ ಕಾಲಘಟ್ಟದಲ್ಲಿದ್ದೇವೆ. ಸಿನಿಮಾಗಳಲ್ಲಿ ಬದ್ಧತೆ ಬೇಕು,'' ಎಂದು ಆಶಿಸಿದರು.

ವೀರಲೋಕ ಪುಸ್ತಕ ಸಂತೆಯಲ್ಲಿ ಶನಿವಾರ ನಡೆದ 'ಸಿನಿಮಾ ಸಂಸ್ಕೃತಿ ಮತ್ತು ಸಾಹಿತ್ಯ' ವಿಚಾರಗೋಷ್ಠಿಯಲ್ಲಿ ಸಾಹಿತಿ ಡಾ. ರಾಜಪ್ಪ ದಳವಾಯಿ ಮಾತನಾಡಿದರು.

> ಪುಸ್ತಕ ಸಂತೆಯು ಹೊಸ ಲೇಖಕರಿಗೆ ಒಂದೊಳ್ಳೆಯ ವೇದಿಕೆ. ಪುಸ್ತಕೋದ್ಯಮಕ್ಕೆ ಶಕ್ತಿ ನೀಡಿದೆ. ಓದುಗರು ಹಾಗೂ ಲೇಖಕರು ಮುಖಾಮುಖಿ ಆಗುತ್ತಿದ್ದರೆ ಕನ್ನಡದ ಓದು ಬೆಳೆಯುತ್ತದೆ, ಸಂಬಂಧ ಗಟ್ಟಿಯಾಗುತ್ತದೆ.
> **-ವೀರಕಪುತ್ರ ಎಂ.ಶ್ರೀನಿವಾಸ್** ಪುಸ್ತಕಸಂತೆ ರೂವಾರಿ

ಸಿನಿಮಾ ಬದ್ಧತೆ ಏನು?: ಸಿನಿಮಾ ಮತ್ತು ಸಾಮಾಜಿಕ ಹೊಣೆಗಾರಿಕೆ ವಿಷಯದ ಬಗ್ಗೆ ಮಾತನಾಡಿದ ಪತ್ರಕರ್ತ ಚ.ಹ.ರಘುನಾಥ, ''ಕನ್ನಡ ಸಿನಿಮಾಗಳ ಸಾಮಾಜಿಕ ಜವಾಬ್ದಾರಿ ಅದರ ಬೇರುಗಳಲ್ಲೇ ಇದೆ. ಜನಪರ ಮೌಲ್ಯಗಳನ್ನು ತಲುಪಿಸುವ ಬದ್ಧತೆ, ನೆಲದ ಸಂಸ್ಕೃತಿ ಬಿಂಬಿಸುವುದು, ಭಾಷಾ ಸೊಗಡು ಒಳಗೊಳ್ಳುವಿಕೆ, ವರ್ತಮಾನದ ತವಕ-ತಲ್ಲಣಗಳನ್ನು ಕಟ್ಟಿಕೊಡುವ ಅಂಶಗಳು ಸಿನಿಮಾಗಳ ಸಾಮಾಜಿಕ ಹೊಣೆಗಾರಿಕೆ ಮಾನದಂಡಗಳು,'' ಎಂದರು. ಕಸಾಪ ಬೆಂ.ನಗರ ಜಿಲ್ಲಾಧ್ಯಕ್ಷ ಎಂ.ಪ್ರಕಾಶಮೂರ್ತಿ, ಸಾಹಿತಿ ನಾಗರಾಜ್ ಇದ್ದರು.

ವಿವಾಹಿತ ಪುತ್ರಿಯೂ ಅನುಕಂಪ ನೌಕರಿಗೆ ಅರ್ಹ

ವಿಕ ಸುದ್ದಿಲೋಕ ಬೆಂಗಳೂರು

ವಿವಾಹಿತ ಮಗಳು ಮೃತ ಸರಕಾರಿ ನೌಕರನ ಮೇಲೆ ಅವಲಂಬಿತಳಾಗಿದ್ದರೆ ಮತ್ತು ಅವರೊಂದಿಗೆ ವಾಸಿಸುತ್ತಿದ್ದರೆ ಅನುಕಂಪದ ಆಧಾರದಲ್ಲಿ ನೇಮಕಾತಿಗೆ ಅರ್ಹಳು ಎಂದು ಹೈಕೋರ್ಟ್ ಆದೇಶಿಸಿದೆ.

ಚಿತ್ರದುರ್ಗದ ಜೋಗಿಮಟ್ಟಿಯ ಆರ್.ಸವಿತಾ ಸಲ್ಲಿಸಿದ್ದ ಅರ್ಜಿಯನ್ನು ಆಲಿಸಿದ ನ್ಯಾಯಮೂರ್ತಿಗಳಾದ ಎಸ್.ಜಿ.ಪಂಡಿತ್ ಮತ್ತು ಕೆ.ರಾಜೇಶ್ ರೈ ಅವರನ್ನೊಳಗೊಂಡ ವಿಭಾಗೀಯ ಪೀಠವು, ''ಕುಟುಂಬದ ವ್ಯಾಖ್ಯಾನದಲ್ಲಿ ವಿವಾಹಿತ ಹೆಣ್ಣು ಮಕ್ಕಳನ್ನು ಸೇರಿಸುವ ಕರ್ನಾಟಕ ನಾಗರಿಕ ಸೇವೆಗಳ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು 1996ರ ತಿದ್ದುಪಡಿಯು ಹಿಂದಿನಿಂದಲೂ ಜಾರಿಯಲ್ಲಿದೆ ಮತ್ತು ವಿವಾಹಿತ ಮಗಳು ಅನುಕಂಪದ ನೇಮಕಾತಿಗೆ ಅರ್ಹಳಾಗಿದ್ದಾಳೆ,'' ಎಂದು ಅಭಿಪ್ರಾಯಪಟ್ಟಿದೆ.

''ಕುಟುಂಬ' ಮತ್ತು 'ಅವಲಂಬಿ' ಎಂಬ ಪದಗಳ ವ್ಯಾಖ್ಯಾನವನ್ನು ಅವಿವಾಹಿತರು, ವಿವಾಹಿತರು, ವಿಚ್ಛೇದಿತರು ಅಥವಾ ವಿಧವೆಯೇ ಆಗಿರಲಿ, ಅವರು ಮೃತ ಸರಕಾರಿ ಸೇವಕನ ಮೇಲೆ ಅವಲಂಬಿತರಾಗಿದ್ದರೆ ಮತ್ತು ಅವರೊಂದಿಗೆ ವಾಸಿಸುತ್ತಿದ್ದರೆ, ಅವರನ್ನು ಸೇರ್ಪಡೆ ಮಾಡಲು ವಿಸ್ತರಣೆ ಮಾಡಲಾಗಿತ್ತು. ಕರ್ನಾಟಕ ನಾಗರಿಕ ಸೇವಾ ನಿಯಮಗಳಿಗೆ ತಿದ್ದುಪಡಿಯನ್ನು ಪರ್ಯಾಯದ ಮೂಲಕ ಮಾಡಲಾಗಿದೆ. ಬದಲಿ ನಿಬಂಧನೆ ಅದರ ಆರಂಭದಿಂದಲೂ ಕಾನೂನಿನ ಭಾಗವಾಗಿದೆ ಎಂದು ಪರಿಗಣಿಸಲಾಗುತ್ತದೆ. ಅರ್ಜಿದಾರರು ವಿವಾಹಿತ ಮಗಳು ಎಂಬ ಕಾರಣಕ್ಕಾಗಿ ಮಾತ್ರ ಅನುಕಂಪದ ಆಧಾರದಲ್ಲಿ ನೇಮಕಾತಿ ಅರ್ಜಿ ತಿರಸ್ಕರಿಸಲಾಗುವುದಿಲ್ಲ'' ಎಂದು ನ್ಯಾಯಪೀಠ ಹೇಳಿದೆ.

''ಆದ್ದರಿಂದ ವಿವಾಹಿತ ಹೆಣ್ಣುಮಕ್ಕಳು ಇತರ ಅರ್ಹತಾ ಅವಶ್ಯಕತೆಗಳನ್ನು ಪೂರೈಸಿದರೆ ಅನುಕಂಪದ ನೇಮಕಾತಿಗಾಗಿ ಪರಿಗಣಿಸಲು ಅರ್ಹರಾಗಿರುತ್ತಾರೆ. ಅರ್ಜಿದಾರರ ತಾಯಿ ನಿವೃತ್ತ ಸರಕಾರಿ ಸೇವಕಿ ಮತ್ತು ಅವರು ಪಿಂಚಣಿ ಪಡೆಯುತ್ತಿದ್ದಾರೆಂಬ ಕಾರಣಕ್ಕೆ ಅನುಕಂಪದ ಆಧಾರದಲ್ಲಿ ನೇಮಕಾತಿಗಾಗಿ ಅರ್ಜಿದಾರರ ಮನವಿಯನ್ನು ತಿರಸ್ಕರಿಸಲು ಸಾಧ್ಯವಿಲ್ಲ'' ಎಂದೂ ನ್ಯಾಯಪೀಠ ಆದೇಶಿಸಿದೆ.

ಅರ್ಜಿಯನ್ನು ತಿರಸ್ಕರಿಸಿದ್ದ ಕೆಎಟಿ ಆದೇಶವನ್ನು ರದ್ದುಗೊಳಿಸಿರುವ ವಿಭಾಗೀಯ ಪೀಠ, ಸರಕಾರ ಮತ್ತು ಸಮಾಜ ಕಲ್ಯಾಣ ಇಲಾಖೆಯು ಅನುಕಂಪದ ಆಧಾರದ ಮೇಲೆ ನೇಮಕಾತಿಗೆ ಅರ್ಜಿದಾರರ ಮನವಿ ಪರಿಗಣಿಸಬೇಕು ಎಂದು ನಿರ್ದೇಶನ ನೀಡಿದೆ.

ಕೆಪಿಟಿಸಿಎಲ್ ಮೇಲ್ವಿಚಾರಣಾ ಶುಲ್ಕ ಹೆಚ್ಚಿಸುವಂತಿಲ್ಲ: ಹೈಕೋರ್ಟ್ ಆದೇಶ

ಬೆಂಗಳೂರು: ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ (ಕೆಇಆರ್‌ಸಿ) ಅನುಮೋದನೆಯಿಲ್ಲದೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು (ಕೆಪಿಟಿಸಿಎಲ್) ಸ್ವಯಂ ಪ್ರೇರಿತವಾಗಿ ವಿದ್ಯುತ್ ಕಾಮಗಾರಿಗಳನ್ನು ಕೈಗೊಳ್ಳುವ ಗ್ರಾಹಕರಿಗೆ ವಿಧಿಸುವ ಮೇಲ್ವಿಚಾರಣಾ ಶುಲ್ಕವನ್ನು ಪರಿಷ್ಕರಿಸುವ ಅಧಿಕಾರ ಹೊಂದಿಲ್ಲ ಎಂದು ಹೈಕೋರ್ಟ್ ತೀರ್ಪು ನೀಡಿದೆ.

ಮಹಾರಾಷ್ಟ್ರ ಮೂಲದ ಅನುಷ್ಕಾ ರಿಯಾಲ್ಟಿ ಕಂಪನಿಯು ಸರಕಾರದ ವಿರುದ್ಧ ಸಲ್ಲಿಸಿದ್ದ ಅರ್ಜಿಯನ್ನು ಮಾನ್ಯ ಮಾಡಿರುವ ನ್ಯಾ. ರವಿ ಹೊಸಮನಿ ಅವರಿದ್ದ ಏಕಸದಸ್ಯಪೀಠ, ಅರ್ಜಿದಾರರ ವಿರುದ್ಧ ಕೆಪಿಟಿಸಿಎಲ್ ಹೊರಡಿಸಿದ್ದ 1.2 ಕೋಟಿ ರೂ. ಬೇಡಿಕೆಯ ನೋಟಿಸ್ ಅನ್ನು ರದ್ದುಗೊಳಿಸಿತು. ಜತೆಗೆ ಕೆಇಆರ್‌ಸಿ ನಿಗದಿಪಡಿಸಿರುವ ನಿಯಮದಂತೆ ಮೇಲ್ವಿಚಾರಣಾ ಶುಲ್ಕ ಪಾವತಿಸಲು ಆದೇಶ ನೀಡಿದೆ.

ವಾದ-ಪ್ರತಿವಾದ ಆಲಿಸಿದ ನ್ಯಾಯಾಲಯ, ''ಸ್ವಯಂ ನಿರ್ವಹಿಸಿದ ವಿದ್ಯುತ್ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಮೇಲ್ವಿಚಾರಣಾ ಶುಲ್ಕಗಳನ್ನು ಪರಿಷ್ಕರಿಸಲು ಕೆಪಿಟಿಸಿಎಲ್‌ಗೆ ಶಾಸನಬದ್ಧ ಅಧಿಕಾರವಿಲ್ಲ, ಶುಲ್ಕಗಳ ಮೇಲ್ವಿಚಾರಣೆಯಂತಹ ಪರಿಷ್ಕರಣೆಗಳನ್ನು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು (ಕೆಇಆರ್‌ಸಿ) ಅನುಮೋದಿಸಬೇಕು,'' ಎಂದು ಆದೇಶಿಸಿದೆ.

2003ರ ವಿದ್ಯುತ್ ಕಾಯಿದೆಯ ಸೆಕ್ಷನ್ 39 ರಿಂದ 41ರ ಪ್ರಕಾರ ಕೆಪಿಟಿಸಿಎಲ್ ತನ್ನದೇ ಆದ ಮೇಲ್ವಿಚಾರಣಾ ಶುಲ್ಕಗಳನ್ನು ನಿಗದಿಪಡಿಸಲು ಅಥವಾ ಪರಿಷ್ಕರಿಸಲು ಅಧಿಕಾರ ಹೊಂದಿಲ್ಲ ಎಂದು ಉಲ್ಲೇಖಿಸಿರುವ ನ್ಯಾಯಾಲಯ, ''ಈ ನಿಬಂಧನೆಗಳು ಕೆಪಿಟಿಸಿಎಲ್‌ನಂತಹ ರಾಜ್ಯ ಪ್ರಸರಣ ಉಪಯುಕ್ತತೆ ಮತ್ತು ಪ್ರಸರಣ ಪರವಾನಗಿದಾರರ ಕಾರ್ಯಗಳು, ಕರ್ತವ್ಯಗಳು ಇತ್ಯಾದಿಗಳನ್ನು ನಿಗದಿಪಡಿಸಿವೆ. ವಾಸ್ತವವಾಗಿ ಸ್ವಯಂ ಕಾರ್ಯನಿರ್ವಹಣೆಯ ಕಾರ್ಯಗಳ ಮೇಲ್ವಿಚಾರಣೆಗಾಗಿ ಗ್ರಾಹಕರು ಪಾವತಿಸಬೇಕಾದ ಶುಲ್ಕಗಳನ್ನು ನಿರ್ಧರಿಸಲು ಅಥವಾ ಪರಿಷ್ಕರಿಸಲು ಕೆಪಿಟಿಸಿಎಲ್‌ಗೆ ಯಾವುದೇ ಅಧಿಕಾರ ನೀಡಿಲ್ಲ,'' ಎಂದು ಆದೇಶದಲ್ಲಿ ಹೇಳಿದೆ.

ಉಡುಪು ರಫ್ತುದಾರರಿಗಾಗಿ ಎಇಪಿಸಿ ವಿಚಾರ ಸಂಕಿರಣ

ವಿಕ ಸುದ್ದಿಲೋಕ ಬೆಂಗಳೂರು

ಮುಕ್ತ ವ್ಯಾಪಾರ ಒಪ್ಪಂದ (ಫ್ರೀ ಟ್ರೇಡ್ ಅಗ್ರಿಮೆಂಟ್-ಎಫ್‌ಟಿಎ) ವನ್ನು ಸಮರ್ಥವಾಗಿ ಅರ್ಥಮಾಡಿಕೊಂಡು ವ್ಯಾಪಾರ ವೃದ್ಧಿಗೆ ನೆರವಾಗುವ ಉದ್ದೇಶದಿಂದ ಅಪ್ಯಾರೆಲ್ ಎಕ್ಸ್‌ಪೋರ್ಟ್ ಪ್ರೊಮೋಶನ್ ಕೌನ್ಸಿಲ್ (ಎಇಪಿಸಿ) ಉಡುಪು ರಫ್ತುದಾರರಿಗಾಗಿ ದೇಶವ್ಯಾಪಿ ಸರಣಿ ವಿಚಾರ ಸಂಕಿರಣ ಆಯೋಜಿಸುತ್ತಿದೆ. ಇದರ ಭಾಗವಾಗಿ ನಗರದಲ್ಲಿ ಮೊದಲ ವಿಚಾರ ಸಂಕಿರಣ ನಡೆಯಿತು.

ಎಇಪಿಸಿ ಅಧ್ಯಕ್ಷ ಡಾ.ಎ.ಶಕ್ತಿವೇಲ್ ಅವರ ಪರಿಕಲ್ಪನೆಯಲ್ಲಿ ವಿಚಾರ ಸಂಕಿರಣ ಆಯೋಜಿಸಲಾಗುತ್ತಿದೆ. ಎಫ್‌ಟಿಎ ಜಾಲದಿಂದ ಲಭ್ಯವಾಗುತ್ತಿರುವ ಅವಕಾಶಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಜಾಗತಿಕ ಮಾರುಕಟ್ಟೆಯಲ್ಲಿ ಭಾರತೀಯ ಉಡುಪು ಉದ್ಯಮದ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸುವುದು ಈ ಉಪಕ್ರಮದ ಪ್ರಮುಖ ಉದ್ದೇಶವಾಗಿದೆ.

ಭಾರತದ ಸ್ಥಾನ ಬಲಪಡಿಸಲು ಎಇಪಿಸಿ ಸಂಕಲ್ಪ

ಬೆಂಗಳೂರಿನಲ್ಲಿ ನಡೆದ ವಿಚಾರಸಂಕಿರಣವನ್ನು ಉದ್ಘಾಟಿಸಿದ ಎಇಪಿಸಿ ಪ್ರಧಾನ ಕಾರ್ಯದರ್ಶಿ ಮಿಥಿಲೇಶ್ವರ್ ಠಾಕೂರ್, ಉಡುಪು ರಫ್ತು ಪ್ರಮಾಣ ವೃದ್ಧಿ ಹಾಗೂ ಜಾಗತಿಕ ಮೌಲ್ಯ ಸರಪಳಿಗಳಲ್ಲಿ ಭಾರತದ ಸ್ಥಾನವನ್ನು ಬಲಪಡಿಸುವಲ್ಲಿ ಎಫ್‌ಟಿಎ ವಹಿಸುವ ಪಾತ್ರವನ್ನು ವಿವರಿಸಿದರು.

ಉಡುಪು ರಫ್ತುದಾರರಿಗಾಗಿ ಆಯೋಜಿಸಿದ್ದ ವಿಚಾರ ಸಂಕಿರಣದಲ್ಲಿ ಎಇಪಿಸಿ ಪ್ರಧಾನ ಕಾರ್ಯದರ್ಶಿ ಮಿಥಿಲೇಶ್ವರ್ ಠಾಕೂರ್, ದೋನಾ ಘೋಷ್ ಉಪಸ್ಥಿತರಿದ್ದರು.

''ಭಾರತವು ಹಲವು ಪ್ರಮುಖ ಮಾರುಕಟ್ಟೆಗಳಲ್ಲಿ ಪ್ರವೇಶ ಪಡೆದಿದ್ದರೂ, ಈ ಒಪ್ಪಂದಗಳ ಬಗ್ಗೆ ಹೆಚ್ಚಿನ ಅರಿವು ಮೂಡಿಸುವುದು ಹಾಗೂ ಪರಿಣಾಮಕಾರಿ ಬಳಕೆ ಮೂಲಕವೇ ರಫ್ತು ಅವಕಾಶಗಳನ್ನು ನೈಜ ಬೆಳವಣಿಗೆಯಾಗಿ ಪರಿವರ್ತಿಸಬಹುದು,'' ಎಂದು ಅವರು ಹೇಳಿದರು.

ಡೈರೆಕ್ಟರ್ ಜನರಲ್ ಆಫ್ ಫಾರಿನ್ ಟ್ರೇಡ್‌ನ ಜಂಟಿ ನಿರ್ದೇಶಕಿ ದೋನಾ ಘೋಷ್, ಸಿಂಬಯೋಸಿಸ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸ್ಟಡೀಸ್‌ನ ಅರ್ಥಶಾಸ್ತ್ರ ಮತ್ತು ಅಂತಾರಾಷ್ಟ್ರೀಯ ವ್ಯಾಪಾರದ ಸಹ ಪ್ರಾಧ್ಯಾಪಕ ಡಾ. ಸಂಜಯ್ ಕುಮಾರ್ ಮಂಗ್ಲಾ ಮಾತನಾಡಿದರು.

ಐಟಿಪಿಒ ವ್ಯಾಪಾರ ವಿಭಾಗದ ಉಪಾಧ್ಯಕ್ಷೆ ಡಾ. ತಮನ್ನಾ ಚತುರ್ವೇದಿ, ಎಇಪಿಸಿಯ ದಕ್ಷಿಣ ವಲಯದ ಮಹಾಪ್ರಬಂಧಕ ಸಿ. ಈಶ್ವರಸುಂದರ್ ಪಾಲ್ಗೊಂಡಿದ್ದರು.

ಸಂಭ್ರಮದ ಶನಿವಾರ ಜಾರಿಗೆ ವೇಳಾಪಟ್ಟಿ

ವಿಕ ಸುದ್ದಿಲೋಕ ಬೆಂಗಳೂರು

ರಾಜ್ಯದ ಸರಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಪ್ರತಿ ತಿಂಗಳ ಮೂರನೇ ಶನಿವಾರವನ್ನು ಬ್ಯಾಗ್ ರಹಿತ ದಿನವಾಗಿ ಆಚರಿಸಲಾಗುತ್ತಿದ್ದು, ಈ ಕಾರ್ಯಕ್ರಮಕ್ಕೆ 'ಸಂಭ್ರಮದ ಶನಿವಾರ' ಎಂದು ಹೆಸರಿಡಲಾಗಿದೆ. ಒತ್ತಡವಿಲ್ಲದ, ಸಂತಸದಾಯಕ ಕಲಿಕಾ ವಾತಾವರಣವನ್ನು ನಿರ್ಮಿಸುವ ಉದ್ದೇಶದಿಂದ ಆರಂಭಿಸಿರುವ ಈ ಕಾರ್ಯಕ್ರಮದ ಸಮರ್ಪಕ ಜಾರಿಗೆ ಶಿಕ್ಷಣ ಇಲಾಖೆ ಮುಂದಾಗಿದೆ.

ಶಾಲೆಗಳಲ್ಲಿ ಯಾವ ತಿಂಗಳಿನಲ್ಲಿ ಯಾವ ವಿಷಯ ಕಲಿಸಬೇಕು ಎಂಬ ಬಗ್ಗೆ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಯು ಸುತ್ತೋಲೆ ಹೊರಡಿಸಿ ಶಾಲೆಗಳಿಗೆ ಮಾಹಿತಿ ನೀಡಿದೆ. ವಿದ್ಯಾರ್ಥಿಗಳೇ ಸ್ವತಃ ಕಲಿಯಬಹುದಾದ ಚಟುವಟಿಕೆಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಲಾಗುತ್ತಿದ್ದು, ಶಿಕ್ಷಕರು ಈ ಬಗ್ಗೆ ಗಮನಹರಿಸುವಂತೆ ಸೂಚಿಸಲಾಗಿದೆ.

ಹಿಂದಿನ ಬಜೆಟ್‌ನಲ್ಲಿ ವಿಶ್ವವಿದ್ಯಾಲಯಗಳಲ್ಲಿನ 1000 ಹುದ್ದೆಗಳನ್ನು ಹಂತಹಂತವಾಗಿ ಭರ್ತಿ ಮಾಡಲಾಗುವುದು ಎಂದು ಸರಕಾರ ಹೇಳಿತ್ತು. ಆದರೆ, ಇದುವರೆಗೆ ಯಾವುದೇ ಪ್ರಕ್ರಿಯೆಗಳು ನಡೆಯದಿದ್ದರಿಂದ ವಿಶ್ವವಿದ್ಯಾಲಯಗಳು ಸರಕಾರಕ್ಕೆ ಖಾಲಿ ಹುದ್ದೆಗಳ ಭರ್ತಿಗೆ ಪ್ರಸ್ತಾವನೆಗಳನ್ನು ಕಳಿಸಿ ಸುಮ್ಮನಾಗುತ್ತಿವೆ.

ಅತಿ ಹೆಚ್ಚು ಬೋಧಕ ಹುದ್ದೆ ಖಾಲಿ ಇರುವ ಟಾಪ್ 10 ವಿವಿಗಳು (2026 ಜನವರಿವರೆಗೆ)

ವಿಶ್ವವಿದ್ಯಾಲಯ	ಮಂಜೂರು	ಖಾಲಿ ಹುದ್ದೆ
ಕರ್ನಾಟಕ	620	422
ಮೈಸೂರು	572	391
ಮಹಾರಾಣಿ ಕ್ಲಸ್ಟರ್	272	272
ಬೆಂಗಳೂರು	365	245
ಗುಲ್ಬರ್ಗ	206	171
ಬೆಂಗಳೂರು ನಗರ	161	151
ಮಂಗಳೂರು	273	150
ತುಮಕೂರು	217	103
ನೃಪತುಂಗ	100	100
ವಿಶ್ವೇಶ್ವರ ತಾಂತ್ರಿಕ ವಿವಿ	228	92

ಹುದ್ದೆ ಮಂಜೂರಾದರೂ ಭರ್ತಿಯೇ ಇಲ್ಲ

ಬಾಗಲಕೋಟೆ ವಿವಿ 12, ಚಾಮರಾಜನಗರ ವಿವಿ 36, ಬೀದರ್ ವಿವಿ 29, ಕೊಪ್ಪಳ ವಿವಿ 12, ಕೊಡಗು ವಿವಿ 80, ಹಾಸನ ವಿವಿ 27, ಡಾ.ಬಿಆರ್ ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿವಿ17, ಮಹಾರಾಣಿ ಕ್ಲಸ್ಟರ್ ವಿವಿ 272, ನೃಪತುಂಗ ವಿವಿ 100, ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿವಿ 15 ಹುದ್ದೆಗಳು ಮಂಜೂರಾಗಿವೆ. ಆದರೆ, ಭರ್ತಿ ಆಗಿಲ್ಲ.

ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ಸ್ವಯಂ ಸೇವಕರು ಗಿಡ ನೆಟ್ಟರು.

11 ಕಿ.ಮೀ ಉದ್ದದ ಎಸ್.ಎಂ.ಕೃಷ್ಣ ದಶಪಥ ರಸ್ತೆ ಸಂಚಾರಕ್ಕೆ ಮುಕ್ತ | ಅಭಿವೃದ್ಧಿ ಯೋಜನೆಗಳಿಗೆ ಜಾಗ ಬಿಟ್ಟುಕೊಟ್ಟವರ ಹೆಸರು ಫಲಕದಲ್ಲಿ ಅಳವಡಿಕೆ

ಪಿಆರ್‌ಆರ್ ನಿರ್ಮಾಣಕ್ಕೆ ಸರಕಾರ ಬದ್ಧ: ಸಿಎಂ

■ **ವಿಕ ಸುದ್ದಿಲೋಕ** ಬೆಂಗಳೂರು

ಬೆಂಗಳೂರಿನ ಭವಿಷ್ಯ ಮತ್ತು ಸಂಚಾರ ದಟ್ಟಣೆ ಸಮಸ್ಯೆ ನಿವಾರಿಸಲು 123 ಕಿ.ಮೀ ಉದ್ದದ ಪೆರಿಫೆರಲ್ ವರ್ತುಲ ರಸ್ತೆ (ಪಿಆರ್‌ಆರ್) ನಿರ್ಮಾಣ ಯೋಜನೆಯನ್ನು ಅನುಷ್ಠಾನಗೊಳಿಸಲು ರಾಜ್ಯ ಸರಕಾರ ದಿಟ್ಟ ನಿರ್ಧಾರ ಕೈಗೊಂಡಿದೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ (ಬಿಡಿಎ) ಹಮ್ಮಿಕೊಂಡಿದ್ದ ನಾಡಪ್ರಭು ಕೆಂಪೇಗೌಡರ 517ನೇ ಜಯಂತಿ ಕಾರ್ಯಕ್ರಮದಲ್ಲಿ 'ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ದಶಪಥ ರಸ್ತೆ'ಯನ್ನು ಸಾರ್ವಜನಿಕರ ಸಂಚಾರಕ್ಕೆ ಮುಕ್ತಗೊಳಿಸಿ ಅವರು ಮಾತನಾಡಿದರು.

''ಹಿಂದಿನ ಸರಕಾರಗಳು ಪಿಆರ್‌ಆರ್ ಯೋಜನೆಯನ್ನು ಕಾರ್ಯಗತ ಮಾಡಲಿಲ್ಲ. ಆದರೆ, ಈ ನಗರ ಉಳಿಯಬೇಕಾದರೆ ಈ ರಸ್ತೆ ಅನಿವಾರ್ಯ. ಬಿಡಿಎ ಹಳೆ ದರಕ್ಕೆ ಬದಲಾಗಿ ಭೂಮಾಲೀಕರಿಗೆ ಶೇ.35 ವಾಣಿಜ್ಯ ಅಥವಾ ಶೇ.40ರಷ್ಟು ಅಭಿವೃದ್ಧಿಪಡಿಸಿದ ಭೂಮಿ, 2013ರ ಭೂಸ್ವಾಧೀನ ಕಾಯಿದೆ ಅನ್ವಯ ನಗದು ಪರಿಹಾರ ಮತ್ತು ಟಿಡಿಆರ್ ಸೇರಿದಂತೆ 5 ಪರಿಹಾರ ಆಯ್ಕೆಗಳನ್ನು ನೀಡಿದೆ. ಭೂಮಾಲೀಕರು ತಮಗೆ ಸೂಕ್ತವಾದ ಪರಿಹಾರವನ್ನು ಆಯ್ಕೆ ಮಾಡಿಕೊಳ್ಳಬಹುದು. ನಾವು ಭೂಮಾಲೀಕರ ಹಿತ ಕಾಯುತ್ತೇವೆ,'' ಎಂದು ಭರವಸೆ ನೀಡಿದರು.

''ಉದ್ಘಾಟನೆಗೊಂಡಿರುವ 11 ಕಿ.ಮೀ ಉದ್ದದ ಎಸ್.ಎಂ.ಕೃಷ್ಣ ದಶಪಥ ರಸ್ತೆಯು ಮುಂದಿನ ದಿನಗಳಲ್ಲಿ 123 ಕಿ.ಮೀ ಉದ್ದದ ರಸ್ತೆಯಾಗಿ ಪರಿವರ್ತನೆಯಾಗಲಿದೆ. ಮೈಸೂರು ರಸ್ತೆಯಿಂದ ಎಲೆಕ್ಟ್ರಾನಿಕ್ ಸಿಟಿಗೆ ಸಂಪರ್ಕ ಕಲ್ಪಿಸುವ ಈ ಯೋಜನೆಗೆ ಈಗಾಗಲೇ ಒಂದು ಹಂತದ ಟೆಂಡರ್ ಕರೆಯಲಾಗಿದ್ದು, ಸದ್ಯದಲ್ಲೇ ಅಂತಿಮ ಅಧಿಸೂಚನೆ ಹೊರಡಿಸಲಾಗುವುದು,'' ಎಂದು ಮಾಹಿತಿ ನೀಡಿದರು.

''ನಾಡಪ್ರಭು ಕೆಂಪೇಗೌಡರು ದೂರದೃಷ್ಟಿಯ ಮಹಾನ್ ಚೇತನ. ಕೆರೆಗಳನ್ನು ಕಟ್ಟಿದ ಭಗೀರಥ, ದೇವಾಲಯಗಳನ್ನು ನಿರ್ಮಿಸಿದ ದೈವ ಭಕ್ತ, ವಿವಿಧ ಪೇಟೆಗಳನ್ನು ನಿರ್ಮಿಸಿ ಎಲ್ಲಾ ಸಮುದಾಯದವರಿಗೆ ಆದ್ಯತೆ ನೀಡಿ ಆರ್ಥಿಕ ಶಕ್ತಿ ತುಂಬಿದ ಕೆಚ್ಚೆದೆಯ ಹಾಗೂ ಸರ್ವ ಜನಾಂಗದ ನಾಯಕರು,'' ಎಂದು ಸ್ಮರಿಸಿದರು.

ಕೆಂಪೇಗೌಡರ ಹೆಸರಿಡಲು ಒತ್ತಾಯ

''ಪಿಆರ್‌ಆರ್, ನಮ್ಮ ಮೆಟ್ರೊ ನಿಲ್ದಾಣ ಹಾಗೂ ಯಾವುದಾದರೂ ಒಂದು ವಿಶ್ವವಿದ್ಯಾಲಯಕ್ಕೆ ನಾಡಪ್ರಭು ಕೆಂಪೇಗೌಡ ಅವರ ಹೆಸರಿಡಬೇಕು. ರೇಸ್‌ಕೋರ್ಸ್ ಸ್ಥಳಾಂತರವಾದ ನಂತರ ಆ ಜಾಗದಲ್ಲಿ ಕೆಂಪೇಗೌಡರ ಬೃಹತ್ ಪ್ರತಿಮೆ ಸ್ಥಾಪಿಸಿ, ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿಪಡಿಸಬೇಕು. ನಗರದಲ್ಲಿನ ಕೋಟೆಗಳನ್ನು ಅಭಿವೃದ್ಧಿಪಡಿಸಬೇಕು. ಎಲ್ಲ ಜಿಲ್ಲೆಗಳಲ್ಲಿ ಕೆಂಪೇಗೌಡರ ಭವನ ನಿರ್ಮಿಸಬೇಕು. 1ನೇ ತರಗತಿಯಿಂದ ಪಿಯುಸಿವರೆಗೆ ಕೆಂಪೇಗೌಡರ ಕುರಿತು ಪಠ್ಯ ಅಳವಡಿಸಬೇಕು,'' ಎಂದು ನಂಜಾವಧೂತ ಸ್ವಾಮೀಜಿ ಆಗ್ರಹಿಸಿದರು.

ಬಿಡದಿ ಟೌನ್‌ಶಿಪ್‌ಗೆ ವಿರೋಧವೇಕೆ?

ಉಪ ಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ಮಾತನಾಡಿ, ''ಬೆಂಗಳೂರು ಅಭಿವೃದ್ಧಿಗೆ ಸಂಬಂಧಿಸಿದ ಹಲವು ಯೋಜನೆಗಳಿಗೆ ಪ್ರತಿಪಕ್ಷಗಳು ಅನಗತ್ಯ ವಿರೋಧ ವ್ಯಕ್ತಪಡಿಸುತ್ತಿವೆ. ಸಿದ್ದರಾಮಯ್ಯ ಅವರು ಹೆಬ್ಬಾಳದಿಂದ ಚಾಲುಕ್ಯ ವೃತ್ತದವರೆಗೆ ಉಕ್ಕಿನ ಮೇಲ್ಸೇತುವೆ ನಿರ್ಮಿಸಲು ಮುಂದಾದಾಗ ವಿರೋಧಿಸಿದ್ದರು. ಬೆಂಗಳೂರು ನಗರದ ಮೇಲಿನ ಒತ್ತಡ ಕಡಿಮೆ ಮಾಡಬೇಕೆಂಬ ನಿಟ್ಟಿನಲ್ಲಿ ಸುಂದರವಾದ ಬಿಡದಿ ಟೌನ್‌ಶಿಪ್ ನಿರ್ಮಿಸಲು ತೀರ್ಮಾನಿಸಲಾಗಿದೆ. ಇದನ್ನೂ ವಿರೋಧಿಸುತ್ತಿದ್ದಾರೆ. ಬೆಂಗಳೂರು ಅಭಿವೃದ್ಧಿಯಾಗಬಾರದೇ?,'' ಎಂದು ಪ್ರಶ್ನಿಸಿದರು.

''ಪ್ರತಿಪಕ್ಷಗಳು ಸರಕಾರಕ್ಕೆ, ಅಭಿವೃದ್ಧಿ ಕಾರ್ಯಗಳಿಗೆ ಪೂರಕವಾದ ಸಲಹೆ-ಸೂಚನೆಗಳನ್ನು ನೀಡಬೇಕು. ಬೆಂಗಳೂರಿನ ಬೆಳವಣಿಗೆ ಮತ್ತು ಕರ್ನಾಟಕದ ಅಭಿವೃದ್ಧಿಗೆ ಸಹಕಾರ ನೀಡುವ ಮನೋಭಾವವನ್ನು ಜನರು ನಿರೀಕ್ಷಿಸುತ್ತಿದ್ದಾರೆ. ವಿನಾಕಾರಣ ಅಭಿವೃದ್ಧಿ ಕಾರ್ಯಗಳಿಗೆ ವಿರೋಧಿಸುವ ನಿಮ್ಮ ಚಿಂತನೆಗಳನ್ನು ರಾಜ್ಯದ ಜನ ಒಪ್ಪುವುದಿಲ್ಲ,'' ಎಂದು ತಿರುಗೇಟು ನೀಡಿದರು.

ಇದೇ ಸಂದರ್ಭದಲ್ಲಿ 'ಶೇಪಿಂಗ್ ದಿ ಗ್ಲೋಬಲ್ ಬೆಂಗಳೂರು' ಪುಸ್ತಕ ಬಿಡುಗಡೆಗೊಳಿಸಲಾಯಿತು. ಜಿಕೆವಿಕೆ ಸಂಸ್ಥೆ ಸೇರಿದಂತೆ ಸಾಧಕರಿಗೆ ಕೆಂಪೇಗೌಡ ಅಂತಾರಾಷ್ಟ್ರೀಯ ಪ್ರಶಸ್ತಿ ಪ್ರದಾನ ಮಾಡಲಾಯಿತು. ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಸ್ಫಟಿಕಪುರಿ ಮಹಾ ಸಂಸ್ಥಾನದ ಪೀಠಾಧ್ಯಕ್ಷ ನಂಜಾವಧೂತ ಸ್ವಾಮೀಜಿ, ಸಚಿವರಾದ ಕೆ.ಎಚ್. ಮುನಿಯಪ್ಪ, ಕೆ.ಜೆ.ಜಾರ್ಜ್, ಕೃಷ್ಣಬೈರೇಗೌಡ, ಬೈರತಿ ಸುರೇಶ್, ಶಾಸಕರಾದ ಎನ್.ಎ.ಹ್ಯಾರಿಸ್, ಎಸ್.ಟಿ.ಸೋಮಶೇಖರ್, ಎಚ್.ಸಿ.ಬಾಲಕೃಷ್ಣ, ಶಿವಣ್ಣ, ಡಿ.ಬಿ.ಜಯಚಂದ್ರ ಇದ್ದರು.



ಬೆಂಗಳೂರಿನ ಸಾಕಷ್ಟು ಸಮಸ್ಯೆಗಳನ್ನು ಬಗೆಹರಿಸಲು ಕೆಂಪೇಗೌಡರೇ ಪರಿಹಾರವಾಗಿದ್ದಾರೆ. ಹಾಗಾಗಿ, ನಾಡಪ್ರಭು ಕೆಂಪೇಗೌಡರ ಹೆಸರಿನಲ್ಲಿ ಇನ್ನಷ್ಟು ಕೆಲಸಗಳು ಆಗಬೇಕಿವೆ.

-ನಿರ್ಮಲಾನಂದನಾಥ ಸ್ವಾಮೀಜಿ ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ

ಕೆಂಪೇಗೌಡ ಬಡಾವಣೆ ನಿರ್ಮಾಣ ಕಾಮಗಾರಿ ಶೇ. 95ರಷ್ಟು ಪೂರ್ಣಗೊಂಡಿದೆ. ಜಾಗತಿಕ ತಾಪಮಾನ ಏರಿಕೆ, ಹವಾಮಾನ ಬದಲಾವಣೆ ಎದುರಿಸಲು ಸಿಎಂ ಅವರ ನೇತೃತ್ವದಲ್ಲಿ 15 ಲಕ್ಷ ಗಿಡಗಳನ್ನು ನೆಟ್ಟಿದ್ದೇವೆ.

-ಎನ್.ಎ.ಹ್ಯಾರಿಸ್ ಬಿಡಿಎ ಅಧ್ಯಕ್ಷ

ಪಶ್ಚಿಮ-ಉತ್ತರ ಭಾಗಕ್ಕೆ ಸಂಪರ್ಕ

ನಾಡಪ್ರಭು ಕೆಂಪೇಗೌಡ ಜಯಂತಿಯ ಕಾರ್ಯಕ್ರಮಕ್ಕೂ ಮುನ್ನ ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ನಿರ್ಮಿಸಲಾಗಿರುವ ಮಾಜಿ ಮುಖ್ಯಮಂತ್ರಿ 'ಎಸ್.ಎಂ. ಕೃಷ್ಣ ದಶಪಥ ರಸ್ತೆ'ಯನ್ನು ಸಿಎಂ ಡಿ.ಕೆ.ಶಿವಕುಮಾರ್ ಉದ್ಘಾಟಿಸಿದರು. ಈ ರಸ್ತೆಯು ಟೋಲ್ ರಹಿತವಾಗಿದ್ದು, ನೈಸ್ ರಸ್ತೆಗೆ ಪರ್ಯಾಯ ಮಾರ್ಗವಾಗಿದೆ. ಪಶ್ಚಿಮ ಹಾಗೂ ಉತ್ತರ ಬೆಂಗಳೂರಿನ ನಡುವೆ ಸಂಪರ್ಕ ಕೊಂಡಿಯಾಗಿದೆ.

ಟೌನ್ ಪ್ಲ್ಯಾನಿಂಗ್ ಕಾಲೇಜು

''ನಗರದಲ್ಲಿರುವ ಬಾಬು ಜಗಜೀವನ್‌ರಾಂ ಭವನದ ಪಕ್ಕದ ಸುಮಾರು 5 ಎಕರೆ ಜಾಗದಲ್ಲಿ ಕೆಂಪೇಗೌಡ ಭವನ ಹಾಗೂ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಮಾರ್ಗದರ್ಶನದಲ್ಲಿ 100 ಕೋಟಿ ರೂ. ವೆಚ್ಚದ ನೂತನ ಟೌನ್ ಪ್ಲ್ಯಾನಿಂಗ್ ಕಾಲೇಜು ನಿರ್ಮಿಸಲಾಗುವುದು. ಕೆಂಪೇಗೌಡರ ಹುಟ್ಟೂರು, ದೇವನಹಳ್ಳಿಯ ಆವತಿಯಲ್ಲಿ ಒಂಬತ್ತೂವರೆ ಎಕರೆ ಜಾಗ ಗುರುತಿಸಲಾಗಿದ್ದು, ಮುಂದಿನ ವರ್ಷ 100 ಕೋಟಿ ರೂ. ವೆಚ್ಚದಲ್ಲಿ ಅಲ್ಲಿಯೂ ಕೆಂಪೇಗೌಡರ ಕುರಿತ ಅಧ್ಯಯನ ಕೇಂದ್ರ ತೆರೆಯುವ ಮೂಲಕ ಆ ಗ್ರಾಮವನ್ನೂ ಅಭಿವೃದ್ಧಿಪಡಿಸಲಾಗುವುದು. ಮಾಗಡಿಯಲ್ಲಿ ಕೆಂಪೇಗೌಡರ ಕೋಟೆ ಅಭಿವೃದ್ಧಿ, ಕೆಂಪಾಪುರ ಹಾಗೂ ಕುತ್ತಿಗಾಲದಲ್ಲೂ 10 ಕೋಟಿ ರೂ. ವೆಚ್ಚದ ಅಭಿವೃದ್ಧಿ ಕಾಮಗಾರಿಗಳು ಪ್ರಗತಿಯಲ್ಲಿವೆ,'' ಎಂದು ಸಿಎಂ ಹೇಳಿದರು. ''ಬೆಂಗಳೂರು ವಿಶ್ವದ ನಗರ. ಇಲ್ಲಿನ ಸಂಚಾರ ದಟ್ಟಣೆ ನಿವಾರಣೆಗೆ ದೊಡ್ಡ ಟನಲ್ ರಸ್ತೆ ನಿರ್ಮಾಣ ಸೇರಿದಂತೆ ಅನೇಕ ಯೋಜನೆ ರೂಪಿಸಲಾಗಿದೆ. ನೀವು ನನ್ನ ಮೇಲೆ ಇಟ್ಟಿರುವ ವಿಶ್ವಾಸ ಉಳಿಸಿಕೊಂಡು ಹೋಗುತ್ತೇನೆ,'' ಎಂದರು.

ವಾಲ್ ಆಫ್ ಗ್ರಾಟಿಟ್ಯೂಡ್: ''ಕೈಗಾರಿಕಾ ಪ್ರದೇಶ, ಶಾಲೆಗಳು, ಕೆರೆ, ರಸ್ತೆ ನಿರ್ಮಾಣ ಸೇರಿದಂತೆ ಜನಪರ ಯೋಜನೆಗಳಿಗೆ ಯಾವುದೇ ತಕರಾರು ಮಾಡದೆ ಜಾಗ ನೀಡುವ ಭೂಮಾಲೀಕರ ಹೆಸರನ್ನು 'ವಾಲ್ ಆಫ್ ಗ್ರಾಟಿಟ್ಯೂಡ್ (ಕೃತಜ್ಞತಾ ಫಲಕ)'ನಲ್ಲಿ ಸೇರಿಸಲು ಸರಕಾರ ತೀರ್ಮಾನಿಸಿದೆ. ಈ ಕುರಿತು ಆದೇಶ ಕೂಡ ಹೊರಡಿಸಲಾಗುವುದು,'' ಎಂದು ಘೋಷಿಸಿದರು.

''ಬೆಂಗಳೂರಿನಲ್ಲಿ ಪ್ರತಿ ಶಾಲೆಗಳು ಒಂದೊಂದು ಪ್ರದೇಶದ ಉಸ್ತುವಾರಿ ವಹಿಸಿಕೊಂಡು ಅಲ್ಲಿ ಮಕ್ಕಳಿಂದ ಗಿಡ ನೆಡಿಸಿ ಬೆಳೆಸುವ ಕಾರ್ಯಕ್ರಮ ಮಾಡಬೇಕು. ಈ ವಿಚಾರದಲ್ಲಿ ಜಿಬಿಎ ವತಿಯಿಂದ ಸ್ಪರ್ಧೆ ಏರ್ಪಡಿಸಲಾಗುವುದು,'' ಎಂದರು. ಕೆಂಪೇಗೌಡ ಬಡಾವಣೆಯಲ್ಲೂ 11 ಕಿ.ಮೀ ಉದ್ದದ ರಸ್ತೆ ನಿರ್ಮಾಣಕ್ಕೆ ಜಾಗ ಬಿಟ್ಟುಕೊಟ್ಟಿರುವ ಭೂಮಾಲೀಕರ ಹೆಸರುಳ್ಳ 'ವಾಲ್ ಆಫ್ ಗ್ರಾಟಿಟ್ಯೂಡ್' ಫಲಕ ಅಳವಡಿಸಲಾಗಿದೆ.

ಸುರಂಗ ರಸ್ತೆ ನಿರ್ಮಾಣಕ್ಕೆ ಇಂದು ಸಿಎಂ ಭೂಮಿ ಪೂಜೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ (ಬಿಡಿಎ) ನಗರದ ಹೆಬ್ಬಾಳ ಜಂಕ್ಷನ್‌ನಿಂದ ಯುಎಎಸ್ ಕ್ವಾಟ್ರಸ್ ವರೆಗೆ ಕೈಗೊಂಡಿರುವ ಸುರಂಗ ರಸ್ತೆ ನಿರ್ಮಾಣಕ್ಕೆ ಮುಖ್ಯಮಂತ್ರಿ ಡಿ. ಕೆ.ಶಿವಕುಮಾರ್ ಭಾನುವಾರ ಭೂಮಿ ಪೂಜೆ ನೆರವೇರಿಸಲಿದ್ದಾರೆ. ಬೆಳಗ್ಗೆ 9.30ಕ್ಕೆ ಹೆಬ್ಬಾಳ ಜಂಕ್ಷನ್‌ನಲ್ಲಿ ಮುಖ್ಯಮಂತ್ರಿಯವರು ಯೋಜನೆಗೆ ಚಾಲನೆ ನೀಡಲಿದ್ದಾರೆ. 6 ಪಥದ ಸುರಂಗ ರಸ್ತೆ ಇದಾಗಿದ್ದು, 2.228 ಕಿ.ಮೀ ಉದ್ದವಿರಲಿದೆ. ಸುಮಾರು 60 ಅಡಿ ಆಳದಲ್ಲಿ ಸುರಂಗ ಮಾರ್ಗ ಸಾಗಲಿದೆ. ಪ್ರತಿ ಪಥವು ತಲಾ 3.5 ಮೀಟರ್ ಅಗಲವಿರಲಿದ್ದು, ಸುಮಾರು 1139 ಕೋಟಿ ರೂ. ವೆಚ್ಚ ಮಾಡಲಾಗುತ್ತಿದೆ. ಸುರಂಗ ರಸ್ತೆ ನಿರ್ಮಾಣ ಕಾಮಗಾರಿಯನ್ನು 18 ತಿಂಗಳಲ್ಲಿ ಪೂರ್ಣಗೊಳಿಸಬೇಕೆಂದು ಗುತ್ತಿಗೆದಾರರಿಗೆ ಷರತ್ತು ವಿಧಿಸಲಾಗಿದೆ.

'ಯಾವುದೇ ಮಗು ಪೋಲಿಯೊ ಲಸಿಕೆಯಿಂದ ವಂಚಿತವಾಗದಂತೆ ಕ್ರಮ'

ಬೆಂಗಳೂರು: ಬೆಂಗಳೂರು ಪೂರ್ವ ನಗರ ಪಾಲಿಕೆ ವ್ಯಾಪ್ತಿಯಲ್ಲಿ ನೆಲೆಸಿರುವ ಐದು ವರ್ಷದೊಳಗಿನ ಯಾವುದೇ ಮಕ್ಕಳು ಪೋಲಿಯೊ ಲಸಿಕೆಯಿಂದ ವಂಚಿತರಾಗದಂತೆ ಗಮನ ಹರಿಸಬೇಕು ಎಂದು ಆಯುಕ್ತ ಡಿ.ಎಸ್.ರಮೇಶ್ ಅಧಿಕಾರಿಗಳಿಗೆ ಸೂಚಿಸಿದರು. ರಾಷ್ಟ್ರೀಯ ಪಲ್ಸ್ ಪೋಲಿಯೊ ಅಭಿಯಾನದ ಅಂಗವಾಗಿ ಪಾಲಿಕೆಯ ಸಾರ್ವಜನಿಕ ಆರೋಗ್ಯ ವಿಭಾಗ, ಹ್ಯುಮಾನಿಟಿ ಕಾಲ್ಸ್ ಟ್ರಸ್ಟ್ ಹಾಗೂ ಬೈಕರ್ಸ್ ಯೂನಿಟಿ ಕ್ಲಬ್ ಇಂಡಿಯಾ ಸಂಸ್ಥೆಯ ಸಹಯೋಗದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಬೈಕ್ ರ‍್ಯಾಲಿಗೆ ಚಾಲನೆ ನೀಡಿ ಅವರು ಮಾತನಾಡಿದರು. ''ಜೂ.28ರ ಭಾನುವಾರ ನಡೆಯಲಿರುವ ರಾಷ್ಟ್ರೀಯ ಪಲ್ಸ್ ಪೋಲಿಯೊ ಅಭಿಯಾನಕ್ಕೆ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ. ಒಟ್ಟು 601ಕ್ಕೂ ಅಧಿಕ ಪಲ್ಸ್ ಪೋಲಿಯೊ ಲಸಿಕಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಐದು ವರ್ಷದೊಳಗಿನ 1,74,688ಕ್ಕೂ ಹೆಚ್ಚು ಮಕ್ಕಳನ್ನು ಗುರುತಿಸಿದ್ದು, ಎಲ್ಲರಿಗೂ ಪೋಲಿಯೊ ಲಸಿಕೆ ಹಾಕಲಾಗುವುದು,'' ಎಂದು ಹೇಳಿದರು. ''ಅಭಿಯಾನದ ಯಶಸ್ವಿ ಅನುಷ್ಠಾನಕ್ಕಾಗಿ 109 ಮಂದಿ ಮೇಲ್ವಿಚಾರಕರು ಹಾಗೂ 2106 ಮಂದಿ ಸ್ವಯಂಸೇವಕರನ್ನು ನಿಯೋಜಿಸಲಾಗಿದೆ. ಸಾರ್ವಜನಿಕರ ಅನುಕೂಲಕ್ಕಾಗಿ 87ಕ್ಕೂ ಅಧಿಕ ಟ್ರಾನ್ಸಿಟ್ ಬೂತ್‌ಗಳು, 62 ಮೊಬೈಲ್ ತಂಡಗಳನ್ನು ನೇಮಿಸಲಾಗಿದೆ. ವಿಶೇಷ ತಂಡಗಳು ಮನೆ ಮನೆಗೂ ಭೇಟಿ ನೀಡಿ ಮಕ್ಕಳಿಗೆ ಪೋಲಿಯೊ ಲಸಿಕೆ ಹಾಕಲಿವೆ,'' ಎಂದು ತಿಳಿಸಿದರು. ''ಪ್ರತಿಯೊಬ್ಬ ಪೋಷಕರು ತಮ್ಮ ಐದು ವರ್ಷದೊಳಗಿನ ಮಕ್ಕಳಿಗೆ ಕಡ್ಡಾಯವಾಗಿ ಎರಡು ಹನಿ ಪೋಲಿಯೊ ಲಸಿಕೆ ಹಾಕಿಸಬೇಕು. ರಾಷ್ಟ್ರೀಯ ಪಲ್ಸ್ ಪೋಲಿಯೋ ಅಭಿಯಾನವನ್ನು ಯಶಸ್ವಿಗೊಳಿಸಲು ಆರೋಗ್ಯ ಇಲಾಖೆಯೊಂದಿಗೆ ಕೈಜೋಡಿಸಬೇಕು,'' ಎಂದು ಮನವಿ ಮಾಡಿಕೊಂಡರು.

ಒಂದೇ ಮನೆಗೆ 3 ಬಾರಿ ಕನ್ನ: ಸೆರೆ

ಬೆಂಗಳೂರು: ಒಂದೇ ಮನೆಗೆ ಮೂರು ಬಾರಿ ಕನ್ನ ಹಾಕಿ ಕೆ.ಜಿ.ಗಟ್ಟಲೆ ಬೆಳ್ಳಿಯ ವಸ್ತುಗಳನ್ನು ದೋಚಿದ್ದ ಕುಖ್ಯಾತ ಕಳ್ಳನನ್ನು ವಿಜಯನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಶ್ಯಾಮಣ್ಣ ಗಾರ್ಡನ್ ನಿವಾಸಿ ತನ್ವೀರ್ (28) ಬಂಧಿತ ಆರೋಪಿ. ಈತ ಕಳವು ಮಾಡಿದ್ದ 5 ಲಕ್ಷ ರೂ. ಮೌಲ್ಯದ 10 ಕೆ.ಜಿ ಬೆಳ್ಳಿ ವಸ್ತುಗಳನ್ನು ಜಪ್ತಿ ಮಾಡಲಾಗಿದೆ. ಅಮೆರಿಕದಲ್ಲಿ ನೆಲೆಸಿರುವ ಪ್ರಮೋದ್, ಆರ್‌ಪಿಸಿ ಲೇಔಟ್‌ನಲ್ಲಿ ಸ್ವಂತ ಮನೆ ಹೊಂದಿದ್ದಾರೆ. ಈ ಮನೆಯಲ್ಲಿ ಯಾರೊಬ್ಬರೂ ನೆಲೆಸಿರಲಿಲ್ಲ, ಸಂಬಂಧಿಕರೊಬ್ಬರು ಆಗಾಗ್ಗೆ ಮನೆ ಬಳಿ ಬಂದು ನೋಡಿಕೊಂಡು ಹೋಗುತ್ತಿದ್ದರು. ಕಳ್ಳತನವನ್ನೇ ವೃತ್ತಿಯಾಗಿಸಿಕೊಂಡಿರುವ ತನ್ವೀರ್, ಹಲವು ತಿಂಗಳಿನಿಂದ ಬೀಗ ಹಾಕಿದ್ದ ಪ್ರಮೋದ್ ಅವರ ಮನೆಯನ್ನು ಗುರುತಿಸಿ ಕಿಟಕಿ ಸರಳುಗಳನ್ನು ಮುರಿದು ಒಳನುಗ್ಗಿದ್ದ. ಬಳಿಕ ಮನೆಯಲ್ಲಿ ಬೆಳ್ಳಿ ವಸ್ತುಗಳನ್ನು ಕಳವು ಮಾಡಿದ್ದ. ಈ ವೇಳೆ ಅಡುಗೆ ಮನೆಯ ಕಿಟಕಿಯಲ್ಲಿ ಮನೆಯ ಮುಖ್ಯದ್ವಾರದ ಕೀ ಇಟ್ಟಿರುವುದನ್ನು ಕಂಡು, ಅದನ್ನು ತನ್ನೊಂದಿಗೆ ಕೊಂಡೊಯ್ದಿದ್ದ ಎಂದು ಪೊಲೀಸರು ಹೇಳಿದರು. ಅನಂತರ ಮೂರು ಬಾರಿ ಹಾಡಹಗಲೇ ಮನೆಗೆ ಬಂದು 12 ಕೆ.ಜಿ ಬೆಳ್ಳಿ ವಸ್ತುಗಳನ್ನು ಕದ್ದೊಯ್ದಿದ್ದ. ಮೇ ತಿಂಗಳಲ್ಲಿ ಪ್ರಮೋದ್ ಅವರ ಸಂಬಂಧಿ ಮನೆ ಬಳಿ ಬಂದು ನೋಡಿದಾಗ ಕಳ್ಳತನ ನಡೆದಿರುವುದು ಗಮನಕ್ಕೆ ಬಂದಿದೆ. ಬಳಿಕ ಅವರು ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡು ಘಟನಾ ಸ್ಥಳದ ಸುತ್ತಮುತ್ತಲ ಪ್ರದೇಶಗಳ ಸಿಸಿಟಿವಿ ದೃಶ್ಯಾವಳಿ ಆಧರಿಸಿ ಆರೋಪಿ ತನ್ವೀರ್‌ನನ್ನು ಬಂಧಿಸಲಾಯಿತು ಎಂದು ಪೊಲೀಸರು ತಿಳಿಸಿದರು.

28 ವರ್ಷ 28 ಕ್ಷೇತ್ರಗಳಲ್ಲಿ ಕೆಂಪೇಗೌಡ ಜಯಂತಿ ಆಚರಣೆ

■ **ವಿಕ ಸುದ್ದಿಲೋಕ** ಬೆಂಗಳೂರು

ಬೆಂಗಳೂರು ನಿರ್ಮಾತೃ ಕೆಂಪೇಗೌಡರ ಜಯಂತಿಯನ್ನು ಕೇವಲ ವಿಧಾನಸೌಧ ಮಾತ್ರವಲ್ಲ, ಮುಂದಿನ 28 ವರ್ಷಗಳ ಕಾಲ ಬೆಂಗಳೂರಿನ 28 ಕ್ಷೇತ್ರಗಳಲ್ಲೂ ವಿಶೇಷವಾಗಿ ಆಚರಿಸಲು ತೀರ್ಮಾನಿಸಲಾಗಿದೆ ಎಂದು ಸಿಎಂ ಡಿ.ಕೆ. ಶಿವಕುಮಾರ್ ಹೇಳಿದರು.

ಪ್ರತಿಮೆಗೆ ಪುಷ್ಪಾರ್ಚನೆ

ದೇವನಹಳ್ಳಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಬಳಿಯ ನಾಡಪ್ರಭು ಕೆಂಪೇಗೌಡರ 108 ಅಡಿ ಎತ್ತರದ ಕಂಚಿನ ಬೃಹತ್ ಪ್ರತಿಮೆಗೆ ಪುಷ್ಪಾರ್ಚನೆ ಮಾಡುವ ಮೂಲಕ 517ನೇ ಜಯಂತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ''ಕೆಂಪೇಗೌಡ ಜಯಂತಿ ಕಾರ್ಯಕ್ರಮವನ್ನು ಕೇವಲ ವಿಧಾನಸೌಧದ ಹೊರತಾಗಿ, ಬೆಂಗಳೂರಿನ 28 ಕ್ಷೇತ್ರಗಳಲ್ಲಿ ಆಚರಿಸಲು ತೀರ್ಮಾನಿಸಿದ್ದೇವೆ. ಈ ಬಾರಿ ಯಶವಂತಪುರ ಕ್ಷೇತ್ರದಲ್ಲಿ ಆಚರಿಸಲಾಗುತ್ತಿದೆ. ಮುಂದಿನ ವರ್ಷ ಶಾಸಕರೊಂದಿಗೆ ಚರ್ಚಿಸಿ ಬ್ಯಾಟರಾಯನಪುರ, ಯಲಹಂಕ, ಕೆ.ಆರ್.ಪುರ ಅಥವಾ ಬೇರೆ ಕ್ಷೇತ್ರಗಳಲ್ಲಿ ಈ ಕಾರ್ಯಕ್ರಮವನ್ನು ವಿಜೃಂಭಣೆಯಿಂದ ಆಚರಿಸಲಾಗುವುದು.'' ಎಂದರು.

''ಮಾಗಡಿಯಲ್ಲಿ 100 ಕೋಟಿ ರೂ. ವೆಚ್ಚದಲ್ಲಿ ಕೆಂಪೇಗೌಡರ ಕೋಟೆಯ ಸಮಗ್ರ ಅಭಿವೃದ್ಧಿ ಕಾರ್ಯ ಹಮ್ಮಿಕೊಂಡಿದ್ದೇವೆ. ಅಲ್ಲಿರುವ ಕೆಂಪೇಗೌಡರ ಸಮಾಧಿ ಬಳಿ 10 ಎಕರೆ ಜಮೀನು ಸ್ವಾಧೀನ ಪ್ರಕ್ರಿಯೆ ಆರಂಭವಾಗಿದ್ದು, ಈಗಾಗಲೇ ಐದೂವರೆ ಎಕರೆ ಖರೀದಿ ಮಾಡಲಾಗಿದೆ,'' ಎಂದು ತಿಳಿಸಿದರು.

''ಬೆಂಗಳೂರಿಗೆ ಬರುವವರಿಗೆ ಕೆಂಪೇಗೌಡರನ್ನು ಪರಿಚಯಿಸಲು, ಟ್ರಂಪೆಟ್ ವೃತ್ತದಲ್ಲಿ ಅಗತ್ಯ ಕ್ರಮ ಕೈಗೊಳ್ಳುವಂತೆ ವಿಮಾನ ನಿಲ್ದಾಣ ಪ್ರಾಧಿಕಾರದವರಿಗೆ ಸೂಚನೆ ನೀಡಿದ್ದೇವೆ. ಕಳೆದ ವರ್ಷ ಸುಮನಹಳ್ಳಿ ಬಳಿ ಕೆಂಪೇಗೌಡ ಭವನ ನಿರ್ಮಾಣಕ್ಕೆ 5 ಎಕರೆ ಜಾಗವನ್ನು ನೀಡಿ ಭೂಮಿ ಪೂಜೆ ಮಾಡಿದ್ದೆವು. ಜೊತೆಗೆ ಅಲ್ಲಿ ಕೆಂಪೇಗೌಡರ ಹೆಸರಿನಲ್ಲಿ ಟೌನ್ ಪ್ಲ್ಯಾನಿಂಗ್ ಕಾಲೇಜು ನಿರ್ಮಿಸಲು ಉದ್ದೇಶಿಸಲಾಗಿದೆ. ಹಿಂದಿನ ಸರಕಾರ ಈ ಪ್ರತಿಮೆಯನ್ನು ಚೆನ್ನಾಗಿ ಕಟ್ಟಿದೆ. ಆದರೆ ವಿಮಾನ ನಿಲ್ದಾಣಕ್ಕೆ ಬರುವವರಿಗೆ ಈ ಪ್ರತಿಮೆ ಕಾಣುತ್ತಿಲ್ಲ, ಇದರ ಬಗ್ಗೆ ಯಾವ ರೀತಿ ಕ್ರಮ ಕೈಗೊಳ್ಳಬಹುದೆಂದು ನಾನು, ಸ್ವಾಮೀಜಿಗಳು ಹಾಗೂ ಕೃಷ್ಣ ಬೈರೇಗೌಡರೊಂದಿಗೆ ಚರ್ಚೆ ಮಾಡಿ ವಿಮಾನ ನಿಲ್ದಾಣ ಪ್ರಾಧಿಕಾರದವರಿಗೆ ನಿರ್ದೇಶನ ನೀಡಲಿದ್ದೇವೆ,'' ಎಂದು ಹೇಳಿದರು.

ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ನಂಜಾವಧೂತ ಸ್ವಾಮೀಜಿ ಹಾಗೂ ವಿಶ್ವ ಒಕ್ಕಲಿಗರ ಸಂಸ್ಥಾನದ ನಿಶ್ಚಲಾನಂದನಾಥ ಸ್ವಾಮೀಜಿ ಉಪಸ್ಥಿತರಿದ್ದರು. ಪ್ರತಿಮೆಯ ಪಕ್ಕದಲ್ಲಿ ನಿರ್ಮಿಸಿರುವ ಥೀಮ್ ಪಾರ್ಕ್ ಅನ್ನು ಸಿಎಂ ವೀಕ್ಷಿಸಿದರು.

ವಿದೇಶಿಗರ ವಾಸ್ತವ್ಯದ ಮಾಹಿತಿ ನೀಡದವರ ವಿರುದ್ಧ ಕೇಸ್

ಬೆಂಗಳೂರು: ನಗರದಲ್ಲಿ ನೆಲೆಸಿರುವ ವಿದೇಶಿಗರ ಕುರಿತು ಸ್ಥಳೀಯ ಠಾಣೆಗೆ ಮಾಹಿತಿ ನೀಡದ ಮನೆ ಮಾಲೀಕರ ವಿರುದ್ಧ ನಗರ ಪೊಲೀಸರು ಕ್ರಿಮಿನಲ್ ಪ್ರಕರಣ ದಾಖಲಿಸುವ ಮೂಲಕ ಬಿಸಿ ಮುಟ್ಟಿಸುತ್ತಿದ್ದಾರೆ.

ಈ ಕುರಿತು ವಿಶೇಷ ಕಾರ್ಯಾಚರಣೆ ನಡೆಸಿರುವ ಪೂರ್ವ ವಿಭಾಗದ ಪೊಲೀಸರು, ತಮ್ಮ ಮನೆಗಳಲ್ಲಿ ಬಾಡಿಗೆಗೆ ವಿದೇಶಿ ಪ್ರಜೆಗಳು ವಾಸಿಸುತ್ತಿರುವ ಮಾಹಿತಿ ನೀಡದಿರುವ 7 ಮಂದಿ ಮನೆ ಮಾಲೀಕರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ಬಾಣಸವಾಡಿ ಠಾಣೆ -4, ಜೀವನ್‌ಬಿಮಾನಗರ ಠಾಣೆ -1, ಪುಲಕೇಶಿನಗರ ಠಾಣೆಯಲ್ಲಿ 2 ಪ್ರಕರಣ ದಾಖಲಿಸಲಾಗಿದೆ.

ಮನೆ, ಹೋಟೆಲ್, ಆಸ್ಪತ್ರೆ ಹಾಗೂ ಗೆಸ್ಟ್‌ಹೌಸ್‌ಗಳಲ್ಲಿ ವಾಸ್ತವ್ಯ ಹೂಡುವ ವಿದೇಶಿಗರ ಕುರಿತಂತೆ 24 ಗಂಟೆಯೊಳಗೆ ಸಂಬಂಧಪಟ್ಟ ಮಾಲೀಕರು ವಿದೇಶಿಗರ ನೋಂದಣಿ ಫಾರಂ ಅನ್ನು (ಫಾರಂ-ಸಿ) ಆನ್‌ಲೈನ್‌ನಲ್ಲಿ ಎಫ್‌ಆರ್‌ಆರ್ ಮುಖಾಂತರ ಸ್ಥಳೀಯ ಠಾಣೆ ಪೊಲೀಸರಿಗೆ ಸಲ್ಲಿಸಬೇಕು.

ಫಾರಂ-ಸಿ ಸಲ್ಲಿಸದಿದ್ದರೆ, ಅದು ವಲಸೆ ಹಾಗೂ ವಿದೇಶಿಗರ ಕಾಯಿದೆ-2025ರ ಉಲ್ಲಂಘನೆಯಾಗುತ್ತದೆ. ಅಂಥಹ ಮನೆ ಮಾಲೀಕರ ವಿರುದ್ಧ ಪ್ರಕರಣ ದಾಖಲಿಸಲಾಗುತ್ತದೆ. ಈ ಪ್ರಕರಣಗಳಲ್ಲಿ ದಂಡ ಹಾಗೂ ಜೈಲು ಶಿಕ್ಷೆಯಾಗಲಿದೆ ಎಂದು ಪೊಲೀಸರು ಎಚ್ಚರಿಕೆ ನೀಡಿದ್ದಾರೆ.

19 ವರ್ಷದ ಯುವಕನ ಬಿಡುಗಡೆಗೆ ಹೈ ಆದೇಶ

■ **ವಿಕ ಸುದ್ದಿಲೋಕ** ಬೆಂಗಳೂರು

''ಇಬ್ಬರು ವಯಸ್ಕರ ನಡುವಿನ ಪ್ರೀತಿಯ ಸಂಬಂಧಕ್ಕೆ ಸಮಾಜ ಹಾಗೂ ಕುಟುಂಬ ಒಪ್ಪಲಿಲ್ಲವೆಂಬ ಕಾರಣಕ್ಕೆ ಅಪರಾಧದ ಬಣ್ಣ ಬಳಿಯಲು ಸಾಧ್ಯವಿಲ್ಲ, ಸಮ್ಮತಿಯ ಪ್ರೀತಿಯನ್ನು ಅಪರಾಧೀಕರಣಗೊಳಿಸಲು ಕ್ರಿಮಿನಲ್ ಕಾನೂನನ್ನು ಅಸ್ತ್ರವಾಗಿ ಬಳಸಲು ಅವಕಾಶವಿಲ್ಲ'' ಎಂದು ಹೈಕೋರ್ಟ್ ಆದೇಶಿಸಿದೆ.

ಮದುವೆಯಾಗುವುದಾಗಿ ಭರವಸೆ ನೀಡಿ, ಲೈಂಗಿಕ ಸಂಪರ್ಕ ಬೆಳೆಸಿದ ಆರೋಪದಡಿ ಜೈಲು ಶಿಕ್ಷೆಗೆ ಗುರಿಯಾಗಿದ್ದ 19 ವರ್ಷದ ಯುವಕನನ್ನು ತಕ್ಷಣವೇ ಜೈಲಿನಿಂದ ಬಿಡುಗಡೆ ಮಾಡುವಂತೆ ಪೊಲೀಸರಿಗೆ ನಿರ್ದೇಶನ ನೀಡಿದೆ.

ಬೆಂಗಳೂರಿನ ಎಂ.ಧನುಷ್ ಮತ್ತಿತರರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯಪೀಠ ಈ ಆದೇಶ ನೀಡಿ, ಪ್ರಕರಣಕ್ಕೆ ಸಂಬಂಧಿಸಿದಂತೆ ಮುಂದಿನ ವಿಚಾರಣಾ ಪ್ರಕ್ರಿಯೆಗೆ ತಡೆ ನೀಡಿದೆ.

ವಿಚಾರಣೆ ವೇಳೆ ದೂರುದಾರಳಾದ ಯುವತಿ ಸ್ವತಃ ನ್ಯಾಯಾಲಯದ ಮುಂದೆ ಹಾಜರಾಗಿ ''ನಮ್ಮ ನಡುವೆ ಇದ್ದದ್ದು ಸಮ್ಮತಿಯ ಸಂಬಂಧವೇ ಆಗಿದೆ. ನಾವಿಬ್ಬರೂ ಪರಸ್ಪರ ಪ್ರೀತಿಸುತ್ತಿದ್ದು, ಮದುವೆಯಾಗಲು ಸಿದ್ಧರಿದ್ದೇವೆ'' ಎಂದು ಕೋರ್ಟ್‌ಗೆ ತಿಳಿಸಿದ್ದಳು. ಆ ಅಂಶವನ್ನು ದಾಖಲಿಸಿಕೊಂಡ ನ್ಯಾಯಪೀಠ ಈ ಆದೇಶ ನೀಡಿದೆ.

ಅಲ್ಲದೆ, ''ಕ್ರಿಮಿನಲ್ ಕಾನೂನು ಅತ್ಯಂತ ಗಂಭೀರವಾಗಿದೆ. ಕುಟುಂಬದ ಒಪ್ಪಿಗೆ ಇಲ್ಲ ಅಥವಾ ಸಮಾಜಕ್ಕೆ ಮುಜುಗರವಾಗುತ್ತದೆ ಎಂಬ ಕಾರಣಕ್ಕೆ ವಯಸ್ಕರ ನಡುವಿನ ಸಮ್ಮತಿಯ ಪ್ರೀತಿಯನ್ನು ಅಪರಾಧೀಕರಣಗೊಳಿಸಲು ಕ್ರಿಮಿನಲ್ ಕಾನೂನನ್ನು ಅಸ್ತ್ರವಾಗಿ ಬಳಸಲು ಬಿಡುವುದಿಲ್ಲ'' ಎಂದು ನ್ಯಾಯಪೀಠ ಹೇಳಿದೆ.

''ಮೇಲ್ನೋಟಕ್ಕೆ ಯುವಕನ ಕಡೆಯಿಂದ ಯಾವುದೇ ಬಲವಂತ, ಬೆದರಿಕೆ ಅಥವಾ ಲೈಂಗಿಕ ದೌರ್ಜನ್ಯ ನಡೆದಿರುವುದಕ್ಕೆ ಪುರಾವೆಗಳಿಲ್ಲ, ಇದು ಕೇವಲ ಇಬ್ಬರು ವಯಸ್ಕರ ನಡುವಿನ ಸಮ್ಮತಿಯ ಸಂಬಂಧವಾಗಿದೆ'' ಎಂದು ತಿಳಿಸಿದ ನ್ಯಾಯಪೀಠ, ''ಕೇವಲ 19 ವರ್ಷದ ಯುವಕನನ್ನು ಜೈಲಿನ ಗೋಡೆಗಳ ಮಧ್ಯೆ ಇಡುವುದು, ಆತನಿಗೆ ಹೊರ ಜಗತ್ತಿಗಿಂತಲೂ ಅಲ್ಲಿ ಹೆಚ್ಚಿನ ಅಪಾಯವನ್ನು ಉಂಟು ಮಾಡಬಹುದು'' ಎಂದು ತಿಳಿಸಿದೆ. »08

ಜಮಖಂಡಿಯ ವೈದ್ಯರೊಬ್ಬರಿಗೆ 4.15 ಕೋಟಿ ರೂ. ವಂಚನೆ ಪ್ರಕರಣ | ಪಾದ್ರಿ ಖಾತೆಗೆ 8 ಲಕ್ಷ ರೂ. ಜಮೆ

ಸೈಬರ್ ವಂಚನೆ ಕೇಸ್: ತ.ನಾಡಿನ ಪಾದ್ರಿಗೆ ಕಾನೂನು ಉರುಳು

■ **ವಿಕ ಸುದ್ದಿಲೋಕ** ಬೆಂಗಳೂರು

ಸೈಬರ್ ವಂಚಕರು ಕಮಿಷನ್ ಆಸೆ ತೋರಿಸಿ ಬಾಡಿಗೆ ಬ್ಯಾಂಕ್ ಖಾತೆಗಳನ್ನು ದುರುಪಯೋಗಪಡಿಸಿಕೊಳ್ಳುತ್ತಿರುವುದು ದಿನೇದಿನೆ ಹೆಚ್ಚಾಗುತ್ತಿದೆ. ಈ ನಡುವೆ ಸೈಬರ್ ವಂಚನೆಯ 8 ಲಕ್ಷ ರೂ.ಗಳನ್ನು ತಮ್ಮ ಬ್ಯಾಂಕ್ ಖಾತೆಗೆ ಪಡೆದುಕೊಂಡಿದ್ದ ಆರೋಪ ಪ್ರಕರಣದಲ್ಲಿ ತಮಿಳುನಾಡಿನ ಪಾದ್ರಿಯೊಬ್ಬರು ಕಾನೂನು ಸಂಕಷ್ಟಕ್ಕೆ ಸಿಲುಕಿದ್ದಾರೆ.

ಕನ್ಯಾಕುಮಾರಿಯ ಪಾದ್ರಿ ರಜಿನಿಕುಮಾರ್ (50) ಸಂಕಷ್ಟಕ್ಕೆ ಸಿಲುಕಿರುವವರು. ಬಾಗಲಕೋಟೆಯ ವೈದ್ಯರೊಬ್ಬರು ಸೈಬರ್ ವಂಚನೆಯಲ್ಲಿ 4.15 ಕೋಟಿ ರೂ. ಕಳೆದುಕೊಂಡ ಪ್ರಕರಣದ ತನಿಖೆಯಲ್ಲಿ ವಂಚಕರು 21 ಖಾತೆಗಳಿಗೆ ಹಣ ವರ್ಗಾಯಿಸಿಕೊಂಡಿರುವುದು ಕಂಡು ಬಂದಿತ್ತು. ಈ ಪೈಕಿ ರಜಿನಿಕುಮಾರ್ ಅವರ ಬ್ಯಾಂಕ್ ಖಾತೆಗೆ 8 ಲಕ್ಷ ರೂ. ಸಂದಾಯವಾಗಿತ್ತು. ಈ ನಿಟ್ಟಿನಲ್ಲಿ ರಜಿನಿಕುಮಾರ್‌ಗೆ ವಿಚಾರಣೆಗೆ ಹಾಜರಾಗುವಂತೆ ಸಿಐಡಿ ತನಿಖಾಧಿಕಾರಿಗಳು ನೋಟಿಸ್ ಜಾರಿಗೊಳಿಸಿದ್ದಾರೆ.

ನೋಟಿಸ್ ಜಾರಿ ಬೆನ್ನಲ್ಲೇ ಕಂಗಾಲಾಗಿದ್ದ ರಜಿನಿಕುಮಾರ್ ಬಂಧನ ಭೀತಿಯಿಂದ ನಿರೀಕ್ಷಣಾ ಜಾಮೀನು ಕೋರಿ ನ್ಯಾಯಾಲಯದ ಮೊರೆ ಹೋಗಿದ್ದರು. ಆದರೆ, 51ನೇ ಸೆಷನ್ಸ್ ನ್ಯಾಯಾಲಯವು ಜಾಮೀನು ನೀಡಲು ನಿರಾಕರಿಸಿದೆ. ಜತೆಗೆ, ಬಹುದೊಡ್ಡ ಪಿಡುಗಾಗಿ ಪರಿಣಮಿಸಿರುವ ಸೈಬರ್ ವಂಚನೆ ಕುರಿತು ಸಮಗ್ರ ತನಿಖೆಯ ಅಗತ್ಯವಿದೆ. ಈ ನಿಟ್ಟಿನಲ್ಲಿ ಅರ್ಜಿದಾರರ ಕಸ್ಟೋಡಿಯಲ್ ವಿಚಾರಣೆ ಅಗತ್ಯವಿದೆ ಎಂದು ಪ್ರತಿಪಾದಿಸಿರುವ ಸಿಐಡಿಯ ವಾದವನ್ನು ಪುರಸ್ಕರಿಸಿದೆ.

ವ್ಯವಸ್ಥಿತ ಸಿಂಡಿಕೇಟ್: 2025ರ ಫೆಬ್ರವರಿಯಲ್ಲಿ ಹೂಡಿಕೆಯಲ್ಲಿ ಅತ್ಯಧಿಕ ಲಾಭ ಕೊಡಿಸುವುದಾಗಿ ಜಮಖಂಡಿಯ 40 ವರ್ಷದ ವೈದ್ಯರೊಬ್ಬರಿಗೆ ಬಲೆ ಬೀಸಿದ್ದ ಸೈಬರ್ ಖದೀಮರು 4,15,89,200 ರೂ. ವಂಚಿಸಿದ್ದರು. ವಂಚಕರ ಮಾತಿಗೆ ಮರುಳಾಗಿದ್ದ ದೂರುದಾರರು ಬೆಂಗಳೂರಿನ ರಾಮ್ ಟ್ರಾವೆಲ್ಸ್ ಸೇರಿದಂತೆ ಅನ್ಯರಾಜ್ಯದ 21 ಬ್ಯಾಂಕ್ ಖಾತೆಗಳಿಗೆ ಹಣ ವರ್ಗಾಯಿಸಿದ್ದರು.

ಈ ಪೈಕಿ ರಾಮ್ ಟ್ರಾವೆಲ್ಸ್ ಖಾತೆಗೆ 19 ಲಕ್ಷ ರೂ. ಸಂದಾಯವಾಗಿತ್ತು. ಇಲ್ಲಿಂದ ರಜಿನಿಕುಮಾರ್ ಖಾತೆಗೆ 8 ಲಕ್ಷ ರೂ. ವರ್ಗಾವಣೆಯಾಗಿತ್ತು. ಈ ದಾಖಲೆಗಳ ಅನ್ವಯ ರಜಿನಿಕುಮಾರ್‌ಗೆ ಎರಡು ಬಾರಿ ನೋಟಿಸ್ ನೀಡಿದರೂ ವಿಚಾರಣೆಗೆ ಗೈರಾಗಿದ್ದರು. ಈ ವರ್ಗಾವಣೆ ಹಿಂದೆ ವ್ಯವಸ್ಥಿತ ಸಿಂಡಿಕೇಟ್ ಇರುವ ಅನುಮಾನವಿದೆ. ಕೃತ್ಯದಲ್ಲಿ ಶಾಮೀಲಾಗಿರುವ ಇತರ ಆರೋಪಿಗಳನ್ನು ಪತ್ತೆಹಚ್ಚಬೇಕಿದೆ. ಹೀಗಾಗಿ, ಜಾಮೀನು ನೀಡಬಾರದು ಎಂದು ಸಿಐಡಿಯ ಪರ ವಕೀಲರ ಪ್ರಬಲ ವಾದ ಮಂಡಿಸಿದ್ದರು.

ನನಗೆ ಗೊತ್ತಿಲ್ಲ ಎಂದಿದ್ದ ಪಾದ್ರಿ

ಸಿಐಡಿ ಆಪಾದನೆಯನ್ನು ತಳ್ಳಿ ಹಾಕಿರುವ ರಜಿನಿಕುಮಾರ್, ಕನ್ಯಾಕುಮಾರಿಯ ಜೆಬಮುಲ್ಲೈನಲ್ಲಿ 'ಜೀಸಸ್ ಲಿಬರೇಟ್ಸ್ ಮಿನಿಸ್ಟ್ರಿ' ಎಂಬ ಸಾರ್ವಜನಿಕ ಚಾರಿಟಬಲ್ ಟ್ರಸ್ಟ್ ನಡೆಸುತ್ತಿದ್ದು ಸಿಎಸ್‌ಆರ್ ಅನುದಾನ ಹಾಗೂ ದೇಣಿಗೆ ಸಂಗ್ರಹಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಬೆಂಗಳೂರಿನಲ್ಲಿ ನನ್ನ ಹೆಸರಿನಲ್ಲಿ ಬ್ಯಾಂಕ್ ಖಾತೆ ತೆರೆದಿದ್ದೇನೆ. ದುಷ್ಕರ್ಮಿಗಳು 8 ಲಕ್ಷ ರೂ.ಗಳನ್ನು ನನ್ನ ಬ್ಯಾಂಕ್ ಖಾತೆಗೆ ವರ್ಗಾಯಿಸಿದ್ದಾರೆ. ಸೈಬರ್ ವಂಚನೆ ಜಾಲದ ಬಗ್ಗೆ ನನಗೇನೂ ಗೊತ್ತಿಲ್ಲ ಎಂದು ನ್ಯಾಯಾಲಯದ ಮುಂದೆ ಅಲವತ್ತುಕೊಂಡಿದ್ದಾರೆ.

ಅಪರಾಧ ಸುದ್ದಿ

ಕೈ ಮುಖಂಡನ ಹತ್ಯೆ ಸಂಚು: 7 ಮಂದಿ ಸೆರೆ

ಶಕೀಲ್ | ಶಿವಪ್ರಸಾದ್ | ಶರಣ್ | ಸುಮಂತ್ | ವಿನೋದ್ | ಪ್ರೇಮ್ | ನಿಶಾಂತ್

ಬೆಂಗಳೂರು: ರೌಡಿಶೀಟರ್ ಹೈದರ್ ಅಲಿ ಕೊಲೆಗೆ ಪ್ರತೀಕಾರ ತೀರಿಸಿಕೊಳ್ಳಲು ಎದುರಾಳಿಯ ಹತ್ಯೆಗೆ ರೂಪಿಸಿದ್ದ ಸಂಚನ್ನು ವಿಫಲಗೊಳಿಸಿರುವ ಸಿಸಿಬಿ ಪೊಲೀಸರು, ಹೈದರ್ ಸಹೋದರ ಸೇರಿದಂತೆ ಏಳು ಮಂದಿಯನ್ನು ಬಂಧಿಸಿದ್ದಾರೆ.

ಹೈದರ್ ಸಹೋದರ ಶಕೀಲ್ ಅಲಿಯಾಸ್ ಶಬ್ಬೀರ್, ಶಿವಪ್ರಸಾದ್, ಪ್ರೇಮ್, ಶರಣ್ ಅಲಿಯಾಸ್ ಸೋನು, ವಿನೋದ್ ಅಲಿಯಾಸ್ ಜುಟ್ಟು, ಸುಮಂತ್ ಹಾಗೂ ನಿಶಾಂತ್ ಬಂಧಿತರು.

ರಾಜ್ಯ ಯುವ ಕಾಂಗ್ರೆಸ್ ಘಟಕದ ಪ್ರಧಾನ ಕಾರ್ಯದರ್ಶಿ ಜೋಹಾರ್ ಅಬ್ಬಾಸ್ ಅವರ ಕೊಲೆಗೆ ಸಂಚು ರೂಪಿಸಿದ ಆರೋಪ ಪ್ರಕರಣದಲ್ಲಿ ಶಕೀಲ್ ಸೇರಿ ಇತರೆ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಳೆದ ವರ್ಷದ ಫೆಬ್ರವರಿಯಲ್ಲಿ ಅಶೋಕನಗರ ಠಾಣೆಯ ರೌಡಿಶೀಟರ್ ಹೈದರ್ ಅಲಿಯ ಕೊಲೆ ನಡೆದಿತ್ತು. ಹೈದರ್ ಕೊಲೆಗೆ ಜೋಹರ್ ಅಬ್ಬಾಸ್ ಹಣಕಾಸು ನೆರವು ನೀಡಿ ಸುಫಾರಿ ನೀಡಿದ್ದರು ಎಂಬ ಆರೋಪವನ್ನು ಶಕೀಲ್ ಮಾಡಿದ್ದ.

'ತನ್ನ ಅಣ್ಣನ ಕೊಲೆಗೆ ಪ್ರತೀಕಾರ ತೀರಿಸಿಕೊಳ್ಳಲು ಜೋಹರ್ ಅಬ್ಬಾಸ್‌ರನ್ನು ಕೊಲ್ಲಲು ನಿರ್ಧರಿಸಿದ್ದ ಶಕೀಲ್, ಹೈದರ್ ಸಹಚರರರನ್ನು ತನ್ನೊಂದಿಗೆ ಸೇರಿಸಿಕೊಂಡಿದ್ದ. ಎಲ್ಲಾ ಆರೋಪಿಗಳು ಜೋಹರ್ ಅವರನ್ನು ಕೊಲ್ಲಲು ಮಾರಕಾಸ್ತ್ರಗಳ ಸಹಿತ ಕಾರುಗಳಲ್ಲಿ ಹಿಂಬಾಲಿಸುತ್ತಿದ್ದರು'. ಈ ಬಗ್ಗೆ ಮಾಹಿತಿ ಕಲೆ ಹಾಕಿದ ಡಿಸಿಪಿ ಶ್ರೀಹರಿಬಾಬು ಮಾರ್ಗದರ್ಶನದ ಸಂಘಟಿತ ಅಪರಾಧ ದಳವು ಏಳು ಮಂದಿ ಆರೋಪಿಗಳನ್ನು ಮಾರಕಾಸ್ತ್ರಗಳೊಂದಿಗೆ ಬಂಧಿಸಿದೆ.

ಬೆಚ್ಚಿ ಬೀಳಿಸಿದ್ದ ಪ್ರಕರಣ: ಕಾಂಗ್ರೆಸ್‌ನಲ್ಲಿ ಸಕ್ರಿಯವಾಗಿ ಗುರುತಿಸಿಕೊಂಡಿದ್ದ ರೌಡಿ ಶೀಟರ್ ಹೈದರ್ ಅಲಿಯನ್ನು ದುಷ್ಕರ್ಮಿಗಳ ಗುಂಪು ಕಳೆದ ವರ್ಷ ಫೆ.23ರಂದು ರಾತ್ರಿ ಗರುಡಾ ಮಾಲ್ ಸಮೀಪ ಕೊಲೆಗೈದಿತ್ತು. ಈ ಪ್ರಕರಣ ಸಂಬಂಧ ನಯಾಜ್ ಪಾಷಾ ಸೇರಿ ಹಲವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದರು. ವೈಯಕ್ತಿಕ ದ್ವೇಷಕ್ಕಾಗಿ ಹೈದರ್ ಕೊಲೆ ಮಾಡಿರುವುದು ತನಿಖೆಯಲ್ಲಿ ಗೊತ್ತಾಗಿತ್ತು. ಆದರೆ, ಹೈದರ್ ಕುಟುಂಬಸ್ಥರು, 'ರಾಜಕೀಯವಾಗಿ ಪ್ರಬಲವಾಗುತ್ತಿದ್ದ ಹೈದರ್‌ನನ್ನು ಎದುರಾಳಿ ಗುಂಪು ಕೊಲೆಗೈದಿದೆ. ಇದೊಂದು ರಾಜಕೀಯ ಕಾರಣಕ್ಕೆ ನಡೆದ ಕೊಲೆ' ಎಂದು ಆರೋಪಿಸಿದ್ದರು.

ಹೈದರ್ ಪತ್ನಿಯೂ ಸಾಥ್

ಪತಿಯ ಕೊಲೆಯಲ್ಲಿ ಜೋಹರ್ ಕೈವಾಡ ಇದೆ ಎಂದು ಹೈದರ್ ಅಲಿ ಪತ್ನಿ ಅಬ್ರಿನಾ ತಾಜ್ ನಂಬಿದ್ದರು. ಹೀಗಾಗಿ, ಜೋಹರ್ ಹತ್ಯೆ ಸಂಚಿಗೆ ಬೆಂಬಲ ನೀಡಿದ್ದರು. ಹೀಗಾಗಿ, ಅಬ್ರಿನಾರನ್ನು ಆರೋಪಿಯನ್ನಾಗಿ ಪರಿಗಣಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಸೂರ್ಯನಗರದಲ್ಲಿ ಹೈಟೆಕ್ ವಾಣಿಜ್ಯ ಸಂಕೀರ್ಣ

■ ಬಿ.ಎನ್.ಧನಂಜಯ ಬೆಂಗಳೂರು
dhananjaya.gowda@timesofindia.com

ವರ್ಷಾಂತ್ಯದ ವೇಳೆಗೆ ಚಂದಾಪುರ- ಆನೇಕಲ್ ರಸ್ತೆಯ ಚಿತ್ರಣವನ್ನೇ ಬದಲಾಯಿಸುವ ಮಲ್ಟಿಪ್ಲೆಕ್ಸ್ ಚಿತ್ರಮಂದಿರಗಳನ್ನು ಒಳಗೊಂಡ 'ಗೃಹ ಮಂಡಳಿ'ಯ ಹೈಟೆಕ್ ವಾಣಿಜ್ಯ ಸಂಕೀರ್ಣ ತಲೆಯೆತ್ತಲಿದೆ.

- 107 ಕೋಟಿ ರೂ. ವೆಚ್ಚದಲ್ಲಿ ಗೃಹ ಮಂಡಳಿಯ ಯೋಜನೆ
- ವರ್ಷಾಂತ್ಯಕ್ಕೆ ಆರಂಭ ನಿರೀಕ್ಷೆ
- ಸಂಕೀರ್ಣದಲ್ಲಿವೆ 200 ಆಸನಗಳ, ನಾಲ್ಕು ಸ್ಕ್ರೀನ್‌ಗಳ ಮಲ್ಟಿಪ್ಲೆಕ್ಸ್ ಚಿತ್ರಮಂದಿರ

ಸುಮಾರು 107 ಕೋಟಿ ರೂ. ವೆಚ್ಚದಲ್ಲಿ ಆನೇಕಲ್ ತಾಲೂಕಿನ 'ಸೂರ್ಯನಗರ'ದ ಮೊದಲ ಹಂತದ ಬಡಾವಣೆ'ಯಲ್ಲಿ ಕರ್ನಾಟಕ ಗೃಹ ಮಂಡಳಿ ನಿರ್ಮಿಸುತ್ತಿರುವ ಅತ್ಯಾಧುನಿಕ ವಾಣಿಜ್ಯ ಸಂಕೀರ್ಣದ ಕಾಮಗಾರಿ ಅಂತಿಮ ಹಂತದಲ್ಲಿದೆ. ಶೇ.90ರಷ್ಟು ಕಾಮಗಾರಿ ಪೂರ್ಣಗೊಂಡಿದೆ. ಪೇಂಟಿಂಗ್ ಸೇರಿದಂತೆ ಇನ್ನಿತರ ಮುಕ್ತಾಯ ಹಂತದ ಕಾಮಗಾರಿಗಳು ಮಾತ್ರ ಪ್ರಗತಿಯಲ್ಲಿವೆ. ಈ ಕಾಮಗಾರಿಗಳನ್ನು ಇನ್ನು ಆರು ತಿಂಗಳೊಳಗೆ ಮುಕ್ತಾಯಗೊಳಿಸಿದ್ದು ಹೂಡಿಕೆಯ ಆಕರ್ಷಣೆಯ ಕೇಂದ್ರವಾಗಲಿದೆ.

ಬೆಂಗಳೂರು ನಗರ ಜಿಲ್ಲೆಯ ಆನೇಕಲ್ ತಾಲೂಕು ವ್ಯಾಪ್ತಿಯ ಇಂಡ್ಲವಾಡಿ, ಬಗ್ಗನದೊಡ್ಡಿ, ಕಾಡುಜಕ್ಕನಹಳ್ಳಿ ಸೇರಿದಂತೆ ಸುತ್ತಲಿನ ಹಲವು ಗ್ರಾಮಗಳ ಭೂಮಿ ಒಳಗೊಂಡಂತೆ ಸೂರ್ಯನಗರದ ವಿವಿಧ ಹಂತದಲ್ಲಿ ಬಡಾವಣೆಗಳು, ವಸತಿ ಯೋಜನೆಗಳನ್ನೂ ಕೈಗೆತ್ತಿಕೊಂಡಿದೆ. ಈ ಪ್ರದೇಶದಲ್ಲಿ ನಿವೇಶನ ಮತ್ತು ವಸತಿ ಬೇಡಿಕೆ ಹೆಚ್ಚಿರುವುದರಿಂದ ಈ ಭಾಗದ ಅಭಿವೃದ್ಧಿ ಗಮನದಲ್ಲಿಟ್ಟುಕೊಂಡು ಮಲ್ಟಿಪ್ಲೆಕ್ಸ್ ಚಿತ್ರಮಂದಿರಗಳನ್ನು ಒಳಗೊಂಡ ಹೈಟೆಕ್ ವಾಣಿಜ್ಯ ಸಂಕೀರ್ಣ ನಿರ್ಮಿಸಲು 2023ರಲ್ಲಿ ಯೋಜನೆ ರೂಪಿಸಿ, ಕಾಮಗಾರಿ ಆರಂಭಿಸಿತ್ತು.

ಅತ್ಯಾಧುನಿಕ ಸೌಕರ್ಯ: 32,553.17 ಚದರ ಮೀಟರ್ ವಿಸ್ತೀರ್ಣದ ವಿಶಾಲ ಆವರಣದಲ್ಲಿ ಈ ಕಟ್ಟಡ ನಿರ್ಮಾಣವಾಗುತ್ತಿದೆ. ಇಲ್ಲಿನ ವಾಣಿಜ್ಯ ನಿವೇಶನ ವಿಸ್ತೀರ್ಣ 8,733 ಚ.ಮೀ.ನಿಂದ ಕೂಡಿದ್ದು, ಈ ಸಂಕೀರ್ಣ 955 ವಾಣಿಜ್ಯ ನಿವೇಶನ ಒಳಗೊಂಡಿದೆ. ಜವಳಿ, ಪೀಠೋಪಕರಣ, ಎಲೆಕ್ಟ್ರಾನಿಕ್ಸ್ ಸಾಮಗ್ರಿಗಳೂ ಸೇರಿದಂತ ದೊಡ್ಡ ವ್ಯಾಪಾರಿಗಳು, ಉದ್ಯಮಿಗಳಿಗೆ ಸಹಕಾರಿಯಾಗಲಿದೆ. ತಲಾ 200 ಆಸನಗಳು ಇರುವ ನಾಲ್ಕು ಸ್ಕ್ರೀನ್‌ಗಳ ಮಲ್ಟಿಪ್ಲೆಕ್ಸ್ ಚಿತ್ರಮಂದಿರಗಳನ್ನೂ ಹೊಂದಿದೆ. ಎರಡು ಬೇಸ್‌ಮೆಂಟ್, ಗ್ರೌಂಡ್ ಫ್ಲೋರ್ ಮತ್ತು ನಾಲ್ಕು ಮಹಡಿಗಳನ್ನು ಕಟ್ಟಡವು ಒಳಗೊಂಡಿದೆ. ಎರಡು ಬೇಸ್‌ಮೆಂಟ್‌ಗಳು ಕಾರು ಪಾರ್ಕಿಂಗ್ ಸ್ಥಳವಾಗಿದ್ದು, 469 ಕಾರುಗಳನ್ನು ನಿಲುಗಡೆ ಮಾಡಬಹುದಾಗಿದೆ. ನೆಲ ಮತ್ತು ಮೊದಲ ಮಹಡಿಯು ಶಾಪಿಂಗ್ ಸ್ಥಳವಾಗಲಿದ್ದು, ಎರಡನೇ ಮಹಡಿ ಫುಡ್ ಕೋರ್ಟ್ ಹಾಗೂ ಗೇಮಿಂಗ್ ವಲಯವಾಗಿರಲಿದೆ. ಚಿತ್ರರಸಿಕರಿಗಾಗಿ ಮೂರು ಮತ್ತು ನಾಲ್ಕನೇ ಮಹಡಿಯಲ್ಲಿ ತಲಾ 200 ಆಸನಗಳ ಸಾಮರ್ಥ್ಯದ 4 ಮಲ್ಟಿಪ್ಲೆಕ್ಸ್ ಸ್ಕ್ರೀನಿಂಗ್ ಚಿತ್ರಮಂದಿರಗಳನ್ನು ವಿನ್ಯಾಸಗೊಳಿಸಲಾಗಿದೆ.



ಹೂಡಿಕೆದಾರರ ಆಕರ್ಷಣೆಯ ಕೇಂದ್ರ

ನಗರದ ಅಭಿವೃದ್ಧಿ ಮತ್ತು ವಿಸ್ತರಣೆಗೆ ತಕ್ಕಂತೆ ಆನೇಕಲ್ ಭಾಗವೂ ಪ್ರಗತಿಪಥದಲ್ಲಿದೆ. ಈ ವಾಣಿಜ್ಯ ಸಂಕೀರ್ಣವು ಕೇವಲ ವ್ಯಾಪಾರ ಕೇಂದ್ರವಾಗಿರದೆ, ಆನೇಕಲ್ ಭಾಗದ ಆರ್ಥಿಕ ಚಿತ್ರಣವನ್ನೇ ಬದಲಾಯಿಸಲಿದೆ. ಸ್ಥಳೀಯವಾಗಿ ಸಾವಿರಾರು ಜನರಿಗೆ ಉದ್ಯೋಗಾವಕಾಶ ಸೃಷ್ಟಿಯಾಗಲಿದೆ. ಇನ್ನು ಈಗಾಗಲೇ ಈ ಭಾಗದ ಸೂರ್ಯನಗರ 4ನೇ ಹಂತ (ಇಂಡ್ಲವಾಡಿ)ಯಲ್ಲಿ ದೇಶದ ಎರಡನೇ ಅತಿದೊಡ್ಡದು ಎನಿಸಲಿರುವ ಅಂತಾರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂ ನಿರ್ಮಾಣಕ್ಕೂ ರಾಜ್ಯ ಸರಕಾರ ಶಂಕುಸ್ಥಾಪನೆ ನೆರವೇರಿಸಿದೆ. ಅಲ್ಲದೆ, ಇಲ್ಲಿಯೇ ಬಹುಕ್ರೀಡಾ ಸಂಕೀರ್ಣ ಉದ್ದೇಶವನ್ನೂ ಗೃಹ ಮಂಡಳಿ ಹೊಂದಿದೆ. ಮುಂಬರುವ ದಿನಗಳಲ್ಲಿ ಸೂರ್ಯನಗರ ಪ್ರದೇಶವು ಕ್ರೀಡೆ, ಮನರಂಜನೆ ಮತ್ತು ವಾಣಿಜ್ಯ ವಲಯದ ಪ್ರಮುಖ ಹಬ್ ಆಗಿ ಹೊರಹೊಮ್ಮುವ ನಿರೀಕ್ಷೆಯಿದೆ.

ಪ್ರಸ್ತಾವನೆಗೆ ಸಿದ್ಧತೆ

ಈ ವಾಣಿಜ್ಯ ಸಂಕೀರ್ಣವು ಮಂಡಳಿಗೆ ಪ್ರಮುಖ ಆದಾಯ ಮೂಲವಾಗಲಿದೆ. ಈಗಾಗಲೇ ನಿರ್ಮಾಣ ಕಾಮಗಾರಿ ಮುಕ್ತಾಯದ ಹಂತದಲ್ಲಿದ್ದು, ಶೇ.10ರಷ್ಟು ಕೆಲಸ ಬಾಕಿ ಇದೆ. ಇನ್ನು ಆರು ತಿಂಗಳೊಳಗೆ ಈ ಕಾಮಗಾರಿ ಪೂರ್ಣಗೊಳ್ಳಲಿದೆ. ಈ ಹಿನ್ನೆಲೆಯಲ್ಲಿ ಅದರ ನಿರ್ವಹಣೆ ಮತ್ತು ಬಾಡಿಗೆ ಪ್ರಕ್ರಿಯೆಗೆ ಮಂಡಳಿ ಸಜ್ಜಾಗುತ್ತಿದೆ. ಇದರಿಂದ ಮಾಸಿಕ 2.50 ಕೋಟಿ ರೂ. ಬಾಡಿಗೆ ನಿಗದಿಗೆ ಮಂಡಳಿಯ ಚಿಂತಿಸಿದ್ದು ಮಂಡಳಿಯ ಸಭೆಯಲ್ಲಿ ತೀರ್ಮಾನವಾದ ಬಳಿಕ ರಾಜ್ಯ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಿದೆ ಎಂದು ಮಂಡಳಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕಾಡಿನ ಕೊಳಲು ನೃತ್ಯ ರೂಪಕ ನಾಳೆ

ಬೆಂಗಳೂರು: ಕರ್ನಾಟಕ ಸಂಘ ಮಂಡ್ಯ, ಮಯೂರ್ಯಾ ನೃತ್ಯ ಕಲಾ ಅಕಾಡೆಮಿ ವತಿಯಿಂದ ನಗರದಲ್ಲಿ ಜೂ.29ರಂದು ನೃತ್ಯ ಸೌರಭ ಹಾಗೂ ಕುವೆಂಪು ಗೀತೆಗಳ ನೃತ್ಯ ರೂಪಕ -ಕಾಡಿನ ಕೊಳಲು ಕಾರ್ಯಕ್ರಮ ನಡೆಯಲಿದೆ.

ಕೊಳಲು ಕುವೆಂಪು ಅವರ ಮೊದಲ ಕವನ ಸಂಕಲನ. ಈ ಸಂಕಲನದ ಮೊದಲ ಕವನ (ಕೊಳಲು) ಹಾಗೂ ಆಯ್ದ ಕವನಗಳನ್ನು ಜೋಡಿಸಿ ನೃತ್ಯ ರೂಪಕ ಪ್ರಸ್ತುತಪಡಿಸಲಾಗುತ್ತಿದೆ. ವಿದುಷಿ ಡಾ.ಪಿ. ಮಾನಸ ಅವರು ನೃತ್ಯ ಸಂಯೋಜಿಸಿದ್ದು ಪ್ರೊ.ಜಯಪ್ರಕಾಶಗೌಡ ಅವರ ಮಾರ್ಗದರ್ಶನದಲ್ಲಿ ರೂಪಕ ಮೂಡಿ ಬರಲಿದೆ. ಡಾ.ಎಸ್.ಬಿ. ಶಂಕರಗೌಡ, ಡಾ.ಎಸ್. ತುಕಾರಾಂ, ಆರ್.ಮಹದೇವಪ್ಪ, ಡಾ. ಅನಿತಾ ಮಂಗಳ, ಅರವಿಂದ ಪ್ರಭು ಅವರ ಪರಿಕಲ್ಪನೆ ಮತ್ತು ನಿರೂಪಣಾ ಸಾಹಿತ್ಯವಿದೆ. **ಸ್ಥಳ:** ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ. ಸಂಜೆ 5.

ದೇವತೆಗಳ ಪ್ರತಿಷ್ಠಾಪನಾ ಮಹೋತ್ಸವ



ಬೆಂಗಳೂರು: ವರ್ತೂರು ಹೋಬಳಿ, ಮುಳೂರು ಗ್ರಾಮದ, ವಿನಾಯಕ ಬಡಾವಣೆಯಲ್ಲಿ ನೂತನ ಲಕ್ಷ್ಮೀ ಗಣಪತಿ, ಅಯ್ಯಪ್ಪ, ಸುಬ್ರಮಣ್ಯ, ದಕ್ಷಿಣಾಮೂರ್ತಿ, ಸರಸ್ವತಿ ಹಾಗೂ ವೆಂಕಟೇಶ್ವರ ಸ್ವಾಮಿ ದೇವರುಗಳ ಪ್ರತಿಷ್ಠಾಪನಾ ಮಹೋತ್ಸವ ಜೂ. 27ರ ಶನಿವಾರದಿಂದ ಆರಂಭವಾಗಿದೆ. ಜೂ. 28ರ ಭಾನುವಾರ ಲಕ್ಷ್ಮೀ ಗಣಪತಿ ದೇವಾಲಯದಲ್ಲಿ ಅಯ್ಯಪ್ಪಸ್ವಾಮಿ, ಸುಬ್ರಮಣ್ಯೇಶ್ವರ, ದಕ್ಷಿಣಾಮೂರ್ತಿ, ಸರಸ್ವತಿ ಹಾಗೂ ವೆಂಕಟೇಶ್ವರಸ್ವಾಮಿಯವರ ನೂತನ ವಿಗ್ರಹಗಳ ಪ್ರತಿಷ್ಠಾಪನೆ ಮತ್ತು ಕುಂಬಾಭಿಷೇಕ, ಸುಪ್ರಭಾತ ಸೇವೆ, ವೇದಪಾರಾಯಣ, ಕಳಶ ಆರಾಧನೆ, ನವಗ್ರಹ ಹೋಮ, ಕಳಾಹೋಮ, ಲಕ್ಷ್ಮಿ ಗಣಪತಿ ಹೋಮ, ಆಯ್ಯಪ್ಪಸ್ವಾಮಿ ಹೋಮ, ಸುಬ್ರಮಣ್ಯೇಶ್ವರ ಸ್ವಾಮಿ ಹೋಮ, ದಕ್ಷಿಣಾಮೂರ್ತಿ ಹೋಮ, ಸರಸ್ವತಿ ಹೋಮ, ವೆಂಕಟೇಶ್ವರಸ್ವಾಮಿ ಹೋಮ, ನೇತ್ರೋನ್ಮಿಲನ, ಪ್ರಾಣಪ್ರತಿಷ್ಠಾಪನೆ, ಕುಂಭಾಭಿಷೇಕ, ಪಂಚಾಮೃತ ಅಭಿಷೇಕ, ಅಲಂಕಾರ, ಅಷ್ಟಾವಧಾನ ಸೇವೆಗಳೊಂದಿಗೆ ಮಹಾ ಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ, ನಂತರ ಅನ್ನ ಸಂತರ್ಪಣೆ ನಡೆಯಲಿದೆ.

ಎಲ್ಲಾ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಮುಳೂರು ಸೇರಿದಂತೆ ಸುತ್ತಮುತ್ತಲಿನ ಗ್ರಾಮದ ಎಲ್ಲ ಜನರು ಭಾಗವಹಿಸಲು ದೇವಸ್ಥಾನದ ಆಡಳಿತ ಮಂಡಳಿಯ ಪ್ರಕಟಣೆ ಕೋರಿದೆ.

ವಿಶ್ವಯುವ ಚೆಸ್ ಚಾಂಪಿಯನ್ ಶಿಪ್‌ನಲ್ಲಿ ಪ್ರತೀತಿಗೆ ಬೆಳ್ಳಿ ಪದಕ

ಬೆಂಗಳೂರು: ನಗರದ ಶಿಷ್ಯ ಬಿಇಎಂಎಲ್ ಪಬ್ಲಿಕ್ ಸ್ಕೂಲ್ ವಿದ್ಯಾರ್ಥಿನಿ ಪ್ರತೀತಿ ಬೋರ್ಡೋಲೊಯ್ ಅವರು 18ವರ್ಷದೊಳಗಿನ ಫಿಡೆ ವಿಶ್ವಯುವ ಚೆಸ್ ಚಾಂಪಿಯನ್ ಶಿಪ್-2026 ಸ್ಪರ್ಧೆಯ ಬಾಲಕಿಯರ ವಿಭಾಗದಲ್ಲಿ ಬೆಳ್ಳಿ ಪದಕ ಗೆದ್ದು ಸಾಧನೆ ಮಾಡಿದ್ದಾರೆ. ಇಟಲಿಯ ಮೋಂಟಿಸಿಲ್ವಾನೋದಲ್ಲಿ ನಡೆದ ಈ ಜಾಗತಿಕ ಸ್ಪರ್ಧೆಯಲ್ಲಿ ಭಾರತದ ಪರ ಪದಕ ಗೆದ್ದ ಏಕೈಕ ಆಟಗಾರ್ತಿಯಾಗಿ ಹೊರಹೊಮ್ಮಿದ ಅವರು ವಿಮ್ (Woman International Master) ನಾರ್ಮ್ ಪ್ರಮಾಣಪತ್ರ ಪಡೆದಿದ್ದಾರೆ. ಪ್ರತೀತಿ, ಈ ವರ್ಷದ ಆರಂಭದಲ್ಲಿ ಅಹಮದಾಬಾದ್‌ನಲ್ಲಿ ನಡೆದ 35ನೇ ರಾಷ್ಟ್ರೀಯ ಅಂಡರ್-17 ಬಾಲಕಿಯರ ಚೆಸ್ ಚಾಂಪಿಯನ್ ಶಿಪ್ ಗೆದ್ದು ಭಾರತವನ್ನು ಪ್ರತಿನಿಧಿಸುವ ಅವಕಾಶ ಪಡೆದಿದ್ದರು.

ಯುವಕನ ಬಿಡುಗಡೆಗೆ ಹೈ ಆದೇಶ

» ನಮ್ಮ ಮೊದಲ ಪುಟದಿಂದ

ಜತೆಗೆ, ವಿಚಾರಣಾ ನ್ಯಾಯಾಲಯದ ಮುಂದಿನ ಎಲ್ಲ ಪ್ರಕ್ರಿಯೆಗಳಿಗೆ ತಡೆ ನೀಡಿದೆ. ಅಲ್ಲದೆ, ಜೈಲು ಅಧಿಕಾರಿಗಳಿಗೆ ಇ-ಮೇಲ್ ಮೂಲಕ ತಕ್ಷಣವೇ ಆದೇಶದ ಪ್ರತಿಯನ್ನು ರವಾನಿಸಿ, ಯುವಕನನ್ನು ಜೈಲಿನಿಂದ ತಕ್ಷಣ ಬಿಡುಗಡೆ ಮಾಡುವಂತೆ ಕಟ್ಟುನಿಟ್ಟಿನ ಸೂಚನೆ ನೀಡಿ ವಿಚಾರಣೆಯನ್ನು ಮುಂದೂಡಿದೆ.

ಪ್ರಕರಣದ ಹಿನ್ನೆಲೆ: 19 ವರ್ಷದ ಯುವಕ ಹಾಗೂ ಅದೇ ವಯಸ್ಸಿನ ಯುವತಿ (ದೂರುದಾರೆ) ಪ್ರೀತಿಸುತ್ತಿದ್ದರು. ಆದರೆ, ಇತ್ತೀಚೆಗೆ ಯುವತಿಯ ದೂರಿನನ್ವಯ ಬೆಂಗಳೂರಿನ ಪೊಲೀಸ್ ಠಾಣೆಯೊಂದರಲ್ಲಿ ಧನುಷ್ ಮತ್ತು ಆತನ ಕುಟುಂಬದವರ ವಿರುದ್ಧ ಬಿಎನ್‌ಎಸ್ ಕಾಯಿದೆಯ ಸೆಕ್ಷನ್ 64 (ಅತ್ಯಾಚಾರ) ಹಾಗೂ ಸೆಕ್ಷನ್ 69 (ಮದುವೆಯ ಸುಳ್ಳು ಭರವಸೆ ನೀಡಿ ಲೈಂಗಿಕ ಸಂಬಂಧ) ಅಡಿಯಲ್ಲಿ ಪ್ರಕರಣ ದಾಖಲಾಗಿತ್ತು.

ಓದುಗರನ್ನು ಸೆಳೆಯಲು ಎಐ ಬಳಸಿ

ನಿವೃತ್ತ ನ್ಯಾ.ಶಿವರಾಜ್ ವಿ.ಪಾಟೀಲ್ ಸಲಹೆ

■ **ವಿಕ ಸುದ್ದಿಲೋಕ** ಬೆಂಗಳೂರು

ಕನ್ನಡದ ಪ್ರಕಾಶಕರು ಕೃತಕ ಬುದ್ಧಿಮತ್ತೆ (ಎಐ) ಬಳಸಿ ಇ-ಬುಕ್, ಆಡಿಯೋ ಬುಕ್ ಹಾಗೂ ಡಿಜಿಟಲ್ ಬುಕ್‌ಗಳನ್ನು ರೂಪಿಸಿ ಹೆಚ್ಚಿನ ಓದುಗರನ್ನು ತಲುಪಲು ಯತ್ನಿಸಬೇಕು ಎಂದು ಸುಪ್ರೀಂಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಶಿವರಾಜ್ ವಿ.ಪಾಟೀಲ್ ಹೇಳಿದರು.

ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘದಿಂದ ಶನಿವಾರ ನಡೆದ ವಾರ್ಷಿಕ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ''ಎಐ ನಮ್ಮ ಜೀವನದ ಸುತ್ತಲೂ ಹಬ್ಬಿಕೊಳ್ಳುತ್ತಿದ್ದು, ವೇಗದ ಜಗತ್ತಿನಲ್ಲಿ ದೊಡ್ಡ ಗಾತ್ರದ ಪುಸ್ತಕ ಓದುವ ವ್ಯವಧಾನ ಕಡಿಮೆಯಾಗುತ್ತಿದೆ. ಹೀಗಿರುವಾಗ ಹೆಚ್ಚಿನ ಓದುಗರನ್ನು ಸೃಷ್ಟಿಸುವ, ಓದಿನ ಗೀಳು ಹುಟ್ಟಿಸುವ ಸವಾಲು ಪ್ರಕಾಶಕರು, ಮುದ್ರಕರ ಮೇಲಿದೆ. ಈ ಸಂದರ್ಭದಲ್ಲಿ ಎಐಅನ್ನು ಪೂರಕವಾಗಿ ಬಳಸಿಕೊಂಡು ಇ-ಬುಕ್, ಆಡಿಯೋ ಬುಕ್ ಹಾಗೂ ಡಿಜಿಟಲ್ ಬುಕ್ ಸ್ವರೂಪಕ್ಕೆ ಒತ್ತು ಕೊಡಬೇಕಿದೆ,'' ಎಂದು ಅಭಿಪ್ರಾಯಪಟ್ಟರು.

ಸಂಘದ ಅಧ್ಯಕ್ಷ ನಿಡಸಾಲೆ ಪುಟ್ಟಸ್ವಾಮಯ್ಯ, ''ಮುದ್ರಕರು ಮತ್ತು ಪ್ರಕಾಶಕರು ಸಂಕಷ್ಟ ಎದುರಿಸುತ್ತಿದ್ದಾರೆ. ಗ್ರಂಥಾಲಯ ಕರವು ಶೇ.6ರಷ್ಟು ಸಂಗ್ರಹವಾಗುತ್ತದೆ. ಪಾಲಿಕೆಯಲ್ಲಿ 1000 ಸಾವಿರ ಕೋಟಿ ರೂ. ಸಂಗ್ರಹವಾಗುತ್ತದೆ. ಆದರೂ ಸರಕಾರ ಪುಸ್ತಕಗಳನ್ನು ಖರೀದಿ ಮಾಡುತ್ತಿಲ್ಲ, ಕಳೆದ ಮೂರ್‍ನಾಲ್ಕು ವರ್ಷಗಳಿಂದ ಪುಸ್ತಕಗಳನ್ನು ಖರೀದಿಸಿಲ್ಲ, ಇದಕ್ಕೆ ಸರಕಾರದ ಉನ್ನತ ಮಟ್ಟದ ಅಧಿಕಾರಿಗಳ ಬೇಜವಾಬ್ದಾರಿಯೇ ಕಾರಣ,'' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಹಿರಿಯ ಸಾಹಿತಿ ಮಲ್ಲೇಪುರಂ ಜಿ.ವೆಂಕಟೇಶ್, ''ಒಂದಕ್ಕೊಂದು ಕೊಂಡಿಯಾಗಿರುವ ಲೇಖಕರು, ಪ್ರಕಾಶಕರು ಹಾಗೂ ಮುದ್ರಕರ ಪರಿಸ್ಥಿತಿ ಹದಗೆಟ್ಟಿದೆ. ಸರಕಾರದಿಂದ ಲೇಖಕರು, ಪ್ರಕಾಶಕರಿಗೆ ಅನುಕೂಲವಾಗಬೇಕು. ಓದುಗರು ಉತ್ತಮ ಪುಸ್ತಕಗಳನ್ನು ಓದಬೇಕು ಎಂಬುದು ನಮ್ಮ ಉದ್ದೇಶ. ಅದಕ್ಕಾಗಿ ಪುಸ್ತಕ ನೀತಿ ಜಾರಿಗೆ ತರಬೇಕು,'' ಎಂದು ಹೇಳಿದರು.

ಸಂಘದ ಕಾರ್ಯದರ್ಶಿ ಆರ್.ದೊಡ್ಡೇಗೌಡ ಸೇರಿ ಗಣ್ಯರು ಉಪಸ್ಥಿತರಿದ್ದರು.

ಕಿದ್ವಾಯಿ ಆಸ್ಪತ್ರೆಯಿಂದ ವೃಕ್ಷಾರೋಹಣ ಕಾರ್ಯಕ್ರಮ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಉದ್ದೇಶಿತ ಬೃಹತ್ ವೃಕ್ಷಾರೋಹಣಕ್ಕೆ ಪೂರಕವಾಗಿ ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ಆವರಣದ ಶಾಂತಿಗ್ರಾಮದ ಬಳಿ ಸಸಿ ನೆಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಸಂಸ್ಥೆಯ ನಿರ್ದೇಶಕ ಡಾ.ಟಿ.ನವೀನ್, ''ಕಿದ್ವಾಯಿ ಆವರಣದಲ್ಲಿ ಪ್ರತಿವರ್ಷವೂ ಸಸಿ ನೆಡುವ ಸಂಖ್ಯೆ ಹೆಚ್ಚಳವಾಗುತ್ತಿದೆ. 23 ಎಕರೆ ವ್ಯಾಪ್ತಿಯನ್ನು ಹೊಂದಿರುವ ಈ ಸಂಸ್ಥೆ ರೋಗಿಗಳಿಗೆ ಮಾನಸಿಕ ನೆಮ್ಮದಿ ಮತ್ತು ಮನೆಯ ವಾತಾವರಣ ಕಲ್ಪಿಸಲು ಆವರಣದಲ್ಲಿ 30ಕ್ಕೂ ಹೆಚ್ಚು ಸಸ್ಯ ಪ್ರಬೇಧಗಳನ್ನು ಹೊಂದಿದೆ. ಆಸ್ಪತ್ರೆಯಲ್ಲಿ ಪರಿಸರ ಸಂರಕ್ಷಣೆಗೆ ಒತ್ತು ನೀಡುವ ಮೂಲಕ ಹಸಿರು ವಾತಾವರಣ ವೃದ್ಧಿಸಲಾಗಿದೆ. ಪರಿಸರ ಇಲಾಖೆಯ 2022-23ನೇ ಸಾಲಿನ ರಾಜ್ಯ ಪರಿಸರ ಪ್ರಶಸ್ತಿಯನ್ನು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ಪಡೆದಿದೆ,'' ಎಂದು ತಿಳಿಸಿದರು.

ಈ ವೇಳೆ ಸಂಸ್ಥೆಯಲ್ಲಿ 100 ಸಸಿ ನೆಡುವ ಸಂಕಲ್ಪ ಮಾಡಲಾಯಿತು. ಸುಮಾರು 200 ಸಿಬ್ಬಂದಿ ಪಾಲ್ಗೊಂಡು ಸಸಿ ನೆಟ್ಟರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಕ್ರೀಡಾ ಮತ್ತು ಸಾಂಸ್ಕೃತಿಕ ವೇದಿಕೆ, ಕರ್ನಾಟಕ ರಾಜ್ಯ ಭೋವಿ ಯೂತ್ ಬ್ರಿಗೇಡ್, ಕರ್ನಾಟಕ ಅರಸು ಮತ್ತು ರಾಜು ಕ್ಷತ್ರಿಯ ಪ್ರತಿಷ್ಠಾನದಿಂದ ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ 'ನಾಲ್ವಡಿ ಕೃಷ್ಣರಾಜೇಂದ್ರ ಒಡೆಯರ್ ಜಯಂತ್ಯುತ್ಸವ' ಕಾರ್ಯಕ್ರಮ ನಡೆಯಿತು. ಭೋವಿ ಗುರುಪೀಠದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ, ವಿಶ್ವ ಒಕ್ಕಲಿಗ ಮಹಾಸಂಸ್ಥಾನ ಪೀಠಾಧ್ಯಕ್ಷ ನಿಶ್ಚಲಾನಂದನಾಥ ಸ್ವಾಮೀಜಿ ಭಾಗವಹಿಸಿದ್ದರು.

ಮೆದುಳು ನಿಷ್ಕ್ರಿಯ: ವ್ಯಕ್ತಿಯ ಅಂಗಾಂಗ ದಾನ

ಬೆಂಗಳೂರು: ಉತ್ತರಾಖಂಡ ಮೂಲದ ಅಶೋಕ್ ಸಿಂಗ್ ಬಿಸ್ಟ್ (38) ಅವರ ಕುಟುಂಬವು ದುಃಖದ ನಡುವೆಯೂ ಅಂಗಾಂಗ ದಾನ ಮಾಡುವ ಮೂಲಕ ಮಾನವೀಯತೆ ಮೆರೆದಿದೆ. ಹಳೆ ವಿಮಾನ ನಿಲ್ದಾಣ ರಸ್ತೆಯ ಮಣಿಪಾಲ್ ಆಸ್ಪತ್ರೆಯಲ್ಲಿ ಅಂಗಾಂಗ ದಾನ ಪ್ರಕ್ರಿಯೆ ಯಶಸ್ವಿಯಾಗಿ ನೆರವೇರಿತು.

ಕಾರ್ಮಿಕರಾಗಿದ್ದ ಅಶೋಕ್ ಸಿಂಗ್ ಬಿಸ್ಟ್, ಜೂನ್ 23ರಂದು ದೊಡ್ಡಬಳ್ಳಾಪುರದಲ್ಲಿ ಕಟ್ಟಡದ ಚಾವಣಿಗೆ ಶೀಟ್ ಅಳವಡಿಸುವ ವೇಳೆ ಏಣಿಯಿಂದ ಆಯತಪ್ಪಿ ಬಿದ್ದಿದ್ದರು. ತಲೆಗೆ ತೀವ್ರ ಗಾಯವಾಗಿದ್ದರಿಂದ ಅವರನ್ನು ಹಳೆಯ ವಿಮಾನ ನಿಲ್ದಾಣ ರಸ್ತೆ ಮಣಿಪಾಲ್ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗಿತ್ತು. ವೈದ್ಯರ ನಿರಂತರ ಪ್ರಯತ್ನಗಳ ಹೊರತಾಗಿಯೂ ಅಶೋಕ್ ಸಿಂಗ್ ಬಿಸ್ಟ್ ಮೆದುಳು ನಿಷ್ಕ್ರಿಯಗೊಂಡು, ಮೃತಪಟ್ಟಿದ್ದರು. ದುಃಖದ ನಡುವೆಯೂ ಪತ್ನಿ ಹಾಗೂ ಸಹೋದರರು ಅಂಗಾಂಗ ದಾನಕ್ಕೆ ಒಪ್ಪಿಗೆ ಸೂಚಿಸಿದ್ದರು. ಹೀಗಾಗಿ, ಲಿವರ್, ಕಿಡ್ನಿಗಳು, ಹೃದಯ ಕವಾಟ ಹಾಗೂ ಕಾರ್ನಿಯಾಗಳನ್ನು ದಾನವಾಗಿ ಪಡೆಯಲಾಯಿತು.

ಈ ಕುರಿತು ಪ್ರತಿಕ್ರಿಯಿಸಿದ ಮಣಿಪಾಲ್ ಆಸ್ಪತ್ರೆಯ ಕ್ರಿಟಿಕಲ್ ಕೇರ್‌ಮೆಡಿಸಿನ್ ವಿಭಾಗದ ಮುಖ್ಯಸ್ಥ ಡಾ. ಸುನಿಲ್ ಕಾರಂತ್, ''ಅಶೋಕ್ ಅವರ ತಲೆಗೆ ಗಂಭೀರ ಗಾಯವಾಗಿತ್ತು. ಉತ್ತಮ ಚಿಕಿತ್ಸೆ ನೀಡಿದರೂ, ಅವರನ್ನು ಉಳಿಸಲು ಸಾಧ್ಯವಾಗಲಿಲ್ಲ, ಇಂತಹ ಕಠಿಣ ಸಂದರ್ಭದಲ್ಲಿ ಕುಟುಂಬದವರು ಅಂಗಾಂಗ ದಾನಕ್ಕೆ ಮುಂದಾಗಿರುವುದು ಅಂಗಾಂಗಕ್ಕಾಗಿ ಕಾಯುತ್ತಿರುವ ಅನೇಕ ರೋಗಿಗಳಿಗೆ ವರದಾನವಾಗಿದೆ,'' ಎಂದಿದ್ದಾರೆ.

ಎಲ್ಲಿ-ಏನು? ಭಾನುವಾರ

ಒಕ್ಕಲಿಗರ ಸಂಘ ಹೆಬ್ಬಾಳ ವಿಧಾನಸಭಾ ಕ್ಷೇತ್ರ: ನಾಡಪ್ರಭು ಕೆಂಪೇಗೌಡರ 517ನೇ ಜಯಂತ್ಯುತ್ಸವ ಕಾರ್ಯಕ್ರಮ. ಬೆಳಗ್ಗೆ 9.30ಕ್ಕೆ ಗಂಗಾನಗರ 108 ಬಸ್ ನಿಲ್ದಾಣದಿಂದ ಮೆರವಣಿಗೆ, ಬಳಿಕ ಸಭಾ ಕಾರ್ಯಕ್ರಮ. **ಸ್ಥಳ:** ತರಳಬಾಳು ಕೇಂದ್ರ, ಆರ್.ಟಿ.ನಗರ.

ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್: ರಾಜ್ಯಮಟ್ಟದ ಜಾನಪದ ಸಮ್ಮೇಳನ. ಉದ್ಘಾಟನೆ : ಸಾಹಿತಿ ಬಂಜಗೆರೆ ಜಯಪ್ರಕಾಶ್, ಅಧ್ಯಕ್ಷತೆ : ಸಾಹಿತಿ ಸಾ.ಮ.ಶಿವಮಲ್ಲಯ್ಯ. **ಸ್ಥಳ:** ಶೇಷಾದ್ರಿಪುರಂ ಶಿಕ್ಷಣ ದತ್ತಿ ಸಭಾಂಗಣ, ಶೇಷಾದ್ರಿಪುರ. ಬೆಳಗ್ಗೆ 9.30.

ವಿಜಯ್ ಭವಾನಿ ವೆಲ್‌ಫೇರ್ ಅಸೋಸಿಯೇಶನ್: ಛತ್ರಪತಿ ಶಿವಾಜಿ ಮಹಾರಾಜರ 399ನೇ ಜಯಂತಿ ಹಾಗೂ ಅಸೋಸಿಯೇಶನ್‌ನ 40ನೇ ವಾರ್ಷಿಕ ಸಭೆ. ಅಧ್ಯಕ್ಷತೆ : ಮಾಜಿ ಸಚಿವ ಪಿ.ಜಿ.ಆರ್. ಸಿಂಧ್ಯಾ. **ಸ್ಥಳ:** ಕೆಕೆಎಂಪಿ ಕಲ್ಯಾಣ ಮಂಟಪ, ಮಿಲ್ಲರ್ಸ್ ರಸ್ತೆ, ವಸಂತನಗರ. ಬೆಳಗ್ಗೆ 10.30.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ: ಛಾಯಾಗ್ರಾಹಕ ವರದನಾಯಕ ಟಿ.ಪಿ. ಅವರ ಕಲಾಕೃತಿಗಳ ಪ್ರದರ್ಶನ. **ಸ್ಥಳ:** ವೆಂಕಟಪ್ಪ ಆರ್ಟ್ ಗ್ಯಾಲರಿ, ಕಸ್ತೂರಬಾ ರಸ್ತೆ. ಬೆಳಗ್ಗೆ 10.

ಜನ ಶಿಕ್ಷಣ ಟ್ರಸ್ಟ್: ಚಂಪಾ ಜಯಪ್ರಕಾಶ್ ಅವರ ಕ್ಯಾನ್ಸರ್ ಗೆದ್ದ ಅನುಭವ ಕಥನ- ಅರ್ಬುದನ ಡೈರಿ ಕೃತಿ ಬಿಡುಗಡೆ. ಕೃತಿ ಬಿಡುಗಡೆ : ಡಾ.ಆರ್. ಕೆ.ಸರೋಜ, ಪುಸ್ತಕ ಪರಿಚಯ : ನಿವೃತ್ತ ಕನ್ನಡ ಪ್ರಾಧ್ಯಾಪಕಿ ಕೆ.ಎಸ್.ಪ್ರಭಾ. **ಸ್ಥಳ:** ಸೌಹಾರ್ದ ಸಭಾಂಗಣ, ಸಿಎಸ್‌ಐ ಕಾಂಪೌಂಡ್, ಸುಧಾಮನಗರ. ಬೆಳಗ್ಗೆ 11.

ಸ್ವರಶ್ರೀ ಸಂಗೀತ ಶಾಲೆ: ವಾರ್ಷಿಕೋತ್ಸವ. ವಿಶೇಷ ಆಹ್ವಾನಿತ ಸಾಹಿತಿಗಳ ಕವನಗಳ ಗಾಯನ, ಕರೀಷ್ಮರಾಗ ರಂಜನಿ ತಂಡದಿಂದ ಕಾರ್ಯಕ್ರಮ ಮತ್ತು ಸ್ವರಶ್ರೀ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ. ಸಾನ್ನಿಧ್ಯ: ದಿನೇಶ್ ಗುರೂಜಿ. **ಸ್ಥಳ:** ಕನ್ನಡ ಸಾಹಿತ್ಯ ಪರಿಷತ್ತು. ಮಧ್ಯಾಹ್ನ 3ರಿಂದ

ಕಾರ್ಯಕ್ರಮ ಆಹ್ವಾನ ಪತ್ರಿಕೆ ವಾಟ್ಸ್‌ಆಪ್ ಮಾಡಿ
76766 68588

ಮಲ್ಲಸಂದ್ರದಲ್ಲಿ ಆಯೋಜಿಸಿದ್ದ ಕೆಂಪೇಗೌಡ ಜಯಂತಿ ಸಮಾರಂಭದಲ್ಲಿ ಶಾಸಕ ಎಸ್.ಮುನಿರಾಜು, ಶೆಟ್ಟಿಹಳ್ಳಿ ಸುರೇಶ್, ಟಿ. ಶಿವಕುಮಾರ್, ಲಕ್ಷ್ಮಣಗೌಡ, ವಿನೋದ್ ಗೌಡ , ಬಿ.ಸುರೇಶ್, ಹುಚ್ಚರಂಗಯ್ಯ ಉಮಾದೇವಿ ನಾಗರಾಜು ಪಾಲ್ಗೊಂಡಿದ್ದರು.

'ಯುವಕರು ಕೆಂಪೇಗೌಡರ ಆಶಯ ಈಡೇರಿಸಬೇಕು'

ಬೆಂಗಳೂರು: ನಾಡಪ್ರಭು ಕೆಂಪೇಗೌಡರ ದೂರ ದೃಷ್ಟಿಯ ಹಸಿರು ಬೆಂಗಳೂರು, ಸ್ವಚ್ಛ ಜಲ ಮೂಲಗಳ ನಾಡನ್ನು ಕಟ್ಟಿ ಬೆಳೆಸುವ ಜವಾಬ್ದಾರಿಯನ್ನು ಯುವಕರು ನಿಭಾಯಿಸಬೇಕು ಎಂದು ಶ್ರೀಕೃಷ್ಣ ಹಳ್ಳಿಕಾರ್‌ಮಹಾ ಸಂಸ್ಥಾನ ಟ್ರಸ್ಟ್‌ನ ಅಧ್ಯಕ್ಷ ಕೆ.ಎಂ.ನಾಗರಾಜ್ ಕರೆ ನೀಡಿದರು.

ಬೆಟ್ಟನಪಾಳ್ಯ ಬಳಿಯ ಶ್ರೀ ಕೃಷ್ಣ ದೇವಸ್ಥಾನದ ನಾಲ್ಕು ಎಕರೆ ಪ್ರದೇಶದಲ್ಲಿ 25,000 ಸಸಿಗಳನ್ನು ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ''ಕೆಂಪೇಗೌಡರು ಜಾತ್ಯತೀತ, ಧರ್ಮ ಮೀರಿ ಸರ್ವ ಜನಾಂಗದ ಏಳಿಗೆಗೆ ಶ್ರಮಿಸಿದವರು. ಎಲ್ಲರಿಗೂ ಅನ್ನ, ಉದ್ಯೋಗ ನೀಡಿದ ಸಾಂಸ್ಕೃತಿಕ, ಧಾರ್ಮಿಕನಾಯಕರಾಗಿದ್ದಾರೆ. ಹಾಗಾಗಿ, ಅಂದಿನ ಗತವೈಭವ ಮರುಕಳಿಸುವಂತೆ ಮಾಡಬೇಕಿದೆ. ಯುವಕರು ಜನಪರ ಕಾರ್ಯಗಳಾದ ಪರಿಸರ, ಜಲಮೂಲಗಳ ರಕ್ಷಣೆ, ಸಾಂಸ್ಕೃತಿಕ ವಿಚಾರಗಳನ್ನು ಮೈಗೂಡಿಸಿಕೊಳ್ಳಬೇಕು. ಹಸಿರು ನಗರಕ್ಕಾಗಿ ಸಸಿ ಬೆಳೆಸಬೇಕು,'' ಎಂದು ಕರೆ ನೀಡಿದರು.

ಟ್ರಸ್ಟ್ ಕಾರ್ಯದರ್ಶಿ ಶ್ರೀನಿವಾಸ ಮೂರ್ತಿ, ಖಜಾಂಚಿ ಎಂ.ಮಾರುತಿ, ಬಿಬಿಎಂಪಿ ಮಾಜಿ ಸದಸ್ಯ ಸಿ.ದಾಸೇಗೌಡ, ಧರ್ಮದರ್ಶಿಗಳಾದ ಕೃಷ್ಣಪ್ಪ, ವೆಂಕಟೇಶ್, ಶ್ರೀನಿವಾಸ್, ಜಿ.ಕೆ.ವೆಂಕಟೇಶ್, ರವಿಕುಮಾರ್, ಸೋಮಶೇಖರ್, ರಾಜಣ್ಣ ನರಸಿಂಹಮೂರ್ತಿ, ಜಿ.ನಾಗರಾಜ್, ಹುಚ್ಚಣ್ಣ ಉಪಸ್ಥಿತರಿದ್ದರು.

ಯಲಹಂಕದಲ್ಲಿ ಜಯಂತಿ ಆಚರಣೆಗೆ ಪೈಪೋಟಿ

ಶಾಸಕ ಎಸ್.ಆರ್. ವಿಶ್ವನಾಥ್ ಹಾಗೂ ಸಂಸದ ಡಾ.ಕೆ.ಸುಧಾಕರ್ ನೇತೃತ್ವದಲ್ಲಿ ಪ್ರತ್ಯೇಕವಾಗಿ ಆಚರಣೆ

ಯಲಹಂಕ: ಯಲಹಂಕ ವಿಧಾನಸಭಾ ಕ್ಷೇತ್ರದ ಶಾಸಕ ಎಸ್.ಆರ್. ವಿಶ್ವನಾಥ್ ಅವರ ನೇತೃತ್ವದಲ್ಲಿ ಹಳೆ ಯಲಹಂಕದಲ್ಲಿ ನಾಡಪ್ರಭು ಕೆಂಪೇಗೌಡರ ಜಯಂತಿ ಆಚರಿಸಲಾಯಿತು. ಉತ್ಸವಕ್ಕೆ ಸಾವಿರಾರು ಜನರು ಸಾಕ್ಷಿಯಾದರು. ಹಳೆ ಯಲಹಂಕ ಪರಿಸರದ ತುಂಬೆಲ್ಲ ಹಬ್ಬದ ಕಳೆ ಮೂಡಿತ್ತು.

ಮುಂಜಾನೆ 7 ಗಂಟೆಗೆ 4 ಕಿ.ಮೀ. ವಾಕಥಾನ್ ಆಯೋಜಿಸಲಾಗಿತ್ತು. ಸಾವಿರಾರು ಮಂದಿ ಹಳದಿ ಟಿ-ಶರ್ಟ್ ಧರಿಸಿ ಉತ್ಸಾಹದಿಂದ ಭಾಗವಹಿಸಿದ್ದರು. ಬಳಿಕ ವಿವಿಧ ಭಾಗಗಳಿಂದ ಆಗಮಿಸಿದ ಕಾರ್ಯಕರ್ತರು, ಅಭಿಮಾನಿಗಳು ಹಾಗೂ ಕೆಂಪೇಗೌಡರ ಅನುಯಾಯಿಗಳು ಹಳದಿ ಟೋಪಿ ಮತ್ತು ಕೇಸರಿ ಪೇಟ ಧರಿಸಿ ಮೆರವಣಿಗೆಯಲ್ಲಿ ಹೆಜ್ಜೆ ಹಾಕಿದರು. ಮಹಿಳೆಯರು, ಯುವಕರು, ಹಿರಿಯರು ಸೇರಿ ಎಲ್ಲ ವರ್ಗದ ಜನರು ಉತ್ಸವದಲ್ಲಿ ಪಾಲ್ಗೊಂಡು ಸಂಭ್ರಮವನ್ನು ಮತ್ತಷ್ಟು ಹೆಚ್ಚಿಸಿದರು.

ಹಳೆ ಯಲಹಂಕದಲ್ಲಿರುವ ಕೆಂಪೇಗೌಡರ ಪ್ರತಿಮೆಗೆ ಎಸ್.ಆರ್. ವಿಶ್ವನಾಥ್ ಸೇರಿದಂತೆ ಗಣ್ಯರು ಪುಷ್ಪನಮನ ಸಲ್ಲಿಸಿದರು. ಬಳಿಕ ನಡೆದ ಮೆರವಣಿಗೆಗೆ ಸಾರ್ವಜನಿಕರಿಂದ ಭರ್ಜರಿ ಸ್ಪಂದನೆ ವ್ಯಕ್ತವಾಯಿತು. ಜಾನಪದ ಕಲಾತಂಡಗಳು, ಅಲಂಕೃತ ಆನೆ, ಎತ್ತಿನಗಾಡಿ ಮೆರವಣಿಗೆಗೆ ಮೆರುಗು ನೀಡಿದವು.

ಶಾಸಕ ಎಸ್.ಆರ್. ವಿಶ್ವನಾಥ್ ಮಾತನಾಡಿ, ''ಯುವಜನತೆ ಬೆಂಗಳೂರು ನಗರ ನಿರ್ಮಾತೃ ನಾಡಪ್ರಭು ಕೆಂಪೇಗೌಡರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು,'' ಎಂದು ಕರೆ ನೀಡಿದರು.



ಹಳೆ ಯಲಹಂಕದಲ್ಲಿ ನಾಡಪ್ರಭು ಕೆಂಪೇಗೌಡ ಜಯಂತಿ ನಡೆಯಿತು

ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಜನಸ್ತೋಮ

'ವರ್ಟಿಕಲ್ ಬೆಳವಣಿಗೆ ಅನಿವಾರ್ಯ'

ಯಲಹಂಕದ ಹೊಯ್ಸಳ ಕ್ರೀಡಾಂಗಣದಲ್ಲಿ ಕೆಂಪೇಗೌಡ ಜಯಂತಿ ಕಾರ್ಯಕ್ರಮ ನಡೆಯಿತು.

ಬೆಂಗಳೂರಿನಲ್ಲಿ ವಿದ್ಯೆ, ಆರೋಗ್ಯ, ವೃತ್ತಿ ದೊರೆಯುತ್ತದೆ. ಇಲ್ಲಿ ಪ್ರತಿಯೊಬ್ಬರೂ ಬದುಕನ್ನು ಕಟ್ಟಿಕೊಳ್ಳಬಹುದು ಎಂದು ಅನೇಕರು ಈ ನಗರಕ್ಕೆ ಬರುತ್ತಿದ್ದಾರೆ. ಬೆಂಗಳೂರು ದಿನದಿಂದ ದಿನಕ್ಕೆ ಬೆಳೆಯುತ್ತಿದೆ. ನಗರ ವಿಸ್ತರಣೆ ಆಗುತ್ತಲೇ ಇದೆ. ಈ ನಗರಕ್ಕೆ ಬರುವವರನ್ನು ನಾವು ತಡೆಯಲು ಸಾಧ್ಯವಿಲ್ಲ, ಆದಕ್ಕೆ ವರ್ಟಿಕಲ್ ಬೆಳವಣಿಗೆ ಬಗ್ಗೆ ನಾನು ಆಲೋಚನೆ ಮಾಡುತ್ತಿದ್ದೇನೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಸಂಸದ ಡಾ.ಕೆ.ಸುಧಾಕರ್ ನೇತೃತ್ವದಲ್ಲಿ , ಬೆಂಗಳೂರು ಉತ್ತರ ತಾಲ್ಲೂಕು ಒಕ್ಕಲಿಗರ ಸಂಘದ ಆಶ್ರಯದಲ್ಲಿ ಯಲಹಂಕ ಉಪನಗರದ ಹೊಯ್ಸಳ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ಕೆಂಪೇಗೌಡ ಜಯಂತ್ಯುತ್ಸವ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದರು.

ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಶಿರಾ ಸ್ಪಟಿಕಪುರಿ ಮಠದ ನಂಜಾವದೂತ ಸ್ವಾಮೀಜಿ, ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನದ ನಿಶ್ಚಲಾನಂದನಾಥ ಸ್ವಾಮೀಜಿ, ಮಾಜಿ ಸಿಎಂ ಸದಾನಂದ ಗೌಡ, ಸಚಿವ ಕೆ.ಹೆಚ್ ಮುನಿಯಪ್ಪ, ಮಾಜಿ ಶಾಸಕ ಗಂಟಿಗಾನಹಳ್ಳಿ ಕೃಷ್ಣಪ್ಪ, ಬಮೂಲ್ ನಿರ್ದೇಶಕ ಕಡತನಮಲೆ ಸತೀಶ್, ಇ.ಕೃಷ್ಣಪ್ಪ, ಕೇಶವ ರಾಜಣ್ಣ ಉಪಸ್ಥಿತರಿದ್ದರು.

131 ಸ್ಥಳಗಳಲ್ಲಿ ಗಿಡ ನೆಡುವ ಕಾರ್ಯಕ್ರಮ

ಬೆಂಗಳೂರು: ನಗರದಲ್ಲಿ 15 ಲಕ್ಷ ಸಸಿಗಳನ್ನು ನೆಡುವ ಬಿಡಿಎ ಕಾರ್ಯಕ್ರಮದ ಅಂಗವಾಗಿ ಡಾ.ಶಿವರಾಮ ಕಾರಂತ ಬಡಾವಣೆಯ 80 ಸ್ಥಳಗಳಲ್ಲಿ, ನಾಡಪ್ರಭು ಕೆಂಪೇಗೌಡ ಬಡಾವಣೆಯ 41 ಮತ್ತು ಬನಶಂಕರಿ 6ನೇ ಬಡಾವಣೆಯ 10 ಕಡೆ ಸೇರಿದಂತೆ ಒಟ್ಟು 131 ಸ್ಥಳಗಳಲ್ಲಿ ಗಿಡಗಳನ್ನು ನೆಡಲಾಯಿತು. ಬಿಡಿಎ ಆಯುಕ್ತ ಮಣಿವಣ್ಣನ್, ಬನಶಂಕರಿ 6ನೇ ಹಂತದ ಬಡಾವಣೆಯಲ್ಲಿ ತಮ್ಮ ಪುತ್ರ ಅರ್ಮಾನ್ ಜತೆ ಸೇರಿ ಸುಮಾರು 12 ಸಾವಿರಕ್ಕೂ ಹೆಚ್ಚು ಗಿಡಗಳನ್ನು ನೆಡಲು ಸಾಥ್ ನೀಡಿದರು.

ಮ್ಯಾರಥಾನ್: ಕಾರ್ಯಕ್ರಮದ ಪ್ರಯುಕ್ತ 'ಕೆಂಪೇಗೌಡ ರನ್ 2026' ಮ್ಯಾರಥಾನ್ ಮತ್ತು ವಾಕಥಾನ್ ಕೂಡ ಆಯೋಜಿಸಲಾಗಿತ್ತು. 5 ಕಿ.ಮೀ. ನಡಿಗೆ(ವಾಕಥಾನ್) ಮತ್ತು 10 ಕಿ.ಮೀ ಓಟದಲ್ಲೂ(ಮ್ಯಾರಥಾನ್) ಸಾವಿರಾರು ಮಂದಿ ಭಾಗವಹಿಸಿದ್ದರು. ನಟ ಸುದೀಪ್ ಅವರು ಮ್ಯಾರಥಾನ್‌ಗೆ ಚಾಲನೆ ನೀಡಿದರು. ಬಿಡಿಎ ಅಧ್ಯಕ್ಷ ಎನ್.ಎ.ಹ್ಯಾರಿಸ್ ಇದ್ದರು. ಮ್ಯಾರಥಾನ್ ಮತ್ತು ವಾಕಥಾನ್‌ಗಳು ಎಸ್.ಎಂ.ಕೃಷ್ಣ ರಸ್ತೆ, ಚಲ್ಲಘಟ್ಟ ಮೆಟ್ರೊ ನಿಲ್ದಾಣದಲ್ಲಿ ಆರಂಭಗೊಂಡು ಅಲ್ಲಿಯೇ ಸಮಾಪ್ತಿಯಾದವು.

ಪ್ರಶಸ್ತಿ ಪ್ರದಾನ: ಬಿಡಿಎ ವತಿಯಿಂದ ಹಮ್ಮಿಕೊಂಡಿದ್ದ ನಾಡಪ್ರಭು ಕೆಂಪೇಗೌಡ ಜಯಂತಿ ಕಾರ್ಯಕ್ರಮದಲ್ಲಿ ಜಿಕೆವಿಕೆ, ನಗರ ಯೋಜನಾ ತಜ್ಞ ಎಸ್.ವಿಶ್ವನಾಥ್ ಹಾಗೂ ಮಾಜಿ ಕ್ರಿಕೆಟಿಗ ರಾಹುಲ್ ದ್ರಾವಿಡ್ ಅವರಿಗೆ ಕೆಂಪೇಗೌಡ ಅಂತಾರಾಷ್ಟ್ರೀಯ ಪ್ರಶಸ್ತಿ ಪ್ರದಾನ ಮಾಡಲಾಯಿತು. ರಾಹುಲ್ ದ್ರಾವಿಡ್ ಗೈರಾಗಿದ್ದರು. ಜಿಕೆವಿಕೆ ಪರವಾಗಿ ಬೆಂಗಳೂರು ಕೃಷಿ ವಿವಿ ಕುಲಪತಿ ಎಸ್.ವಿ.ಸುರೇಶ ಪ್ರಶಸ್ತಿ ಸ್ವೀಕರಿಸಿದರು.



ರಾಜ್ಯ ಒಕ್ಕಲಿಗ ಸಂಘದಿಂದ ಕಿಮ್ಸ್ ಆಸ್ಪತ್ರೆ ಬಳಿ ಆಯೋಜಿಸಿದ್ದ ಕೆಂಪೇಗೌಡ ಜಯಂತಿ ಸಮಾರಂಭದಲ್ಲಿ ಸಂಘದ ಅಧ್ಯಕ್ಷ ಎಲ್.ಶ್ರೀನಿವಾಸ್, ಗೌರವಾಧ್ಯಕ್ಷ ಬಿ.ಕೆಂಚಪ್ಪಗೌಡ, ಉಪಾಧ್ಯಕ್ಷರಾದ ಡಾ.ರೇಣುಕಾಪ್ರಸಾದ್, ಪುಟ್ಟಸ್ವಾಮಿ, ನಿರ್ದೇಶಕರಾದ ನೆಲ್ಲಿಗೆರೆ ಬಾಲಕೃಷ್ಣ, ಬಿ.ಪಿ.ಮಂಜೇಗೌಡ, ಲೋಕೇಶ್ ನಾಗರಾಜಯ್ಯ, ಆರ್.ಪ್ರಕಾಶ್, ರಾಘವೇಂದ್ರ ಪಾಲ್ಗೊಂಡಿದ್ದರು.

LOVE VK ❤ LOVE LIFE

ಲವ್ VK ಸಾಪ್ತಾಹಿಕ

ಭಾನುವಾರ, 28 ಜೂನ್ 2026 | ADVERTORIAL, ENTERTAINMENT INDUSTRY PROMOTIONAL FEATURE

ಸಿನಿಮಾ ಪತ್ರಕರ್ತ ಖಾಲಿದ್ ಮೊಹಮದ್ ಬರೆದ 'ನಾಟ್ ಕ್ವೈಟ್ ಫ್ಯಾಮಿಲಿ' ಕೃತಿ ಈಚೆಗಷ್ಟೇ ಬಿಡುಗಡೆಯಾಗಿದೆ. ಲೇಖಕರು ಬಾಲಿವುಡ್ ನಟ-ನಟಿಯರ ಆಪ್ತ ಒಡನಾಟದಲ್ಲಿ ಕಂಡುಕೊಂಡ ಸಂಗತಿಗಳು, ಆ ಖ್ಯಾತನಾಮರ ಕುಟುಂಬಗಳ ಒಳಹೊರಗಿನ ಕಥನಗಳನ್ನು ಇದು ಒಳಗೊಂಡಿದೆ ಎನ್ನಲಾಗಿದೆ.



ಏನಾದರೂ ಸರಿಯೇ, ಮೊದಲು ಉದ್ಯಮಶೀಲನಾಗು!

ಎನ್. ರವಿ ಶಂಕರ್
feedbacklvk@vijaykarnataka.com

ಮುಂಗಾರು ಮಳೆಯಾಗಿ ಎಲ್ಲೆಡೆ 'ಹಸಿರಾಗುವ' ವೇಳೆಗೆ ವಿದ್ಯಾರ್ಥಿಗಳು ಹೊಸ ಬದುಕಿಗೆ ಪ್ರವೇಶ ಪಡೆಯಲು ಕಾತರರಾಗಿರುತ್ತಾರೆ. ಕನಸುಗಳು ಚಿಗುರುವ ವೇಳೆ ಇದು.

ಯಾವ ವಿಷಯ, ಯಾವ ಡಿಗ್ರಿ, ಯಾವ ಕಾಲೇಜು? ಯಾವುದಕ್ಕೆ ಸ್ಕೋಪ್? ನಾವು ಓದು ಮುಗಿಸಿ ಮಾರುಕಟ್ಟೆಗೆ ಬರುವ ವೇಳೆಗೆ ಓದಿದ ವಿಷಯಕ್ಕೆ ಭವಿಷ್ಯ ಇರುತ್ತದೆಯೇ?ಜಾಬ್ ಮಾರ್ಕೆಟ್ ಬದಲಾಗಿ ಬಿಟ್ಟರೆ? ನಮ್ಮ ವರ್ಷಗಳ ಓದು ವ್ಯರ್ಥವಾಗಿ ಬಿಟ್ಟರೆ? ಎಐ (ರೋಬಾಟಿಕ್ಸ್ ಇಂಡಸ್ಟ್ರಿಯಲ್ ಆಟೋಮೇಷನ್ ಮುಂತಾದವು) ಸೇರಿ ನಮ್ಮ ಕೆಲಸಗಳನ್ನೆಲ್ಲ ನುಂಗಿಬಿಟ್ಟರೆ? ಇವು ಎಲ್ಲ ಮಕ್ಕಳ ಮತ್ತು ಪೋಷಕರ ಮನಸ್ಸಿನಲ್ಲಿರುವ ಸಹಜ ಆತಂಕಗಳು. ಮಾಹಿತಿ ಹೆಚ್ಚಾದಷ್ಟೂ ಗೊಂದಲವೂ ಹೆಚ್ಚು ಎಐ ಯುಗದಲ್ಲಿ ಮಾಹಿತಿಯ ಬಿರುಗಾಳಿಗಳು!

ಇಂಥ ಆತಂಕಗಳು ಎಲ್ಲಕಾಲದಲ್ಲಿಯೂ ಇದ್ದಂಥವೇ ಎಂದಾದರೆ, ಇಂದು ಇವು ಉತ್ಕಟವಾದ ರೂಪ ಪಡೆಯಲು ಕಾರಣಗಳೇನು? ಮೊದಲನೆಯದು ಕ್ಷಿಪ್ರಗತಿಯ ಬದಲಾವಣೆ. ದಶಕಗಳು ಹಿಡಿಯುತ್ತಿದ್ದ ಪಲ್ಲಟಗಳು ದಿನಗಳಲ್ಲೇ ಆಗುತ್ತಿರುವುದು! ಎರಡನೆಯದು ಎಲ್ಲರಿಗೂ ಗೊತ್ತಿರುವ ಎಐ (ರೋಬಾಟಿಕ್ ಮತ್ತು ಇಂಡಸ್ಟ್ರಿಯಲ್ ಆಟೋಮೇಷನ್ ಸೇರಿ) ತೆರೆದಿಟ್ಟಿರುವ ಬೃಹತ್ ಮಾಹಿತಿ ಕ್ರಾಂತಿ. ತತ್ಪರಿಣಾಮವಾದ ಉದ್ಯೋಗ ಕೊರತೆ. ಮೂರನೆಯದು ಸಾಮಾಜಿಕ ಮಾಧ್ಯಮಗಳು ತಂದೊಡ್ಡಿರುವ ಅತೀವವಾದ ಸಾಮಾಜಿಕ ಒತ್ತಡ. ನಾನು ನನ್ನಂತಿದ್ದರೆ ಸಾಲದು ಎಲ್ಲರಂತಾಗಬೇಕು ಎಲ್ಲೆಲ್ಲಿಯೂ ಸಲ್ಲಬೇಕು ಎಲ್ಲೆಲ್ಲಿಯೂ ಗೆಲ್ಲಬೇಕು ಎನ್ನುವ ಹಪಹಪಿ. ಹೀಗಾಗಿ ಇದು ಮಕ್ಕಳಿಗೂ ಪೋಷಕರಿಗೂ ಕಠಿಣಕಾಲ. ಈ ಪರಿಸ್ಥಿತಿಯನ್ನು ಎದುರಿಸಲು ನಾವು ಹೇಗೆ ಸಿದ್ಧರಾಗಬೇಕು? ನಮ್ಮ ಮುಂದಿರುವ ಮಾರ್ಗಗಳೇನು?

ಕೆಲಸಕ್ಕೆ ಹಣವಲ್ಲ, ಔಟ್‌ಕಮ್‌ಗೆ

ಮೊದಲನೆಯದಾಗಿ, ಈ ಕ್ಷಿಪ್ರಗತಿಯ ಒಪ್ಪಿಕೊಳ್ಳಬೇಕು. ಒಮ್ಮೆ ವಿದ್ಯೆ ಕಲಿತು ಅದರ ಆಧಾರದ ಮೇಲೆ ಜೀವನಪೂರ್ತಿ ಸಂಪಾದನೆ ಮಾಡುತ್ತೇನೆ ಎನ್ನುವ ಕಾಲ ಮುಗಿದುಹೋಯಿತು ಎನ್ನುವುದನ್ನು ಮನಗಾಣಬೇಕು. ನಮ್ಮ ಮುಂದಿರುವುದು ಒಂದೇ ಮಾರ್ಗ. ನಿರಂತರ ಕಲಿಕೆ. ಕಲಿಯಲು ಸಿದ್ಧರಿರುವಷ್ಟೇ ಕಲಿತದ್ದನ್ನು ಮರೆಯಲು ಮತ್ತೆ ಹೊಸದನ್ನು ಕಲಿಯಲು ಸಿದ್ಧರಿರಬೇಕು. ಈ ವರ್ತುಲ ಜೀವನದಲ್ಲಿ ಎಷ್ಟು ಬಾರಿ ಪುನರಾವರ್ತನೆಗೊಂಡರೂ ಅದನ್ನು ಬೇಸರವಿಲ್ಲದೆ ಮಾಡುವ ಮನಃಸ್ಥಿತಿ ಬೆಳೆಸಿಕೊಳ್ಳಬೇಕು. ಲರ್ನ್, ಅನ್‌ಲರ್ನ್, ರೀ ಲರ್ನ್, ಕಲಿ, ಮರೆ ಮತ್ತೆಕಲಿ ಇದು ಎಲ್ಲಾ ವಿದ್ಯಾರ್ಥಿಗಳ ಜೀವನವಾಗಬೇಕು. ಒಂದರ್ಥದಲ್ಲಿ ನಾವೆಲ್ಲರೂ ಜೀವನಪೂರ್ತಿ ವಿದ್ಯಾರ್ಥಿಗಳಾಗಿಯೇ ಉಳಿಯಬೇಕು. ಆಗ ಸಂಪಾದನೆಯ ಮಾರ್ಗಗಳು ತೆರೆದುಕೊಳ್ಳುತ್ತವೆ. ಆದರೆ ಈ ಸಂಪಾದನೆ ಮಾರ್ಗಗಳು ಹಿಂದಿನ ಸಂಪಾದನೆಯ ಮಾರ್ಗಗಳಂತಿರುವುದಿಲ್ಲ. ನೀನು ನನಗೆ ಸಮಯ ಕೊಡು, ನಾನು ನಿನಗೆ ಸಂಬಳ ಕೊಡುತ್ತೇನೆ ಎನ್ನುವ ಕಾಲ ನಿಧಾನವಾಗಿ ಸರಿಯುತ್ತಾ ಬಂದಿದೆ. ಇದರರ್ಥ ನಾವು ಮಾಡುವ ಕೆಲಸ ಕಾರ್ಯಗಳಿಗೆ ಅಥವಾ ಟಾಸ್ಕ್‌ಗಳಿಗೆ ಅನುಗುಣವಾಗಿ ನಮಗೆ ದುಡ್ಡು ಸಿಗುವುದಿಲ್ಲ. ಬದಲಾಗಿ ನಾವು ದೊರಕಿಸಿಕೊಡಬಹುದಾದ ಫಲಿತಾಂಶಗಳು ಅಥವಾ ಔಟ್‌ಕಮ್‌ಗಳಿಗೆ ಅನುಗುಣವಾಗಿ ಹಣ ದೊರೆಯುತ್ತದೆ. ಅಂದರೆ ನಮ್ಮ ಕಲಿಕೆ ಕೌಶಲ ಪರಿಶ್ರಮಗಳು ಫಲಿತಾಂಶವಾಗಿ ಪರಿವರ್ತಿತವಾದಾಗ ಮಾತ್ರ ಅದಕ್ಕೆ ಬೆಲೆ ಬರುತ್ತದೆ. ಅಂದರೆ ಪೂರ್ವ ಉದ್ಯಮಿ ಹೇಗೆ ತಾನು ಮಾಡಿದ ಕೆಲಸದ ಬಗ್ಗೆ ಹೇಳಿಕೊಂಡರೆ ನಾವು ಹಣ ಕೊಡುವುದಿಲ್ಲವೋ, ಅವನು ತೋರಿಸುವ ಫಲಿತಾಂಶ ಅಂದರೆ ಸೇವೆ ಅಥವಾ ಉತ್ಪನ್ನ ಸಫಲವಾದಾಗ ಮಾತ್ರ ಹಣ ಕೊಡುತ್ತೇವೆಯೋ ಹಾಗೆಯೇ ಉದ್ಯೋಗಿಯಾಗಿಯೂ ನಾವು ಫಲಿತಾಂಶಗಳ ಮೂಲಕ ಅಳೆಯಿಸಿಕೊಳ್ಳಲು ಸಿದ್ಧರಾಗಿರಬೇಕಾಗುತ್ತದೆ. ಇದಕ್ಕೆ ಬೇಕಿರುವುದು ಸಂಬಳದ ಕೆಲಸಗಾರನ ಮನಃಸ್ಥಿತಿ ಅಲ್ಲ, ಬದಲಾಗಿ, ಉದ್ಯಮಶೀಲ ಮನಃಸ್ಥಿತಿ.

ಒಂದೋ, ನಾವೇ ಉದ್ಯಮ ಕಟ್ಟಬೇಕು. ಇಲ್ಲವೇ ಉದ್ಯಮಿಗಳನ್ನು ಯಾವ ಮಾಪಕದಲ್ಲಿ ಅಳೆಯುತ್ತೇವೆಯೋ ಅವುಗಳಲ್ಲಿಯೇ ನಮ್ಮನ್ನು ಅಳೆಯಿಸಿಕೊಳ್ಳಲು ತಯಾರಿರಬೇಕು. ಒಟ್ಟಿನಲ್ಲಿ ಉದ್ಯಮಶೀಲರಾಗಬೇಕು. ಇಂದು ಅದು ಆಯ್ಕೆ ಅಲ್ಲ ಅನಿವಾರ್ಯ. ಕೆಲಸ ಸಿಗುವುದಿಲ್ಲ ಎಂದಾದ ಮೇಲೆ, ಕೆಲಸದ ಸ್ವರೂಪವೂ ಉದ್ಯಮಶೀಲತೆಯನ್ನು ಬೇಡುತ್ತದೆ ಎಂದಾದ ಮೇಲೆ ನವೋದ್ಯಮ ಕಟ್ಟುವುದೇ ಜಾಣತನವಲ್ಲವೇ? ಹೌದು. ಮತ್ತು, ಅದು ಹಿಂದೆಂದಿಗಿಂತಲೂ ಇಂದು ಸುಲಭ. ಏಕೆಂದರೆ ನವೋದ್ಯಮ ಕಟ್ಟಲು ಪೂರಕ ವಾತಾವರಣ ಇಂದು ಲಭ್ಯ. ಸರಕಾರಗಳು ಶಿಕ್ಷಣ ಸಂಸ್ಥೆಗಳು ಮತ್ತು ಹೂಡಿಕೆದಾರರು ನವೋದ್ಯಮ ಕಟ್ಟುವವರ ಬೆನ್ನಿಗೆ ನಿಂತಿದ್ದಾರೆ. ಸ್ಟಾರ್ಟಪ್ ಮಾಡಲು ಬೇಕಾದ ಧನ ಸಂಪನ್ಮೂಲ ಮತ್ತು ಮಾನವ ಸಂಪನ್ಮೂಲಗಳು ಇಂದು ಯಥೇಚ್ಛವಾಗಿ ದೊರಕುತ್ತಿವೆ.

ಐಐಟಿ ಐಐಎಂನಿಂದ ಬಂದವರಿಗೆ ಮಾತ್ರ ದೊರಕುತ್ತಿದ್ದ, ದೊಡ್ಡ ನಗರಗಳಿಗಷ್ಟೇ ಸೀಮಿತವಾಗಿದ್ದ ಸಾಹಸಿ ಬಂಡವಾಳಗಾರರು ಅಂದರೆ ವಿಸಿ ಹಣ ಇಂದು ಎರಡನೆಯ ಮತ್ತು ಮೂರನೆಯ ಸ್ತರದ ಪಟ್ಟಣಗಳಿಗೂ ಹರಿದು ಬರುತ್ತಿದೆ. ಅಲ್ಲಿನ ಶಿಕ್ಷಣ ಸಂಸ್ಥೆಗಳಲ್ಲಿ ಓದಿದವರು ಇಂದು ನವೋದ್ಯಮ ಕಟ್ಟುವ ಶಕ್ತಿ ಬೆಳೆಸಿಕೊಳ್ಳುತ್ತಿದ್ದಾರೆ. ಮಾತ್ರವಲ್ಲ ತಾಂತ್ರಿಕ ಓದು ಇದ್ದವರಿಗೆ ಮಾತ್ರ ಸೀಮಿತವಾಗಿದ್ದ ನವೋದ್ಯಮ ಸೃಷ್ಟಿ ಇಂದು ಬಹುಪಾಲು ಸಾರ್ವತ್ರಿಕವಾಗಿದೆ. ಕೋಡ್ ಮಾಡಲು ಗೊತ್ತಿಲ್ಲದವರು ಕೂಡ ಇಂದು ತಂತ್ರಜ್ಞಾನ ಬೆಂಬಲಿತ ಉದ್ಯಮಗಳನ್ನು ಕಟ್ಟಬಹುದು. ಎಐ ಇವೆಲ್ಲವನ್ನೂ ಸಾಧ್ಯವಾಗಿಸಿದೆ. ಕಲಿಕೆಯನ್ನು ಕಟ್ಟುವಿಕೆಯನ್ನು ಡೆಮಾಕ್ರಟೈಸ್ ಮಾಡಿದೆ. ತಮ್ಮ ಕಲ್ಪನೆಗೆ ತಕ್ಕ ಕಾರ್ಯಯೋಜನೆ ರೂಪಿಸಬಲ್ಲ ಮತ್ತು ಅದನ್ನು ಬದ್ಧತೆಯಿಂದ ನಿರ್ವಹಿಸಬಲ್ಲ ಯಾರು ಬೇಕಾದರೂ ಇಂದು ನವೋದ್ಯಮ ಕಟ್ಟುವ ಸಾಹಸಕ್ಕೆ ಕೈ ಹಾಕಬಹುದು.

ಯಾರು ಬೇಕಾದರೂ ನವೋದ್ಯಮ ಕಟ್ಟಬಹುದು ಎನ್ನುವುದು ಅತಿ ಸರಳೀಕರಣವಾಯಿತಲ್ಲವೇ? ಹೌದು. ಆದರೆ ಯಾರು ಬೇಕಾದರೂ ಒಂದು ಉನ್ನತ ಹುದ್ದೆಗೆ ಏರಬಹುದು ಎನ್ನುವುದು ಕೂಡ ಅತಿ ಸರಳೀಕರಣವಲ್ಲವೇ? ಅದಕ್ಕಿಂತಲೂ ಈ ನವೋದ್ಯಮ ಕಟ್ಟುವ ಅತಿಸರಳೀಕರಣವೇ ಇಂದಿನ ಕಾಲಕ್ಕೆ ಹೆಚ್ಚು ಒಪ್ಪುತ್ತದೆ. ಏಕೆಂದರೆ ಸಮಸ್ಯೆಗಳು ಹೇರಳವಾಗಿ ಇರುವ ನಮ್ಮ ದೇಶದಲ್ಲಿ ಅವುಗಳಿಗೆ ಪರಿಹಾರ ರೂಪಿ ಎಂದರೆ ನವೋದ್ಯಮಗಳೇ. ನಮ್ಮ ದೇಶ ಎದುರಿಸುವ ಎಲ್ಲ ಸವಾಲುಗಳಿಗೂ ಪರಿಹಾರವಿರುವುದು ನವೋದ್ಯಮಗಳಲ್ಲಿಯೇ. ಪ್ರಶ್ನೆ ಏನೇ ಇರಲಿ ಉತ್ತರ ನವೋದ್ಯಮ ಅಥವಾ ಮೇಲೆ ವಿವರಿಸಿದ ಉದ್ಯಮಶೀಲತೆ. ಫಲಿತಾಂಶಗಳನ್ನು ಅನ್ವೇಷಿಸುವ ಶಕ್ತಿ. ಹಾಗಾಗಿ ನವೋದ್ಯಮಗಳಿಂದ ನವಭಾರತ.

ಎಐ ಸ್ನೇಹ

ಇವೆಲ್ಲವೂ ಸಮರ್ಪಕವಾಗಿ ಆಗಬೇಕಾದರೆ ನಾವು ಎಐ ಜೊತೆಗೆ ಸ್ನೇಹ ಬೆಳೆಸಬೇಕು. ಅಂದರೆ ಅದರ ಬಗ್ಗೆ ಭಯ ಬಿಟ್ಟು ಅದನ್ನು ಒಡನಾಡಿ ಎಂಬಂತೆ ನೋಡುವಂತಾಗಬೇಕು. ಅರ್ಥಾತ್ ಕಲಿಯುವ ಕೌಶಲ ಬೆಳೆಸಿಕೊಳ್ಳುವ ಮತ್ತು ನವೋದ್ಯಮ ಕಟ್ಟುವ ಪ್ರಕ್ರಿಯೆಯಲ್ಲಿ ಎಐ ಮತ್ತು ತಂತ್ರಜ್ಞಾನವನ್ನು ಜೊತೆಗಾರರನ್ನಾಗಿಸಿಕೊಳ್ಳಬೇಕು. ಹಾಗಾಗಬೇಕಾದರೆ ಕಾಲೇಜು ಶಿಕ್ಷಣದ ಜೊತೆಜೊತೆಗೆ ಎಐ ಬಳಕೆಯನ್ನೂ ಮೈಗೂಡಿಸಿಕೊಳ್ಳಬೇಕು. ಕಲಿತದ್ದನ್ನು ಕಟ್ಟಬೇಕು. ಕಟ್ಟುವುದನ್ನು ಕಲಿಯಬೇಕು. ಕಲಿಯುತ್ತಾ ಕಟ್ಟಬೇಕು ಕಟ್ಟುತ್ತಾ ಕಲಿಯಬೇಕು. ಅಂದರೆ ಸೋಲು ಕೂಡ ಈ ಕಟ್ಟುವ ಪ್ರಕ್ರಿಯೆಯ ಅವಿಭಾಜ್ಯ ಅಂಗ. ಅದೇ ಮೊದಲ ಕಲಿಕೆ. ಸೋಲುವುದೇ ಆದರೆ ಬೇಗ ಸೋಲಬೇಕು ಎನ್ನುವುದನ್ನು ಎಐ ಕಲಿಸುತ್ತದೆ. ಬೇಗ ಸೋತು ಮೈಕೊಡವಿಕೊಂಡು ಮೇಲೆದ್ದು ಮತ್ತೆ ಹೊಸದೊಂದನ್ನು ಆ ಕಲಿಕೆಯ ಆಧಾರದ ಮೇಲೆ ಕಟ್ಟುವುದು ಸಾಧ್ಯವಾಗುತ್ತದೆ. ಏಕೆಂದರೆ ಎಐ ಹಳೆಯ ಪಾಠಗಳನ್ನು ಮರೆಯುವುದಿಲ್ಲ. ವರಸೆಗೆ ಹೇಳುವುದಲ್ಲ, ನಿಜಕ್ಕೂ ಸೋಲನ್ನು ಸೋಪಾನವಾಗಿಸುತ್ತದೆ. ಕಾಲೇಜು ಮೆಟ್ಟಿಲುಗಳನ್ನು ಏರುತ್ತಿರುವವರು ಇಂದು ಈ ಎಐ ಸೋಪಾನಗಳನ್ನು ಕ್ರಮಿಸಬೇಕಿದೆ. ಕ್ರಮವಾಗಿ ಕಲಿಯಲು ಶ್ರಮಿಸಬೇಕಿದೆ. ಒಳ್ಳೆಯ ಸುದ್ದಿ ಎಂದರೆ ಜಗತ್ತಿನ ಜ್ಞಾನವೆಲ್ಲವೂ ಇಂದು ಡೆಮಾಕ್ರಟೈಸ್ ಆಗಿದೆ. ಎಐನಿಂದಾಗಿ ಅದರ ಸಂಸ್ಕರಣವೂ ಸಂಕಲನವೂ ಆಗಿದೆ. ನಮ್ಮ ಕಾಲೇಜುಗಳಲ್ಲಿ ನಮಗೆ ಪ್ರಶ್ನೆಗಳನ್ನು ಹುಟ್ಟಿಸುವ ಶಿಕ್ಷಣ ದೊರೆತರೆ, ಉತ್ತರಗಳನ್ನು ನಾವೇ ಹುಡುಕಿಕೊಳ್ಳುವಷ್ಟು ಎಐ ನಮ್ಮನ್ನು ಸಬಲರನ್ನಾಗಿಸಿದೆ. ಸಕ್ಷಮರನ್ನಾಗಿಸಿದೆ.

(ಲೇಖಕರು ನವೋದ್ಯಮ ಸಲಹೆಗಾರರು)

ಪಿಯುಸಿ ಆಗಿದೆ. ಬದುಕಿನ ಜಾಡನ್ನು ಕಂಡುಕೊಳ್ಳುವ ಸಮಯ. ಈ ಹಂತದಲ್ಲಿ ಏನು ಓದುತ್ತೀರಿ ಎಂಬುದು ಮುಖ್ಯವಲ್ಲ. ಯಾವಾಗ ಏನು ಕಲಿಯುತ್ತೀರಿ, ಇನ್ಯಾವಾಗ ಕಲಿತದ್ದನ್ನು ಮರೆತು ಮರುಕಲಿಕೆಗೆ ತೆರೆದುಕೊಳ್ಳುತ್ತೀರಿ ಎಂಬುದರ ಮೇಲೆ ಭವಿಷ್ಯ ರೂಪುಗೊಳ್ಳುತ್ತದೆ.

ವೃತ್ತಿ ಸೂತ್ರ

ಉದ್ಯಮಶೀಲತೆ ಬೆಳೆಸಿಕೊಳ್ಳುವುದು ಹೇಗೆ?

ಅರಿವೇ ಗುರು. ಮೊದಲಿಗೆ ಮೂಲ ಕ್ಷೇತ್ರದ ಅಥವಾ ಕೋರ್/ಡೊಮೈನ್‌ನ (core/domain) ಜ್ಞಾನ ಬೆಳೆಸಿಕೊಳ್ಳಿ. ಅದು ನೀವು ಓದುತ್ತಿರುವ ಕ್ಷೇತ್ರಕ್ಕೆ ಹತ್ತಿರದ್ದಾದರೆ ಹೆಚ್ಚು ಅನುಕೂಲ. ವಿಜ್ಞಾನ ವಾಣಿಜ್ಯ ಕಲೆ ಎಂಬ ಮಿತಿ ಇಲ್ಲ. ಯಾರು ಬೇಕಾದರೂ ಯಾವ ಕ್ಷೇತ್ರದವರಾದರೂ ನವೋದ್ಯಮ ಕಟ್ಟುವುದು ಸಾಧ್ಯ. ಜೊತೆಗೆ ಎಐ ಎಂಬ ಸ್ನೇಹಿತ ಇದ್ದಾನಲ್ಲ. ನವೋದ್ಯಮಗಳ ವಿಷಯ ಕಲಿಯಲು ಆನ್ಲೈನ್‌ನಲ್ಲಿ ಸಂಪನ್ಮೂಲಗಳ ಕೊರತೆ ಇಲ್ಲ. ಪುಸ್ತಕಗಳು ಲೇಖನಗಳು ಮತ್ತು ಸ್ಟ್ರಕ್ಚರ್ಡ್ ಪಾಠಗಳು ಯಥೇಚ್ಛವಾಗಿ ಲಭ್ಯವಿವೆ. ನವೋದ್ಯಮ ಕರ್ತರು ಸೋತ ಅಥವಾ ಗೆದ್ದ ಕಥೆಯನ್ನು ಅವರ ಬಾಯಿಂದಲೇ ಹೇಳಿಸುವ ಪಾಡ್‌ಕಾಸ್ಟ್‌ಗಳು ಇಂಗ್ಲಿಷ್‌ನಲ್ಲಿ ಸಾಕಷ್ಟಿವೆ. ಇಂದು ಕನ್ನಡದಲ್ಲಿಯೂ 'ಮುಂದೆ ಬನ್ನಿ' ತರಹದ ಪಾಡ್‌ಕಾಸ್ಟ್‌ಗಳು ಲಭ್ಯ. ಸ್ಟಾರ್ಟಪ್ ವಿಷಯದಲ್ಲಿ ನೀರಿಗಿಳಿದು ಆಳ ಪರೀಕ್ಷಿಸಿದರೆ ತಪ್ಪಿಲ್ಲ. ಹಾಗೆ ಮಾಡಲು ಶಿಕ್ಷಣ ಸಂಸ್ಥೆ, ಸರಕಾರ, ಖಾಸಗಿ ಸಂಸ್ಥೆಗಳಿಂದಲೂ ಸಣ್ಣ ಗ್ರಾಂಟ್‌ಗಳು ದೊರೆಯುತ್ತವೆ. ಪಿ ಓ ಸಿ ಅಥವಾ ಪ್ರೂಫ್ ಆಫ್ ಕಾನ್ಸೆಪ್ಟ್ (PCO or Proof of concept) ದಾಟಲು ಸಾಧ್ಯವಾದರೆ ಒಳ್ಳೆಯ ಹೂಡಿಕೆಯೂ ದೊರೆಯಬಹುದು. ಹೂಡಿಕೆದಾರರು ಸೋತ ನವೋದ್ಯಮಿಗಳನ್ನು ಅನುಮಾನಿಸುವುದಿಲ್ಲ. ಬದಲಿಗೆ ಅವರಲ್ಲಿ ಮರು ಹೂಡಿಕೆ ಮಾಡುತ್ತಾರೆ. ಪಾಠಗಳನ್ನು ಕಲಿತಿರಬೇಕಷ್ಟೆ! ಉದ್ಯಮ ಕಟ್ಟುವ ಪ್ರಕ್ರಿಯೆಯಲ್ಲಿ ಮಾರ್ಗದರ್ಶನ ನೀಡಲು ಇಂದು ಮೆಂಟರ್‌ಗಳು ಸಹಾಯ ಹಸ್ತ ನೀಡುತ್ತಿದ್ದಾರೆ. ಗುರುವನ್ನು ಅರಸಿ ಹೋದವರಿಗೆ ನಿರಾಶೆಯಾಗಿರುವುದು ಅಪರೂಪ. ನಮ್ಮಲ್ಲಿ ಪ್ರಶ್ನೆಗಳಿದ್ದರೆ ಉತ್ತರಗಳು ಆನ್ಲೈನ್ ಅಥವಾ ಮೆಂಟರ್‌ಗಳಂತಹ ಗುರುಮುಖೇನ ಸುಲಭಕ್ಕೆ ದೊರೆಯುತ್ತಿದೆ. ಪ್ರಶ್ನೆಗಳೇ ಉದ್ಯಮಶೀಲತೆಯ ಮೂಲಬೀಜ.

ಶಾಲಾ-ಕಾಲೇಜುಗಳಲ್ಲಿ ಉದ್ಯಮಶೀಲತೆಗೆ ಉತ್ತೇಜನ

ಅನೇಕ ವೃತ್ತಿಪರ ಶಿಕ್ಷಣ ಸಂಸ್ಥೆಗಳಲ್ಲಿ ಇಂದು ಆಂತ್ರಪ್ರನರ್‌ಸೆಲ್‌ಗಳು ಅಥವಾ ಇ-ಸೆಲ್‌ಗಳು ಸ್ಥಾಪಿತವಾಗಿವೆ. ಉದ್ಯಮಗಳ ಮತ್ತು ಉದ್ಯಮಶೀಲತೆಯ ಬಗೆಗಿನ ಕಲಿಕೆ ಇಲ್ಲಿನ ಮೂಲ ಉದ್ದೇಶ. ಅದನ್ನು ಈಡೇರಿಸಲು ದಿನೇದಿನೇ ವಿನೂತನ ಮಾರ್ಗಗಳನ್ನು ಕಂಡುಕೊಳ್ಳಲಾಗುತ್ತಿದೆ. ಹ್ಯಾಕಥಾನ್‌ಗಳು, ಬಿಸಿನೆಸ್ ಪ್ಲಾನ್ ಸ್ಪರ್ಧೆಗಳು, ಶಾರ್ಕ್ ಟ್ಯಾಂಕ್ ಮಾದರಿಯ ಸ್ಟಾರ್ಟಪ್ ಪಿಚ್‌ಗಳು ಸರ್ವೇಸಾಮಾನ್ಯವಾಗುತ್ತಿವೆ. ಕೆಲವು ವೃತ್ತಿಪರ ಶಿಕ್ಷಣ ಸಂಸ್ಥೆಗಳಂತೂ ಕಾಲೇಜಿನ ಆವರಣದಲ್ಲಿಯೇ ಇನ್‌ಕ್ಯುಬೇಟರ್‌ಮತ್ತು ಆಕ್ಸಲರೇಟರ್ (Incubator and Accelarator)ಗಳನ್ನು ಸ್ಥಾಪಿಸಿವೆ. ಆರಂಭಿಕ ಸ್ಥಿತಿಯಲ್ಲಿರುವ ನವೋದ್ಯಮಗಳಿಗೆ ಪೂರಕ ವಾತಾವರಣ ನಿರ್ಮಿಸುವುದು ಇವುಗಳ ಉದ್ದೇಶ. ಮಾರ್ಗದರ್ಶನ ನೀಡುವುದರಿಂದ ಹಿಡಿದು ಹೂಡಿಕೆದಾರರನ್ನು ಕರೆತರುವವರೆಗೆ ಇವುಗಳ ಸೇವೆಯ ವ್ಯಾಪ್ತಿ. ಇವೆಲ್ಲ ವಿಜ್ಞಾನೇತರ ಕಲಿಕೆಗೆ ವಿಸ್ತರಿಸಬೇಕಿದೆ. ಬಿ ಮತ್ತು ಸಿ ಸ್ತರದ ಪಟ್ಟಣಗಳಿಗೂ ವ್ಯಾಪಿಸಬೇಕಿದೆ. ಉದ್ಯಮಶೀಲರಾಗುವುದು ಆಯ್ಕೆ ಅಲ್ಲ ಅನಿವಾರ್ಯ ಎನ್ನುವುದನ್ನು ಶಿಕ್ಷಣ ಸಂಸ್ಥೆಗಳು ಮನಗಾಣುತ್ತಿರುವ ಈ ಹೊತ್ತಿನಲ್ಲಿ ಹಾಗಾಗುವ ದಿನಗಳು ದೂರವಿಲ್ಲ.

ಕರ್ನಾಟಕ ಸಂಗೀತದ ವಿವಿಧ ಆಯಾಮಗಳು

ಕೆಲವು ಪ್ರಯಾಣಿಕರು ರೈಲುಬಂಡಿಯನ್ನು ಹತ್ತಿ ಗಂಟೆಯಾಗಿರುವುದಿಲ್ಲ, ತಮ್ಮ ಆಸನ ಬಿಟ್ಟು ಏಳುತ್ತಾರೆ; ಭರ್ರನೆ ಬೀಸುವ ಗಾಳಿಗೆ ಮೈಯೊಡ್ಡುವ ಸುಖಕ್ಕಾಗಿ ಬಾಗಿಲಲ್ಲಿ ನಿಲ್ಲುವ ಸಾಹಸ ಮಾಡುತ್ತಾರೆ. ಮಧ್ಯೆ ನಿಲ್ಲುವ ನಿಲ್ದಾಣಗಳಲ್ಲಿ ಇಳಿಯುವುದೋ, ನಡುನಡುವೆ ತಿಂಡಿ-ತಿನಿಸುಗಳನ್ನು ಕೊಂಡು ಮತ್ತೊಬ್ಬರಿಗೆ ಕೊಡುವುದೋ! ಒಟ್ಟು ಗಮ್ಯ ತಲುಪುವಷ್ಟರಲ್ಲಿ ತಮ್ಮದೇ ಮತ್ತೊಂದು ಪ್ರಯಾಣ ನಡೆಸಿರುತ್ತಾರೆ. ಎಲ್ಲರಂತೆಯೇ ಅವರದ್ದು ಒಂದು ಪಥದಲ್ಲೇ ಸಾಗಿದ್ದರೂ, ಅವರ ಪ್ರಯಾಣ ಮಾತ್ರ ಸ್ವತಂತ್ರವಾದದ್ದು...

ಏಕ ಅನೇಕ

ಎಸ್.ದಿವಾಕರ್

ಕತೆ, ಕಾದಂಬರಿಗಳಲ್ಲಿ ಓದುಗರನ್ನು ಕರೆದುಕೊಂಡು ಹೋಗುವ ಪಾತ್ರಗಳ, ಘಟನೆಗಳ ಅನುಕ್ರಮಣಿಕೆಯಿರುತ್ತದೆ. ಚಲನೆಯೇ ಮುಖ್ಯವಾಗಿರುವ ನೃತ್ಯದಲ್ಲಿ ಒಂದೊಂದು ಗತಿಯೂ ಒಂದೊಂದು ಶಿಲ್ಪದಂತೆ ಕಂಗೊಳಿಸುತ್ತದೆ. ಚಿತ್ರಕಲೆಯಾದರೋ ತನ್ನ ರೇಖೆ, ಬಣ್ಣ, ಪರಿಪ್ರೇಕ್ಷ್ಯ ಮೊದಲಾದವುಗಳಿಂದ ಮಾತಾಡುತ್ತದೆ. ಆದರೆ ಸಂಗೀತವಿದೆಯಲ್ಲ, ಅದು ಅಮೂರ್ತವಾದದ್ದು ಹೇಗೋ ಹಾಗೆ ಅನಿರ್ವಚನೀಯವಾದದ್ದೂ ಹೌದು. ಬಹುಶಃ ಇದೇ ಕಾರಣದಿಂದ ಸಂಗೀತದ ಬಗ್ಗೆ ಇರುವ ಅತ್ಯುತ್ತಮವಾದ ಪುಸ್ತಕಗಳ ಸಂಖ್ಯೆ ದೊಡ್ಡದಿಲ್ಲ.

ಈಚಿನ ವರ್ಷಗಳಲ್ಲಿ ನಾನು ತುಂಬ ಮೆಚ್ಚಿಕೊಂಡಿರುವ ಕೃತಿ 'ಸಾರಮತಿ'. ಇದನ್ನು ಬರೆದವರು ವಿದ್ವಾಂಸರೂ ಸ್ವತಃ ಗಾಯಕರೂ ಆಗಿರುವ ಸಾಯಿ ಗಣೇಶ್ ಎನ್.ಪಿ. ಇಲ್ಲಿರುವ ಲೇಖನಗಳು ಅನುರಣನ, ಅವಲೋಕನ, ಆಲೋಚನ ಎಂಬ ಮೂರು ಭಾಗಗಳಲ್ಲಿ ಹರಡಿಕೊಂಡಿವೆ. ಮೊದಲ ಭಾಗದಲ್ಲಿರುವ 'ಬಾಲಮುರಳಿಕೃಷ್ಣ: ಸಂಗೀತಸರಸ್ವತಿಯ 'ಚಿರುನವ್ವು'(ಮುಗುಳುನಗು)' ಎಂಬ ಲೇಖನದಲ್ಲಿ ಬಾಲಮುರಳಿ ಆಯ್ಕೆ ಮಾಡಿಕೊಳ್ಳುತ್ತಿದ್ದ ರಾಗಗಳು, ಅವರು ಲಯವನ್ನು ನಿರ್ವಹಿಸುತ್ತಿದ್ದ ಕ್ರಮ, ಕೃತಿಗಳ ವೈವಿಧ್ಯ, ಮನೋಧರ್ಮ ಸಂಗೀತ ಮೊದಲಾದವುಗಳ ಮೂಲಕ ಅವರ ಅನನ್ಯ ಸಂಗೀತವನ್ನು ಸೋದಾಹರಣವಾಗಿ ವಿವರಿಸುತ್ತಾರೆ. ಅವರ ಅಪ್ಪಟ ಸೃಜನಶೀಲತೆಯನ್ನು ವಿಶ್ಲೇಷಿಸುತ್ತ, 'ಬಾಲಮುರಳಿಯವರ ಹಾಡಿಕೆಯಲ್ಲಿ ಕಲ್ಪಿತ ಮತ್ತು ಕಲ್ಪನಾ ಸಂಗೀತದ ನಡುವೆ ಗೆರೆ ಎಳೆಯುವುದು ಕಷ್ಟದ ಕೆಲಸ. ಕಲ್ಪಿತ ಸಂಗೀತ ಎನ್ನಿಸಿಕೊಳ್ಳುವ ಕೃತಿ ಮೊದಲಾದವುಗಳ ಹಾಡಿಕೆಗಳಲ್ಲಿ ಕೂಡ ಅವರು ಒಮ್ಮೆ ಹಾಡಿದಂತೆ ಮತ್ತೊಮ್ಮೆ ಹಾಡುವ ಸಾಧ್ಯತೆಗಳು ಕಡಿಮೆ. ಕೃತಿಯಲ್ಲಿ ಸಂಗೀತವನ್ನು, ಸಾಹಿತ್ಯಾರ್ಥವನ್ನು ಬೇರೆ ಬೇರೆ ರೀತಿಯಲ್ಲಿ ಹುಡುಕುವ ಶೋಧನ ಪ್ರವೃತ್ತಿ ಅವರದ್ದು. ಕೃತಿಯನ್ನೇ ಹಾಡುವಾಗ ಒಮ್ಮೆ ಸಾಹಿತ್ಯಕ್ಕೆ ಒತ್ತುಕೊಟ್ಟು ಹಾಡಿ, ಮತ್ತೊಮ್ಮೆ ಕೃತಿಯ ಸಾಹಿತ್ಯ ಒದಗಿಸುವ ಸ್ವರಾಕ್ಷರದ ಸಾಧ್ಯತೆಯ ಕಡೆಗೆ ತಿರುಗಿ, ಇನ್ನೊಮ್ಮೆ ಕೃತಿಯ ಸಾಹಿತ್ಯದ ಯತಿ ಕಾಣಿಸುವ ಸೊಬಗನ್ನು ಕಂಡು ಅತ್ತ ಗಮನವೀಯುವ-ಒಟ್ಟು ಸದಾ ಒಂದು ಬಗೆಯ ಹೊಸತನ್ನು ಹುಡುಕುತ್ತಾ ತನ್ಮೂಲಕ ರಸಿಕರಿಗೆ ಕಲಾನುಭವವನ್ನು ಉಣಬಡಿಸುವ ಸೃಷ್ಟಿಶೀಲ ಮನಸ್ಸು ಅವರದ್ದು' ಎನ್ನುತ್ತಾರೆ. ಇದೊಂದು ಲೇಖನದಲ್ಲೇ ಬಾಲಮುರಳಿಯವರ ಧ್ವನಿನಿಯಂತ್ರಣ, ಹಾಡಿಕೆಯ ವೈವಿಧ್ಯ, ಕಲ್ಪಿತ-ಕಲ್ಪನಾ ಸಂಗೀತದ ಸಮನ್ವಯ, ಸೃಜನಶೀಲತೆ, ಹಿಂದೂಸ್ತಾನೀ ಸಂಗೀತಗಾರರ ಜೊತೆಗಿನ ಜುಗಲಬಂದಿ, ಬಹುಮುಖ ಪ್ರತಿಭೆ, ಹೀಗೆ ಆ ಮಹಾ ಗಾಯಕರ ಒಂದು ಸಮಗ್ರಚಿತ್ರ ದೊರೆತುಬಿಡುತ್ತದೆ. ಇದೇ ಬಗೆಯ ಇನ್ನೊಂದು ಲೇಖನವೆಂದರೆ 'ಎಂ.ಎಲ್. ವಸಂತಕುಮಾರಿ: ಸಂಗೀತಲೋಕದ ಸಾಮ್ರಾಜ್ಞಿ'

'ಮೈಸೂರು ಸದಾಶಿವರಾಯರು: ವಾಗ್ಗೇಯ ವೈಭವ' ಸಾಕಷ್ಟು ದೀರ್ಘವಾಗಿರುವ ಲೇಖನ. ಇದರಲ್ಲಿ ಸದಾಶಿವರಾಯರ ಜೀವನಚಿತ್ರವಿದೆ. ಜೊತೆಗೆ ದೇವತಾ ಸ್ತುತಿಯೇ ಪ್ರಧಾನವಾಗಿರುವ ಅವರ ಸಂಗೀತ ರಚನೆಗಳ ವೈಶಿಷ್ಟ್ಯ, ಅವುಗಳಲ್ಲಿರುವ ಕಾವ್ಯಗುಣ, ಅವರು ಉಪಯೋಗಿಸಿದ ಪರಿಚಿತ, ಅಪರಿಚಿತ ರಾಗಗಳು, ಸ್ವರಾಕ್ಷರಗಳ ಬಳಕೆ... ಇತ್ಯಾದಿ ವಿಶ್ಲೇಷಿಸುವ ಸಾಯಿಗಣೇಶ್ ಸ್ವತಃ ಒಬ್ಬ ಸಂಗೀತಗಾರರಾಗಿ ತಮ್ಮ ಸಂಗೀತಾನುಭವದ ಆಧಾರದ ಮೇಲೆ ಸಂಗೀತಲೋಕದ ನೂತನವೂ ಸಮೃದ್ಧವೂ ಆದ ಸೃಜನಶೀಲ ಪ್ರಕ್ರಿಯೆಯನ್ನು ಹೇಗೋ ಹಾಗೆ ಈ ವಾಗ್ಗೇಯಕಾರರ ಅಸಾಧಾರಣ ಪ್ರತಿಭೆಯನ್ನೂ ಅನಾವರಣಗೊಳಿಸುತ್ತಾರೆ. ಈ ಮಾತಿಗೆ ಪೂರಕವಾಗಿ ಅವರು ಸಂದರ್ಭೋಚಿತವಾಗಿ ಉಲ್ಲೇಖಿಸಿರುವ ಸದಾಶಿವರಾಯರು ಹಾಗೂ ತ್ಯಾಗರಾಜರು, ದೀಕ್ಷಿತರು ಮೊದಲಾದವರ ಕೃತಿಗಳ/ಕೃತಿಭಾಗಗಳ ಶುದ್ಧ ಪಾಠಗಳನ್ನು ಮೆಚ್ಚಿಕೊಳ್ಳಲೇಬೇಕು.

ಸಾಯಿಗಣೇಶ್ ಅವರು 'ಸಂಗೀತದಲ್ಲಿ ಸಂಪ್ರದಾಯ: ಒಂದು ಚರ್ಚೆ' ಎಂಬ ಲೇಖನದಲ್ಲಿ ಸಂಪ್ರದಾಯವನ್ನು ಯಾಕೆ ಮೀರಬೇಕು ಎಂಬ ಪ್ರಶ್ನೆಯನ್ನು ಎತ್ತಿಕೊಂಡು ಟಿ.ಆರ್.ಮಹಾಲಿಂಗಂ ಅವರ ಒಂದು ಕಚೇರಿ, ವೀಣಾ ಬಾಲಚಂದರ್ ಅವರ ಸ್ವೋಪಜ್ಞತೆ, ವೋಲೇಟಿ ವೆಂಕಟೇಶ್ವರಲು ಮತ್ತು ಶ್ರೀಪಾದ ಪಿನಾಕಪಾಣಿ ಪರಂಪರೆಯ ಪರಿಧಿಯನ್ನು ಮೀರಿದ ಬಗೆ, ಇತ್ಯಾದಿ ಚರ್ಚಿಸುತ್ತ 'ಸಂಗೀತವೆನ್ನುವಂಥದ್ದು ಒಳಗಣ ಮತ್ತು ಹೊರಗಣ ಶಬ್ದ, ಲಯಗಳ ಸಂಸ್ಕರಣ' ಎಂದು ಭಾವಿಸಿದಾಗ, ಸಂಗೀತಗಾರನ/ಗಾರ್ತಿಯ ಪ್ರಕೃತಿ ಸಹಜವಾದ ತುಡಿತವೂ ಈ ಆದಿಮೂಲಕ್ಕೇ ಹೋಗುವುದಕ್ಕಾಗಿ ಯೇ ಆಗಿರುತ್ತದೆ. ಸಿದ್ಧಮಾದರಿಯಿದ್ದರೂ ಅವುಗಳನ್ನು ಪುನಃ ಕಳಚಿಟ್ಟು ಹೊಸದಾಗಿ ಸೃಷ್ಟಿಸುವ ತುಡಿತ ಅವರ ಸ್ವಭಾವಕ್ಕೆ ಸಹಜವೇ ಹೌದು' ಎಂಬ ತೀರ್ಮಾನಕ್ಕೆ ಬರುತ್ತಾರೆ. ವೋಲೇಟಿ ವೆಂಕಟೇಶ್ವರಲು ಅವರ ಗಾಯನದ ಸ್ವೋಪಜ್ಞತೆಯನ್ನು ಸಾಯಿಗಣೇಶ್ ಎಷ್ಟು ಸೊಗಸಾಗಿ ವರ್ಣಿಸುತ್ತಾರೆ ನೋಡಿ: 'ಒಂದು ಬಗೆಯ ಪ್ರಯಾಣಿಕರು ರೈಲುಬಂಡಿಯನ್ನು ಹತ್ತಿ ಗಂಟೆಯಾಗಿರು ವುದಿಲ್ಲ, ತಮ್ಮ ಆಸನ ಬಿಟ್ಟು ಏಳುತ್ತಾರೆ; ಭರ್ರನೆ ಬೀಸುವ ಗಾಳಿಗೆ ಮೈಯೊಡ್ಡುವ ಸುಖಕ್ಕಾಗಿ ಬಾಗಿಲಲ್ಲಿ ನಿಲ್ಲುವ ಸಾಹಸ ಮಾಡುತ್ತಾರೆ. ಮಧ್ಯೆ ನಿಲ್ಲುವ ನಿಲ್ದಾಣಗಳಲ್ಲಿ ಇಳಿಯುವುದೋ, ಟಿಟಿಯ ಜೊತೆ ಸ್ನೇಹದ ಸಂಭಾಷಣೆ ನಡೆಸುವುದೋ, ನಡುನಡುವೆ ತಿಂಡಿ-ತಿನಿಸುಗಳನ್ನು ಕೊಂಡು ಮತ್ತೊಬ್ಬರಿಗೆ ಕೊಡುವುದೋ! ಒಟ್ಟು ಗಮ್ಯ ತಲುಪುವಷ್ಟರಲ್ಲಿ ತಮ್ಮದೇ ಮತ್ತೊಂದು ಪ್ರಯಾಣ ನಡೆಸಿರುತ್ತಾರೆ. ಓಲೇಟಿಯವರ ಸಂಗೀತಯಾತ್ರೆ (ಇಂಥ) ಪ್ರಯಾಣಿಕರಂಥದ್ದು. ಎಲ್ಲರಂತೆಯೇ ಅವರದ್ದು ಒಂದು ಪಥದಲ್ಲೇ ಸಾಗಿದ್ದರೂ, ಅವರ ಪ್ರಯಾಣಮಾತ್ರ ಸ್ವತಂತ್ರವಾದದ್ದು'

ನನಗೆ ತುಂಬ ಇಷ್ಟವಾದದ್ದು ಈ ಸಂಕಲನದ ಕೊನೆಯಲ್ಲಿರುವ 'ಕರ್ನಾಟಕ ಸಂಗೀತದಲ್ಲಿ ಧಾತು ಮತ್ತು ಮಾತುಗಳ ಸಮನ್ವಯ: ಒಂದು ಚರ್ಚೆ' ಎಂಬ ಲೇಖನ. ಮೊದಲಿಗೇ ಸಂಗೀತಕೃತಿಯೊಂದರ ಸಾಹಿತ್ಯಭಾಗವನ್ನು 'ಮಾತು' ಎಂದೂ ಅದರೊಳಗಿನ ಸಂಗೀತಾಂಶವನ್ನು 'ಧಾತು' ಎಂದೂ ಹೇಳುವ ಅವರು ವಾಗ್ಗೇಯಕಾರರ ಕೃತಿಗಳಲ್ಲಿ ಕಾಣುವ ಕಲ್ಪಿತ ಸಂಗೀತ ಮತ್ತು ಕಲ್ಪನಾ ಸಂಗೀತ, ಕಾಲಪ್ರಮಾಣ, ಯತಿ ಇತ್ಯಾದಿ ತಿಳಿಸಿ, ವರ್ಣ, ಕೃತಿ, ಕೀರ್ತನೆ, ಪದ, ಜಾವಳಿಗಳಲ್ಲಿರುವ ಈ ಪರಿ ಕಲ್ಪನೆಯ ಮುಖ್ಯಾಂಶಗಳನ್ನು ನಿದರ್ಶನಗಳ ಮೂಲಕ ಪ್ರಕಟಗೊಳಿಸುತ್ತಾರೆ. ಪಾಶ್ಚಾತ್ಯ ಸಂಗೀತದಲ್ಲಿ ಮಾತಿಗಿಂತ ಧಾತುವಿಗೇ ಹೆಚ್ಚು ಮಹತ್ವ. ಅಲ್ಲಿ ಮಾತು (ಸಾಹಿತ್ಯ ಭಾಗ)ಕ್ಕಿಂತ ಸಂಗೀತಾತ್ಮಕ ನುಡಿಗಟ್ಟುಗಳೇ(ಫ್ರೇಸಸ್) ಪ್ರಮುಖವಾಗಿರುತ್ತವೆ. ಸೂಸನ್ ಲ್ಯಾಂಗರ್‌ನಂಥ ತತ್ವಜ್ಞಾನಿಗಳ, ಆರಾನ್ ಕೋಪ್‌ಲ್ಯಾಂಡ್‌ನಂಥ ವಾಗ್ಗೇಯಕಾರರ ಪುಸ್ತಕಗಳನ್ನು ಓದಿದರೆ ಈ ಮಾತು ಸುಸ್ಪಷ್ಟ.

ಉಳಿದಂತೆ 'ನಾದಯೋಗಿತ್ಯಾಗರಾಜ', 'ತ್ಯಾಗರಾಜರ ಕೃತಿಗಳಲ್ಲಿಕಾವೇರಿ', 'ತ್ಯಾಗರಾಜರ ರಾಮಕಥಾ ಸುಧಾರಸ' -ಇವು ಆ ಮಹಾ ವಾಗ್ಗೇಯಕಾರರನ್ನು, ಅವರ ಸಂಗೀತ ಕೃತಿಗಳ ಅಂತರಾರ್ಥವನ್ನು ಪರಿಚಯಿಸುವ ಲೇಖನಗಳು. 'ಸಂಗೀತ ತತ್ತ್ವ: ವೈಶ್ವಿಕ ಕಲ್ಪನೆ', 'ಪ್ರೀತಿಯ ಸೆಲೆಯೊಳಗಿನ ಸಂಗೀತದ ತನನನ', 'ಇತಿಹಾಸದ ಪ್ರವಾಹದಲ್ಲಿ ಸಂಗೀತದಂತಹ ಅಭಿಜಾತ ಕಲೆ' ಮುಂತಾದ ಲೇಖನಗಳಲ್ಲಿ ಕೂಡ ಸ್ವತಂತ್ರ ಚಿಂತನೆಗಳಿವೆ, ಅಪೂರ್ವ ಒಳನೋಟಗಳಿವೆ.

ಸಾಯಿಗಣೇಶ್ ಅವರ ಸಂಗೀತ ಗುರು ವಿದ್ವಾನ್ ಶ್ರೀಕಾಂತಂ ನಾಗೇಂದ್ರ ಶಾಸ್ತ್ರಿಯವರ ಸೊಗಸಾದ ಮುನ್ನುಡಿಯಿರುವ, ಭಾವಪ್ರಚೋದಕವಾದ, ಅತ್ಯಂತ ಲವಲವಿಕೆಯ ಈ ಕೃತಿ ಸಂಗೀತಾಸ್ವಾದನೆಯ ಒಂದಿಡೀ ಶ್ರೇಣಿಯನ್ನೇ ಒಳಗೊಂಡಿದೆಯೆನ್ನಬೇಕು. ಇಲ್ಲಿ ಅತ್ಯುತ್ತಮ ಸಂಗೀತದ ಅನೇಕ ವರ್ಷಗಳ ಕೇಳ್ಮೆಯಿದೆ, ಸಂಗೀತಾತ್ಮಕ ಅರ್ಥವೇನೆಂಬ ಜಿಜ್ಞಾಸೆಯಿದೆ, ಸೃಜನಶೀಲತೆಯನ್ನು ವ್ಯಾಖ್ಯಾನಿಸುವ ಪ್ರತಿಭೆಯಿದೆ, ಪರಂಪರೆ ಮತ್ತು ಹೊಸ ಆವಿಷ್ಕಾರಗಳನ್ನು ಕುರಿತ ಆರೋಗ್ಯಕರ ದೃಷ್ಟಿಯಿದೆ, ಸಂಗೀತವನ್ನು ಯಾಕೆ ಕೇಳಬೇಕು, ಹೇಗೆ ಕೇಳಬೇಕು ಎಂಬುದನ್ನು ಓದುಗರಿಗೆ ಮನವರಿಕೆ ಮಾಡಿಕೊಡುವ ಆತ್ಮೀಯ ಶೈಲಿಯಿದೆ.

ನನ್ನ ಮಟ್ಟಿಗೆ ದೃಷ್ಟಿಯಲ್ಲಿ ರಾಳ್ಳಪಲ್ಲಿ ಅನಂತಕೃಷ್ಣ ಶರ್ಮರ 'ಗಾನಕಲೆ', ಎ.ಎನ್. ಮೂರ್ತಿರಾಯರ 'ಗಾನವಿಹಾರ', ಜಿ.ಟಿ.ನಾರಾಯಣರಾಯರ 'ಶ್ರುತಗಾನ', ಎಸ್. ಕೃಷ್ಣಮೂರ್ತಿಯವರ 'ಸಂಗೀತ ಸರಿತ', ಭಾಸ್ಕರ್ ಚಂದಾವರ್ಕರರ (ವೈದೇಹಿ ಅನುವಾದಿಸಿರುವ) 'ಸಂಗೀತ ಸಂವಾದ', ಮುಂತಾದ ಪುಸ್ತಕಗಳ ಜೊತೆ ನಿಸ್ಸಂದೇಹವಾಗಿ ನಿಲ್ಲುವ ಕೃತಿಯಿದು. ■

ಹೃದಯದ ಇಮೋಜಿ

ಸೌರಭ ಕಾರಿಂಜೆ
feedbacklvk@vijaykarnataka.com

ನೋಟಿಫಿಕೇಷನ್ ಸದ್ದಿಗೆ ವಾಟ್ಸಾಪ್ ತೆರೆದಳು ರಚನಾ. 'ಫ್ರೀ ಇದೀಯಾ ಇವತ್ತು?' ಪ್ರತೀಕ್! ಒಂದು ಗಳಿಗೆ ಎದೆ ಬಡಿತ ನಿಂತಂತಾಯಿತು ಅವಳಿಗೆ. ಅವನ ಜೊತೆ ಮೂರು ತಿಂಗಳ ಒಡನಾಟ. ಡೇಟಿಂಗ್ ಆ್ಯಪ್ ಮೂಲಕ ಪರಿಚಯ. ಎಷ್ಟೋ ಹುಡುಗರನ್ನು ಭೇಟಿ ಮಾಡಿದ್ದಾಳೆ ಬೆಂಗಳೂರಿನಲ್ಲಿ, ಕೆಲವೊಬ್ಬರನ್ನು ಸ್ನೇಹಿತರ ಮೂಲಕ, ಇನ್ನು ಕೆಲವರನ್ನು ಆ್ಯಪ್ ಮೂಲಕ. ಆದರೆ ಅವನಷ್ಟು ಯಾರೂ ತನ್ನನ್ನು ಆಕರ್ಷಿಸಿಲ್ಲ.

'ಖಂಡಿತ!' ಮಿದುಳು ಬೇಡವೆಂದರೂ ಇವನಿಗೆ ಇಲ್ಲವೆನ್ನಲು ಹೃದಯಕ್ಕೆ ಸಾಧ್ಯವೇ? 'ಎಲ್ಲಿ ಸಿಗ್ತೀಯ?' 'ಮನೆಯಲ್ಲೇ.' ಅವನ ಜೊತೆಗೆ ಕಳೆದ ಕೊನೆಯ ಬಾರಿಯ ಏಕಾಂತ ನೆನಪಾಗಿ ಅವಳ ತುಟಿಯ ಕೊನೆಯಲ್ಲೊಂದು ಸಣ್ಣ ನಗು ಮೂಡಿತು.

'ಅಡ್ರೆಸ್?' 'ನೆನಪಿಲ್ವಾ ನಿನಗೆ?' ಛೇಡಿಸಿದಳು. 'ಒಂದೇ ಸಾರಿ ಬಂದಿದ್ದಲ್ವಾ? ಮರೆತೆ'. 'ನೆನಪಿದ್ದರೂ ಪ್ರಯೋಜನ ಇಲ್ಲ, ಮನೆ ಚೇಂಜ್ ಮಾಡಿದ್ದೀನಿ. ಕಳಿಸ್ತೀನಿ ಇರು' ಚಕಚಕನೆ ಟೈಪಿಸಿದಳು. ಬ್ಲೂ ಟಿಕ್ ಕಂಡ ಬೆನ್ನಲ್ಲೇ ಅವನು ಹೃದಯದ ಇಮೋಜಿ ಒತ್ತಿದ.

★

'ಮುಂದೆ ಹೈಯರ್‌ಸ್ಟಡಿ ಮಾಡೋ ಆಲೋಚನೆ ಇದೆಯಾ ನಿಂಗೆ?' ಅವನು ಅವಳ ಸೊಂಟ ಬಳಸಿ ಕೇಳಿದ್ದ. ಸುತ್ತ ಕಿವಿಗಡಚಿಕ್ಕುವ ಪಬ್‌ನ ಸಂಗೀತ. ಕುಣಿಯುವ ನಡುವೆ ಅವನು ಕೇಳಿದ್ದೇನೋ ತಿಳಿಯಲಿಲ್ಲ.

'ಏನಂದೆ?' ಅವನು ಈ ಬಾರಿ ಬಾಗಿ ಅವಳ ಕಿವಿಯಲ್ಲಿ ಜೋರಾಗಿ ಕೇಳಿದ. 'ಏನೂ ಅಂದುಕೊಂಡಿಲ್ಲ ಸದ್ಯ. ಇಬ್ಬರೂ ಜೊತೆಗೆ ಮಾಡಬಹುದು. ಐ ವಾಂಟ್‌ಟು ಬಿ ವಿಥ್‌ಯೂ' ಅವಳು ದನಿ ಎತ್ತರಿಸಿ ಉತ್ತರಿಸಿದಳು.

ಅವಳು ಪ್ರೀತಿಯಲ್ಲಿ ಬಿದ್ದಿದ್ದಳು, ಒಂದೇ ತಿಂಗಳಲ್ಲಿ, 'ನಮ್ಮ ಅಪ್ಪಅಮ್ಮನ ಜೊತೆ ಮಾತಾಡ್ತೀಯ?' ಕೇಳಿದ್ದ. ಅವಳಿಗೆ ತಬ್ಬಿಬ್ಬಾಗಿತ್ತು ಒಂದು ಕ್ಷಣ. 'ಇಷ್ಟು ಬೇಗ?'.'ನನಗೆ ಟೈಂ ಬೇಡ. ನಿನಗೆ ಬೇಕಾ?' ಅವನ ಕಣ್ಣು ಮಿನುಗುತ್ತಿತ್ತು.

★

ಡ್ಯಾಡಿ, ಇಲ್ಲಿ ಒಬ್ಬ ಹುಡುಗನ್ನು ನೋಡಿದ್ದೇನೆ.'ನೈಸ್. ನಮ್ಮ ಜನ ತಾನೇ?' ಅವಳ ತಂದೆಯದು ಅಂಥಾ ಸಂಪ್ರದಾಯಸ್ಥ ಮನಸ್ಸಲ್ಲವಾದರೂ ನಮ್ಮ ಜನವೇ ಆದರೆ ಬದುಕು-ಹೊಂದಾಣಿಕೆ ಸುಲಭವೆಂದು ಅವರ ಅಭಿಪ್ರಾಯ. 'ಹೂಂ ಡ್ಯಾಡಿ'. 'ಅವರ ತಂದೆ ತಾಯಿ ಜೊತೆ ಮಾತಾಡಿದೀಯ?' 'ಇನ್ನೂ ಇಲ್ಲ, ಮುಖತಃ ಮಾತಾಡಿಸುತ್ತೇನೆ ಅಂತಂದಿದ್ದಾನೆ. ಇಲ್ಲೇ ಇರೋದು ಅವರು'. 'ಗುಡ್‌ಗುಡ್. ಮದುವೆ ಮಾತ್ರ ಊರಲ್ಲಿ, ಒಕೆ ನಾ? ಬೇಕಿದ್ದರೆ ಅಲ್ಲಿ ಒಂದು ರಿಸೆಪ್ಷನ್ ಇಟ್ಟುಕೊಳ್ಳಿ'. 'ಒಕೆ ಡ್ಯಾಡಿ'. ಕರೆ ಕತ್ತರಿಸಿದವಳೇ, ಉತ್ಸಾಹದಿಂದ ಪ್ರತೀಕನಿಗೆ ಮೆಸೇಜ್ ಮಾಡಿದಳು.

ನವಿಲುಗರಿ

★

ಸುತ್ತಮುತ್ತೆಲ್ಲ ಭರ್ತಿಯಾಗಿರುವ ಟೇಬಲ್‌ಗಳು. ತಾನು ಬಂದು ಒಂದು ಗಂಟೆಯಾಯಿತು. ತುಂಬಾ ಮಾತಾಡೋದಿದೆ, ಮದುವೆ ಮುಂದಿನ ಜೀವನ ಎಲ್ಲದರ ಬಗ್ಗೆಯೂ. ತಂದೆಗೆ ಕರೆ ಮಾಡಿಸಬೇಕು ಇವನ ಕೈಲಿ. ಇವನು ನೋಡಿದರೆ ಇನ್ನೂ ನಾಪತ್ತೆ. ಪ್ರತೀಕ್‌ನ ಆಫೀಸಿಗೆ ತುಂಬಾ ಹತ್ತಿರದ ಕೆಫೆ ಇದು. ಎಲ್ಲಿ ಹೋದ? ಮೀಟಿಂಗ್‌ಗಳಲ್ಲಿ ಸಿಲುಕಿಕೊಂಡನೋ ಏನೋ? ವೇಯಿಟರ್‌ಎರಡು ಬಾರಿ ಬಂದು ಆರ್ಡರ್ ಕೊಡಲು ಕೇಳಿದ. ಇವಳು ಪ್ರತೀಕನಿಗೆ ಮೆಸೇಜ್ ಮಾಡಿದಳು. ಬ್ಲೂ ಟಿಕ್ ಬರಲಿಲ್ಲ, ಒಂದು ಗಂಟೆಯಾಯಿತು. ವೇಯಿಟರನ ಕಣ್ನೋಟ ಈಗ ಅಸಹನೆಯಿಂದ ಕರುಣೆಗೆ ಬದಲಾದಂತೆ ಅನಿಸಿತು. ಕೊನೆಯ ಬಾರಿಗೆನ್ನುವಂತೆ ಮತ್ತೊಮ್ಮೆ ಕರೆ ಮಾಡಿದಳು. ಅವನು ಉತ್ತರಿಸಲಿಲ್ಲ, ಅವಳು ಎದ್ದು ಹೊರಟಳು. ಅವನು ಮತ್ತೆ ಸಂಪರ್ಕಿಸಲಿಲ್ಲ, ಕಾರಣವೂ ತಿಳಿಸಲಿಲ್ಲ. ಅವನ ಜೊತೆಗೆ ಹೆಣೆದ ಕನಸುಗಳಿಂದ ಬಿಡಿಸಿಕೊಳ್ಳುವುದು ಸುಲಭವಿರಲಿಲ್ಲ. ಆದರೆ ಬದುಕು ನಿಲ್ಲುವುದಿಲ್ಲವಲ್ಲ. ಅದಾಗಿ ಆರು ತಿಂಗಳ ನಂತರ ಈಗ ಅವನ ಮೆಸೇಜ್.

★

'ಇಷ್ಟೊಂದು ಊರಾಚೆ ಯಾಕೆ ಮನೆ ಮಾಡಿದೀಯ?'ಅವನ ಮೆಸೇಜಲ್ಲಿ ಸಣ್ಣಗೆ ಅಸಹನೆ. 'ವರ್ಕ್‌ಫ್ರಂ ಹೋಂ ಅಲ್ವಾ? ಆರಾಮಾಗಿದೆ. ಸುತ್ತಮುತ್ತ ಜಂಗುಳಿ ಇಲ್ಲ, ನಮಗಿಬ್ಬರಿಗೆ ಬೇಕಾದಷ್ಟು ಪ್ರೈವೆಸಿ ಇರತ್ತೆ'.

'ಕ್ಯಾಬ್ ಒಂದೂವರೆ ಗಂಟೆ ಹೇಳ್ತಾ ಇದೆ'. 'ಅದಕ್ಕೇ ಕ್ಯಾಬ್ ತಗೋ ಅಂದಿದ್ದು. ಹೊರಟ್ಯಾ?' ಅವನು ಹೌದೆಂದು ಬೆನ್ನಲ್ಲೇ ಲೈವ್ ಲೊಕೇಷನ್ ಕಳಿಸಿದ. ಇವಳು ಲೊಕೇಷನ್ ನೋಡುತ್ತಾ ಹೃದಯದ ಇಮೋಜಿ ಒತ್ತಿದಳು. ಅವನ ಕ್ಯಾಬ್ ಒಂದೂವರೆ ಗಂಟೆಯ ನಂತರ ಇವಳು ಕಳಿಸಿದ ಲೊಕೇಷನ್ ತಲುಪಿತು. 'ನಾ ಇಳಿದೆ. ಇಲ್ಲಿ ಮನೆ ಎಲ್ಲಿ?' ಅವನು ಮೆಸೇಜ್ ಮಾಡಿದ. ಇವಳು ನೋಡಿದಳು. 'ಲೊಕೇಷನ್ ಸರಿ ಇದ್ಯಾ? ಹೊಲಗದ್ದೆ ಅನಿಸ್ತಾ ಇದೆ ಇಲ್ಲಿ!' ಮತ್ತೆ ಮೆಸೇಜ್. ಇವಳು ಫೋನ್ ನೋಡುತ್ತಾ ಕುಳಿತಳು. 'ವಾಪಾಸ್ ಹೋಗೋಕೂ ಕ್ಯಾಬ್ ಸಿಗಲ್ಲ ಇಲ್ಲಿ, ಎಲ್ಲಿದೀಯ ನೀನು? ಅಡ್ರೆಸ್ ಸರಿ ಕೊಟ್ಟೆ ತಾನೇ?'ಅವಳು ನಸುನಕ್ಕು ಮತ್ತೆ ಹೃದಯದ ಇಮೋಜಿ ಒತ್ತಿದಳು. 'ಬೇಬ್ಸ್, ಯಾರದ್ದು ಮೆಸೇಜ್?' ಪಕ್ಕ ಕೂತು ಇವಳ ಕೈಗೊಂದು ಬಿಯರ್ ರವಾನಿಸಿದ ಯುವಕ ಕೇಳಿದ. ಕೆಫೆ ಬೆಚ್ಚಗಿತ್ತು. ಬಿಯರ್‌ನ ತಂಪು ಹಿತವಾಗಿತ್ತು. 'ಸ್ಪ್ಯಾಮ್ ಮೆಸೇಜ್ ಬಿಡು' ಇವಳು ಮೊಬೈಲ್ ಸೈಲೆಂಟ್‌ಗೆ ಹಾಕಿದಳು. ಮೊಬೈಲಿಗೆ ಕರೆ ಬರುತ್ತಲೇ ಇತ್ತು. ■

ನಿಸರ್ಗ ಆಸ್ಪತ್ರೆ ಸಂಸ್ಥಾಪಿಸಿ 20 ವರ್ಷಗಳಿಂದ
ವೈದ್ಯಕೀಯ ಸೇವೆ ಸಲ್ಲಿಸುತ್ತಿರುವ
ಡಾ|| ಜಿತೇಶ ನಂಬಿಯಾರ್
ನೇತೃತ್ವದಲ್ಲಿ
ಮೊಣಕಾಲು ನೋವೇ?
ನಿಮ್ಮ ಸಮಸ್ಯೆಗಳಿಗೆ ನೈಸರ್ಗಿಕ ಚಿಕಿತ್ಸೆ! ಶಾಶ್ವತ ಪರಿಹಾರ
ನಮ್ಮ ಆಸತ್ರೆಯಲ್ಲಿ ನಿಮ್ಮ ಎಲ್ಲಾ ರೀತಿಯ ನೋವುಗಳಿಗೆ ಮೂಲ ಕಾರಣ ಹುಡುಕಿ ನ್ಯಾಚುರೋಪಥಿ, ಆಯುರ್ವೇದ, ಫಿಜಿಯೋಥೆರಪಿ ಚಿಕಿತ್ಸೆಗಳ ಸಂಯೋಜನೆಯಿಂದ ನೋವು ನಿರ್ಮೂಲನೆ ಮಾಡಿ ಮತ್ತೆ ಮರುಕಳಿಸದಂತೆ ಸೂಕ್ತ ಸರಳ ಮಾರ್ಗದರ್ಶನ ಲಭ್ಯ, ದೀರ್ಘಕಾಲೀನ ನೋವುಗಳ ಪರಿಹಾರ
ನಮ್ಮ ವಿಶೇಷತೆಗಳು
ಆಯುರ್ವೇದ
ಫಿಜಿಯೋಥೆರಪಿ
ಓಝೋನ್ ಥೆರಪಿ
ಅಕ್ಯೂಪಂಕ್ಚರ್ / ಆಕ್ಯೂಪ್ರೆಶರ್
ನ್ಯಾಚುರೋಪತಿ, ಡಯಟ್, ಯೋಗ
ಶ್ರೀ ಅನಂತರಾವ್ ಬಿಳಗಿ ಸ್ಮಾರಕ
ನಿಸರ್ಗ ಆಸತ್ರೆ
ಕುಮಟಾ ರಸ್ತೆ, ಐದು ರಸ್ತೆ ಹತ್ತಿರ, ರಾಯರಪೇಟೆ, ಅಗಸೆಬಾಗಿಲು ರಸ್ತೆ, ಶಿರಸಿ, ಉತ್ತರಕನ್ನಡ, ಕರ್ನಾಟಕ.
ಇಂದೇ ಸಲಹೆ ಪಡೆಯಿರಿ
NISARGA TRUST (R) SIRSI - 581401
+91 9448778153 / 7892414153
www.nisargahospital.in
www.youtube.com@nisargahospital

RNI No. KARKAN/2016/71628
Vol. 11 Issue no. 178
Published by Lokesh K V on behalf of Metropolitan Media Company Limited., Published at 74/2,Sanjana Plaza,4th&5th Floor,Elephant Rock Road,Jayanagar 3rd block,Bengaluru-560011, Ph: 080 40877666 and Printed at (a) Bennett Coleman & Co Ltd., The Times of India Press, No. 9/10/11-A, 4th Main, KIADB Bommasandra Industrial Area, Anekal Taluk, Bangalore - 560 099. (b) Metropolitan Media Company Limited, Plot No.34/B, Hootagalli Industrial Area, Belavadi post, Mysuru - 570 018. (c) Metropolitan Media Company Limited., Sy. No.45/2, Savalanga Road, Navule, Kasaba Hobli, Shivamogga- 577 204. (d) Metropolitan Media Company Limited, Plot No 33 R.S. No. 536, Honaga Industrial Estate, Honaga , Belagavi Taluk, Belagavi 591156. (e) Metropolitan Media Company Limited Plot No. 15 & 16, KIADB Rayapur Industrial Area, Hubballi - 580 009. (f) Metropolitan Media Co. Ltd.,Plot No. 9, KSSIDC, Industrial Area, Kaladagi Road, Vidyagiri, Bagalakote- 587102 (g) Metropolitan Media Company Limited., Plot No. 224, in Sy. No. 41/2, 41/B & 42, Kapnoor II Stage Industrial Area, Kalaburagi- 585 104.(h) Metropolitan Media Company Limited., Plot No. 124 (part) and Plot No. 125 (part) of Sy. No. 132/1, Oddarahatti village, Gangavathi (i) Metropolitan Media Company Limited No. 284 (Part), 285, 286 & 287, Baikampady Industrial Area, Mangaluru – 575 011. Regd. Office: 74/2,Sanjana Plaza,4th&5th Floor,Elephant Rock Road,Jayanagar 3rd block,Bengaluru-560011, (Ph:080-40877666). Editor: Sudarshan Channangihalli.
© All Rights Reserved. Reproduction in whole or part without permission is prohibited.

ಪದ್ಯಕಾಲ

ತುದಿ ಬೆರಳಲಿ ನಿಂತು

ಈ ಬೆರಳ ತುದಿ ಭಯಂಕರ,
ಸ್ಫೋಟಿಸಬಹುದು ಜಗವ
ಎರಡು ಬೆರಳೆತ್ತಿ ತೋರಬಹುದು ಗೆಲುವ

ಈ ಬೆರಳುಗಳು ಜೊತೆಗೂಡಿ
ಬಿಗಿಗೊಂಡ ಮುಷ್ಟಿ
ಹುಡಿಗೈಯಬಹುದು ಜಗವ
ಹಿಡಿಯಬಹುದು ಕೊರಳ
ಕೆಂಪಾದ ಬೆರಳ ನೋಡುತ್ತಾ
ತೊಳೆಯುತ್ತಲೇ ಇರಬಹುದು ನಿಜವ

ಆದರೆ
ಇದೇ ಬೆರಳಲ್ಲಿ ಪುಟಾಣಿ ಮಗುವಿನ ಕೆನ್ನೆಗೆ ಬೊಟ್ಟಿಡಬಹುದು
ದಾರಿ ಕಾಣದ ವ್ಯಕ್ತಿಗೆ
ಏಳಲಾಗದ ಅಜ್ಜಿಗೆ
ಮುನಿಸಿಕೊಂಡವಳ ರಾಜಿಗೆ
ಜೀವ ತುಂಬಬಹುದು
ನಮ್ಮವರ ಕಷ್ಟಗಳ ಸುರಿಮಳೆಗೆ
ಗಿರಿಯೆತ್ತಿ ನಿಲಬಹುದು
ತಲೆ ಸವರಿ ಮಗನ ಮೇಲಿನ ಪ್ರೀತಿ
ದಾಟಿಸಬಹುದು

ಬೆರಳು ಬೆರಳಷ್ಟೇ ಅಲ್ಲ
ಬೆರಗು
ಮುಷ್ಟಿ ಬೊಗಸೆಯಾಗುವ ಬೆರಗು
ಬಿಗಿತ ಪ್ರೇಮವಾಗುವ ಬೆರಗು

ಪಟಾಕಿ
ಹಿಡಿದ ಬೆರಳನ್ನೇ ಛಿದ್ರಗೊಳಿಸಿ
ರಕ್ತಸಿಕ್ತ ಮಾಂಸದುಂಡೆಯಾಗಿ
ಊರಿ ಊರಿಯೆಂದು
ಮನೆಯ ಸುತ್ತಲೇ ಓಡುವ ಸ್ಥಿತಿ ಬರುವ ಮುನ್ನ,
ಒಂಟಿ ಬೆರಳು ಸ್ಫೋಟದ ಕನಸು ಕಾಣುವ ಮುನ್ನ

ಬೆರಳಿಗೆ ಮತ್ತೊಂದು ಬೆರಳು ಬೆಸೆದಿರಲಿ
ಸದಾ ಬೆಸೆದಿರಲಿ



ಧನಂಜಯ ಕುಂಬ್ಳೆ

ಜೀವನ ಕಲಿಸಿದ ಪಾಠ

ಅಶ್ವಿನಿ ಸುನಿಲ್
feedbacklvk@vijaykarnataka.com



ಮಕ್ಕಳ ಕಥೆ

ಅರ್ಜುನ್‌ಗೆ ಅವರಮ್ಮ 'ನೀನೀಗ ಚಿಕ್ಕವನಲ್ಲ, ನೀನು ತಿಂದ ತಟ್ಟೆಯನ್ನು ನೀನೇ ತೊಳೆಯಬೇಕು. ಕೊನೆಯ ಪಕ್ಷ ಎತ್ತಿ ಸಿಂಕಿನಲ್ಲಾದರೂ ಹಾಕಬೇಕು. ನಮ್ಮ ಕೆಲಸ ಮಾಡಿಕೊಳ್ಳುವುದು ಗೊತ್ತಿರಬೇಕು' ಎಂದಾಗ 'ಇದೆಲ್ಲಾ ಹೆಣ್ಣುಮಕ್ಕಳ ಕೆಲಸ. ನಾನೇಕೆ ಇದನ್ನೆಲ್ಲ ಮಾಡಬೇಕು' ಎಂದು ಉಡಾಫೆಯಿಂದ ಉತ್ತರಿಸುತ್ತಾ ಅಲ್ಲಿಂದ ಹೊರಗೆ ನಡೆದ ಅರ್ಜುನ.

'ಕೊನೆ ಪಕ್ಷ ನಲ್ಲಿಯ ನೀರನ್ನಾದರೂ ಸರಿಯಾಗಿ ಬಂದ್ ಮಾಡಿ ಹೋಗು' ಅಡುಗೆ ಕೋಣೆಯ ಒಳಗೆ ಅಮ್ಮ ಹೇಳಿದ್ದು ಅರ್ಜುನನಿಗೆ ಕೇಳಿಸಲೇ ಇಲ್ಲ. ಅರ್ಜುನ ಓದಿನಲ್ಲಿ ಬುದ್ಧಿವಂತ. ತರಗತಿಯಲ್ಲಿ ಯಾವಾಗಲೂ ಪ್ರಥಮ ಸ್ಥಾನ ಅವನಿಗೆ. ಆದರೆ ಆತನ ಈ ಉಡಾಫೆ ಬುದ್ಧಿ ಅವನ ಅಮ್ಮನಿಗೆ ಇಷ್ಟವಾಗುವುದಿಲ್ಲ. ಬರೀ ಓದಿನಲ್ಲಷ್ಟೇ ಇದ್ದರೆ ಸಾಲದು, ಬದುಕಿನಲ್ಲಿ ಶಿಸ್ತು ಬೇಕು ಎನ್ನುವುದು ಅಮ್ಮನ ಮಾತು. ಆದೆಲ್ಲ ಅವನ ಕಿವಿಗೆ ಬಿದ್ದರೆ ತಾನೆ?

ಬೆಳಗ್ಗೆ ಎದ್ದು ಹಾಸಿಗೆಯನ್ನು ಮಡಚದೆ ಬಾತ್ರೂಮಿಗೆ ಓಡುತ್ತಾನೆ. ಕಾಫಿ ಕುಡಿಯಲು ಬಾ ಎಂದು ಹತ್ತು ಸಾರಿ ಕರೆದ ಮೇಲೆ ಮೆಲ್ಲನೆ ಬರುತ್ತಾನೆ. 'ಅಮ್ಮಾ, ಕಾಫಿ ತಣ್ಣಗಾಯಿತು. ಬಿಸಿ ಮಾಡಿ ಕೊಡು' ಎಂದು ಕೇಳುತ್ತಾನೆ. ಸ್ನಾನ ಮಾಡು ಎಂದು ಹತ್ತು ಸಲ ಹೇಳಿದ ಮೇಲೆ ನಿಧಾನಕ್ಕೆ ನಡೆಯುತ್ತಾನೆ. ಅರ್ಜುನನನ್ನು ತಿಂಡಿಗೆ ಕರೆಯುವಷ್ಟರಲ್ಲಿ ಅವನ ಅಮ್ಮನ ಸ್ವರವೇ ಬಿದ್ದು ಹೋಗಿರುತ್ತದೆ. ಇನ್ನು ಯಾವುದೇ ತಿಂಡಿ ಮಾಡಿದರೂ ಏನಾದರೂ ಕುಂದುಕೊರತೆ ಹೇಳುತ್ತಾನೆ.

'ಅರ್ಜುನ, ನಿನ್ನ ಕೆಲಸವನ್ನು ಸಮಯಕ್ಕೆ ಸರಿಯಾಗಿ ಮಾಡಿಕೊಳ್ಳುವುದನ್ನು ಕಲಿತುಕೋ. ಇಲ್ಲದಿದ್ದರೆ ಮುಂದೆ ನೀನೇ ಕಷ್ಟವನ್ನು ಅನುಭವಿಸಬೇಕಾಗುತ್ತದೆ' ಅಮ್ಮನ ಪ್ರತಿದಿನದ ಮಂತ್ರ ಅರ್ಜುನನ ಮನಸ್ಸಿಗೆ ನಾಟುತ್ತಲೇ ಇರಲಿಲ್ಲ.

'ಅಮ್ಮಾ, ನಾನು ರಾಜ್ಯಮಟ್ಟದ ಅಂತರ್ ಶಾಲಾ ಕ್ಯಾಂಪಿಗೆ ಆಯ್ಕೆಯಾಗಿದ್ದೇನೆ. ಮುಂದಿನ ತಿಂಗಳು ಶಿವಮೊಗ್ಗದಲ್ಲಿ ನಡೆಯುತ್ತಿರುವ ಹತ್ತು ದಿನದ ಈ ಕ್ಯಾಂಪಿನಲ್ಲಿ ನಮ್ಮ ಶಾಲೆಯಿಂದ ಆಯ್ಕೆ ಆಗಿರುವುದು ಇಬ್ಬರೇ ಗೊತ್ತಾ?' ಅರ್ಜುನ ಹೆಮ್ಮೆಯಿಂದ ಹೇಳುತ್ತಿದ್ದರೆ, ಅಮ್ಮನ ಮನಸ್ಸು ಶಿಸ್ತಿನ ಕ್ಯಾಂಪ್ ಎಂದೇ ಹೆಸರಾಗಿರುವ ಇದರಲ್ಲಿ ಇವನು ಹೇಗಪ್ಪ ಇರುತ್ತಾನೆ?' ಎಂದು ಚಿಂತಿಸುತ್ತಿತ್ತು.

ಆ ದಿನ ಬಂದೇ ಬಿಟ್ಟಿತು. ಅರ್ಜುನ ತನ್ನ ಗೆಳೆಯನೊಂದಿಗೆ ಶಿವಮೊಗ್ಗಕ್ಕೆ ಹೊರಟು ನಿಂತ. ಅಮ್ಮ ಮಗನಿಗೆ ಬುದ್ಧಿ ಹೇಳುತ್ತಲೇ ಇದ್ದರು. 'ಬೆಳಗ್ಗೆ ಬೇಗ ಏಳು. ನಿನ್ನ ಹಾಸಿಗೆಯನ್ನು ಮಡಚಿಡು. ಬೇಗನೆ ಸ್ನಾನಕ್ಕೆ ಹೋಗು. ಇಲ್ಲದಿದ್ದರೆ ಬಾತ್ರೂಮ್ ಸಿಗದೇ ಹೋಗಬಹುದು. ಬೇಗ ತಿನ್ನುವುದನ್ನು ಕಲಿ. ಆ ದಿನದ ಬಟ್ಟೆಯನ್ನು ಆದೇ ದಿನ ತೊಳೆದುಕೋ' ಇದನ್ನೆಲ್ಲಾ ಅರ್ಜುನ ಕೇಳಿಸಿಕೊಂಡರೆ ತಾನೆ? ಅವನಿಗೆ ಹೋಗುವ ಉತ್ಸಾಹ ಅಷ್ಟೇ.

ತನ್ನ ಗುಂಪಿನೊಡನೆ ಅರ್ಜುನ ಕ್ಯಾಂಪ್ ನಡೆಯುವ ಸ್ಥಳಕ್ಕೆ ತಲುಪಿದ. ಸುತ್ತಮುತ್ತ ನೋಡುತ್ತಾ ಮೆಲ್ಲನೆ ತನಗಾಗಿ ಇದ್ದ ರೂಮಿಗೆ ಹೋದಾಗ ಆಗಲೇ ಆರು ಮಕ್ಕಳಿದ್ದರು. ಅಲ್ಲಿದ್ದದ್ದು ಐದೇ ಹಾಸಿಗೆ. ಹಾಗಾಗಿ ಕೊನೆಗೆ ಬಂದವರಿಗೆ ಚಾಪೆಯೇ ಗತಿಯಾಯಿತು. ಎಲ್ಲರಿಗಿಂತ ಕೊನೆಗೆ ಹೋದ ಅರ್ಜುನ ರೂಮಿನ ಒಂದು ಮೂಲೆಯಲ್ಲಿ ಚಾಪೆಯಲ್ಲಿ ಮಲಗಬೇಕಾಯಿತು.

ಮರುದಿನ ಅರ್ಜುನ ಏಳುವ ಹೊತ್ತಿಗೆ ಉಳಿದವರೆಲ್ಲ ಆಗಲೇ ಎದ್ದು ಸ್ನಾನಕ್ಕೆ ಹೋಗಿದ್ದರು. ಕೊರೆಯುವ ಚಳಿಯಲ್ಲಿ ಮೊದಲು ಸ್ನಾನ ಮಾಡಿದವರಿಗಷ್ಟೇ ಬಿಸಿ ನೀರು ಇತ್ತು. ಕೊನೆಗೆ ಹೋದವರಿಗೆ ತಣ್ಣೀರೇ ಗತಿಯಾಯಿತು. ಅರ್ಜುನ ನಡುಗುತ್ತಾ ಸ್ನಾನ ಮುಗಿಸಿ ತಿಂಡಿ ತಿನ್ನಲು ಹೋದಾಗ ತಡವಾಗಿ ಹೋದ ಅವನಿಗೆ ಬಿಸಿಯಾದ ತಿಂಡಿಯೂ ಸಿಗಲಿಲ್ಲ ಕಾಫಿ ತಣ್ಣಗಾಗಿತ್ತು. ಮನೆಯಲ್ಲಿ ಅಮ್ಮ ಹತ್ತು ಸಲ 'ತಿಂಡಿ ತಿನ್ನು, ಕಾಫಿ ಕುಡಿ' ಎಂದು ಕರೆಯುತ್ತಿದ್ದದ್ದು ನೆನಪಾಯಿತು.

ಅಮ್ಮನಾದರೆ ಮತ್ತೆ ಬಿಸಿ ಮಾಡಿಕೊಡುತ್ತಿದ್ದರು. ಆದರೆ ಇಲ್ಲಿ ಹಾಗಲ್ಲವಲ್ಲ. ಬೇಕಾದವರು ತಿನ್ನುತ್ತಾರೆ. ಬೇಡದವರು ಇರುತ್ತಾರೆ. ತಿಂದೆಯಾ? ಬಿಟ್ಟೆಯ ಎಂದು ಕೇಳುವವರಿಲ್ಲ.

ರಾತ್ರಿ ಊಟ ಮಾಡಿ ಎಲ್ಲರೂ ಮಲಗಿದರೆ ಅರ್ಜುನನಿಗೆ ಅಮ್ಮನ ಜೊತೆ ಮಾತನಾಡಬೇಕೆನಿಸಿತು. ಆದರೆ ಫೋನ್ ಮಾಡುವಂತಿರಲಿಲ್ಲ. ಮನೆಯಲ್ಲಿ ಅಮ್ಮ ಮಾತನಾಡುವಾಗ ಅರ್ಜುನ ಕೇಳಿಸಿಕೊಳ್ಳುತ್ತಲೇ ಇರಲಿಲ್ಲ. ಈಗ ಮಾತನಾಡಬೇಕೆಂದೆನಿಸಿದಾಗ ಅಮ್ಮ ಹತ್ತಿರದಲ್ಲಿಲ್ಲ. 'ಸಾರಿ ಅಮ್ಮಾ, ಇನ್ನು ಮುಂದೆ ಹೀಗೆಲ್ಲಾ ಮಾಡುವುದಿಲ್ಲ. ಮನೆಗೆ ಬಂದ ಮೇಲೆ ನನ್ನ ಕೆಲಸವನ್ನು ನಾನೇ ಮಾಡಿಕೊಳ್ಳುತ್ತೇನೆ. ಬೇಗನೆ ಮಾಡಿ ಮುಗಿಸುತ್ತೇನೆ' ಮನಸ್ಸಿನಲ್ಲಿಯೇ ಹೇಳಿಕೊಂಡ. ಅರ್ಜುನನಿಗೆ ಗೊತ್ತಾಗದಂತೆ ಅವನ ಕಣ್ಣೀರು ದಿಂಬನ್ನು ತೋಯಿಸಿತ್ತು. ■

ಬಾರ್ಡರ್



ಇವತ್ತು ಸಂಜೆ ರೇವತಿಯ ಮಗನ ಮದುವೆ ರಿಸೆಪ್ಶನ್. ಯಾವ ಸೀರೆ ಉಡಲಿ? ಇದೇ ದೊಡ್ಡ ಪ್ರಾಬ್ಲಮ್.

ಬೀರುವಿನಲ್ಲಿದ್ದ ಹತ್ತಾರು ಸೀರೆ, ಬ್ಲೌಸುಗಳನ್ನು ಹೊರ ತೆಗೆದು ಕನ್ನಡಿ ಮುಂದೆ ಒಂದೊಂದಾಗಿ ಹಿಡಿದು ನಿಂತೆ. ಕೊನೆಗೆ ಯಾಕೋ ನನ್ನ ಕೈ ಮತ್ತೆ ಮತ್ತೆ ಆ ಹಳದಿ ಸೀರೆಯ ಮೇಲೆಯೇ ಹೋಗಿ ನಿಂತಿತು.

ಹಳೆ ಸೀರೆ. ಉಟ್ಟು ಎಂಟು-ಹತ್ತು ವರ್ಷವಾದರೂ ಆಗಿರಬಹುದು. ಯಾರು ಕೊಟ್ಟಿದ್ದು? ಅತ್ತೆಯೋ, ಅಮ್ಮನೋ? ಈಗ ನೆನಪಿಲ್ಲ.

ರಿಸೆಪ್ಶನ್ ಹಾಲಿಗೆ ಕಾಲಿಟ್ಟ ತಕ್ಷಣ ರೇವತಿ ಓಡಿ ಬಂದು ಅಪ್ಪಿಕೊಂಡಳು. 'ಸದ್ಯ ಬಂದೆಯಲ್ಲ! ಅರೆ, ಯಾವುದಿದು ಸೀರೆ? ಯು ಲುಕ್ ಸೊ ಕ್ಯೂಟ್...'

ಆಮೇಲೆ ಸಿಕ್ಕವರೆಲ್ಲ ಸೀರೆಯನ್ನು ಹೊಗಳಿದವರೇ. ಏನು ಕಲರ್, ಡಿಸೈನ್, ಬಾರ್ಡರ್... ವ್ಹಾ!

ಡೈನಿಂಗ್ ಹಾಲಿನಲ್ಲಿ ಸಾಲುಸಾಲು ಟೇಬಲ್-ಕುರ್ಚಿಗಳು. ಘಮಘಮ ಪರಿಮಳ. ಭಕ್ಷ್ಯಕ್ಕೆ ಫೇಣಿ ಮಾಡಿದ್ದರು- ನನ್ನ ಫೇವರಿಟ್!

ಪಕ್ಕದಲ್ಲಿ ಕೂತಿದ್ದ ಅಜ್ಜಿ ಸಡನ್ನಾಗಿ ನನ್ನ ಕಡೆ ತಿರುಗಿದರು.

'ನೀನು ಸುಬ್ಬಕ್ಕನ ಮೊಮ್ಮಗಳಲ್ಲವೇ?' ಅಂದರು. 'ಹೌದು ಅಜ್ಜಿ, ನೀವು?' ಅವರು ಉತ್ತರಿಸಲಿಲ್ಲ.

ಬೂರಾ ಸಕ್ಕರೆ, ಬಾದಾಮಿ ಹಾಲು ಬಂತು. ಫೇಣಿಗೆ ಕಲಸಿ ಇನ್ನೇನು ಬಾಯಿಗೆ ಹಾಕಬೇಕು... 'ಸುಬ್ಬಕ್ಕನ ಮೊಮ್ಮಗಳಂತೆ... ಉಡಲು ಬೇರೆ ಸೀರೆ ಇರಲಿಲ್ಲವೇ?' ಅಂದರು.

ನನ್ನ ಕೈ ಗಾಳಿಯಲ್ಲೇ ನಿಂತಿತು. 'ಯಾಕಜ್ಜಿ? ಸೀರೆ ಚೆನ್ನಾಗಿಲ್ಲವೇ?' ಅವರು ಉತ್ತರಿಸಲಿಲ್ಲ.

ನನಗೆ ಆಮೇಲೆ ಊಟ ಸೇರಲಿಲ್ಲ. ಹೇಗೋ ಎರಡು ತುತ್ತು ತಿಂದು ಕೈತೊಳೆದು ಬಂದೆ. ಹೊರಡುವ ಮುಂಚೆ ರೇವತಿಗೆ ಕೇಳಿದೆ. 'ಊಟ ತುಂಬಾ ಚೆನ್ನಾಗಿತ್ತು, ಅಂದ ಹಾಗೆ ನನ್ನ ಪಕ್ಕ ಕೂತಿದ್ದ ಅಜ್ಜಿ ಯಾರು?'

'ಗೊತ್ತಿಲ್ಲ ಕಣೆ, ಹುಡುಗಿ ಕಡೆಯವರಿರಬಹುದು' ಅಂದಳು.

ಎಂದಿನಂತೆ ಮುಂಜಾನೆ ಕೆಲಸದವಳು ಬಂದಳು. 'ಏನಕ್ಕ, ಕಣ್ಣೆಲ್ಲ ಕೆಂಪಾಗಿವೆ. ರಾತ್ರಿ ಸರಿಯಾಗಿ ನಿದ್ದೆ ಮಾಡಲಿಲ್ಲವೇ?' ಎಂದು ಕೇಳಿದಳು.

ಸೋಫಾದ ಮೇಲೆ ಬಿದ್ದಿದ್ದ ಸೀರೆಯನ್ನು ಮಡಿಸುತ್ತಾ, 'ಏನಕ್ಕ, ಈ ಸೀರೆ ನೋಡೇ ಇರಲಿಲ್ಲ. ಎಷ್ಟು ಚೆನ್ನಾಗಿದೆ ನವಿಲುಗರಿ ಬಾರ್ಡರ್...' ಅಂದಳು.

ಮಡಿಸಿದ ಸೀರೆಯನ್ನು ನನ್ನ ಕೈಗೆ ಕೊಟ್ಟಳು. ಮೆಲ್ಲಗೆ ಸವರಿದೆ. ಅಜ್ಜಿಯ ಮಾತು ಮತ್ತೆ ಕಿವಿಯಲ್ಲಿ ಸುಳಿಯಿತು.

'ತಗೋ, ಲಕ್ಷ್ಮಿ. ಈ ಸೀರೆ ನಿನ್ನದು. ಮಗಳಿಗೆ ಕೊಡು' ಅಂದೆ. ■

ಲಾಜಿಕ್ ಮ್ಯಾಜಿಕ್

ಗ್ರಿಡ್ ಒಗಟು

T	D	E
T	T	E
S	U	I

ಗ್ರಿಡ್‌ನಲ್ಲಿರುವ ಎಲ್ಲಾ ಅಕ್ಷರಗಳನ್ನು ಬಳಸಿ ಇಂಗ್ಲಿಷ್ ಪದವನ್ನು ರಚಿಸಿ. ಚಿತ್ರದ ಸುಳಿವಿನ ಸಹಾಯವನ್ನು ಪಡೆಯಿರಿ.

ಉತ್ತರ: Destitute (ನಿರ್ಗತಿಕ)

ನ್ಯೂ ಬುಕ್

ತಣ್ಣಗಿನ ಸಾಲುಗಳೊಳಗೆ ಹರಿವ ಕಿಚ್ಚು



ಸಂಕರವಾಗದೆ ಸತ್ಯ ಗೋಚರಿಸದು; ಲೇ: ಹರಿಯಪ್ಪ ಪೇಜಾವರ ಪ್ರ: ಶ್ರೇಯಸ್ ಪ್ರಕಾಶನ, ಮಂಗಳೂರು ಪುಟ: 124; ಬೆಲೆ: 130 ರೂ.

ಹರಿಯಪ್ಪ ಪೇಜಾವರ ಅವರ 82 ಕವನಗಳ ಸಂಕಲನ 'ಸಂಕರವಾಗದೆ ಸತ್ಯ ಗೋಚರಿಸದು'.

ಕವನಗಳನ್ನು ವಿವಿಧ ವಿಭಾಗಗಳಲ್ಲಿ ನೀಡಿದ್ದು, ಮೊದಲನೆಯ ಭಾಗದಲ್ಲಿ 37 ಕವನಗಳಿವೆ. ಸಾಮಾನ್ಯವೆಂಬ ಸಂಗತಿಯೊಂದನ್ನು ಹೇಳುತ್ತ ಕೊನೆಯಲ್ಲಿ ಅಸಾಮಾನ್ಯವಾದುದನ್ನು ಹೊಳೆಯಿಸುವುದು ಹರಿಯಪ್ಪ ಅವರ ಇಲ್ಲಿನ ಕವನಗಳ ರೀತಿ. 'ಯಾಕೆಂದರೆ...' ಕವನದಲ್ಲಿ, 'ಅವನ' ಬದುಕಿನ ಎಲ್ಲ ಪ್ರಮುಖ ಸಂದರ್ಭಗಳಿಗೂ ತನ್ನ ಅಂಥದೇ ಕಾರ್ಯಕ್ರಮಕ್ಕೆ ಆತ ಬರಬೇಕಲ್ಲ ಎಂದು ಹೋಗುವ ಕವಿ ಕೊನೆಗೆ, 'ಮೊನ್ನೆ ಅವ ಸತ್ತ. ಅವನ ಸಾವಿಗೂ ಹೋಗಿ ಬಂದೆ/ ಯಾಕೆಂದರೆ...' ಎಂದು ಮುಗಿಸುತ್ತಾರೆ. ಸರಳ ಲೌಕಿಕ ಕವನದಂತೆ ಭಾಸವಾಗುವ ವಸ್ತು ಕೊನೆಯಲ್ಲಿ ವಿಚಾರ ಪ್ರಚೋದಕವಾಗುವ ಬಗೆ ಗಮನಾರ್ಹ. 'ಸಂಕರವಾಗದೆ ಸತ್ಯ ಗೋಚರಿಸದು' ಕವನದಲ್ಲಿ ಕವಿ ತನ್ನ ಎಡಗಣ್ಣಿಗೆ ಪೊರೆ ಬಂದು ಲೆನ್ಸ್ ಧರಿಸುವಂತಾದುದನ್ನು ಕವಿತೆಯುದ್ದಕ್ಕೂ ಹೇಳುತ್ತಾರೆ. ಕೊನೆಯಲ್ಲಿ; 'ನಾನೀಗ ಭಾರತೀಯ ಕಣ್ಣು ಮತ್ತು ಜರ್ಮನಿಯ ಲೆನ್ಸ್/ ಮೂಲಕ ಜಗತ್ತನ್ನು ನೋಡುತ್ತಿದ್ದೇನೆ/ ಜಗತ್ತು ಈಗ ಹೆಚ್ಚು ಸ್ಪಷ್ಟವಾಗಿ ಕಾಣಿಸುತ್ತಿದೆ' ಎಂದು ಬರೆಯುತ್ತಾರೆ. ಭಾರತೀಯ ಆವರಣಕ್ಕೆ ಜರ್ಮನಿಯ ಕಮ್ಯುನಿಸಮ್ಮಿನ ದೃಷ್ಟಿಕೋನ ಸಂಕರವಾದರಷ್ಟೇ ಸತ್ಯ ಗೋಚರಿಸಬಹುದು ಎಂದು ಸಾರುತ್ತ ಭಿನ್ನ ನೋಟ ತೆರೆದಿಡುತ್ತಾರೆ. ಬದುಕಿನ ಸಹಜ ಚಿತ್ರಗಳನ್ನು ನಿರೂಪಿಸುತ್ತ ಕೊನೆಯಲ್ಲಿ ಅನನ್ಯ ಹೊಳಹನ್ನು ನೀಡುವ ಬರ್ಟೋಲ್ಟ್ ಬ್ರೆಕ್ಟ್‌ನ 'ಫೇಬಲ್ಸ್' ಪ್ರಯೋಗಗಳ ಬಗೆಯನ್ನು ಇಲ್ಲಿ ಗುರುತಿಸಿದ್ದಾರೆ ಫಣಿರಾಜ್ ಕೆ. ಕನ್ನಡದಲ್ಲಿ ಅಪರೂಪವೆನಿಸುವ ಪ್ರಯೋಗವಿದು.

ಸಂಕಲನದ ಎರಡನೆಯ ಭಾಗ 'ಕೆಲವು ತಲೆಯಿಲ್ಲದ ಸಾಲುಗಳು' ಎರಡು-ಮೂರು ಸಾಲುಗಳ ಪುಟಾಣಿ ಕವನಗಳನ್ನು ಹೊಂದಿದೆ. 'ರಾಜಕಾರಣಿ ಕವಿಗೆ ಕೇಂದ್ರ ಸಾಹಿತ್ಯ/ ಬಹುಮಾನ ಪ್ರಕಟವಾದುದನ್ನು /ನಾನು ಆತನ ನಿಧನವಾರ್ತೆಯಂತೆ ಓದಿಕೊಂಡೆ' ಎಂಬಂಥ ಶಕ್ತಿಶಾಲಿ ಸಾಲುಗಳು ಇಲ್ಲಿವೆ. ಮೂರನೇ ಭಾಗ 'ಕೆಟ್ಟ ಕಾಲದ ಪದ್ಯಗಳು'. 'ಓಟದ ಸ್ಪರ್ಧೆಯಲ್ಲಿ ಎಲ್ಲರಿಗೂ ಸಮಾನ ಅವಕಾಶ ಇರುವಾಗ / ಫಲಿತಾಂಶದ ಬಗ್ಗೆ ತಲೆಕೆಡಿಸಿಕೊಳ್ಳುವ ಅಗತ್ಯ ಇಲ್ಲ/ ಎಂದು ಉಗ್ಗಡಿಸುವ ಇವರು/ ಓಟದ ವೇಳೆ ತಮ್ಮ ಕೈಕಾಲು ಯಾಕೆ /ಪುಟಿದೇಳುವ ಚೆಂಡಿನಂತಿರುತ್ತದೆ/ ಅವರ ಕೈಕಾಲು ಯಾಕೆ/ ಒಣಗಿದ ಕಡ್ಡಿಯಂತಿರುತ್ತದೆ/ ಎಂದು ಮಾತ್ರ ಕೇಳುವುದಿಲ್ಲ' ಎಂಬಂಥ ಹರಿತ ಸಾಲುಗಳನ್ನು ಮುಂದಿಡುತ್ತಾರೆ. ನಾಲ್ಕನೇ ಭಾಗದಲ್ಲಿ ಬ್ರೆಕ್ಟ್ ಮತ್ತು ಮಹಮ್ಮದ್ ದರ್ವೇಷ್‌ರ ಅನುವಾದಿತ ಕವನಗಳಿವೆ.

ಈ ಸಂಕಲನದಲ್ಲಿ ಪ್ರಶ್ನೆಗಳಿವೆ, ವ್ಯಂಗ್ಯವಿದೆ, ಅಸಮಾನತೆಯ ವಿರುದ್ಧದ ದನಿ ಇದೆ. ತಣ್ಣಗಿನ ಅಭಿವ್ಯಕ್ತಿಯ ಒಳಗೊಂದು ಕಿಚ್ಚೂ ಇದೆ. ಓದಿದವರಿಗೂ ಇದು ತಾಕದೇ ಇರದು. ■

ಕನ್ನಡಕ್ಕೆ ಬಂದ ವುಡ್‌ಹೌಸ್



ಪಿ.ಜಿ. ವುಡ್‌ಹೌಸ್ ಆಯ್ದ ಕಥೆಗಳು; ಲೇ: ಪಾಲಹಳ್ಳಿ ವಿಶ್ವನಾಥ ಪ್ರ: ಕದಂಬ ಪ್ರಕಾಶನ, ಬೆಂಗಳೂರು ಪುಟ: 164; ಬೆಲೆ: 200 ರೂ.

ಪಿ.ಜಿ. ವುಡ್‌ಹೌಸ್ ಪ್ರಸಿದ್ಧ ಇಂಗ್ಲಿಷ್ ಹಾಸ್ಯ ಬರಹಗಾರ. ಅವರ ಕಥೆಗಳನ್ನು ಪಾಲಹಳ್ಳಿ ವಿಶ್ವನಾಥ್ 'ಪಿ.ಜಿ. ವುಡ್‌ಹೌಸ್ ಆಯ್ದ ಕಥೆಗಳು' ಹೆಸರಿನಲ್ಲಿ ಕನ್ನಡಕ್ಕೆ ತಂದಿದ್ದಾರೆ. ಆದರೆ, ಇವುಗಳನ್ನು ನೇರವಾಗಿ ಅನುವಾದಿತ ಕಥೆಗಳು ಎಂದು ಹೇಳಲಾಗದು. ಯಾಕೆಂದರೆ, ಇಲ್ಲಿರುವುದು ಪುನರ್‌ಸೃಷ್ಟಿ ಮಾಡಿದ ಕಥೆಗಳು. ವಿಶ್ವನಾಥರು ವುಡ್‌ಹೌಸರ ಕಥೆಗಳನ್ನು ತಂದು ಇಲ್ಲಿನ ಮಣ್ಣಲ್ಲಿ ನೆಟ್ಟು ಬೆಳೆಸಿದ್ದಾರೆ. ಹಾಗಾಗಿ ಇಲ್ಲಿನ ಪಾತ್ರಗಳೆಲ್ಲಾ ನಮ್ಮ ಹೆಸರುಗಳನ್ನೇ ಪಡೆದುಕೊಂಡಿವೆ. ಪರಿಸರ, ಆಚರಣೆ, ಸಂಸ್ಕೃತಿ ಎಲ್ಲವೂ ನಮ್ಮವೇ.

'ಸುಕುಮಾರನ ಸಂಜೀವಿನಿ', 'ಮೈಸೂರು ಪೇಟ', 'ಚಾಚಾ ಚಂದ್ರು', 'ಅಮರನಾಥನ ಆತಂಕಗಳು', 'ಸೀತಾಪತಿಯ ಕೀಳರಿಮೆ', 'ಕಮಲ ಖೋಟೆ' ಸೇರಿದಂತೆ ಒಟ್ಟು 17 ಪುಟ್ಟ ಕಥೆಗಳು ಈ ಪುಸ್ತಕದಲ್ಲಿವೆ. ವುಡ್‌ಹೌಸ್ 20ನೇ ಶತಮಾನದ ಆರಂಭದಲ್ಲಿ ಬರೆದಿರುವ ಈ ಕಥೆಗಳನ್ನು ಪಾಲಹಳ್ಳಿಯವರು ಈ ಕಾಲದಲ್ಲೂ ಓದಿ ಹಗುರವಾಗುವ ರೀತಿಯಲ್ಲಿ ಸೊಗಸಾಗಿ ಬರೆದಿದ್ದಾರೆ. ಎಲ್ಲಾ ಕಥೆಗಳಿಗೆ ಚಂದದ ಚಿತ್ರಗಳನ್ನೂ ನೀಡಿದ್ದಾರೆ. ■

ನಾನು ಓದಿದ ಹೊತ್ತಿಗೆ

ಓಲೆಯಲಿ ತೇಲಿಬಂದ ಸಾಂಸ್ಕೃತಿಕ ಗಂಧ

ವಿದ್ಯಾ
vidyarashmi.bhat@timesofindia.com



ಪತ್ರ ಸಂವಹನದ ಕಾಲ ಮರೆತೇ ಹೋಗಿದೆ ಎಂಬ ಈ ದಿನಗಳಲ್ಲಿ ಪತ್ರಗಳ ಗುಚ್ಛವೊಂದು ಚೆಂದದ ಸಾಹಿತ್ಯ ಕೃತಿಯಾಗಿ ರೂಪುಗೊಂಡಿರುವ ಜಾದೂವಿನಂತಿದೆ 'ಪತ್ರಾರ್ಜಿತ' ಕೃತಿ. ಕಾಸರಗೋಡಿನ ಬಾಯಾರಿನಲ್ಲಿರುವ ಶಶಿಕಲಾ ಬಾಯಾರುತಮ್ಮ ಆಪ್ತರಿಗೆ ಬರೆದ ಓಲೆಗಳ ಸಂಕಲನವಿದು.

ಶಶಿಕಲಾ ಓರ್ವ ಗ್ರಾಮೀಣ ಭಾಗದ ಗೃಹಿಣಿ. ಕಸೂತಿ ಇವರಿಗೊಲಿದ ಕಲೆ. ಕಥೆಗಳನ್ನೂ ಬರೆದಿದ್ದಾರೆ. ಇವರು ಜಯಂತ ಕಾಯ್ಕಿಣಿ, ವೈದೇಹಿಯವರಂಥ ಸಾಹಿತಿಗಳಿಗೆ, ಪ್ರಭಾಕರ ಜೋಷಿ, ಕೋಳ್ಯೂರು ರಾಮಚಂದ್ರ ರಾಯರಂಥ ಯಕ್ಷಗಾನ ಕಲಾವಿದರು, ನರೇಂದ್ರ ರೈ ದೇರ್ಲ, ಡಾ.ಮಹೇಶ್ವರಿ ಯು., ಶ್ಯಾಮಲಾ ಮಾಧವ, ತುಳಸಿ ವೇಣುಗೋಪಾಲ್ ಮೊದಲಾದ ತಮ್ಮ ಆಪ್ತವಲಯದ ಹಿರಿ-ಕಿರಿಯ ಲೇಖಕರಿಗೆ, ಬಿ.ಎಂ.ರೋಹಿಣಿ ಅವರಂಥ ಪತ್ರಕರ್ತರಿಗೆ, ಬಿ.ಕೆ.ಎಸ್.ವರ್ಮಾರಂಥ ಕಲಾವಿದರಿಗೆ ಬರೆದ ಪತ್ರಗಳು ಇಲ್ಲಿವೆ. ಪ್ರತಿಯಾಗಿ ಬಂದ ಉತ್ತರಗಳೂ ಇಲ್ಲಿ ಸಂಕಲಿತಗೊಂಡಿವೆ.

ಇವು ಮೆಲುಮಾತಿನ ಕ್ಷೇಮಸಮಾಚಾರದ ಜೊತೆಗೇ ಸಾಮಾಜಿಕವಾದ ಸ್ಥಿತ್ಯಂತರಗಳನ್ನೂ ಒಳಗೊಂಡ ದಾಖಲಾತಿಗಳು ಕೂಡ ಹೌದು. ತಮ್ಮಿಂದ ಕೊಂಚ ಕಿರಿಯ ಒಡನಾಡಿಗೆ ಅಕ್ಕಯ್ಯನಾಗಿ ಬರೆಯುವ ಪತ್ರದಲ್ಲಿ, ಮಕ್ಕಳನ್ನೆಲ್ಲ ಪೇಟೆಗೆ ಕಳುಹಿಸಿ ವಯಸ್ಸಾದ ಅಪ್ಪ-ಅಮ್ಮ ಮಾತ್ರ ಇರುವ ಮನೆಗಳ ಚಿತ್ರಣವನ್ನು ದಾಖಲಿಸುತ್ತ ಇಂದಿನ ಹಳ್ಳಿಗಳು ವೃದ್ಧಾಶ್ರಮಗಳಾಗಿರುವ ಬಗೆಯನ್ನೂ ವಿಷಾದದಿಂದ ದಾಖಲಿಸುತ್ತಾರೆ.

ಆದರೆ ಅದು ವಾಸ್ತವ ಎನ್ನುವುದನ್ನೂ, 'ಎಲ್ಲ ಸೋಲುಗಳಲ್ಲೂ ಗೆಲುವಿಗೊಂದು ಸಣ್ಣ ಅವಕಾಶ ವಿರುವಂತೆ, ಗೆಲುವಿನ ಭಾವಕ್ಕೆ ಸೂಕ್ಷ್ಮವಾಗಿ ಸೋಲಿನ ಸಂಕಟದ ಎಳೆ ತಗುಲಿಯೇ ಇರುತ್ತದೆ' ಎಂಬ ಸಾಲುಗಳೊಂದಿಗೆ ಸ್ವೀಕಾರಾರ್ಹವಾಗಿಸಿಬಿಡುತ್ತಾರೆ.

ಈ ಕೃತಿಯುದ್ದಕ್ಕೂ ಅಚ್ಚಗನ್ನಡದ ಚೆಂದದ ಭಾಷಾತೋಟದಲ್ಲಿ ವಿಹರಿಸಿದ ಅನುಭವ. 'ಹಳ್ಳಿಯ ಮಕ್ಕಳು ಮಣ್ಣಿನಲ್ಲಿ ಸೀದಾ ಬೆಳೆಸಿದ ಗಿಡಗಳಂತೆ. ಪೇಟೆಯ ಮಕ್ಕಳಾದರೆ ಕುಂಡದಲ್ಲಿ ಬೆಳೆದಂಥವು' ಎಂಬಂಥ ರೂಪಕಗಳು, ಪ್ರತಿಮೆಗಳು ಅಲ್ಲಲ್ಲಿ ಸಿಗುತ್ತ ಪತ್ರ ಸಾಹಿತ್ಯವನ್ನು ಇಷ್ಟೊಂದು ಸಮೃದ್ಧವಾಗಿ ಬರೆಯಬಹುದೇ ಎಂಬ ಅಚ್ಚರಿ ಮೂಡಿಸುತ್ತವೆ. ಕಾಸರಗೋಡು ಗಡಿಭಾಗದ ಪ್ರಾಕೃತಿಕ ಸೌಂದರ್ಯ, ಅಂಥ ಗ್ರಾಮ್ಯ ಪ್ರದೇಶಕ್ಕೂ ತಗುಲಿರುವ ನಗರೀಕರಣದ ಛಾಯೆ-ಯಾಂತ್ರಿಕತೆ, ಅಲ್ಲಿನ ಸಾಹಿತ್ಯಿಕ ಕಾರ್ಯಕ್ರಮಗಳು, ಸಾಂಪ್ರದಾಯಿಕ ಆಚರಣೆಗಳು, ಸಾಂಸ್ಕೃತಿಕ ಅನನ್ಯತೆಗಳು ಕೂಡ ಇಲ್ಲಿ ತೆರೆದುಕೊಳ್ಳುವ ಬಗೆ ಚೆಂದ.

'ಇವು ಬದುಕಿಗೇ ಬರೆದ ಪ್ರೇಮಪತ್ರಗಳು' ಎಂದು ಜಯಂತ ಕಾಯ್ಕಿಣಿಯವರು ಮೆಚ್ಚಿಕೊಂಡಿರುವ ಪತ್ರಗಳಿವು. ನಿಜವದು. ಬದುಕಿನ ಸುಡುಬಿಸಿಲಿನಿಂದ ಒಮ್ಮೆ ಸಾವರಿಸಿಕೊಳ್ಳಲು ತಣ್ಣೆಳಲ ಆವರಣ ಹೊಕ್ಕ ಅನುಭವ ನೀಡುವ ಅಕ್ಕರೆಯ ಪತ್ರಗಳಿವು. **ಪತ್ರಾರ್ಜಿತ; ಲೇ: ಶಶಿಕಲಾ ಬಾಯಾರು; ಪ್ರ: ಅಂಕನಹಳ್ಳಿ ಪ್ರಕಾಶನ, ರಾಮನಗರ; ಪುಟ: 312; ಬೆಲೆ: 180ರೂ.** ■

ಜಾನಪದ ಮಾಹಿತಿ ಕಣಜ



ಡಾ. ಸುಜಾತಾ ಚಲವಾದಿಯವರು ಜಾನಪದ ಸಾಹಿತ್ಯ, ಸಂಶೋಧನಾ ಕೃತಿಗಳ ಓದು ಮತ್ತು ಅವುಗಳ ಅವಲೋಕನ ರೂಪದ ಟಿಪ್ಪಣಿಗಳು ಮತ್ತು ಆ ಕೃತಿಗಳ ಓದಿನಿಂದ ಕಂಡುಕೊಂಡ ಒಳನೋಟಗಳನ್ನು 'ಜಾನಪದ ಲೋಕಕಥನ' ಪುಸ್ತಕದಲ್ಲಿ ನೀಡಿದ್ದಾರೆ. ಇದರಲ್ಲಿ ಒಟ್ಟು 14 ಲೇಖನಗಳಿವೆ. ಗರತಿಯ ಹಾಡು, ಲಂಬಾಣಿ ಜನಪದ ಗೀತೆಗಳ ನೀತಿಯ ನೆಲೆ, ಹೈದರಾಬಾದ್ ಕರ್ನಾಟಕದ ಜಾತ್ರೆಗಳ ಸಂಸ್ಕೃತಿ, ಕರ್ನಾಟಕದ ಬುಡಕಟ್ಟುಗಳ ಅಧ್ಯಯನ ಮತ್ತು ಅನನ್ಯತೆ, ಕನಕಗಿರಿ ಸೀಮೆಯ ಸ್ಥಳನಾಮಗಳು ಸೇರಿದಂತೆ ಹತ್ತು ಹಲವು ಮಾಹಿತಿಯುಕ್ತ ಬರಹಗಳು ಈ ಪುಸ್ತಕದಲ್ಲಿವೆ.

ಜಾನಪದ ಲೋಕಕಥನ; ಲೇ: ಡಾ. ಸುಜಾತಾ ಚಲವಾದಿ; ಪ್ರ: ಚನ್ನಬಸಮ್ಮಾ ಚಂದಪ್ಪ ಪ್ರತಿಷ್ಠಾನ, ವಿಜಯಪುರ; ಪುಟ: 106; ಬೆಲೆ: 100 ರೂ. ■

ಜೀವನದ ನೈಜ ಚಿತ್ರಣ

ಡಾ.ಎಚ್.ಎಸ್.ಸತ್ಯನಾರಾಯಣ
feedbacklvk@vijaykarnataka.com



ವಾಸ್ತೇವನ ಪಂಚಕಳಸ ಯಾತ್ರೆ ಎಂಬುದು ಯುವ ಲೇಖಕ ಶ್ರೀನಿವಾಸ ಪಾ. ನಾಯ್ಡು ಅವರ ಚೊಚ್ಚಲ ಕಥಾ ಸಂಕಲನ. ಮೊದಲ ಪ್ರಯತ್ನದಲ್ಲೇ ಗಮನ ಸೆಳೆಯುವ ರಚನೆಗಳು ಇಲ್ಲಿವೆ. ಮಧ್ಯಮ ಮತ್ತು ಕೆಳವರ್ಗದ ಜೀವನದ ನೈಜ ಚಿತ್ರಣವನ್ನು ಈ ಕೃತಿಯಲ್ಲಿನ ಕಥೆಗಳು ಮನಮುಟ್ಟುವ ರೀತಿಯಲ್ಲಿ ಮೂಡಿಸುತ್ತವೆ. ಸರಳ ಮತ್ತು ನೈಸರ್ಗಿಕ ಶೈಲಿಯಲ್ಲಿ ಸಾಗುವ ಬರವಣಿಗೆ ಓದುಗರಿಗೆ ಹತ್ತಿರವಾಗುತ್ತದೆ.



ಈ ಸಂಕಲನದ ಪ್ರಮುಖ ಶಕ್ತಿ ಅದರ ಕಥನ ಕಲೆ. ಸಣ್ಣಕಥೆಗೆ ಅಗತ್ಯವಾದ ಅನಿರೀಕ್ಷಿತ ತಿರುವುಗಳು ಓದಿನ ರಸವನ್ನು ಹೆಚ್ಚಿಸುತ್ತವೆ ಮತ್ತು ಪ್ರತಿಯೊಂದು ಕಥೆಯ ಅಂತ್ಯವೂ ಓದುಗರಲ್ಲಿ ಕುತೂಹಲ, ಆನಂದವನ್ನು ಹುಟ್ಟಿಸುತ್ತದೆ. ಭಾಷೆ ಲವಲವಿಕೆಯಿಂದ ಕೂಡಿದ್ದು, ಉಪಮೆಗಳು ಮತ್ತು ರೂಪಕಗಳು ಕಥೆಗಳ ಸೌಂದರ್ಯವನ್ನು ಮತ್ತಷ್ಟು ಶ್ರೀಮಂತಗೊಳಿಸುತ್ತವೆ.

ಕಥೆಗಳ ಹಿನ್ನೆಲೆಯಾಗಿ ಚಿಕ್ಕಮಗಳೂರು ಮಲೆನಾಡಿನ ವಾತಾವರಣ ಬಳಸಿರುವುದು ವಿಶೇಷ. ಮಳೆಯ ದಟ್ಟತೆ, ಪರಿಸರದ ಸೌಂದರ್ಯ ಮತ್ತು ಜನಜೀವನದ ಸೂಕ್ಷ್ಮ ವಿವರಗಳು ಕಥೆಗಳಿಗೆ ಜೀವ ತುಂಬುತ್ತವೆ. 'ಮಳೆಗಾಲದ ಆ ರಾತ್ರಿ' ಅಂತಹ ಕಥೆಗಳು ಓದುಗರ ಮನಸ್ಸಿನಲ್ಲಿ ದೀರ್ಘಕಾಲ ಉಳಿಯುವ ಪ್ರಭಾವ ಬೀರುತ್ತವೆ. ಕುಟುಂಬ, ಸಂಬಂಧಗಳು ಮತ್ತು ಜೀವನದ ಸಣ್ಣಸಣ್ಣ ಸಂಗತಿಗಳನ್ನು ಸ್ಪರ್ಶಿಸುವ ಈ ಕಥೆಗಳು ಓದುಗರಿಗೆ ತಾವೇ ಅದರ ಭಾಗವಾಗಿರುವ ಅನುಭವವನ್ನು ನೀಡುತ್ತವೆ. ಒಟ್ಟಾರೆಯಾಗಿ, ಈ ಕಥಾಸಂಕಲನವು ಸರಳತೆ, ಭಾವನಾತ್ಮಕತೆ ಮತ್ತು ನೈಜತೆಯ ಸುಂದರ ಸಂಯೋಜನೆಯಾಗಿ, ಭರವಸೆಯ ಲೇಖಕರೊಬ್ಬರ ಆಗಮನವನ್ನು ಸೂಚಿಸುತ್ತದೆ. **ವಾಸ್ತೇವನ ಪಂಚಕಳಸ ಯಾತ್ರೆ; ಲೇ: ಶ್ರೀನಿವಾಸ ಪಾ. ನಾಯ್ಡು; ಪ್ರ: ಸ್ನೇಹ ಬುಕ್ ಹೌಸ್, ಬೆಂಗಳೂರು; ಪುಟ: 120; ಬೆಲೆ: 150 ರೂ.** ■

ಪುಸ್ತಕ ಟಿಪ್ಪಣಿ

ವಿಚಾರ ವೈವಿಧ್ಯತೆ



ಒಟ್ಟು 23 ಲೇಖನಗಳ ಸಂಕಲನ 'ಅಲ್ಲೊಂದಿಷ್ಟು ಇಲ್ಲೊಂದಿಷ್ಟು'. ಕಂಡ ಕಥೆಗಳು, ಓದಿದ ಸುದ್ದಿಗಳು, ಮಿದುಳೊಳಗೆ ಹೊಕ್ಕ, ಮನಸ್ಸಿನಲ್ಲಿ ಇಳಿದು, ಸಂಬಂಧಿಸಿದ ಅಂಶಗಳನ್ನೆಲ್ಲ ಹೆಂಡೆಕಿ ಸಂಗ್ರಹಿಸಿ, ಲೇಖನಗಳಾಗಿಸಿದಾಗ ಕಾಗದದ ಮೇಲೆ ಮೂಡಿವೆ. ಕನ್ನಡ, ಸಂಸ್ಕೃತ, ಹಳೆಗನ್ನಡ ಮತ್ತು ಇಂಗ್ಲಿಷ್ ಭಾಷೆಗಳ ಓದಿನ ಹಿನ್ನೆಲೆ ಈ ಬರವಣಿಗೆಯಲ್ಲಿ ಕಾಣುತ್ತದೆ. ಈ ಲೇಖನಗಳ ಜತೆಗೆ ವಾಸಂತಿಯವರು ಬರೆದಿರುವ ಎಂಟು ಕವಿತೆಗಳೂ ಇಲ್ಲಿವೆ. ನಮ್ಮ ಮನಸ್ಸಿನ ಅನೇಕ ಆಲೋಚನೆಗಳಂತೆಯೇ ಈ ಪುಸ್ತಕದಲ್ಲಿರುವ ಲೇಖನಗಳು ಹಲವು ವಿಷಯಗಳ ಸುತ್ತ ಹರಿದಾಡುತ್ತವೆ. **ಅಲ್ಲೊಂದಿಷ್ಟು ಇಲ್ಲೊಂದಿಷ್ಟು; ಲೇ: ವಾಸಂತಿ ಸಾಗರ; ಪ್ರ: ವಿಕ್ರಂ ಪ್ರಕಾಶನ, ಬೆಂ; ಪುಟ: 132; ಬೆಲೆ: 120 ರೂ.** ■

ಜನಸಾಮಾನ್ಯರ ಅಂಡಮಾನ್



ಅಂಡಮಾನ ದ್ವೀಪಗಳ ಬಗ್ಗೆ ಶಕುಂತಲಾ ಶಿವರಾಂ ಹಿಂದಿಯಲ್ಲಿ ಬರೆದ ಕೃತಿಯನ್ನು ರಾಜಲಕ್ಷ್ಮೀ ಎನ್.ಕೆ. 'ಅಂಡಮಾನ್- ಇತಿಹಾಸದೊಳಗೊಂದು ಪಯಣ' ಹೆಸರಿನಲ್ಲಿ ಕನ್ನಡಕ್ಕೆ ತಂದಿದ್ದಾರೆ. ಬ್ರಿಟಿಷರು ಹಾಗೂ ಜಪಾನೀಯರ ಆಡಳಿತವಿರುವ ಹೊತ್ತಿಗೆ ಬಾಲಕಿಯಾಗಿ ಅಂಡಮಾನ್‌ನಲ್ಲಿ ಬೆಳೆದ ಶಕುಂತಳಾರವರು ಸಾಮಾನ್ಯರ ಬದುಕಿನ ಮೂಲಕ ಅಂಡಮಾನನ್ನು ಕಟ್ಟಿಕೊಟ್ಟಿದ್ದಾರೆ. ಸಹಜ ಜೀವನ, ವಿವಿಧತೆಯಲ್ಲಿ ಏಕತೆ, ಭಿನ್ನತೆಯ ಒಪ್ಪಿಕೊಳ್ಳುವಿಕೆ ಸಮಾಜ ನಿರ್ಮಾಣದಲ್ಲಿ ಸಾಧ್ಯ ಎಂದು ಈ ಪುಸ್ತಕ ನಿರೂಪಿಸುತ್ತದೆ. **ಅಂಡಮಾನ್ ಇತಿಹಾಸದೊಳಗೊಂದು ಪಯಣ; ಲೇ: ಡಾ. ರಾಜಲಕ್ಷ್ಮೀ ಎನ್.ಕೆ. ; ಪ್ರ: ನವಕರ್ನಾಟಕ ಪ್ರಕಾಶನ, ಬೆಂ; ಪುಟ: 168; ಬೆಲೆ: 225 ರೂ.** ■

ಧರ್ಮ ರತ್ನಾಕರರ ಜೀವನ ಕಥನ



ಧರ್ಮ ರತ್ನಾಕರ ನರಸಿಂಗರಾವ್ ಜೀವನ ಕಥನವನ್ನು ಅವರ ಸಹೋದರ ಶ್ರೀನಿವಾಸ ದೇಶಪಾಂಡೆ 'ಅಭಯ ಹಸ್ತ' ಹೆಸರಿನಲ್ಲಿ ಬರೆದಿದ್ದಾರೆ. ರಾಯಚೂರಿನ ಲಿಂಗಸಗೂರು ತಾಲೂಕಿನ ಮದಗಲ್ಲಿನಲ್ಲಿ ನೆಲೆನಿಂತ ದೇಶಪಾಂಡೆ ಕುಟುಂಬದ ನರಸಿಂಗರಾಯರ ಬದುಕಿನ ಚಿತ್ರಣದ ಜತೆಗೆ ಕಳೆದ ಶತಮಾನದ ಆ ಪ್ರದೇಶದ ಬದುಕಿನ ದಾರಿಗಳ ವಿಶಿಷ್ಟ ನೋಟವೂ ಇಲ್ಲಿದೆ. ಸಹೃದಯ ಓದುಗರಿಗೆ ತಾವೂ ನರಸಿಂಗರಾವ್‌ರನ್ನು ಭೇಟಿಯಾಗಬೇಕು ಎಂದೆನಿಸುವಂತೆ ಈ ಕೃತಿ ಮಾಡುತ್ತದೆ. **ಅಭಯ ಹಸ್ತ; ಲೇ: ಶ್ರೀನಿವಾಸ ದೇಶಪಾಂಡೆ; ಪ್ರ: ಶ್ರೇಯಾ ಪಬ್ಲಿಕೇಷನ್ಸ್, ಮಂಗಳೂರು; ಪುಟ: 108; ಬೆಲೆ: 100 ರೂ.** ■

ದಿನ ಭವಿಷ್ಯ

ಶ್ರೀಪತಿ ಭಟ್ ಆಚಾರ್ಯ, ಬೆಂಗಳೂರು

ನಿಮ್ಮ ರಾಶಿಚಕ್ರಕ್ಕೆ ಅನುಗುಣವಾಗಿ ಸೂಕ್ತವಾದ ರತ್ನಗಳು, ಶಿಕ್ಷಣ, ವೃತ್ತಿಜೀವನ, ವಿವಾಹ, ಸಂತಾನ, ಆರೋಗ್ಯ, ಆರ್ಥಿಕ ಸ್ಥಿತಿ ಮತ್ತು ಇನ್ನಿತರ ವಿಷಯಗಳ ಬಗ್ಗೆ ವಿವರಗಳಿಗಾಗಿ ಹಾಗೆಯೇ ಸಮಸ್ಯೆಗಳಿಗೆ ಪರಿಹಾರ ರೂಪದ ಪೂಜೆಗಳು, ವಿವಾಹ ಹೊಂದಾಣಿಕೆ, ಮಕ್ಕಳ ಜಾತಕ ಮತ್ತು ಶೈಕ್ಷಣಿಕ ಪ್ರಗತಿಯ ಬಗ್ಗೆ ಮಾಹಿತಿಗಾಗಿ ದಯವಿಟ್ಟು ಖುದ್ದಾಗಿ ಭೇಟಿ ನೀಡಿ. ದೂ: 9513747474

ಮೇಷ, ಕಟಕ, ವೃಶ್ಚಿಕ, ಧನು -ಈ ರಾಶಿಯವರಿಗೆ ಭದ್ರ ಯೋಗ



ಮೇಷ: ತಾಂತ್ರಿಕ ಕ್ಷೇತ್ರದಲ್ಲಿ ಜೀವನ ನಡೆಸುವವರು ಉದ್ಯೋಗದಲ್ಲಿ ದಂಡ ಕಟ್ಟುವ ಸ್ಥಿತಿ ಬರಬಹುದು, ಜಾಗ್ರತೆಯಿಂದ ಕೆಲಸ ಮಾಡಿ. ಮನೆಯಲ್ಲಿ ಅನುಕೂಲಕರ ಸನ್ನಿವೇಶ ನಿರ್ಮಾಣವಾಗಲಿದೆ. ಅದೃಷ್ಟ ಸಂಖ್ಯೆ 2, ಅದೃಷ್ಟ ಬಣ್ಣ ಕಂದು
(ನಾಮಾಕ್ಷರ: ಚು, ಚೆ, ಚೊ, ಲ, ಲಿ, ಲು, ಲೆ, ಲೊ, ಅ) ಅಶ್ವಿನಿ, ಭರಣಿ, ಕೃತ್ತಿಕಾ 1ನೇ ಪಾದ



ವೃಷಭ: ರಾಜಕೀಯ ಭವಿಷ್ಯದಲ್ಲಿ ಜನಪ್ರಿಯತೆ ಹೆಚ್ಚಿಸಿಕೊಳ್ಳಲು ಪ್ರಯತ್ನ ನಡೆಸಿ. ಇತ್ತೀಚಿನ ನಿಮ್ಮ ಕೆಲಸ ಅಥವಾ ಕೃತಿಗೆ ತೀಕ್ಷ್ಣ ಪ್ರತಿಕ್ರಿಯೆ ವ್ಯಕ್ತವಾಗುತ್ತದೆ. ಯಾರಿಂದಲೂ ಧನ ಸಹಾಯ ಅಪೇಕ್ಷಿಸಬೇಡಿ. ಅದೃಷ್ಟ ಸಂಖ್ಯೆ 5, ಅದೃಷ್ಟ ಬಣ್ಣ ಬಿಳಿ
(ಇ, ಉ, ಎ, ಒ, ವ, ವಿ, ವು, ವೆ, ವೊ) ಕೃತ್ತಿಕಾ 2, 3, 4ನೇ ಪಾದ, ರೋಹಿಣಿ, ಮೃಗಶಿರ 1, 2ನೇ ಪಾದ

ಮಿಥುನ: ಕೌಟುಂಬಿಕ ಸಮಸ್ಯೆಗಳನ್ನು ಎಲ್ಲರೂ ಮೆಚ್ಚುವಂತೆ ಪರಿಹರಿಸಿಕೊಳ್ಳುವ ಸಾಮರ್ಥ್ಯ ಅಭಿವೃದ್ಧಿಯಾಗಲಿದೆ. ಯೋಜನೆಗಳನ್ನು ಇತರರ ಮುಂದೆ ಮಂಡಿಸಿ ಅವರ ವಿಶ್ವಾಸ ಗಳಿಸುವಲ್ಲಿ ಯಶಸ್ವಿಯಾಗುವಿರಿ. ಅದೃಷ್ಟ ಸಂಖ್ಯೆ 8, ಅದೃಷ್ಟ ಬಣ್ಣ ಕೆಂಪು
(ಕ, ಕಿ, ಕು, ಘ, ಙ, ಛ, ಕೆ, ಕೊ, ಹ) ಮೃಗಶಿರ 3, 4, ಆರ್ದ್ರೆ, ಪುನರ್ವಸು 1, 2, 3

ಕಟಕ: ಜವಾಬ್ದಾರಿಗಳತ್ತ ಹೆಚ್ಚಿನ ಗಮನ ಹರಿಸಿ. ಆತಂಕವಿಲ್ಲದೇ ಕೆಲಸ-ಕಾರ್ಯಗಳು ಸುಸೂತ್ರವಾಗಿ ನಡೆಯಲಿವೆ. ಉಂಡ ಮನೆಗೆ ಎರಡು ಬಗೆಯುವ ಪೈಕಿಯವರು ಇಂದು ಅನುಭವಕ್ಕೆ ಬರಲಿದ್ದಾರೆ. ಅದೃಷ್ಟ ಸಂಖ್ಯೆ 6, ಅದೃಷ್ಟ ಬಣ್ಣ ಕಪ್ಪು
(ಹಿ, ಹು, ಹೆ, ಹೊ, ಡ, ಡಿ, ಡು, ಡೆ, ಡೊ) ಪುನರ್ವಸು 4ನೇ ಪಾದ, ಪುಷ್ಯ, ಆಶ್ಲೇಷ

ಸಿಂಹ: ಕಾರ್ಯಕ್ಷೇತ್ರದಲ್ಲಿ ಶಾಂತ ಚಿತ್ತದಿಂದ ಕಾರ್ಮಿಕರ ಮಾತುಗಳನ್ನು ಆಲಿಸಿ ಸೂಕ್ತ ಕ್ರಮ ಕೈಗೊಳ್ಳಬೇಕಾದ ಸಮಯದಲ್ಲಿ ಅವರ ಸಹಾಯ ದೊರೆಯಲಿದೆ. ವೈಯಕ್ತಿಕವಾಗಿ ನಿಯಮ, ನಿಷ್ಠೆಯಿಂದ ಇರುವುದು ಉತ್ತಮ. ಅದೃಷ್ಟ ಸಂಖ್ಯೆ 1, ಅದೃಷ್ಟ ಬಣ್ಣ ನೀಲಿ
(ಮ, ಮಿ, ಮು, ಮೊ, ಮೆ, ಟ, ಟಿ, ಟು, ಟೆ) ಮಖೆ, ಪುಬ್ಬೆ, ಉತ್ತರ ಫಲ್ಗುಣಿ 1ನೇ ಪಾದ

ಕನ್ಯಾ: ಅಪರೂಪದ ಅತಿಥಿಗಳ ಆಗಮನದಿಂದ ಮನೆಯಲ್ಲಿ ಸಂತಸದ ವಾತಾವರಣ. ವೈಯಕ್ತಿಕ ಜೀವನದ ಸಮಸ್ಯೆಗಳು ಬಗೆಹರಿದು ಮನಸ್ಸಿನಲ್ಲಿ ನೆಮ್ಮದಿ ಮೂಡಲಿದೆ. ಪತ್ರಕರ್ತರಿಗೆ ಭಯ ಮೂಡುವ ಪ್ರಸಂಗ ಬರಲಿದೆ. ಅದೃಷ್ಟ ಸಂಖ್ಯೆ 9, ಅದೃಷ್ಟ ಬಣ್ಣ ಬೂದು
(ಟೊ, ಪ, ಪಿ, ಪು, ಷ, ಣ, ಠ, ಪೆ, ಪೊ) ಉತ್ತರ ಫಲ್ಗುಣಿ 2, 3, 4ನೇ ಪಾದ, ಹಸ್ತ, ಚಿತ್ತಾ 1, 2ನೇ ಪಾದ



ತುಲಾ: ಔಷಧ ಮಾರಾಟಗಾರರಿಗೆ ಅಥವಾ ಪ್ರತಿನಿಧಿಗಳಿಗೆ ಕಾರ್ಯಾನುಕೂಲವಾಗಲಿದೆ. ಬರವಣಿಗೆಯಲ್ಲಿ ಉತ್ಸಾಹ ಮೂಡುವುದು. ಅದೃಷ್ಟ ಸಂಖ್ಯೆ 3, ಅದೃಷ್ಟ ಬಣ್ಣ ಹಸಿರು
(ರ, ರಿ, ರು, ರೆ, ರೊ, ತ, ತಿ, ತು, ತೆ) ಚಿತ್ತಾ 3, 4ನೇ ಪಾದ, ಸ್ವಾತಿ, ವಿಶಾಖ 1, 2, 3ನೇ ಪಾದ

ವೃಶ್ಚಿಕ: ಜೀವನೋಪಾಯಕ್ಕೆ ಪರ್ಯಾಯ ಮಾರ್ಗ ಹುಡುಕುವ ಪ್ರಯತ್ನ ಮಾಡಿ. ಹಣದ ವಿಚಾರದಲ್ಲಿ ಮಿತವ್ಯಯಿಗಳಾಗಿರಿ. ಇದ್ದ ವಿವಾದಗಳನ್ನು ರಾಜಿಯೊಂದಿಗೆ ಬಗೆಹರಿಸಿಕೊಳ್ಳುವಿರಿ. ಅದೃಷ್ಟ ಸಂಖ್ಯೆ 7, ಅದೃಷ್ಟ ಬಣ್ಣ ಪಾಚಿ ಹಸಿರು
(ತೊ, ನ, ನಿ, ನು, ನೆ, ನೊ, ಯ, ಯಿ, ಯು) ವಿಶಾಖ 4ನೇ ಪಾದ, ಅನುರಾಧ, ಜ್ಯೇಷ್ಠ



ಧನುಸ್ಸು: ಅವಕಾಶವನ್ನು ವ್ಯರ್ಥವಾಗದಂತೆ ಪಡೆದುಕೊಳ್ಳಲು ಪ್ರಯತ್ನ ಪಡುವುದು ಅಗತ್ಯ. ಮಾರುಕಟ್ಟೆಯಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಗಮನಿಸಿ ಷೇರುಗಳನ್ನು ಕೊಳ್ಳುವ ಯೋಚನೆಗೆ ಮುಂದಾಗಿ. ಅದೃಷ್ಟ ಸಂಖ್ಯೆ 4, ಅದೃಷ್ಟ ಬಣ್ಣ ಕೇಸರಿ
(ಯೆ, ಯೊ, ಬ, ಬಿ, ಬು, ಧ, ಭ, ಢ, ಬೆ) ಮೂಲ, ಪೂರ್ವಾಷಾಢ, ಉತ್ತರಾಷಾಢ 1ನೇ ಪಾದ

ಮಕರ: ಎದುರಾಗುವ ಸಮಸ್ಯೆಗಳು ಪರಿಹಾರ ಕಾಣಲಿವೆ. ಫಲಿತಾಂಶ ಸಂತಸವನ್ನು ತರಲಿದೆ. ಆರೋಗ್ಯದಲ್ಲಿ ಪದೇಪದೆ ವ್ಯತ್ಯಾಸ ಆಗುತ್ತಿರುವುದರಿಂದ ಆಹಾರ ಪದ್ಧತಿಯನ್ನು ಬದಲಿಸಿಕೊಳ್ಳಿ. ಅದೃಷ್ಟ ಸಂಖ್ಯೆ 2, ಅದೃಷ್ಟ ಬಣ್ಣ ಆಕಾಶ ನೀಲಿ
(ಬೊ,ಜ,ಜೆ,ಶಿ,ಶು,ಶೆ,ಶೊ,ಗ,ಗಿ) ಉತ್ತರಾಷಾಢ 2, 3, 4 ನೇ ಪಾದ, ಶ್ರವಣ, ಧನಿಷ್ಠ 1, 2ನೇ ಪಾದ

ಕುಂಭ: ಹೂಡಿಕೆ ವಿಚಾರದಲ್ಲಿ ಆಳವಾಗಿ ಯೋಚಿಸಿ ತೀರ್ಮಾನ ಕೈಗೊಳ್ಳಿ. ಮಿತ್ರರಿಂದ ಸಲಹೆ ಸ್ವೀಕರಿಸಿ. ಮಾನಸಿಕವಾಗಿ ಆದ ನೋವನ್ನು ಮರೆಯಲು ಪ್ರೀತಿಪಾತ್ರರೊಂದಿಗೆ ಮಾತನಾಡುವಿರಿ. ಅದೃಷ್ಟ ಸಂಖ್ಯೆ 5, ಅದೃಷ್ಟ ಬಣ್ಣ ಗುಲಾಬಿ
(ಗು,ಗೆ,ಗೊ,ಸ,ಸಿ,ಸು,ಸೆ,ಸೊ,ದ) ಧನಿಷ್ಠ 3, 4ನೇ ಪಾದ, ಶತಭಿಷ, ಪೂರ್ವಾಭಾದ್ರ 1, 2, 3ನೇ ಪಾದ

ಮೀನ: ಸಿಟ್ಟು ಅಥವಾ ಯೋಚನಾರಹಿತ ನಿರ್ಧಾರಗಳು ಏಕಾಂಗಿತನಕ್ಕೆ ಕಾರಣವಾಗಲಿದೆ. ಪ್ರೀತಿಪಾತ್ರರೊಂದಿಗೆ ಮನಬಿಚ್ಚಿ ಮಾತನಾಡುವ ಇಚ್ಛೆ ತೋರಿಸುವಿರಿ. ಸಂಸಾರ ನಿರ್ವಹಣೆಗಾಗಿ ಅಧಿಕ ಹಣ ವ್ಯಯಿಸುವಿರಿ. ಅದೃಷ್ಟ ಸಂಖ್ಯೆ 8, ಅದೃಷ್ಟ ಬಣ್ಣ ಹಳದಿ
(ದಿ,ದು,ಖ,ಝ,ಥ,ದೆ,ದೊ,ಚ,ಚಿ) ಪೂರ್ವಾಭಾದ್ರ 4ನೇ ಪಾದ, ಉತ್ತರಾಭಾದ್ರ, ರೇವತಿ

ವಿಜಯಬಂಧ - 7991



ಎಡದಿಂದ ಬಲಕ್ಕೆ
1 ಶುಭ ಸಮಯಕ್ಕೆ ಬಂದ ಹೊಗಳುಭಟ್ಟ 6
5 ಕಮಲತ್ತೆ ಮನೆಯಲ್ಲಿ ಸಾಕಿಕೊಂಡ ಒದೆಯುವ ಪ್ರಾಣಿ 2
6 ಹವಳದ ರೂಪದಲ್ಲಿನ ಕ್ಷಾರ 3
7 ದ್ವಾಪರದಲ್ಲಿ ಅತ್ಯಂತ ಶ್ರೇಷ್ಠವಾದದ್ದು ಇದು 3
8 ಭಾವ ಕುಳಿತು ಕೇಳಿದ ಹದಿನೆಂಟು ಪುರಾಣಗಳಲ್ಲಿ ಒಂದು 4
10 ಕಮಲಗಳಿಂದ ತುಂಬಿದ ಸರೋವರ 4
13 ಬೇಸಾಯಕ್ಕಾಗಿ ಇಟ್ಟುಕೊಂಡ ಮತಿವಂತನಾದ ಆಳು 4
16 ಸದಾ ದಾರ ಹಿಡಿದು ಬಂದ ಸೈನ್ಯಾಧಿಕಾರಿ 4
18 ಜಮಾನಾ ಕಾಲದಿಂದ ಹರಿಯುತ್ತಿರುವ ನದಿ 3
19 ಟಾಕಿ ಸಿನಿಮಾ ಯಶಸ್ವಿಯಾದಾಗ ಹಚ್ಚಿದ ಗರ್ನಾಲು 3
20 ಅತಿ ಕೋಪದಿಂದ ಆಗಮಿಸಿದ ವಾನರ 2
21 ಮಾನವಂತರಿಗೆ ಆಕಾಶ ಮೋಟಾರಿನ ಅನುಕೂಲತೆ 6

ಮೇಲಿನಿಂದ ಕೆಳಕ್ಕೆ
2 ಸೊಕ್ಕಿನಿಂದ ಬೀಗುತ್ತಿದ್ದವನ ಅಹಂಕಾರಕ್ಕೆ ಬಿದ್ದ ಪೆಟ್ಟು 4
3 ಶಿವ ಅರ್ಜುನನಿಗೆ ಅನುಗ್ರಹಿಸಿದ ಮಂತ್ರಾಸ್ತ್ರ 4
4 ಏನೂ ತೋಚದಂತೆ ಉಂಟಾದ ಭ್ರಾಂತಿ 4
5 ಕರಿಯ ಬಣ್ಣದ ಮೂಷಿಕ 4
8 ಆಸ್ತಿಯನ್ನು ಪಾಲು ಮಾಡುವವನು 3
9 ಸಮತಿಗೆ ಸತಿಯೇ ಒದಗಿಸಿದ ಮನೆ 3
11 ಮರದಿಂದ ಧಾರೆಯಾಗಿ ಇಳಿದ ಸಿಹಿ 3
12 ಖರಪುಟ ಶಬ್ದ ಕರಾರುವಾಕ್ಕಾಗಿದೆ 3
14 ಸನ್ಯಾಸಿಗಳು ವಾಸಿಸುವ ಕುಟೀರಕ್ಕೆ ಮುಖ್ಯನಾದವನು 4
15 ಅಗಲವಾದ ಕರ್ಣಕ್ಕೆ ಆನೆಯ ಹೋಲಿಕೆ 4
16 ಆತ ನುಡಿಸಿದ ಸನಾದಿ ಪುರಾತನವಾದದ್ದು 4
17 ದರ್ಶನ ಪಡೆಯಲು ಹೋದಾಗ ಸಿಕ್ಕ ಈ ತತ್ವಜ್ಞಾನಿ 4

ವಿಜಯಬಂಧ | 7990

ಎಡದಿಂದ ಬಲಕ್ಕೆ: 1.ಹಂಗಾಮಿ 3.ಜೀವಕ 5.ವಾಸ 6.ರತ್ನ 7.ವ್ಯಸನ 8.ಜಲಮಯ 10.ದಿನಕರ 13.ನವರಸ 16.ಮರುದಿನ 18.ಬದನೆ 19.ಕೋಶ 20.ತಮ್ಮ 21.ನಗರ 22.ನಯನ.

ಮೇಲಿನಿಂದ ಕೆಳಕ್ಕೆ: 1.ಹಂಸತೂಲ 2.ಮಿತವ್ಯಯ 3.ಜೀವನದಿ 4.ಕರಣಿಕ 8.ಜನಾನ 9.ಮಕರ 11.ನವಿರು 12.ರಶನ 14.ವರ್ಷಾಶನ 15.ಸಬಕಾರ 16.ಮನೆತನ 17.ದಿಟ್ಟತನ.

ಅ.ನಾ. ಪ್ರಹ್ಲಾದರಾವ್

ಮಿಷನ್
ಶಕ್ತಿ
ಮಹಿಳಾ ಭದ್ರತೆ
ಮಹಿಳಾ ಘನತೆ
ಮಹಿಳಾ ಸಬಲೀಕರಣ

ಉತ್ತರ ಪ್ರದೇಶದ ಪ್ರಗತಿಯ ಪಥದಲ್ಲಿ ಮಹಿಳೆಯರ ಪಾತ್ರ

PICS: DPRL, UTTAR PRADESH GOVERNMENT

ಮಹಿಳಾ ಸಬಲೀಕರಣ, ಉತ್ತರ ಪ್ರದೇಶದ ಪರಿವರ್ತನೆ

ಸುರಕ್ಷತೆ ಮತ್ತು ಕಲ್ಯಾಣದಿಂದ ಉದ್ಯಮ ಮತ್ತು ಶಿಕ್ಷಣದವರೆಗೆ, ಮಹಿಳಾ ನೇತೃತ್ವದ ಅಭಿವೃದ್ಧಿ ಮೂಲಕ ಉತ್ತರ ಪ್ರದೇಶವು ತನ್ನ ಪ್ರಬಲ ಭವಿಷ್ಯವನ್ನು ರೂಪಿಸುತ್ತಿದೆ

ಉತ್ತರ ಪ್ರದೇಶವು ಸುರಕ್ಷತೆ, ಘನತೆ, ಶಿಕ್ಷಣ ಮತ್ತು ಆರ್ಥಿಕ ಸಬಲೀಕರಣದ ನಿಟ್ಟಿನಲ್ಲಿ ನಿರಂತರ ಪ್ರಯತ್ನಗಳೊಂದಿಗೆ ಮಹಿಳಾ ಕೇಂದ್ರಿತ ಆಡಳಿತಕ್ಕೆ ಪ್ರಮುಖ ಉದಾಹರಣೆಯಾಗಿ ಹೊರಹೊಮ್ಮಿದೆ. ಪ್ರಧಾನಿ ನರೇಂದ್ರ ಮೋದಿಯವರ 'ಮಾತೃ ಶಕ್ತಿ-ರಾಷ್ಟ್ರ ಶಕ್ತಿ'ಯ ದೃಷ್ಟಿಕೋನದಿಂದ ಪ್ರೇರಿತ ರಾಜ್ಯವು ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಥಿಕ ಕ್ಷೇತ್ರಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಬಲಪಡಿಸುವ ಗುರಿಯೊಂದಿಗೆ ವ್ಯಾಪಕ ಶ್ರೇಣಿಯ ಉಪಕ್ರಮಗಳನ್ನು ಜಾರಿಗೆ ತಂದಿದೆ. ಮಿಷನ್ ಶಕ್ತಿ, ಕಲ್ಯಾಣ ಕಾರ್ಯಕ್ರಮಗಳು, ಉದ್ಯೋಗಾವಕಾಶಗಳು, ಶೈಕ್ಷಣಿಕ ಬೆಂಬಲ ಮತ್ತು ಸಾಮಾಜಿಕ ಭದ್ರತಾ ಕ್ರಮಗಳ ಮೂಲಕ ಉತ್ತರ ಪ್ರದೇಶವು ಮಹಿಳೆಯರು ಮತ್ತು ಯುವತಿಯರು ಹೆಚ್ಚು ಸಬಲೀಕರಣಗೊಳ್ಳುವ, ಸ್ವಾವಲಂಬಿಗಳಾಗುವ ಮತ್ತು ರಾಜ್ಯದ ಪ್ರಗತಿಯ ಪಥಕ್ಕೆ ಪೂರಕ ವ್ಯವಸ್ಥೆಯನ್ನು ಪೋಷಿಸುತ್ತಿದೆ.

ಸಂರಕ್ಷಣೆಯಿಂದ ಸಬಲೀಕರಣದವರಗೆ

- ಮಹಿಳೆಯರ ಮೇಲಿನ ಅಪರಾಧ ಮತ್ತು ಪೋಕ್ಸೊ ಕಾಯ್ದೆಯಡಿ ಶಿಕ್ಷೆ ವಿಧಿಸುವಲ್ಲಿ ಯುಪಿ ದೇಶದಲ್ಲೇ ಮೊದಲ ಸ್ಥಾನದಲ್ಲಿದೆ.
- ರಾಜ್ಯಾದ್ಯಂತ ಪ್ರತಿ ಪೊಲೀಸ್ ಠಾಣೆಯಲ್ಲಿ ಮಿಷನ್ ಶಕ್ತಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.
- ಅಪರಾಧದ ವಿರುದ್ಧ ಕಟ್ಟುನಿಟ್ಟಿನ ಶೂನ್ಯ ಸಹಿಷ್ಣುತಾ ನೀತಿಯು ಮಹಿಳೆಯರ ಸುರಕ್ಷತೆ ಮತ್ತು ಸಾಂಸ್ಥಿಕ ಬೆಂಬಲಿತ ಕಾರ್ಯವಿಧಾನಗಳನ್ನು ಬಲಪಡಿಸಿದೆ.
- ಪೊಲೀಸ್ ಪಡೆಯಲ್ಲಿ ಮಹಿಳೆಯರು ಶೇ.20ರಷ್ಟು ಮೀಸಲಾತಿ ಪಡೆಯುತ್ತಿದ್ದು , 44,000ಕ್ಕೂ ಅಧಿಕ ಮಹಿಳೆಯರು ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.
- ಮಿಷನ್ ಶಕ್ತಿಯು ಮಹಿಳಾ ಸುರಕ್ಷತೆ, ಘನತೆ, ಕಾನೂನಿನ ಅರಿವು ಮತ್ತು ಸ್ವಾವಲಂಬನೆ ಉತ್ತೇಜಿಸುವ ಬೃಹತ್ ಉಪಕ್ರಮವಾಗಿ ವಿಕಸನಗೊಂಡಿದೆ.

ಘನತೆಯೊಂದಿಗೆ ಕಲ್ಯಾಣ

- 40.34 ಲಕ್ಷಕ್ಕೂ ಅಧಿಕ ನಿರ್ಗತಿಕ ಮಹಿಳೆಯರು ಮಾಸಿಕ ರೂ.1,000 ಪಿಂಚಣಿ ಪಡೆಯುತ್ತಿದ್ದು , ಏಪ್ರಿಲ್ 2026 ರಿಂದ ರೂ.1,500ಕ್ಕೆ ಏರಿಕೆಯಾಗಿದೆ.
- ಮುಖ್ಯಮಂತ್ರಿ ಸಾಮೂಹಿಕ ವಿವಾಹ ಯೋಜನೆಯು 5.50 ಲಕ್ಷಕ್ಕೂ ಅಧಿಕ ವಿವಾಹಗಳಿಗೆ ನೆರವು ನೀಡಿದೆ
- ಮುಖ್ಯಮಂತ್ರಿ ಕನ್ಯಾ ಸುಮಂಗಲ ಯೋಜನೆಯಡಿ 27.37 ಲಕ್ಷ ಹೆಣ್ಣು ಮಕ್ಕಳಿಗೆ ಪ್ರಯೋಜನವಾಗಿದೆ.
- ಮುಖ್ಯಮಂತ್ರಿ ಬಾಲ ಸೇವಾ ಯೋಜನೆಯು 1.05 ಲಕ್ಷಕ್ಕೂ ಅಧಿಕ ಮಕ್ಕಳಿಗೆ ನೆರವು ಕಲ್ಪಿಸಿದೆ.
- ಪ್ರಧಾನಮಂತ್ರಿ ಉಜ್ವಲ ಯೋಜನೆಯಡಿ 1.86 ಕೋಟಿ ಕುಟುಂಬಗಳಿಗೆ ಉಚಿತ ಎಲ್‌ಪಿಜಿ ಸಂಪರ್ಕ ಒದಗಿಸಲಾಗಿದೆ.

- ಸ್ವಚ್ಛ ಭಾರತ ಮಿಷನ್ (ಗ್ರಾಮೀಣ) ಹಂತ -1 ಮತ್ತು 2ರ ಅನ್ವಯ 3.31 ಕೋಟಿ ಶೌಚಾಲಯಗಳನ್ನು ನಿರ್ಮಿಸಿದ್ದು , ಮಹಿಳೆಯರಿಗೆ ನೈರ್ಮಲ್ಯ ಮತ್ತು ಘನತೆಯನ್ನು ಸುಧಾರಿಸಿದೆ.

ಆಸ್ತಿ ಹಕ್ಕುಗಳು ಮತ್ತು ಆರ್ಥಿಕ ಸೇರ್ಪಡೆ

- ಪಿಎಂ ಸ್ವಾಮಿತ್ವ ಯೋಜನೆಯಡಿ (ಘರೌನಿ) 1.10 ಕೋಟಿಗೂ ಅಧಿಕ ಜನರು ಮಹಿಳೆಯರು. ಮಾಲೀಕತ್ವ ಪ್ರಮಾಣಪತ್ರ ಪಡೆದಿದ್ದಾರೆ, ಇದರಲ್ಲಿ ಹೆಚ್ಚಿನವರು ಮಹಿಳೆಯರು.
- ರೂ.1 ಕೋಟಿವರೆಗಿನ ಆಸ್ತಿ ನೋಂದಣಿಯ ಮುದ್ರಾಂಕ ಶುಲ್ಕದಲ್ಲಿ ಶೇ.1ರಷ್ಟು ರಿಯಾಯಿತಿ ಪಡೆಯಲು ಮಹಿಳೆಯರು ಅರ್ಹರಾಗಿದ್ದು , ಇದು ಹೆಚ್ಚಿನ ಆರ್ಥಿಕ ಭದ್ರತೆ ಮತ್ತು ಮಾಲೀಕತ್ವವನ್ನು ಉತ್ತೇಜಿಸುತ್ತಿದೆ.

ಮಹಿಳಾ ನೇತೃತ್ವದ ಪ್ರಗತಿ ಮುಂದುವರಿಕೆ

- ಮಹಿಳಾ ಸಬಲೀಕರಣಕ್ಕೆ ಉತ್ತರ ಪ್ರದೇಶದ ಸಮಗ್ರ ವಿಧಾನವು ಸುರಕ್ಷತೆ, ಕಲ್ಯಾಣ, ಶಿಕ್ಷಣ, ಉದ್ಯಮಶೀಲತೆ ಮತ್ತು ಉದ್ಯೋಗ ಸೃಷ್ಟಿಯನ್ನು ಸಂಯೋಜಿಸುತ್ತದೆ.
- ರಾಜ್ಯದ ಮಹಿಳೆಯರು ಉದ್ಯಮಿಗಳು, ವೃತ್ತಿಪರರು, ವಿದ್ಯಾರ್ಥಿಗಳು, ಕಾರ್ಮಿಕರು ಮತ್ತು ನಾಯಕಿಯರಾಗಿ ಹೊರಹೊಮ್ಮುತ್ತಿದ್ದು , ಸಾಮಾಜಿಕ ಪ್ರಗತಿ ಮತ್ತು ಆರ್ಥಿಕ ಪ್ರಗತಿಗೆ ಗಮನಾರ್ಹ ಕೊಡುಗೆ ನೀಡುತ್ತಿದ್ದಾರೆ
- ಕೇಂದ್ರೀಕೃತ ನೀತಿ ಮಧ್ಯಸ್ಥಿಕೆಗಳು ಮತ್ತು ನಿರಂತರ ಸಾಂಸ್ಥಿಕ ಬೆಂಬಲದ ಮೂಲಕ ಉತ್ತರ ಪ್ರದೇಶವು ಸಮಗ್ರ ಮತ್ತು ಮಹಿಳಾ ನೇತೃತ್ವದ ಅಭಿವೃದ್ಧಿ ದೃಷ್ಟಿಕೋನ ಬಲಪಡಿಸುವುದನ್ನು ಮುಂದುವರೆಸಿದೆ.



AI GENERATED INFOGRAPHIC

ಪ್ರಮುಖ ಸಹಾಯವಾಣಿಗಳು ಮತ್ತು ಸುರಕ್ಷತಾ ಜಾಲಗಳು

1090	ಮಹಿಳಾ ಶಕ್ತಿವಾಣಿ
181	ಮಹಿಳಾ ಸಹಾಯವಾಣಿ
102	ಗರ್ಭಿಣಿಯರು ಮತ್ತು ನವಜಾತ ಶಿಶುಗಳಿಗೆ ಆಂಬ್ಯುಲೆನ್ಸ್ ಸಹಾಯವಾಣಿ
1930	ಸೈಬರ್ ಸಹಾಯವಾಣಿ
112	ಪೊಲೀಸ್ ತುರ್ತು ಸೇವೆ
1076	ಮುಖ್ಯಮಂತ್ರಿ ಸಹಾಯವಾಣಿ

READER ENGAGEMENT INITIATIVE

ರಾಷ್ಟ್ರೀಯ ಅಂತಾರಾಜ್ಯ ಚಾಂಪಿಯನ್‌ಷಿಪ್

ಅಂಜು ಬಾಬಿ ಜಾರ್ಜ್ ಸುದೀರ್ಘ ದಾಖಲೆ ಮುರಿದ ಆನ್ಸಿ



ಭುವನೇಶ್ವರ: ಕೇರಳದ ಲಾಂಗ್ ಜಂಪ್ ಪಟು ಆನ್ಸಿ ಸೋಜನ್ ಅವರು ಶನಿವಾರ ನಡೆದ ರಾಷ್ಟ್ರೀಯ ಅಂತಾರಾಜ್ಯ ಚಾಂಪಿಯನ್‌ಷಿಪ್‌ನ ನಾಲ್ಕನೇ ದಿನದಂದು, ದಿಗ್ಗಜ ಅಥ್ಲೀಟ್ ಅಂಜು ಬಾಬಿ ಜಾರ್ಜ್ ಅವರ ಹೆಸರಿನಲ್ಲಿದ್ದ 22 ವರ್ಷಗಳ ಹಳೆಯ ರಾಷ್ಟ್ರೀಯ ದಾಖಲೆಯನ್ನು ಧೂಳೀಪಟ ಮಾಡಿದ್ದಾರೆ. 25 ವರ್ಷದ ಆನ್ಸಿ ಅವರು 6.88 ಮೀಟರ್ ದೂರ ಜಿಗಿಯುವ ಮೂಲಕ ಗಮನಾರ್ಹ ಸಾಧನೆ ಮಾಡಿದರು. ಈ ಮುಂಚೆ 2024ರ ಅಥೆನ್ಸ್ ಒಲಿಂಪಿಕ್ಸ್‌ನಲ್ಲಿ ಅಂಜು ಅವರು ನಿರ್ಮಿಸಿದ್ದ 6.83 ಮೀಟರ್‌ಗಳ ರಾಷ್ಟ್ರೀಯ ದಾಖಲೆಯನ್ನು ಆನ್ಸಿ ಉತ್ತಮಪಡಿಸಿದ್ದಾರೆ.

ಏಷ್ಯಾಡ್‌ಗೆ ಸರ್ವೇಶ್: ಹೈಜಂಪರ್ ಸರ್ವೇಶ್ ಕುಶಾರೆ 2.31 ಮೀ. ಜಿಗಿದು ರಾಷ್ಟ್ರೀಯ ದಾಖಲೆಯೊಂದಿಗೆ ಏಷ್ಯನ್ ಗೇಮ್ಸ್‌ಗೆ ಅರ್ಹತೆ ಗಳಿಸಿದ್ದಾರೆ.

ಯುಎಸ್ ಓಪನ್ ಬ್ಯಾಡ್ಮಿಂಟನ್

ಸೆಮಿಫೈನಲ್‌ಗೆ ದೇವಿಕಾ ಸಿಹಾಗ್, ರೌನಕ್ ಚೌಹಾಣ್

ಫುಲ್ಲರ್ಟನ್ (ಅಮೆರಿಕ): ಥಾಯ್ಲೆಂಡ್ ಮಾಸ್ಟರ್ಸ್ ಪ್ರಶಸ್ತಿ ವಿಜೇತೆ ದೇವಿಕಾ ಸಿಹಾಗ್ ಅವರು ಜಪಾನ್‌ನ 3ನೇ ಶ್ರೇಯಾಂಕದ ರಿಕೊ ಗುಂಜಿ ಅವರಿಗೆ ಆಘಾತ ನೀಡಿದರೆ, ರೌನಕ್ ಚೌಹಾಣ್ ತಮ್ಮ ಕನಸಿನ ಓಟವನ್ನು ಮುಂದುವರಿಸಿ ಯುಎಸ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಸೆಮಿಫೈನಲ್ ತಲುಪಿದ್ದಾರೆ.

ಮಹಿಳಾ ಸಿಂಗಲ್ಸ್ ಕ್ವಾರ್ಟರ್‌ಫೈನಲ್ ಪಂದ್ಯದ ಎರಡೂ ಗೇಮ್‌ಗಳ ನಿರ್ಣಾಯಕ ಕ್ಷಣಗಳಲ್ಲಿ ದೇವಿಕಾ ತಮ್ಮ ತಾಳ್ಮೆ ಕಾಯ್ದುಕೊಂಡು ಗುಂಜಿ ವಿರುದ್ಧ 22-20, 21-19 ಅಂತರದಲ್ಲಿ ಜಯ ಸಾಧಿಸಿದರು. ಸೆಮಿಫೈನಲ್‌ನಲ್ಲಿ ದೇವಿಕಾ, ಎರಡನೇ ಶ್ರೇಯಾಂಕದ ಲೈನ್ ಕ್ರಿಸ್ಟೋಫರ್ಸನ್ ಅವರನ್ನು ಎದುರಿಸಲಿದ್ದಾರೆ. ಮತ್ತೊಂದೆಡೆ, ಚೌಹಾಣ್ ಕೇವಲ 38 ನಿಮಿಷಗಳಲ್ಲಿ ಇಸ್ರೇಲ್‌ನ ಮಿಶಾ ಜಿಲ್ಬರ್ಮನ್ ಅವರನ್ನು 23-21, 21-11ರಿಂದ ಸೋಲಿಸಿ, ತಮ್ಮ ವೃತ್ತಿಜೀವನದಲ್ಲಿ ಮೊದಲ ಬಾರಿ ಬಿಡಬ್ಲ್ಯುಎಫ್ ವರ್ಲ್ಡ್ ಟೂರ್‌ಸೂಪರ್‌300 ಪುರುಷರ ಸಿಂಗಲ್ಸ್ ಸೆಮಿಫೈನಲ್ ಪ್ರವೇಶಿಸಿದರು. ಮತ್ತೊಂದು ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ, ಮಾಜಿ ವಿಶ್ವ ನಂ. 1 ಆಟಗಾರ ಕಿದಂಬಿ ಶ್ರೀಕಾಂತ್ ಅವರು ಚೈನೀಸ್ ತೈಪೆಯ ಲಿಯಾವೊ ಝುವೊ ಫು ಅವರನ್ನು 21-9, 12-21, 21-8 ಗೇಮ್‌ಗಳಿಂದ ಮಣಿಸಿದರು. ಸೆಮಿಫೈನಲ್‌ನಲ್ಲಿ ಚೌಹಾಣ್ ಅವರು ಚೈನೀಸ್ ತೈಪೆಯ ಎಂಟನೇ ಶ್ರೇಯಾಂಕದ ಸು ಲಿ ಯಾಂಗ್ ಅವರನ್ನು ಎದುರಿಸಲಿದ್ದರೆ, ಶ್ರೀಕಾಂತ್ ಜಪಾನ್‌ನ ನಾಲ್ಕನೇ ಶ್ರೇಯಾಂಕದ ಯುಡ್ಜೈ ಒಕಿಮೊಟೊ ವಿರುದ್ಧ ಸೆಣಸಲಿದ್ದಾರೆ.

ಡೆಂಬೆಲೆ ವೇಗದ ಹ್ಯಾಟ್ರಿಕ್

ನಾರ್ವೆ ವಿರುದ್ಧ ಫ್ರಾನ್ಸ್ ತಂಡಕ್ಕೆ 4-1 ಅಂತರದ ಜಯ

ಫಾಕ್ಸ್‌ಬರೋ: ಫಿಫಾ ವಿಶ್ವಕಪ್ ಫುಟ್ಬಾಲ್‌ನ ಶನಿವಾರದ ಪಂದ್ಯದಲ್ಲಿ ಫ್ರಾನ್ಸ್ ತಂಡವು ನಾರ್ವೆಯನ್ನು 4-1 ಗೋಲುಗಳ ಅಂತರದಿಂದ ಸೋಲಿಸಿದೆ. ಪಂದ್ಯದ ಮೊದಲಾರ್ಧದಲ್ಲಿಯೇ ಹ್ಯಾಟ್ರಿಕ್ ಗೋಲು ಗಳಿಸಿದ ಉಸ್ಮಾನೆ ಡೆಂಬೆಲೆ ತಂಡದ ಗೆಲುವಿನಲ್ಲಿ ಮುಖ್ಯ ಪಾತ್ರ ನಿರ್ವಹಿಸಿದರು. ಮೂರು ಗೋಲುಗಳನ್ನು ಗಳಿಸಿದ ಡೆಂಬೆಲೆಯವರು ಈ ವಿಶ್ವಕಪ್‌ನಲ್ಲಿ ತಮ್ಮ ಒಟ್ಟು ಗೋಲ್ ಖಾತೆಯನ್ನು 4ಕ್ಕೆ ಏರಿಸಿಕೊಂಡಿದ್ದಾರೆ. ಇದರೊಂದಿಗೆ ಅವರು ಲಯೋನೆಲ್ ಮೆಸ್ಸಿ (5) ಮತ್ತು ಕಿಲಿಯನ್ ಎಂಬಾಪೆ (4) ಅವರ ಜೊತೆಗೆ ವಿಶ್ವಕಪ್‌ನ ಗೋಲ್ಡನ್ ಬೂಟ್ (ಗರಿಷ್ಠ ಗೋಲ್ ಗಳಿಸುವವರಿಗೆ ನೀಡುವ ಪ್ರಶಸ್ತಿ) ರೇಸ್ ಪ್ರವೇಶಿಸಿದ್ದಾರೆ.

ಡೆಂಬೆಲೆ 7, 20 ಮತ್ತು 32ನೇ ನಿಮಿಷಗಳಲ್ಲಿ ಗೋಲು ಗಳಿಸಿದರು. 1994ರ ನಂತರ ವಿಶ್ವಕಪ್ ಪಂದ್ಯದ ಮೊದಲಾರ್ಧದಲ್ಲೇ ದಾಖಲಾದ ಮೊದಲ ಹ್ಯಾಟ್ರಿಕ್ ಇದಾಗಿದೆ. ''ಇದು ಒಂದು ಅನನ್ಯ ಕ್ಷಣ, ಆದರೆ, ಗುಂಪು ಹಂತದಲ್ಲಿ ಅಗ್ರಸ್ಥಾನ ಪಡೆಯುವುದು ಮತ್ತು ಮುಂದಿನ ರೌಂಡ್ ಆಫ್ 32 ಪಂದ್ಯದ ಮೇಲೆ ಗಮನ ಹರಿಸುವುದು ನಮಗೆ ಮುಖ್ಯವಾಗಿದೆ'' ಎಂದು ಡೆಂಬೆಲೆ ಹೇಳಿದರು. ಫ್ರಾನ್ಸ್ ಮತ್ತು ನಾರ್ವೆ ಎರಡೂ ತಂಡಗಳು ಈಗಾಗಲೇ ನಾಕೌಟ್ ಹಂತಕ್ಕೆ ಅರ್ಹತೆ ಪಡೆದಿದ್ದವು. ದ್ವಿತೀಯಾರ್ಧದ ಇಂಜುರಿ ಟೈಮ್‌ನಲ್ಲಿ ಡೆಸಿರ್‌ಡೌ ಫ್ರಾನ್ಸ್ ಪರ ಕೊನೆಯ ಗೋಲು ಗಳಿಸಿದರು.

ಸ್ಟಾರ್ ಆಟಗಾರ ಎರ್ಲಿಂಗ್ ಹಾಲೆಂಡ್ ಸೇರಿದಂತೆ ತಮ್ಮ 10 ಪ್ರಮುಖ ಆಟಗಾರರಿಗೆ ವಿಶ್ರಾಂತಿ ನೀಡಿದ್ದು ನಾರ್ವೆ ತಂಡಕ್ಕೆ ದುಬಾರಿಯಾಗಿ ಪರಿಣಮಿಸಿತು. ನಾರ್ವೆ ಪರ ಥೆಲೋ ಆಸ್‌ಗಾರ್ಡ್ ಏಕೈಕ ಗೋಲು ಗಳಿಸಿದರು. ಪಂದ್ಯದ 49ನೇ ನಿಮಿಷದಲ್ಲಿ ನಾರ್ವೆಗೆ ಪೆನಾಲ್ಟಿ ಅವಕಾಶ ಸಿಕ್ಕಿತಾದರೂ, ಜೋರ್ಗನ್ ಲಾರ್ಸೆನ್ ಅವರ ಶಾಟ್ ಅನ್ನು ಫ್ರಾನ್ಸ್ ಗೋಲ್‌ಕೀಪರ್ ಮೈಕ್ ಮೈಗ್ನಾನ್ ತಡೆದರು.

ಟೂರ್ನಿಯುದ್ದಕ್ಕೂ ಅದ್ಭುತ ಪ್ರದರ್ಶನ ನೀಡಿರುವ ಫ್ರಾನ್ಸ್‌ನ ಎಂಬಾಪೆ ಈ ಪಂದ್ಯದಲ್ಲಿ ಗೋಲ್ ಗಳಿಸದೆ ಇದ್ದದ್ದು ಅಭಿಮಾನಿಗಳಿಗೆ ನಿರಾಸೆ ತಂದಿತು. ಅವರು 17 ವಿಶ್ವಕಪ್ ಪಂದ್ಯಗಳಲ್ಲಿ ದಾಖಲೆಯ 16 ಗೋಲುಗಳನ್ನು ಗಳಿಸಿದ್ದಾರೆ.

ಅತಿ ವೇಗದ ಹ್ಯಾಟ್ರಿಕ್

ಪಂದ್ಯ ಆರಂಭವಾದ ಸಮಯದ ಆಧಾರದಲ್ಲಿ ಅತ್ಯಂತ ವೇಗದ ಹ್ಯಾಟ್ರಿಕ್ 1954ರ ಸ್ವಿಟ್ಜರ್ಲೆಂಡ್ ಟೂರ್ನಮೆಂಟ್‌ನಲ್ಲಿ ನಡೆದಿತ್ತು. ಆಸ್ಟ್ರಿಯಾದ ಸ್ಟ್ರೈಕರ್ ಎರಿಚ್ ಪ್ರಾಬ್‌ಸ್ಟ್, ಚೆಕೊಸ್ಲೊವಾಕಿಯಾ ವಿರುದ್ಧ ಪಂದ್ಯ ಆರಂಭವಾದ 24 ನಿಮಿಷಗಳಲ್ಲಿ ಮೂರು ಗೋಲುಗಳನ್ನು ಗಳಿಸಿದ್ದರು. ಶನಿವಾರದ ಪಂದ್ಯದ ಬಳಿಕ ವೇಗದ ಹ್ಯಾಟ್ರಿಕ್ ಸರದಾರರ ಪಟ್ಟಿಗೆ ಸೇರ್ಪಡೆಗೊಂಡಿರುವ ಡೆಂಬೆಲೆ ಎರಡನೇ ಸ್ಥಾನ ಗಳಿಸಿದ್ದಾರೆ.

ಪಂದ್ಯಗಳು

ದಕ್ಷಿಣ ಆಫ್ರಿಕಾ vs ಕೆನಡಾ
ಭಾನುವಾರ
ಮಧ್ಯರಾತ್ರಿ - 12.30
ಲಾಸ್ ಏಂಜಲೀಸ್

ಬ್ರೆಜಿಲ್ vs ಜಪಾನ್
ಸೋಮವಾರ ರಾತ್ರಿ
10.30
ಹ್ಯೂಸ್ಟನ್

ನೇರ ಪ್ರಸಾರ: ಯುನೈಟ್ 8 ಸ್ಪೋರ್ಟ್ಸ್ ನೆಟ್‌ವರ್ಕ್

ಉರುಗ್ವೆ ವಿರುದ್ಧ ಸ್ಪೇನ್‌ಗೆ ಗೆಲುವು

ಶನಿವಾರ ನಡೆದ ಇತರೆ ಪಂದ್ಯಗಳಲ್ಲಿ ಉರುಗ್ವೆ ವಿರುದ್ಧ 1-0 ಅಂತರದ ಕಠಿಣ ಹೋರಾಟದ ಗೆಲುವು ಸಾಧಿಸಿದ ಸ್ಪೇನ್, ಗ್ರೂಪ್ 'ಹೆಚ್'ನಲ್ಲಿ ಅಗ್ರಸ್ಥಾನ ಪಡೆದು 'ರೌಂಡ್ ಆಫ್ 32' ಹಂತಕ್ಕೆ ಲಗ್ಗೆ ಇಟ್ಟಿದೆ. ಇತ್ತ ಸೌದಿ ಅರೇಬಿಯಾ ವಿರುದ್ಧದ ಪಂದ್ಯವನ್ನು ಗೋಲು ರಹಿತ ಡ್ರಾ ಮಾಡಿಕೊಂಡ ಕೇಪ್ ವರ್ಡೆ ತಂಡವು ಮುಂದಿನ ಹಂತಕ್ಕೆ ಮುನ್ನಡೆಯುವ ಮೂಲಕ ಟೂರ್ನಿಯ ಅತ್ಯಂತ ದೊಡ್ಡ ಅಚ್ಚರಿಯ ಫಲಿತಾಂಶವನ್ನು ದಾಖಲಿಸಿದೆ.

ಗ್ರೂಪ್ 'ಜಿ'ಯಲ್ಲಿ ನ್ಯೂಜಿಲೆಂಡ್ ತಂಡವನ್ನು 5-1 ಗೋಲುಗಳ ಬೃಹತ್ ಅಂತರದಿಂದ ಸೋಲಿಸಿದ ಬೆಲ್ಜಿಯಂ, ಈ ಟೂರ್ನಿಯಲ್ಲೇ ತನ್ನ ಅತ್ಯುತ್ತಮ ಪ್ರದರ್ಶನ ನೀಡಿ ಪ್ರಥಮ ಸ್ಥಾನವನ್ನು ತನ್ನದಾಗಿಸಿಕೊಂಡಿತು. ಭರ್ಜರಿ ಆಟದ ಮೂಲಕ ಬೆಲ್ಜಿಯಂ ತಂಡ ಪ್ರಶಸ್ತಿ ಗೆಲ್ಲುವ ಫೇವರೆಟ್ ತಂಡಗಳಲ್ಲಿ ಸಂಚಲನ ಮೂಡಿಸಿದೆ. ಮತ್ತೊಂದೆಡೆ, ಈಜಿಪ್ಟ್ ಮತ್ತು ಇರಾನ್ ನಡುವಿನ ತೀವ್ರ ಹಣಾಹಣಿಯಿಂದ ಕೂಡಿದ್ದ ಪಂದ್ಯವು 1-1 ಗೋಲುಗಳಿಂದ ಡ್ರಾದಲ್ಲಿ ಕೊನೆಗೊಂಡಿತು. ಇರಾಕ್ ವಿರುದ್ಧ 5-0 ಗೋಲುಗಳ ಭರ್ಜರಿ ಜಯ ಸಾಧಿಸಿದ ಸೆನೆಗಲ್, ದಿನದ ಅತ್ಯಂತ ದೊಡ್ಡ ಗೆಲುವಿನೊಂದಿಗೆ ತನ್ನ ಕ್ವಾಲಿಫಿಕೇಶನ್ ಆಸೆಯನ್ನು ಜೀವಂತವಾಗಿರಿಸಿಕೊಂಡಿದೆ.

ಈಗ ಎಲ್ಲರ ಗಮನವು ಭಾನುವಾರದ ಗ್ರೂಪ್ ಹಂತದ ಅಂತಿಮ ಪಂದ್ಯಗಳ ಕಡೆಗೆ ನೆಟ್ಟಿದೆ. ಇಂದು ಇಂಗ್ಲೆಂಡ್-ಪನಾಮ, ಕ್ರೊಯೇಷಿಯಾ-ಘಾನಾ, ಪೋರ್ಚುಗಲ್-ಕೊಲಂಬಿಯಾ, ಕಾಂಗೋ-ಉಜ್ಬೇಕಿಸ್ತಾನ್, ಅರ್ಜೆಂಟೀನಾ-ಜೋರ್ಡಾನ್ ಮತ್ತು ಆಸ್ಟ್ರಿಯಾ-ಅಲ್ಜೀರಿಯಾ ತಂಡಗಳು ಮುಖಾಮುಖಿಯಾಗಲಿವೆ. ಈ ಪಂದ್ಯಗಳು ನಾಕೌಟ್ ಹಂತದ ಉಳಿದ ಸ್ಥಾನಗಳನ್ನು ಮತ್ತು 'ರೌಂಡ್ ಆಫ್ 32' ತಂಡಗಳ ಅಂತಿಮ ಲೈನಪ್ ಅನ್ನು ನಿರ್ಧರಿಸಲಿವೆ.

ಸೆಮೀಸ್ ತಲುಪಲು ಭಾರತದ ಕಡೆಯ ಹೋರಾಟ

ಮಹಿಳಾ ಟಿ20 ವಿಶ್ವಕಪ್

ಇಂದು ಆಸ್ಟ್ರೇಲಿಯಾ ವಿರುದ್ಧ ಭಾರತೀಯ ವನಿತೆಯರಿಗೆ ಮಾಡು ಇಲ್ಲವೇ ಮಡಿ ಪಂದ್ಯ

ಲಂಡನ್: ಮಹಿಳಾ ಟಿ20 ವಿಶ್ವಕಪ್‌ನ ಸೆಮಿಫೈನಲ್ ಸ್ಥಾನಕ್ಕಾಗಿ ಭಾರತ ತಂಡವು ಭಾನುವಾರ ನಡೆಯಲಿರುವ ತನ್ನ ಕೊನೆಯ ಗ್ರೂಪ್ 'ಎ' ಪಂದ್ಯದಲ್ಲಿ ಆರು ಬಾರಿಯ ಚಾಂಪಿಯನ್ ಆಸ್ಟ್ರೇಲಿಯಾವನ್ನು ಎದುರಿಸಲಿದೆ.

ಟೂರ್ನಿಯುದ್ದಕ್ಕೂ ಭಾರತದ ಮಧ್ಯಮ ಕ್ರಮಾಂಕದ ಬ್ಯಾಟಿಂಗ್ ವೈಫಲ್ಯ ಮತ್ತು ಕಳಪೆ ಫೀಲ್ಡಿಂಗ್ ದೊಡ್ಡ ಸಮಸ್ಯೆಯಾಗಿದೆ.

ಕಳೆದ ಎರಡು ಪಂದ್ಯಗಳಲ್ಲಿ ಭಾರತ ತಂಡವು ಒಟ್ಟು ಆರು ಕ್ಯಾಚ್‌ಗಳನ್ನು ಕೈಚೆಲ್ಲಿದೆ. ರಾಧಾ ಯಾದವ್ ಮೂರು ಕ್ಯಾಚ್‌ಗಳನ್ನು ಕೈಬಿಟ್ಟಿರುವುದು ಇದಕ್ಕೆ ಉದಾಹರಣೆ. ಆರಂಭಿಕರಾದ ಸ್ಮೃತಿ ಮಂಧಾನ ಮತ್ತು ಶೆಫಾಲಿ ವರ್ಮಾ ಫಾರ್ಮ್‌ನಲ್ಲಿದ್ದರೂ, ಹರ್ಮನ್‌ಪ್ರೀತ್ ಕೌರ್ ಮತ್ತು ಜೆಮಿಮಾ ರೋಡ್ರಿಗಸ್ ಅವರಿಂದ ನಿರೀಕ್ಷಿತ ಪ್ರದರ್ಶನ ಬಂದಿಲ್ಲ. ಆದಾಗ್ಯೂ, ಏಕದಿನ ವಿಶ್ವಕಪ್ ಸೆಮಿಫೈನಲ್‌ನಲ್ಲಿ ಆಸ್ಟ್ರೇಲಿಯಾ ವಿರುದ್ಧ ಗಳಿಸಿದ್ದ ಗೆಲುವು ಭಾರತಕ್ಕೆ ಇಲ್ಲಿ ಸ್ಫೂರ್ತಿಯಾಗಬಲ್ಲದು. ಬೌಲಿಂಗ್‌ನಲ್ಲಿ 12 ವಿಕೆಟ್ ಪಡೆದಿರುವ ಎಡಗೈ ಸ್ಪಿನ್ನರ್ ಶ್ರೀ ಚರಣಿ ಮೇಲೆ ಭಾರತ ಹೆಚ್ಚು ಅವಲಂಬಿತವಾಗಿದೆ.

ಮತ್ತೊಂದೆಡೆ, ಈಗಾಗಲೇ ಸೆಮಿಫೈನಲ್ಸ್ ಪ್ರವೇಶಿಸಿರುವ ಬಲಿಷ್ಠ ಆಸ್ಟ್ರೇಲಿಯಾಗೆ ಈ ಪಂದ್ಯ ಔಪಚಾರಿಕ ಪಂದ್ಯವಾಗಿದೆ. ತಂಡಕ್ಕೆ ಗಾಯದಿಂದ ಚೇತರಿಸಿಕೊಂಡಿರುವ ಫೀಬಿ ಲಿಚ್‌ಫೀಲ್ಡ್ ಅವರ ಪುನರಾಗಮನವು ಮತ್ತಷ್ಟು ಬಲ ನೀಡಲಿದೆ.

ಪಂದ್ಯ: ಲಾರ್ಡ್ಸ್ ಕ್ರಿಕೆಟ್ ಮೈದಾನ, ಲಂಡನ್
ಸಮಯ: ರಾತ್ರಿ 7
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಹರ್ಮನ್‌ಪ್ರೀತ್ ಕೌರ್

ತಂಡಗಳು

ಭಾರತ: ಹರ್ಮನ್‌ಪ್ರೀತ್ ಕೌರ್ (ನಾಯಕಿ), ಸ್ಮೃತಿ ಮಂಧಾನ, ಶೆಫಾಲಿ ವರ್ಮಾ, ಯಾಸ್ತಿಕಾ ಭಾಟಿಯಾ, ಜೆಮಿಮಾ ರೋಡ್ರಿಗ್ಸ್, ರಿಚಾ ಘೋಷ್, ದೀಪ್ತಿ ಶರ್ಮಾ, ರಾಧಾ ಯಾದವ್, ಶ್ರೀಚರಣಿ, ರೇಣುಕಾ ಸಿಂಗ್ ಠಾಕೂರ್, ನಂದಿನಿ ಶರ್ಮಾ, ಅರುಂಧತಿ ರೆಡ್ಡಿ, ಕ್ರಾಂತಿ ಗೌಡ್, ಭಾರತಿ ಫುಲ್ಮಾಲಿ ಮತ್ತು ಪ್ರೇಮಾ ರಾವತ್.

ಆಸ್ಟ್ರೇಲಿಯಾ: ಸೋಫಿ ಮೊಲಿನೆಕ್ಸ್ (ನಾಯಕಿ), ಬೆತ್ ಮೂನಿ, ಜಾರ್ಜಿಯಾ ವೋಲ್, ಎಲ್ಲಿಸ್ ಪೆರ್ರಿ, ಆಶ್ಲಿ ಗಾರ್ಡ್ನರ್, ಜಾರ್ಜಿಯಾ ವೇರ್‌ಹ್ಯಾಮ್, ಅನಾಬೆಲ್ ಸದರ್ಲೆಂಡ್, ನಿಕೋಲಾ ಕ್ಯಾರಿ, ಅಲಾನಾ ಕಿಂಗ್, ಕಿಮ್ ಗಾರ್ತ್, ಲೂಸಿ ಹ್ಯಾಮಿಲ್ಟನ್, ಫೀಬಿ ಲಿಚ್‌ಫೀಲ್ಡ್, ಮೇಗನ್ ಶಟ್, ಗ್ರೇಸ್ ಹ್ಯಾರಿಸ್ ಮತ್ತು ತಹ್ಲಿಯಾ ಮೆಕ್‌ಗ್ರಾತ್.

ಸೆಮೀಸ್ ಸ್ಥಾನಕ್ಕಾಗಿ ದ.ಆಫ್ರಿಕಾ, ಭಾರತ ಮಧ್ಯೆ ಪೈಪೋಟಿ

ಭಾರತ ಮತ್ತು ದಕ್ಷಿಣ ಆಫ್ರಿಕಾ ಎರಡೂ ತಂಡಗಳು ಇದುವರೆಗೂ 6 ಅಂಕಗಳನ್ನು ಪಡೆದಿವೆ. ಇದರಿಂದಾಗಿ ಸೆಮೀಸ್ ಸ್ಥಾನಕ್ಕಾಗಿ ಎರಡೂ ಬಲಿಷ್ಠ ತಂಡಗಳ ಮಧ್ಯೆ ತೀವ್ರ ಪೈಪೋಟಿ ಏರ್ಪಟ್ಟಿದೆ. ಆಸ್ಟ್ರೇಲಿಯಾ ವಿರುದ್ಧದ ಪಂದ್ಯವನ್ನು ಭಾರತ ಗೆದ್ದರೂ ಸೆಮೀಸ್ ಖಚಿತವಿಲ್ಲ. ಆದರೆ, ದಕ್ಷಿಣ ಆಫ್ರಿಕಾ ತಂಡಕ್ಕಿಂತ ಅಧಿಕ ನೆಟ್ ರನ್‌ರೇಟ್ ಹೊಂದಿರುವುದು ಭಾರತಕ್ಕೆ ಪ್ಲಸ್ ಪಾಯಿಂಟಾಗಿದೆ. ಭಾರತ ಸೆಮೀಸ್ ಪ್ರವೇಶಿಸಬೇಕೆಂದರೆ ದಕ್ಷಿಣ ಆಫ್ರಿಕಾ, ತನ್ನ ಮುಂದಿನ ಪಂದ್ಯದಲ್ಲಿ ಬಾಂಗ್ಲಾದೇಶ ವಿರುದ್ಧ ಸೋಲಬೇಕು. ಇಲ್ಲವೇ ದಕ್ಷಿಣ ಆಫ್ರಿಕಾ ಗೆಲುವು ಸಾಧಿಸಿದರೂ, 130 ರನ್‌ಗಳಿಗೂ ಕಡಿಮೆ ಅಂತರದಿಂದ ಗೆಲ್ಲಬೇಕು.

ಸರಣಿ ಸಮಬಲಕ್ಕೆ ಭಾರತದ ಹೋರಾಟ

ಐರ್ಲೆಂಡ್ ಟಿ20 ಸರಣಿ: ಇಂದು ಕೊನೆಯ ಪಂದ್ಯ

ಬೆಲ್‌ಫಾಸ್ಟ್ (ಐರ್ಲೆಂಡ್): ಭಾರತ ತಂಡವು ಭಾನುವಾರ ಐರ್ಲೆಂಡ್ ವಿರುದ್ಧ ನಡೆಯಲಿರುವ ಎರಡನೇ ಹಾಗೂ ಅಂತಿಮ ಪಂದ್ಯದಲ್ಲಿ ಸರಣಿಯನ್ನು ಸಮಬಲಗೊಳಿಸುವ ಉದ್ದೇಶದಿಂದ ಕಣಕ್ಕಿಳಿಯಲಿದೆ. ಮೊದಲ ಟಿ20 ಪಂದ್ಯದ ಆಘಾತಕಾರಿ ಸೋಲಿನ ನಂತರ, ಶ್ರೇಯಸ್ ಅಯ್ಯರ್ ನೇತೃತ್ವದ ಭಾರತ ಪಡೆ ಬಲಿಷ್ಠ ಬ್ಯಾಟಿಂಗ್ ಲೈನಪ್ ತಪ್ಪುಗಳನ್ನು ತಿದ್ದಿಕೊಳ್ಳುವ ಒತ್ತಡದಲ್ಲಿದೆ.

ವಿಶ್ವಕಪ್ ಗೆಲುವಿನ ಬಳಿಕ ಆಡಿದ ಮೊದಲ ಪಂದ್ಯದಲ್ಲೇ ಐರ್ಲೆಂಡ್ ನೀಡಿದ 183 ರನ್‌ಗಳ ಗುರಿಯನ್ನು ಬೆನ್ನಟ್ಟಲು ವಿಫಲವಾದ ಭಾರತ 148 ರನ್‌ಗಳಿಗೆ ಆಲೌಟ್ ಆಗಿ, ಇತಿಹಾಸದಲ್ಲೇ ಮೊದಲ ಬಾರಿಗೆ ಐರ್ಲೆಂಡ್ ವಿರುದ್ಧ ಸೋಲನ್ನೊಪ್ಪಿಕೊಂಡಿತು. ಇದು ಭಾರತದ ನೂತನ ಟಿ20 ನಾಯಕ ಅಯ್ಯರ್ ಅವರ ಮೊದಲ ಸರಣಿಯಾಗಿದೆ. ಭಾರತದ ಪ್ರಮುಖ ಬ್ಯಾಟರ್‌ಗಳಾದ ಸಂಜು ಸ್ಯಾಮ್ಸನ್, ಇಶಾನ್ ಕಿಶನ್ ಮತ್ತು ಶ್ರೇಯಸ್ ಅಯ್ಯರ್ ಮೊದಲ ಪಂದ್ಯದಲ್ಲಿ ಒಂದಂಕಿ ಮೊತ್ತಕ್ಕೆ ಔಟ್ ಆಗಿ ನಿರಾಶೆ ಮೂಡಿಸಿದರು. ಅಭಿಷೇಕ್ ಶರ್ಮಾ ಬಿರುಸಿನ ಆಟವಾಡಿದರೂ ಉಳಿದವರಿಂದ ಬೆಂಬಲ ಸಿಗಲಿಲ್ಲ. ಐರ್ಲೆಂಡ್‌ನ ಹೊಸ ವೇಗಿಗಳಾದ ಜೈ ಮುಂಡ್ರಾ ಮತ್ತು ಮ್ಯಾಟ್ ಹೊಲಾರ್ಡ್ ಭಾರತದ ಬ್ಯಾಟಿಂಗ್ ಬೆನ್ನೆಲುಬು ಮುರಿದರು. ಅವರನ್ನು ಎದುರಿಸಲು ಭಾರತ ತಂಡ ತಂತ್ರಗಾರಿಕೆ ರೂಪಿಸಬೇಕಿದೆ

ವೈಭವ್ ಮೈದಾನಕ್ಕಿಳಿಯುವ ಬಗ್ಗೆ ಗೊಂದಲ ಮುಂದುವರಿದಿದೆ.

ಬೌಲಿಂಗ್‌ನಲ್ಲಿ ಹರ್ಷಿತ್ ರಾಣಾ (3/24), ಅರ್ಶ್‌ದೀಪ್ ಹಾಗೂ ಅಕ್ಷರ್ ಪಟೇಲ್ ಉತ್ತಮ ಪ್ರದರ್ಶನ ನೀಡಿದರೂ, ವಾಷಿಂಗ್ಟನ್ ಸುಂದರ್ ಮತ್ತು ಪ್ರಸಿದ್ಧ್ ಕೃಷ್ಣ ಡೆತ್ ಓವರ್‌ಗಳಲ್ಲಿ ದುಬಾರಿಯಾದದ್ದು ಸೋಲಿಗೆ ಪ್ರಮುಖ ಕಾರಣವಾಯಿತು. ಐರ್ಲೆಂಡ್ ಪರ ನಾಯಕ ಲೋರ್ಕನ್ ಟಕರ್ ಅರ್ಧಶತಕ ಬಾರಿಸಿ ಮಿಂಚಿದ್ದರು. ಯುವ ಆಟಗಾರ ವೈಭವ್ ಸೂರ್ಯವಂಶಿ ಈ ಪಂದ್ಯದಲ್ಲೂ ಮೈದಾನಕ್ಕಿಳಿಯುವುದು ಅನುಮಾನ ಎಂದು ಮೂಲಗಳಿಂದ ತಿಳಿದುಬಂದಿದೆ. ಜು.1ರಿಂದ ಇಂಗ್ಲೆಂಡ್ ವಿರುದ್ಧದ ಟಿ20 ಸರಣಿ ಆರಂಭವಾಗಲಿದ್ದು, ಅದಕ್ಕೂ ಮೊದಲು ಭಾರತ ಭಾನುವಾರದ ಪಂದ್ಯ ಗೆದ್ದು ಆತ್ಮವಿಶ್ವಾಸ ಮರಳಿ ಪಡೆಯಬೇಕಿದೆ.

ಪಂದ್ಯ: ಸ್ಟಾರ್ಮಾಂಟ್ ಕ್ರೀಡಾಂಗಣ, ಬೆಲ್‌ಫಾಸ್ಟ್
ಸಮಯ: ಸಂಜೆ 6
ನೇರಪ್ರಸಾರ: ಸೋನಿ ಲಿವ್

ಯೋಧಾಸ್ ಮಣಿಸಿದ ಬ್ಲಾಸ್ಟರ್ಸ್

ಮೊದಲ ಪಂದ್ಯದಲ್ಲಿ ರೋಹನ್, ಪ್ರವೀಣ್ ಮಿಂಚು

■ ಕಲ್ಮೇಶ ಪಟ್ಟಣದವರ ಹುಬ್ಬಳ್ಳಿ
kalmeshp2214@gmail.com

ಇಂಪ್ಯಾಕ್ಟ್ ಪ್ಲೇಯರ್ ರೋಹನ್ ಪಾಟೀಲ್ (62), ಪ್ರವೀಣ್ ದುಬೆ (39*) ಆಕರ್ಷಕ ಬ್ಯಾಟಿಂಗ್ ಹಾಗೂ ಸಂಘಟಿತ ಬೌಲಿಂಗ್ ನೆರವಿನೊಂದಿಗೆ ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್ ತಂಡವು ಶಿವಮೊಗ್ಗ ಯೋಧಾಸ್ ತಂಡವನ್ನು ಪರಾಭವಗೊಳಿಸಿ ಅಂಕಪಟ್ಟಿಯಲ್ಲಿ ತನ್ನ ಅಗ್ರಸ್ಥಾನ ಭದ್ರಪಡಿಸಿಕೊಂಡಿದೆ.



ಇಲ್ಲಿನ ರಾಜನಗರದ ಕೆಎಸ್‌ಸಿಎ ಮೈದಾನ'ದ'ಲ್ಲಿ ಶನಿವಾರ ನಡೆದ ಮಹಾರಾಜ ಟ್ರೋಫಿ ಟಿ20 ಪಂದ್ಯದಲ್ಲಿ ಬ್ಲಾಸ್ಟರ್ಸ್, 7 ವಿಕೆಟ್‌ಗಳ ಭರ್ಜರಿ ಜಯ ದಾಖಲಿಸಿತು. ಟಾಸ್ ಗೆದ್ದು ಮೊದಲು ಬ್ಯಾಟ್ ಮಾಡಿದ ಶಿವಮೊಗ್ಗ ಯೋಧಾಸ್, ನಿಗದಿತ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 173 ರನ್ ಪೇರಿಸಿತು. ಗುರಿ ಬೆನ್ನಟ್ಟಿದ ಕೆಬಿಬಿ ತಂಡ, 19 ಓವರ್‌ಗೆ 3 ವಿಕೆಟ್ ನಷ್ಟಕ್ಕೆ 177 ದಾಖಲಿಸಿ ಗೆಲುವಿನ ನಗೆ ಬೀರಿತು. ಚೇತೋಹಾರಿ ಪ್ರದರ್ಶನ ನೀಡುವ ಕಾತರದಲ್ಲಿದ್ದ ಶಿವಮೊಗ್ಗ ಯೋಧಾಸ್ ತಂಡ ಯೋಜನೆ ಹುಬ್ಬಳ್ಳಿ ಮೈದಾನದಲ್ಲಿಯೂ ಸಫಲಗೊಳ್ಳಲಿಲ್ಲ.

ಶಿವಮೊಗ್ಗದ ತಂಡದ ಆರಂಭಿಕ ಬ್ಯಾಟರ್ ಲವ್ನಿತ್ ಸಿಸೋಡಿಯಾ (51) ಅವರ ಅರ್ಧಶತಕದ ನೆರವಿನಿಂದ ಸ್ಪರ್ಧಾತ್ಮಕ ಮೊತ್ತ ಕಲೆಹಾಕಿತು. ಪ್ರವೀಣ್ ದುಬೆ ಬೌಲಿಂಗ್‌ನಲ್ಲಿ ಬೌಂಡರಿಯಲ್ಲಿ ಶ್ರೀವತ್ಸಗೆ ಕ್ಯಾಚ್ ನೀಡಿ ಔಟಾದರು. ನಂತರದಲ್ಲಿ ಬಂದ ಅನೀಶ್ ಕೆ.ವಿ.(29), ಆರ್. ಸ್ಮರಣ (36*) ಮತ್ತಿತರ ಬ್ಯಾಟರ್‌ಗಳಿಂದ ನಿರೀಕ್ಷಿತ ಪ್ರದರ್ಶನ ಹೊಮ್ಮಲಿಲ್ಲ. ಇದರಿಂದ ವಿಕೆಟ್ ಕಾಯ್ದುಕೊಂಡಿದ್ದರೂ, ನಿರೀಕ್ಷಿತ ಮೊತ್ತ ಕಲೆ ಹಾಕುವಲ್ಲಿ ಎಸ್‌ವೈ ತಂಡ ವಿಫಲಗೊಂಡಿತ್ತು. ಈ ಮಧ್ಯೆ ರೋಹನ ರಾಜು 3 ವಿಕೆಟ್ ಪಡೆದು ಮಿಂಚಿದರು.

ಇತ್ತ ಗುರಿ ಬೆನ್ನಟ್ಟಿದ್ದ ಕೆಬಿಬಿ ಆರಂಭಿಕರಾದ ರೋಹನ್ ಪಾಟೀಲ್ 2 ಸಿಕ್ಸರ್, 5 ಫೋರ್ ನೆರವಿನೊಂದಿಗೆ ಅರ್ಧಶತಕ ದಾಖಲಿಸಿ ಅತ್ಯುತ್ತಮ ಇನಿಂಗ್ಸ್ ಕಟ್ಟಿ ಗೆಲುವಿನ ದಾರಿ ಸುಗಮಗೊಳಿಸಿದರು. ರೋಹನ್ ಪಾಟೀಲ್ ರಿವರ್ಸ್ ಸ್ವೀಪ್ ಪ್ರಯತ್ನದಲ್ಲಿ ಎಲ್‌ಬಿಡಬ್ಲ್ಯು ಆದರು. ಕೊನೆಯಲ್ಲಿ ಪ್ರವೀಣ್ ದುಬೆ 3 ಸಿಕ್ಸರ್, 3 ಫೋರ್ (39*) ಹಾಗೂ ನಾಯಕ ಶುಭಾಂಗ ಹೆಗಡೆ (11*) ಜವಾಬ್ದಾರಿಯುತ ಬ್ಯಾಟಿಂಗ್ ಪ್ರದರ್ಶನದೊಂದಿಗೆ ಒಂದು ಓವರ್ ಬಾಕಿ ಇರುವಂತೆಯೇ 7 ವಿಕೆಟ್‌ಗಳ ಗೆಲುವು ದಾಖಲಿಸಿತು.

ಬ್ಲಾಸ್ಟರ್ಸ್ ತಂಡದ ರೋಹನ್ ರಾಜು 3 ವಿಕೆಟ್ ಪಡೆದು ಸಂಭ್ರಮಿಸಿದರು.

ಸಂಕ್ಷಿಪ್ತ ಸ್ಕೋರ್

ಶಿವಮೊಗ್ಗ ಯೋಧಾಸ್ : 20 ಓವರ್‌ಗಳಲ್ಲಿ 6 ವಿಕೆಟ್‌ಗೆ 173 (ಲವ್ನಿತ್ ಸಿಸೋಡಿಯಾ 51, ಸ್ಮರಣ ಆರ್.(36*) ಅನೀಶ ಕೆ.ವಿ.(29); ರೋಹನ್ ರಾಜು 21ಕ್ಕೆ 3)

ಕಲ್ಯಾಣಿ ಬೆಂಗಳೂರು ಬ್ಲ್ಯಾಸ್ಟರ್ಸ್: 19 ಓವರ್‌ಗಳಲ್ಲಿ 3 ವಿಕೆಟ್‌ಗೆ 177 (ರೋಹನ್ ಪಾಟೀಲ್ 62, ಪ್ರವೀಣ್ ದುಬೆ 39*; ನವೀನ್ ಎಂ.ಜಿ. 1 ವಿಕೆಟ್, ಯಶವರ್ಧನ 1 ವಿಕೆಟ್).

ಕ್ವಾರ್ಟರ್‌ಫೈನಲ್‌ಗೆ ಭಾರತ ತಂಡ

ಟೋಕಿಯೊ: ಬ್ಯಾಡ್ಮಿಂಟನ್ ಏಷ್ಯಾ ಜೂನಿಯರ್ ಮಿಶ್ರ ಟೀಮ್ ಚಾಂಪಿಯನ್‌ಷಿಪ್‌ನ ತನ್ನ ಮೊದಲ ಗ್ರೂಪ್ 'ಸಿ' ಪಂದ್ಯದಲ್ಲಿ ಭಾರತ ತಂಡ ಕಜಕಸ್ತಾನ ತಂಡದ ವಿರುದ್ಧ 2-0 (55-31, 55-21) ಅಂತರದ ಭರ್ಜರಿ ಜಯ ಸಾಧಿಸುವ ಮೂಲಕ ಕ್ವಾರ್ಟರ್ ಫೈನಲ್‌ನಲ್ಲಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡಿದೆ. ಶನಿವಾರ ಇಲ್ಲಿನ ಯಾತ್ಸುಶಿರೋದಲ್ಲಿ ಈ ಪಂದ್ಯ ನಡೆಯಿತು.

ಮೊದಲಿಗೆ ಬಾಲಕಿಯರ ಡಬಲ್ಸ್‌ನಲ್ಲಿ ಕಣಕ್ಕಿಳಿದ ದುರ್ಗಾ ಈಶಾ ಕಂದ್ರಪು ಮತ್ತು ಕೀರ್ತಿ ಮಂಚಾಲ ಜೋಡಿಯು ಅಲೀಸಾ ಕುಲೇಶೋವಾ ಮತ್ತು ಡಯಾನಾ ನಮೆನೋವಾ ವಿರುದ್ಧ 11-5 ಅಂತರದ ಗೆಲುವು ಸಾಧಿಸಿ ಭಾರತಕ್ಕೆ ಭರ್ಜರಿ ಆರಂಭ ತಂದುಕೊಟ್ಟಿತು. ಅದರ ಬೆನ್ನಲ್ಲೇ ಪುನೀತ್ ಸುರೇಶ್ ಮತ್ತು ದೀಪ್ತಿ ರಾಜ್ ಆದಿತಿ ಜೋಡಿಯು ಮುಸ್ತಫಾ ಮಲಿಕ್ಜಾನ್ ಮತ್ತು ಕುಲೇಶೋವಾ ವಿರುದ್ಧ ತೀವ್ರ ಪೈಪೋಟಿ ಎದುರಿಸಬೇಕಾಯಿತು. ಹಾಗಿದ್ದರೂ, ಈ ಭಾರತೀಯ ಜೋಡಿ 11-10 ರಲ್ಲಿ ಜಯಗಳಿಸಿ ಒಟ್ಟು ಸ್ಕೋರ್ ಅನ್ನು 22-15 ಕ್ಕೆ ಏರಿಸಿತು. ನಂತರದ ಮೂರೂ ವಿಭಾಗಗಳಲ್ಲಿ ಭಾರತೀಯರು ಸಂಪೂರ್ಣ ಪ್ರಾಬಲ್ಯ ಸಾಧಿಸಿ ಮೊದಲ ಸೆಟ್ ಅನ್ನು ತಮ್ಮದಾಗಿಸಿಕೊಂಡರು. ಇನ್ನು ಎರಡನೇ ಸೆಟ್ ಭಾರತಕ್ಕೆ ಅತ್ಯಂತ ಸುಲಭವಾಗಿ ಒಲಿಯಿತು.

ಹಾರ್ಸ್ ಪವರ್

ಬೆಂಗಳೂರು ರೇಸ್ ■ ಅಶ್ವ ಬಂಧು

ಗೆಲುವಿನ ತವಕದಲ್ಲಿ ನಾಟಿ ಚಾರ್ಮರ್

ಪ್ರಸನ್ನ ಕುಮಾರ್ ತರಬೇತಿಯಲ್ಲಿ ಪಳಗಿರುವ ನಾಟಿ ಚಾರ್ಮರ್ ಭಾನುವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆ ಚೀಫ್ ಮಿನಿಸ್ಟರ್ಸ್ ಕಪ್ ಗೆಲ್ಲುವ ಅವಕಾಶ ಹೊಂದಿದೆ. ಏಳು ರೇಸ್‌ಗಳನ್ನು ಏರ್ಪಡಿಸಿದ್ದು, ಮೊದಲನೇ ರೇಸ್ ಮಧ್ಯಾಹ್ನ 2 ಗಂಟೆಗೆ ಪ್ರಾರಂಭವಾಗಲಿದೆ.

ನಮ್ಮ ಆಯ್ಕೆ

- 1ನೇ ರೇಸ್: ಕ್ಯಾಲಿಕ್ಸ್ 2, ಆಸ್ಪಿಸಿಯಸ್ ಕಿಂಗ್ 1, ಪ್ರಿವ್ಯೂ 7
- 2ನೇ ರೇಸ್: ಮ್ಯಾಗ್ನಾ ಕಾರ್ಟ 4, ಮಿಚಿಕೊ 6, ಸೂಪರ್ ಹೀರೊ 5
- 3ನೇ ರೇಸ್: ಲಾಟ್ಸ್ ಆಫ್ ಲಕ್ 7, ಸ್ಟೀಲಿ ಚೇಂಜ್ 5, ಲೈಟ್ನಿಂಗ್ ಬ್ಲಿಟ್ಜ್ 6
- 4ನೇ ರೇಸ್: ನಾಟಿ ಚಾರ್ಮರ್ 1, ರೀಕೊ 5, ಕಲಮಿಟ್ಸಿ 4
- 5ನೇ ರೇಸ್: ವೇಗತ 3, ಮೆಹ್ಲರ್ 2, ಲಕ್ಸ್ ಎಟರ್ನ 7
- 6ನೇ ರೇಸ್: ಕ್ಯಾರಟ್ ಲವ್ 5, ರಿವರ್ ಡೀಪ್ 6, ನೋಬಲ್ ಕಾಸ್ 3
- 7ನೇ ರೇಸ್: ರೀಗಲ್ ಅರಿಸ್ಟೊಕ್ರಸಿ 5, ಪ್ಲೆಡ್ಜ್ 1, ಇಂಪಿರೆಡರ್ 3

ಮಲ್ಟಿ-ಲೆಗ್ ಪೂಲ್ಸ್:

- ಜಾಕ್‌ಪಾಟ್: 3, 4, 5, 6, 7; 1ನೇ ಟ್ರಿಬಲ್: 2, 3, 4; 2ನೇ ಟ್ರಿಬಲ್: 5, 6, 7

ಅತ್ಯುತ್ತಮ ಬೆಟ್: ವೇಗತ